
ಜಾಗತಿಕ ಚಿಂತಕರ ಮಾಲೆ

ಫ್ರೆಡರಿಕ್ ಏಂಗೆಲ್ಸ್



ಜಿ. ರಾಮಕೃಷ್ಣ

ಜಾಗತಿಕ ಚಿಂತಕರ ಮಾಲೆ - ೧೬

ಫ್ರೆಡರಿಕ್ ಏಂಗೆಲ್ಸ್

ಜಿ.ರಾಮಕೃಷ್ಣ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಚಾಮರಾಜಪೇಟೆ

ಬೆಂಗಳೂರು ೫೬೦ ೦೧೮

FREDARIC ANGELS

Writer

Prof. G.Ramakrishna
Editor
HOSATU (Monthly Magzine)
Navakarnataka Publications
Bangalore - 560 001

Publiser

Administrative Officer
Kannada Pustaka Pradhikara
(Kannada Book Authority)
Pampa Mahakavi Road
Chamarajpet, Bangalore - 560 018

First Print : 2003
Pages : viii+136 Price : Rs. 40-00

DTP

Rachana Graphics, Hospet
Cell: 94481 65160, 94482 17600

Printed

Shakti Printers & Publishers
No. 277, 5th cross, Vidhanasoudha ext.
Kavidhama Nagar, Laggere
Bangalore - 560 058

ಅಕ್ಷರಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ ಇದು. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯ ವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು-ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು!

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದಿಂದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನವು ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲವಾಗಿದೆ! ಅನೇಕ ತಳವರ್ಗದ ಜನಸ್ಥಾನಗಳು ಮೊದಲಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಇಂದು ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ - ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. ೧೮೨೦ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ನಮಗೆ ತಿಳಿಸುತ್ತವೆ. ಆದರೆ, ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನಕೌಶಲ್ಯ, ಜ್ಞಾನ ಸಂಪತ್ತನ್ನು - ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೊ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೊ ತಿಳಿಯುವ ಕ್ಲೈಬ್ಯದಲ್ಲಿ ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಾರಂಭಗೊಂಡು ಹತ್ತುವರ್ಷಗಳು ಸಂದುವು. ಅದು ಪ್ರಾರಂಭಗೊಂಡಾಗ ಹಲವು ಮಾಲೆಗಳನ್ನು ಕಾಲಕಾಲಕ್ಕೆ ಪ್ರಾರಂಭಿಸಿತ್ತು. ಈ ಬಗೆಯ ಮಾಲೆಗಳಲ್ಲಿ 'ಜಾಗತಿಕ ಚಿಂತಕರ ಮಾಲೆ'ಯೂ ಒಂದು. ಇದೊಂದು ಹೊಸಕ್ರಮ. ನಮ್ಮ ಕಾಲಕ್ಕೆ ತಕ್ಕಂತೆ ಹೊಸ ಬಗೆಯ ಚಿಂತನೆಗಳಿಗೆ ಅನುಗುಣವಾಗಿಯೇ ನಾವು ಓದುತ್ತೇವೆ. ಅವರೊಬ್ಬ ತತ್ವಜ್ಞಾನಿಯೋ, ವಿಜ್ಞಾನಿಯೋ, ಸಮಾಜಶಾಸ್ತ್ರಜ್ಞನೋ, ಭಾಷಾಭಿಜ್ಞನೋ ಯಾರಾದರೂ ಆಗಿರಬಹುದು. ಆದರೆ ಅವರು ನಡೆದ ಹಾದಿ ನಮಗೆ ಕನ್ನಡಿಯಾಗಬೇಕು.

ಡಾ. ಜಿ.ರಾಮಕೃಷ್ಣ ಅವರು ನಮ್ಮ ನಡುವಿನ ಅಪೂರ್ವ ವೈಚಾರಿಕ ವಿದ್ವಾಂಸರು. ಪ್ರಾಚೀನ ಮತ್ತು ನವೀನ ಜ್ಞಾನಶಾಸ್ತ್ರ ಶಾಖೆಗಳನ್ನು ಅವರು ಬಲ್ಲವರು. ಅದು ತತ್ತ್ವಶಾಸ್ತ್ರದಿಂದ ಹಿಡಿದು ಈಚಿನ ಬಹುತೇಕ ಮಾನವಿಕ ವಿಜ್ಞಾನಗಳಲ್ಲಿ ಅವರು ಅತ್ಯಾಸಕ್ತರು ಮತ್ತು ಕುತೂಹಲಿಗಳು. ಅವರು ಪುಸ್ತಕ ಪ್ರಾಧಿಕಾರದ ವಿನಂತಿಯ ಮೇರೆಗೆ ಫ್ರೆಡರಿಕ್ ಏಂಗೆಲ್ಸ್ ಕುರಿತು ಪುಸ್ತಕವೊಂದನ್ನು ಬರೆದುಕೊಟ್ಟಿದ್ದಾರೆ. ಫ್ರೆಡರಿಕ್ ಏಂಗೆಲ್ಸ್ ಮಹಾಶಯನ ವಿಚಾರಗಳು ಜಾಗತಿಕ ಚಿಂತನದಲ್ಲಿ ಅಪೂರ್ವ ಸ್ಥಾನವನ್ನು ಪಡೆದಿವೆ. ಅವು ಇಂದಿಗೂ ಪ್ರಪಂಚದಾದ್ಯಂತ ಬೇರೆಬೇರೆ ವಾಗ್ವಾದಗಳಲ್ಲಿ ಸ್ಥಾನವನ್ನು ಪಡೆಯುತ್ತಿವೆ. ಜಗತ್ತಿನ ಕೊನೆಯ ಮನುಷ್ಯನ ಬಗೆಗೆ ಮಾತನಾಡಿದ ಏಂಗೆಲ್ಸ್ 'ಇಲ್ಲದವರ' ಜತೆಗೆ ನಿಂತವನು. ಈ ವಿಚಾರಗಳ ಬಗೆಗೆ ಮೂಲಭೂತವಾಗಿ ಆಲೋಚಿಸಿದವನು. ಏಂಗೆಲ್ಸ್ ಮಹಾಶಯನ ಜಾಗತಿಕ ಚಿಂತನೆಗಳು ಬಹು ಸರಳವಾಗಿ ಈ ಪುಸ್ತಕದಲ್ಲಿ ನಿರೂಪಿತವಾಗಿವೆ. ನಮ್ಮ ನಾಡಿನ ಜನ ಈ ಕೃತಿಯನ್ನು ಓದಬೇಕೆಂದು ಆಶಿಸುತ್ತೇನೆ. ಇಂತಹ ಮಹಾನ್ ಚಿಂತಕನನ್ನು ಕುರಿತು ಪುಸ್ತಕವೊಂದನ್ನು ಪ್ರೊ. ಜಿ. ರಾಮಕೃಷ್ಣ ಅವರು ಮನನೀಯವಾಗಿ ಬರೆದುಕೊಟ್ಟಿದ್ದಾರೆ. ಫ್ರೆಡರಿಕ್ ಏಂಗೆಲ್ಸ್ ಮಹಾಶಯನ ಮುಖ್ಯ ಚಿಂತನೆಗಳನ್ನೂ ಅವನ ಕೃತಿಗಳನ್ನೂ ಎಲ್ಲರಿಗೂ ತಿಳಿಯುವಂತೆ ಮಾಡಿದ್ದಾರೆ.

ಈ ಪುಸ್ತಕ ಹೊರತರುವಲ್ಲಿ ಪ್ರಾಧಿಕಾರದ ಸದಸ್ಯಮಿತ್ರರ ನೆರವು ಸಲಹೆಗಳು ಕಾರಣವಾಗಿವೆ. ಡಿ.ಟಿ.ಪಿ. ಮಾಡಿಕೊಟ್ಟ ರಚನಾ ಗ್ರಾಫಿಕ್ಸ್ ಗೆಳೆಯರನ್ನೂ, ಮುದ್ರಿಸಿಕೊಟ್ಟ ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಕೇಷನ್ಸ್‌ನ ಮಿತ್ರರನ್ನೂ, ಇತರ ಹಲವು ಬಗೆಗಳಲ್ಲಿ ಕಾರಣರಾದ ಎಲ್ಲರನ್ನೂ ಪ್ರಾಧಿಕಾರದ ಪರವಾಗಿ ಈ ಸಂದರ್ಭದಲ್ಲಿ ನೆನೆಯುತ್ತೇನೆ.

❑❑

ಓದುಗರೊಂದಿಗೆ ..

ಕಳೆದ ಮೂವತ್ತೈದು ವರ್ಷಗಳ ನನ್ನ ಸೀಮಿತ ಅಧ್ಯಯನದಲ್ಲಿ ಫ್ರೆಡರಿಕ್ ಏಂಗೆಲ್ಸ್‌ರ ಕೃತಿಗಳು ವಿಶೇಷವಾಗಿ ನನ್ನನ್ನು ಆಕರ್ಷಿಸಿವೆ. ಭಾರತೀಯ ತತ್ತ್ವಶಾಸ್ತ್ರದ ತಿಳುವಳಿಕೆಗೂ ಈ ಅಧ್ಯಯನ ಸಾಕಷ್ಟು ನೆರವು ನೀಡಿದೆಯೆಂದು ನನ್ನ ಭಾವನೆ. ಆದ್ದರಿಂದ ಏಂಗೆಲ್ಸ್‌ರನ್ನು ಪರಿಚಯ ಮಾಡಿಕೊಡುವ ಒಂದು ಪುಸ್ತಕ ಸಿದ್ಧಗೊಳಿಸುವುದು ನನಗೆ ತೃಪ್ತಿ ನೀಡುವ ಕೆಲಸ. ಅದರ ನ್ಯೂನತೆಗಳನ್ನು ಓದುಗರು ಕ್ಷಮಿಸುತ್ತಾರೆಂದು ನಿರೀಕ್ಷಿಸುತ್ತೇನೆ. ಏಂಗೆಲ್ಸ್‌ರ ಗ್ರಂಥಗಳನ್ನಲ್ಲದೆ ಬೇರೆ ಕೆಲವು ಗ್ರಂಥಗಳನ್ನು ನಾನು ಈ ಪುಸ್ತಕ ಬರೆಯುವುದಕ್ಕೆ ಬಳಸಿಕೊಂಡಿದ್ದೇನೆ. ಅವನ್ನೆಲ್ಲಾ ನಮೂದಿಸದಿರುವುದಕ್ಕೆ ಆಯಾ ಲೇಖಕರ ಕ್ಷಮೆ ಕೇಳುತ್ತೇನೆ. ಈ ಪುಸ್ತಕದ ಹಸ್ತಪ್ರತಿಯನ್ನು ನೋಡಿ ಸೂಕ್ತ ಸಲಹೆಗಳನ್ನು ನೀಡಲು ಒಪ್ಪಿದ್ದ ನನ್ನ ಹಿರಿಯ ಸ್ನೇಹಿತರಾದ ಪ್ರೊ. ಎಂ.ಎ.ಸೇತುರಾಯರಿಗೆ ಅನಾರೋಗ್ಯದಿಂದ ಅದನ್ನು ಮಾಡಲಾಗಲಿಲ್ಲ. ಪುಸ್ತಕ ಹೊರಬರುವ ಮೊದಲೇ ಅವರು ತೀರಿಕೊಂಡಿದ್ದಾರೆ. ಅವರಿಗೆ ಈ ಪುಸ್ತಕವನ್ನು ಸಮರ್ಪಿಸುವುದೊಂದೇ ನನಗೆ ಉಳಿದಿರುವ ಮಾರ್ಗ.

ಈ ಪುಸ್ತಕ ರಚಿಸಿಕೊಡುವ ಅವಕಾಶವನ್ನು ಕಲ್ಪಿಸಿದ ಆತ್ಮೀಯ ಸ್ನೇಹಿತರಾದ ಪ್ರೊ. ಮಲ್ಲೇಪುರಂ ಜಿ.ವೆಂಕಟೇಶ್ ಅವರಿಗೆ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯಮಿತ್ರರಿಗೆ ನಾನು ಕೃತಜ್ಞನಾಗಿದ್ದೇನೆ. ಅಚ್ಚುಕಟ್ಟಾಗಿ ಪುಸ್ತಕದ ಅಕ್ಷರ ಸಂಯೋಜನೆ ಮಾಡಿಕೊಟ್ಟ ರಚನಾ ಗ್ರಾಫಿಕ್ಸ್, ಹೊಸಪೇಟೆ ಅವರಿಗೆ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಅವರಿಗೆ ನನ್ನ ವಂದನೆಗಳು ಸಲ್ಲುತ್ತವೆ.

ಬೆಂಗಳೂರು

೨೫.೭.೨೦೦೩ **ಜಿ.ರಾಮಕೃಷ್ಣ**

ಪರಿವಿಡಿ

೧

ಚಿರಂತನ ಯುವಕ

"ಇನ್ನು ಹೋರಾಟದಲ್ಲಿ ತೊಡಗಿರಲು ಸಾಧ್ಯವಿಲ್ಲವೆಂದು ಕಂಡುಬಂದ ದಿನ ನಾನು ಸಾಯಬೇಕೆಂಬುದು ನನ್ನ ಅಪೇಕ್ಷೆ." ತನ್ನ ಎಪ್ಪತ್ತನೆಯ ವಯಸ್ಸಿನಲ್ಲಿ ಕ್ರಿಸ್‌ಮಸ್ ದಿನದಂದು ಪ್ರಕಟವಾದ ಒಂದು ಲೇಖನದಲ್ಲಿ ಇದನ್ನು ಬರೆದಿದ್ದ ವ್ಯಕ್ತಿ ಫ್ರೆಡರಿಕ್ ಏಂಗೆಲ್ಸ್. ಆ ವಯಸ್ಸಿನಲ್ಲಿ ದೈಹಿಕವಾಗಿ ಹಾಗೂ ಚೈತನ್ಯದಲ್ಲಿ ಇನ್ನೂ ಬಹಳ ಗಟ್ಟಿಮುಟ್ಟಾಗಿದ್ದ ಏಂಗೆಲ್ಸ್ ದೃಢಕಾಯರೇ. ಎತ್ತರದ ಮನುಷ್ಯ, ಬಾಗದೆ ನೇರವಾಗಿ ನಿಲ್ಲುವಂಥವನು, ಸ್ವಲ್ಪ ನೆರೆತ ಗಡ್ಡ, ಬಿಳಿಗೂದಲಿಲ್ಲದ ಸೊಂಪಾದ ತಲೆ, ನೋಡಿದರೆ ಐವತ್ತರ ವಯಸ್ಸಿನವನೆನ್ನಬಹುದು. ಆತನ ಆಪ್ತಸ್ನೇಹಿತ ಕಾರ್ಲ್ ಮಾರ್ಕ್ಸ್‌ರ ಮಗಳು ಎಲಿಯನಾರ್ ಹೇಳಿದ್ದಿದು: "ಏಂಗೆಲ್ಸ್ ಯುವಕನಂತೆ ಕಾಣುತ್ತಾನೆ; ಆತ ಕಾಣುವುದಕ್ಕಿಂತಲೂ ಚಿಕ್ಕವನೇನೋ ಎಂದು ಭಾಸವಾಗುತ್ತದೆ. ನನಗೆ ತಿಳಿದಿರುವ ಪೈಕಿ ಆತನೇ ಎಲ್ಲರಿಗಿಂತಲೂ ಚಿಕ್ಕವನು." ಹಾಗೆಂದವಳು ಏಂಗೆಲ್ಸ್‌ಗಿಂತ ೩೦ ವರ್ಷ ಚಿಕ್ಕವಳು!

ಆತನ ಬುದ್ಧಿಶಕ್ತಿ, ಉದಾತ್ತತೆ, ಸರಳತೆ, ಮೋಹಕತೆ, ಬದ್ಧತೆ ಮುಂತಾದ ಗುಣಗಳನ್ನು ಸಾಮಾನ್ಯವಾಗಿ ಆತನನ್ನು

ತಿಳಿದಿದ್ದವರೆಲ್ಲಾ ಶ್ಲಾಘಿಸಿದ್ದಾರೆ. ಚಿಂತಕನಾಗಿ, ಕ್ರಾಂತಿಕಾರಿಯಾಗಿ ಮತ್ತು ಒಬ್ಬ ಮಾನವಜೀವಿಯಾಗಿ ತನ್ನೆಲ್ಲಾ ಸಹಚರರನ್ನೂ ತನ್ನ ತೆಕ್ಕೆಯಲ್ಲಿ ತೆಗೆದುಕೊಂಡ ಅಸಾಧಾರಣ ವ್ಯಕ್ತಿ ಏಂಗೆಲ್ಸ್. ಜ್ಞಾನ ಮತ್ತು ಅನುಭವಗಳನ್ನು ಮಾತ್ರವಲ್ಲದೆ ಇಚ್ಛಾಶಕ್ತಿ, ಆಶಾಭಾವನೆ ಮತ್ತು ಗೆಲುವಿನಲ್ಲಿ ಅಚಲವಾದ ಶ್ರದ್ಧೆಯನ್ನು ಆತನ ಎಲ್ಲ ಸಂಗಾತಿಗಳೂ ಪಡೆದುಕೊಳ್ಳುತ್ತಿದ್ದರು. ತನ್ನ ಹತ್ತೊಂಭತ್ತನೆಯ ವಯಸ್ಸಿನಲ್ಲಿ ಸ್ನೇಹಿತ ಗ್ರೇಬರ್‌ಗೆ ಒಂದು ದೀರ್ಘಪತ್ರದಲ್ಲಿ ಕ್ರೈಸ್ತಧರ್ಮದ ಅತಾರ್ಕಿಕ ಸಿದ್ಧಾಂತಗಳನ್ನು ಕುರಿತು ಆಕ್ಷೇಪಗಳನ್ನೆತ್ತಿ ಬರೆಯುತ್ತಾ ಹೀಗೆಂದ: "ಇದೇನು ನಂಬಿಕೆ! ನಮ್ಮ ಹಳೆಯ ಕೆಟ್ಟ ನಡತೆಗಳಿಗಾಗಿ ಈಗ ಶಿಕ್ಷಿಸುವಷ್ಟು ಕೆಟ್ಟವನೇ ಆ ಭಗವಂತ? ಕ್ರೈಸ್ತಧರ್ಮದ ನಂಬಿಕೆಯಂತೆ ಕೆಡಕು ಮಾಡಿದವರಿಗೆ ಶಾಶ್ವತವಾಗಿ ನರಕಲೋಕದ ಶಿಕ್ಷೆ ಎಂಬುದು ಎಷ್ಟು ಅಸಾಂಗತ್ಯದಿಂದ ತುಂಬಿದೆ! ಈ ಧರ್ಮದ ಚಾರಿತ್ರಿಕತೆಯನ್ನು ನಂಬಲು ಅಸಾಧ್ಯವೆನ್ನುವವರು ಬೇಕಾದಷ್ಟು ಜನರಿದ್ದಾರೆ. ಭಗವಂತ ಅವರಿಗೇನು ಮಾಡುತ್ತಾನೆ? ನಂಬಲಾಗದ್ದನ್ನು ನಂಬಲೇಬೇಕೆಂದು ಬಲವಂತ ಮಾಡಬಲ್ಲನೇ ಆ ಭಗವಂತ? ಶಂಕೆ ಇಲ್ಲದಂತಹ ಮನಸ್ಸು ಮನಸ್ಸಿನ ಸ್ವಾತಂತ್ರ್ಯದ ಚಿಹ್ನೆ ಎನ್ನುತ್ತೀಯೆ ನೀನು. ಇದೆಂತಹ ಮಾತು! ನಂಬಿಕೆಗಳ ಬಗೆಗಿನ ಶಂಕೆಗಳನ್ನು ಪರಿಹರಿಸಿಕೊಂಡವನು ಮಾತ್ರವೇ ಸ್ವತಂತ್ರ ಎನ್ನಬೇಕು..... ಕ್ರೈಸ್ತಧರ್ಮವು ೧೮೦೦ ವರ್ಷಗಳಿಂದ ತನ್ನ ವಿದ್ವಾಂಸರನ್ನು ಜಗತ್ತಿಗೆ ನೀಡುತ್ತಾ ಬಂದಿದೆ. ತರ್ಕಬದ್ಧ ಸಿದ್ಧಾಂತವನ್ನು ತುಂಡರಿಸಲು ಅವರಿಂದ ಈವರೆಗೆ ಸಾಧ್ಯವಾಗಿಲ್ಲ. ಹಾಗೆ ನೋಡಿದರೆ, ವೈಜ್ಞಾನಿಕ ಕ್ಷೇತ್ರದಿಂದ ಅದು ಪಲಾಯನ ಮಾಡುತ್ತದೆ ಮತ್ತು ತನ್ನ ವಿರೋಧಿಗಳಿಗೆ ಕಿರುಕುಳ ನೀಡುತ್ತದೆ." ಇಂತಹ ವಿಚಾರಗಳು ಏಂಗೆಲ್ಸ್‌ರ ಸ್ನೇಹಿತರಿಗೆ ಹಾಗೂ ಕುಟುಂಬದವರಿಗೆ ಆಘಾತವನ್ನು ಉಂಟುಮಾಡುತ್ತಿತ್ತು. ಈ ಹುಡುಗನನ್ನು ಸರಿದಾರಿಗೆ ತರುವುದೆಂತು ಎಂಬುದೇ ತಂದೆಗೆ ಚಿಂತೆಯಾಗಿತ್ತು.

೧೮೨೦ರ ನವೆಂಬರ್ ೨೮ರಂದು ಜನಿಸಿದ ಏಂಗೆಲ್ಸ್ ಎಪ್ಪತ್ತೈದು ವರ್ಷಗಳ ತನ್ನ ಜೀವಿತಾವಧಿಯಲ್ಲಿ ತನ್ನ ತರ್ಕಮತಿಯನ್ನು ಸದಾ ಹರಿತವಾಗಿಯೇ ಇಟ್ಟುಕೊಂಡಿದ್ದುದು ಒಂದು ವೈಶಿಷ್ಟ್ಯ. ಆಗಿನ ಜರ್ಮನಿಯು ಇನ್ನೂ ಒಟ್ಟಾದ ಒಂದು ರಾಷ್ಟ್ರವಾಗಿ ರೂಪುಗೊಂಡಿರಲಿಲ್ಲ. ೧೮೪೦ರ ದಶಕದಲ್ಲಿ ಕೂಡ ಅದು ರಾಜಕೀಯವಾಗಿ ಐಕ್ಯಗೊಂಡ ಒಂದು ದೇಶವಾಗಿರಲಿಲ್ಲ. ಮೂವತ್ತೆಂಟು ಸ್ವತಂತ್ರ ರಾಜ್ಯಗಳು ಇಂದಿನ ಜರ್ಮನಿಯ ಭೂಪ್ರದೇಶದಲ್ಲಿ ಆಗ್ಗೆ ಅಸ್ತಿತ್ವದಲ್ಲಿದ್ದವು. ಅವುಗಳ ಪೈಕಿ ಪ್ರಷ್ಯ ಎನ್ನುವ ಪ್ರದೇಶವು ಬೇರೆಲ್ಲ ಪ್ರದೇಶಗಳಿಗಿಂತಲೂ ಪ್ರಮುಖವಾಗಿತ್ತು. ಪ್ರಷ್ಯಾದ ರೈನ್ ಪ್ರಾಂತ್ಯದ ಬಾರ್ಮೆನ್‌ನ ಶ್ರೀಮಂತ ಕುಟುಂಬವೊಂದರಲ್ಲಿ ಏಂಗೆಲ್ಸ್ ಜನ್ಮ ತಾಳಿದ್ದು. ತಂದೆ ಹತ್ತಿ ಗಿರಣಿಯೊಂದರ ಮಾಲಿಕ. ಅಂದಿನ ಸಂಪ್ರದಾಯದಂತೆ ಈತ ಪ್ರತಿ ಭಾನುವಾರ ತಪ್ಪದೆ ಕುಟುಂಬದೊಂದಿಗೆ ಇಗರ್ಜಿಗೆ ಹೋಗುವ ಅಭ್ಯಾಸ ಇಟ್ಟುಕೊಂಡಿದ್ದ. ಇನ್ನೂ ಚಿಕ್ಕವನಿದ್ದಾಗಲೇ ಇದಕ್ಕೆ ಪ್ರತಿರೋಧ ಒಡ್ಡುತಿದ್ದವನು ಫ್ರೆಡರಿಕ್. ಆದರೆ ತಂದೆಗೆ ಅದರ ಬಿಸಿ ತಟ್ಟಿದ್ದು ೧೮೩೯ರ

ಮಾರ್ಚ್-ಏಪ್ರಿಲ್ ತಿಂಗಳ "ಟೆಲಿಗ್ರಾಫ್ ಫ್ಯೂರ್ ಡಾಯಿಚ್‌ಲ್ಯಾಂಡ್" ಎಂಬ ಪತ್ರಿಕೆಯಲ್ಲಿ ಅನಾಮಧೇಯನಾಗಿ ಫ್ರೆಡರಿಕ್ ಪ್ರಕಟಿಸಿದ್ದ ಪತ್ರಸ್ವರೂಪದ ಎರಡು ಲೇಖನಗಳಿಂದ. ಆಗ ಏಂಗೆಲ್ಸ್‌ಗೆ ವಯಸ್ಸು ಹದಿನೆಂಟು. ತನ್ನ ಪಟ್ಟಣದ ಉದ್ಯಮಿಗಳ ಖೋಟಾ ನಂಬಿಕೆಗಳನ್ನು ಬಯಲಿಗೆಳೆದು ಅವರ ಬೂಟಾಟಿಕೆಗಳು ಮತ್ತು ಅಂಧಶ್ರದ್ಧೆಗಳನ್ನು ತೀವ್ರವಾಗಿ ಖಂಡಿಸಿದ್ದ ಲೇಖನಗಳವು. ಅದಕ್ಕಿಂತಲೂ ಮುಖ್ಯವಾಗಿ ಬಾರ್ಮೆನ್‌ನಲ್ಲಿ ಪ್ರಖರವಾಗಿದ್ದ ಸಾಮಾಜಿಕ ಸಂಬಂಧಗಳನ್ನು ಕುರಿತಂತೆ ಆಳವಾದ ವಿಮರ್ಶೆಯು ಆ ಲೇಖನಗಳಲ್ಲಿದ್ದವು. ಮಕ್ಕಳನ್ನೂ ಬಿಡದೆ ಜನಸಾಮಾನ್ಯರ ದುಡಿಮೆಯನ್ನು ಲಪಟಾಯಿಸುತ್ತಿದ್ದ ಉದ್ದಿಮೆದಾರರನ್ನು ಮೂದಲಿಸಿ, ಕೆಲಸಗಾರರಿಗೆ ಸೂಕ್ತವಾದ ಕೂಲಿಯನ್ನು ಸಹ ಕೊಡದ ಪಾತಕಿಗಳೆಂದು ಅವರನ್ನು ಛೇಡಿಸಲಾಗಿತ್ತು. ಲೇಖನದ ಒಂದು ಭಾಗ ಹೀಗಿತ್ತು: "ಬಾರ್ಮೆನ್ನಿನ ಕಾರ್ಖಾನೆಗಳಲ್ಲಿ ದುಡಿಯುವ ಕೆಲಸಗಾರರ ಹೀನಾಯ ಬಡತನಕ್ಕೆ ಮಿತಿಯಿಲ್ಲ. ಶ್ವಾಸಕೋಶದ ರೋಗಗಳು ಅಗಾಧವಾಗಿ ಹಬ್ಬಿವೆ. ಸಿಫಿಲಿಸ್ ಗೇನೂ ಕೊರತೆಯಿಲ್ಲ. ಎಲ್ಬರ್‌ಫೆಲ್ಡ್ ಒಂದರಲ್ಲೇ ಶಾಲೆಗೆ ಹೋಗಬೇಕಾದ ವಯಸ್ಸಿನ ೨೫೦೦ ಮಕ್ಕಳಲ್ಲಿ ೧೨೦೦ ಮಂದಿ ಶಾಲೆಗೆ ಹೋಗುವಂತಿಲ್ಲ. ಅವರ ವಿದ್ಯಾಭ್ಯಾಸವೆಲ್ಲಾ ಕಾರ್ಖಾನೆಗಳಲ್ಲೇ ಆಗುತ್ತಿದೆ." ಇದಕ್ಕೆ ಕಾರಣ ಹುಡುಕುವುದು ದುಷ್ಕರವೇನಲ್ಲವೆಂದು ಸೂಚಿಸಿದ ಏಂಗೆಲ್ಸ್ ಕಾರ್ಖಾನೆಗಳ ಮಾಲಿಕರ ಬಗ್ಗೆ ಹೀಗೆಂದ: "ಧರ್ಮಭೀರುಗಳಂತೆ ತೋರುವ ಶ್ರೀಮಂತ ಮಾಲಿಕರು ತಮ್ಮ ಅಂತಃಸಾಕ್ಷಿಯನ್ನು ಹೇಗೆ ಬೇಕಾದರೂ ತಿರುಚಿಕೊಳ್ಳುತ್ತಾರೆ. ಒಂದೋ ಎರಡೋ ಮಕ್ಕಳ ಸಾವಿಗೆ ಕಾರಣರಾದರೆ ನರಕಕ್ಕೆ ಹೋಗಬಹುದೆಂದು ಭಯ ಅವರನ್ನು ಕಾಡುವುದಿಲ್ಲ. ಪ್ರತಿ ಭಾನುವಾರವೂ ಎರಡು ಬಾರಿ ಚರ್ಚಿಗೆ ಹೇಗೂ ಹೋಗುತ್ತಾರಲ್ಲ, ಇನ್ನೇನು ಭಯ! ತಮ್ಮ ಕೆಲಸಗಾರರನ್ನು ಹೇಗೆ ನಡೆಸಿಕೊಂಡರೂ ಅಡ್ಡಿಯಿಲ್ಲವೆಂಬ ಪ್ರಜ್ಞೆ ಅವರದು."

ತನ್ನ ಪರಿಸರದಲ್ಲಿದ್ದವರ ಶ್ರದ್ಧೆಯ ಅಸಹ್ಯ ಮುಖವನ್ನು ಕಂಡು ರೋಸಿಹೋಗಿದ್ದ ಏಂಗೆಲ್ಸ್ ನಿಜಕ್ಕೂ ವ್ಯಸನಪಟ್ಟದ್ದು ಬೇರೊಂದು ಮೂಲಭೂತ ಕಾರಣಕ್ಕಾಗಿ. ಈ ಢೋಂಗಿ ಮತಧರ್ಮದ ಆಚರಣೆಗಳು ಜನರ ಕ್ರಿಯಾಶೀಲತೆಯನ್ನು ಹೊಸಕಿಹಾಕಿಬಿಡುತ್ತಿದ್ದುದು ಆತನ ಕಣ್ಣ ಮುಂದಿತ್ತು. ೧೮೩೫ರಲ್ಲಿ ಡೇವಿಡ್ ಸ್ಟ್ರಾಸ್ ಎಂಬಾತ ಬರೆದಿದ್ದ "ಜಿಸಸ್‌ನ ಜೀವನ" ಎಂಬ ಪುಸ್ತಕವು ಯುವ ಏಂಗೆಲ್ಸ್‌ಗೆ ಪ್ರಿಯವಾಗಿ ಕಂಡುಬಂದಿತು. ಕ್ರೈಸ್ತಧರ್ಮದ ಸುವಾರ್ತೆಗಳು ದೈವೀ ಪ್ರತಿಭೆಯಿಂದ ಮೂಡಿಬಂದದ್ದಲ್ಲ, ಬದಲಾಗಿ ಆದಿಮ ಕ್ರೈಸ್ತ ಸಮುದಾಯಗಳಲ್ಲಿ ಹುಟ್ಟಿಕೊಂಡ ಅನೇಕ ಅರ್ಥಗಳ ಸಂಗ್ರಹವೆಂದು ಸ್ಟ್ರಾಸ್‌ನ ನಿರೂಪಣೆಯಾಗಿತ್ತು. ಈ ನಿರೂಪಣೆಯನ್ನು ಇನ್ನೂ ವಿಶಾಲವಾಗಿ ವಿಸ್ತರಿಸಿದ್ದು ಏಂಗೆಲ್ಸ್ ನೀಡಿರುವ ಬೌದ್ಧಿಕ ಕೊಡುಗೆಗಳಲ್ಲಿ ವಿಶೇಷವಾಗಿ ಮನ್ನಣೆಗೆ ಪಾತ್ರವಾಗಿದೆ. ಇಂತಹ ದೈತ್ಯಪ್ರತಿಭೆಯ ಕಾರಣದಿಂದಲೋ ಏನೋ ಏಂಗೆಲ್ಸ್‌ನ ವ್ಯಕ್ತಿತ್ವವನ್ನು ವಿಶದೀಕರಿಸುವಾಗ ಕೆಲವರು ಆತನ ಅಹಮಿಕೆಯನ್ನು ಒತ್ತುಕೊಟ್ಟು ಚಿತ್ರಿಸುತ್ತಾರೆ. "ಶ್ರೀಮಂತ ಕುಟುಂಬದವನು, ಮ್ಯಾಂಚೆಸ್ಟರಿನಲ್ಲಿ ಸ್ವತಃ ಒಂದು ಕಾರ್ಖಾನೆಯನ್ನು ನಡೆಸುತ್ತಿದ್ದವನು, ಸರೀಕ

ಶ್ರೀಮಂತರೊಡನೆ ಬೆರೆಯುತ್ತಿದ್ದನು; ಹೀಗಾಗಿ ತನ್ನ ವೈಯಕ್ತಿಕ ನಡತೆಯಲ್ಲಿ ತುಸು ಗಾಂಭೀರ್ಯವನ್ನು ಪ್ರದರ್ಶಿಸುತ್ತಿದ್ದವನು, ಮಿತಭಾಷಿ, ಮಿಲಿಟರಿ ಶಿಸ್ತು ಪಾಲಿಸುವವನು, ಯಾವಾಗಲೂ ಉಗ್ರವಾದ ಭಾಷೆ ಬಳಸುವವನು; ಆದರೆ, ತನ್ನ ಬೌದ್ಧಿಕ ಹೆಚ್ಚುಗಾರಿಕೆಯಿಂದ ಇತರರನ್ನು ಲಘುವಾಗಿ ಕಾಣುವ ಸ್ವಭಾವದವನು.'' - ಇದು ಆತನನ್ನು ಹತ್ತಿರದಿಂದ ಬಲ್ಲವರಾಗಿದ್ದ ಕೆಲವರ ಅಭಿಪ್ರಾಯ. ಆದರೆ ಇನ್ನೂ ಹೆಚ್ಚಿನ ಒಡನಾಟ ಇರಿಸಿಕೊಂಡಿದ್ದವರನೇಕರು ಏಂಗೆಲ್ಸ್ ಬಗ್ಗೆ ಇದಕ್ಕೆ ಭಿನ್ನವಾದ ಚಿತ್ರಣ ನೀಡಿದ್ದಾರೆ. ಉದಾಹರಣೆಗೆ ಪಾಲ್ ಲಫಾರ್ಗ್‌ನ ಮಾತನ್ನು ಗಮನಿಸಬಹುದು. ಈತ ಸುಮಾರು ನಲವತ್ತು ವರ್ಷಗಳ ಕಾಲ ಏಂಗೆಲ್ಸ್ ಜೊತೆ ನಿಕಟವಾಗಿ ಸಂಪರ್ಕವಿದ್ದವನು. ಆತನ ಪ್ರಕಾರ ಬಹಳ ಆತ್ಮೀಯನಾದ ಸಂಗಾತಿ, ಸಂತೋಷದಾಯಕ ಜೊತೆಗಾರನೆಂದರೆ ಏಂಗೆಲ್ಸ್: ''ಯುವಕರ ನಡುವೆ ಇರುವುದಕ್ಕಿಂತ ಹೆಚ್ಚು ಪ್ರಿಯವಾದ್ದು ಆತನಿಗೆ ಬೇರಾವುದೂ ಇರಲಿಲ್ಲ ಮತ್ತು ಯಾವಾಗಲೂ ಲವಲವಿಕೆಯಿಂದ ಅತಿಥಿಸತ್ಕಾರ ಮಾಡುವಂಥವನು.''

ವಿಶ್ವವಿದ್ಯಾನಿಲಯಗಳಿಂದ ಯಾವ ದೊಡ್ಡ ಪದವಿಗಳನ್ನೂ ಪಡೆಯದೆ ತಮ್ಮ ಮೇಧಾವಿತನವನ್ನು ಬೆಳಗಿಸಿರುವ ಮಹಾನ್ ಚಿಂತಕರಲ್ಲಿ ಏಂಗೆಲ್ಸ್‌ಗೆ ಖಚಿತವಾದ ಸ್ಥಾನವಿದೆ. ಜುಲೈ ೨, ೧೮೪೨ರಂದು ತನ್ನ ಸ್ನೇಹಿತ ಆರ್ನಾಲ್ಡ್ ರೂಷ್‌ಗೆ ಬರೆದ ಪತ್ರದಲ್ಲಿ ಏಂಗೆಲ್ಸ್ ಹೀಗೆನ್ನುತ್ತಾರೆ: ''ನಾನೊಬ್ಬ ಯುವಕ, ತತ್ತ್ವಶಾಸ್ತ್ರದ ಅಭ್ಯಾಸವನ್ನು ಸ್ವಂತವಾಗಿ ಮಾಡಿಕೊಂಡವನು. ನನ್ನದೇ ಆದ ಅಭಿಪ್ರಾಯಗಳನ್ನು ತಾಳುವಷ್ಟು ಕಲಿತಿದ್ದೇನೆ ಮತ್ತು ಅವನ್ನು ಸಮರ್ಥಿಸಿಕೊಳ್ಳಬಲ್ಲೆ. ಆದರೆ ಶಾಸ್ತ್ರೀಯ ಪಾಂಡಿತ್ಯವನ್ನು ಪಡೆಯುವುದರಲ್ಲಿ ಯಶಸ್ಸು ಗಳಿಸಲಾರೆ. ಆದ್ದರಿಂದಲೇ ನನ್ನ ವಿದ್ವತ್ತನ್ನು ಒರೆಗಲ್ಲಿಗೆ ಹಚ್ಚಿ ನೋಡುವವರೂ ಜಾಸ್ತಿ. ಹೇಗಿದ್ದರೂ ತತ್ತ್ವಶಾಸ್ತ್ರ ಕ್ಷೇತ್ರದಲ್ಲಿ ನಾನೊಬ್ಬ ಪ್ರವಾಸಿ ಪ್ರತಿನಿಧಿ. ಡಾಕ್ಟರೇಟ್ ಪದವಿಯನ್ನು ಪಡೆದು ತತ್ತ್ವಶಾಸ್ತ್ರದಲ್ಲಿ ಜಿಜ್ಞಾಸೆ ಮಾಡುವ ಹಕ್ಕನ್ನು ನಾನು ಸಂಪಾದಿಸಿಕೊಂಡಿಲ್ಲ.'' ಇವು ನಿರಾಸೆಯ ಮಾತುಗಳಲ್ಲ. ಬೇರೆಯವರ ಟೀಕೆಗೆ ವ್ಯಂಗ್ಯವಾಗಿ ಕೊಟ್ಟ ಉತ್ತರವೂ ಅಲ್ಲ. ಗಹನವಾದ ಸ್ವತಂತ್ರ ದಾರ್ಶನಿಕ ಹಾದಿಯ ಅರಸುವಿಕೆಯಲ್ಲಿ ಮಗ್ನನಾದ ಯುವಕನೊಬ್ಬನ ಬೌದ್ಧಿಕ ತುಡಿತವೆಂದು ಅದನ್ನು ಸ್ವೀಕರಿಸಬಹುದು. ೧೮೭೨ರ ಸೆಪ್ಟೆಂಬರ್ ೧ರಂದು ದಿ ಹೇಗ್‌ನಲ್ಲಿ ಒಂದು ಅಧಿವೇಶನ ನಡೆದಿತ್ತು. ಆಗ ಏಂಗೆಲ್ಸ್‌ಗೆ ೫೨ ವರ್ಷ. ಪಾಲ್ಗೊಂಡ ಪ್ರತಿನಿಧಿಗಳಲ್ಲಿ ಥಿಯೋಡರ್ ಕ್ಯೂನೋ ಎಂಬೊಬ್ಬಾತನಿದ್ದ. ಮೊಟ್ಟಮೊದಲ ಬಾರಿಗೆ ಏಂಗೆಲ್ಸ್‌ರನ್ನು ಕಂಡು ಅವರೊಡನೆ ಚರ್ಚೆಗಳನ್ನು ಮಾಡಿದ್ದ ಕ್ಯೂನೋ ನೀಡಿದ ಚಿತ್ರಣ ಇದು: ''ನಾನು ಆ ಸ್ಥಳವನ್ನು ಸೇರುವಾಗ್ಗೆ ಆಗಲೆ ಅಧಿವೇಶನ ಆರಂಭವಾಗಿತ್ತು. ಲೊಂಬಾರ್ಡ್ ಬೀದಿಯ ಒಂದು ನೃತ್ಯ ಸಭಾಂಗಣದಲ್ಲಿ ನಮ್ಮ ಸಮಾವೇಶ. ...ಅನೇಕ ಮೇಜುಗಳನ್ನು ಕುದುರೆಲಾಳದ ರೀತಿ ಸಜ್ಜುಗೊಳಿಸಿದ್ದರು. ಸುತ್ತಲೂ ಅತ್ಯಂತ ಪ್ರಬುದ್ಧ ವ್ಯಕ್ತಿಗಳು. ಅಷ್ಟೊಂದು ಪ್ರಬುದ್ಧರನ್ನು ಒಂದೇ ಕಡೆ ನಾನು ಹಿಂದೆಂದೂ ಕಂಡಿರಲಿಲ್ಲ. ...ನಾನು ಏಂಗೆಲ್ಸರನ್ನು ಕಂಡದ್ದು ಆಗಲೇ ಮೊದಲು. ಸಭಾಧ್ಯಕ್ಷರ ಎಡಭಾಗದಲ್ಲಿ ಕುಳಿತು

ಧೂಮಪಾನ ಮಾಡುತ್ತಾ ಏನನ್ನೋ ಬರೆಯುವುದರಲ್ಲಿ ನಿರತರಾಗಿದ್ದರು ಮತ್ತು ಅದೇ ವೇಳೆಗೆ ತದೇಕಚಿತ್ತರಾಗಿ ಮಾತನಾಡುತ್ತಿದ್ದವರ ವಾದಗಳನ್ನು ಆಲಿಸುತ್ತಿದ್ದರು. ನಂತರ ನಾನೇ ಹೋಗಿ ಪರಿಚಯ ಮಾಡಿಕೊಂಡೆ. ಬರೆಯುತ್ತಿದ್ದ ಕಾಗದದ ಕಡೆಗಿನ ಗಮನವನ್ನು ನನ್ನ ಕಡೆ ತಿರುಗಿಸಿ ಬಲವಾಗಿ ಹಸ್ತಲಾಘವ ನೀಡಿದರು, ಸಮಾವೇಶದಲ್ಲಿ ಬಹುಮತ ಸಾಧಿಸಲು ಭರವಸೆಯನ್ನು ವ್ಯಕ್ತಪಡಿಸಿದರು. ...ಛಾಯಾಚಿತ್ರಗಳಲ್ಲಿ ಅವರ ಮುಖವನ್ನು ಮೊದಲೇ ನೋಡಿದ್ದೆ. ಆದರೆ ಚಿತ್ರದಲ್ಲಿ ಇದ್ದುದಕ್ಕಿಂತ ಸ್ವಲ್ಪ ಕೃಶವಾಗಿಯೇ ಕಂಡರು. ಎತ್ತರದ ಆಸಾಮಿ, ದೃಢಕಾಯ, ಒಳ್ಳೆಯ ಮೀಸೆ-ಗಡ್ಡ, ಚಿಕ್ಕ ನೀಲಿ ಕಣ್ಣುಗಳು. ಓಡಾಟ, ಮಾತು, ಎಲ್ಲಾ ಸ್ವಲ್ಪ ರಭಸದಿಂದಲೇ. ಸ್ಪಷ್ಟ ಮತ್ತು ನಿಶ್ಚಿತವಾದ ಮಾತುಗಳು. ಆತ ಏನು ಹೇಳಬೇಕೆಂದಿದ್ದಾನೆಂಬುದರ ಬಗ್ಗೆ ಯಾರಿಗೂ ಸಂಶಯ ಉಳಿಯುವುದಿಲ್ಲ. ಆತನ ಮಾತುಗಳ ಪರಿಣಾಮದ ಅರಿವೂ ಆತನಿಗಿದೆ. ಅವರೊಡನೆ ಸಂವಾದ ನಡೆಸಿದರೆ ಪ್ರತಿಯೊಂದು ವಾಕ್ಯದಿಂದಲೂ ಏನಾದರೊಂದನ್ನು ಕಲಿಯುವುದಿರುತ್ತದೆ. ಆತನ ಮಿದುಳಿನಲ್ಲಿ ಅದೆಷ್ಟು ವೈಜ್ಞಾನಿಕ ತಿಳುವಳಿಕೆ ಅಡಕವಾಗಿದೆಯೋ ಎನಿಸುತ್ತದೆ. ಒಂದು ಡಜನ್ನಿಗೂ ಹೆಚ್ಚು ಭಾಷೆಗಳಲ್ಲಿ ವ್ಯವಹರಿಸಬಲ್ಲ ಅವರ ವಾಕ್ಪಟುತ್ವ ವಿಸ್ಮಯವನ್ನುಂಟುಮಾಡುತ್ತದೆ."

ಇಂತಹ ಅಸಾಧಾರಣ ವ್ಯಕ್ತಿ ಇನ್ನೂ ಹುಡುಗನಿರುವಾಗಲೇ ತಂದೆಯ ಅಸಮಾಧಾನಕ್ಕೆ ಕಾರಣನಾದನೆಂದರೆ ಅಚ್ಚರಿಯೆನಿಸುವುದಿಲ್ಲ. ಬಾರ್ಮೆನ್ ಬಳಿಯ ಎಲ್ಬರ್‌ಫೆಲ್ಡ್‌ನಲ್ಲಿ ಏಂಗೆಲ್ಸ್ ಸಮಾಜವಾದಿ ಸಿದ್ಧಾಂತಗಳನ್ನು ಚರ್ಚಿಸಲು ಸಭೆಗಳನ್ನು ಆಯೋಜಿಸುತ್ತಿದ್ದುದು ತಂದೆಯ ಗಮನಕ್ಕೆ ಬಂದಿತ್ತು. ಫೆಬ್ರವರಿ ೧೮೪೫ರಲ್ಲಿ ಅಂತಹ ಮೂರು ಸಭೆಗಳು ಜರುಗಿದ್ದು ಸುಮಾರು ಇನ್ನೂರು ಮಂದಿ ನೆರೆದಿದ್ದರು. ಕೆಲಸಗಾರರಿಗಿಂತಲೂ ಬೇರೆಯವರೇ ಹೆಚ್ಚಾಗಿರುತ್ತಿದ್ದ ಸಭೆಗಳು ಇವು. ಅದೇ ವೇಳೆಗೆ ಫ್ರಾನ್ಸಿನಿಂದ ಬಹಿಷ್ಕೃತಗೊಂಡು ಬ್ರಸೆಲ್ಸ್‌ಗೆ ತೆರಳಲಿದ್ದ ಕಾರ್ಲ್ ಮಾರ್ಕ್ಸ್ ಜೊತೆ ಪತ್ರ ವ್ಯವಹಾರ ನಡೆಸುತ್ತಿದ್ದ ಮಗನ ಚಟುವಟಿಕೆಗಳನ್ನು ಕಂಡು ತಂದೆಗೆ ಕೋಪ ಉಂಟಾಗಿತ್ತು, ದುಗುಡವೂ ಹೆಚ್ಚಿತ್ತು. ಗಿರಣಿ ಮತ್ತು ವ್ಯಾಪಾರದ ಕಡೆ ಆಸಕ್ತಿ ತೋರದೆ ದುಡಿಯುವವರ ಸಂಘಟನೆಗೆ ಆದ್ಯತೆ ನೀಡುತ್ತಿದ್ದ ಮಗನ ಮೇಲೆ ವಿಶೇಷ ನಿಗಾ ಇಡಲು ತಂದೆ ಆರಂಭಿಸಿದ್ದರು. ಜನವರಿ ೧೮೪೫ರಲ್ಲಿ ಮಾರ್ಕ್ಸ್‌ಗೆ ಏಂಗೆಲ್ಸ್ ಬರೆದ ಒಂದು ಪತ್ರ ಭಾಗಶಃ ಹೀಗಿದೆ: "ನಾನು ಆಗಾಗ್ಗೆ ನಡೆಸುತ್ತಿರುವ ಸಭೆಗಳು ಮತ್ತು ನನ್ನ ಸಂಪರ್ಕದಲ್ಲಿರುವ ಕಮ್ಯುನಿಸ್ಟ್ ಕಾರ್ಯಕರ್ತರ ಜೀವನವಿಧಾನಗಳು ಸಾಂಪ್ರದಾಯಿಕತೆಯಿಂದ ಭಿನ್ನವಾಗಿರುವುದು ನನ್ನ ತಂದೆಯಲ್ಲಿ ಧಾರ್ಮಿಕ ಜಡ್ಡುತನದ ನಂಬಿಕೆ ಮತ್ತು ಆಚರಣೆಗಳನ್ನು ಹೆಚ್ಚಿಸುತ್ತಿದೆ. ನಾನು ವ್ಯಾಪಾರ ವಹಿವಾಟಿಗೆ ಹಿಂದಿರುಗುವುದಿಲ್ಲವೆಂದು ಹೇಳಿದ್ದು ಅವರಲ್ಲಿ ರೋಷಾವೇಶವನ್ನು ಉಕ್ಕಿಸಿದೆ. ...ನನಗೇನಾದರೂ ಒಂದು ಪತ್ರ ಬಂದಿತೋ, ಅದನ್ನು ಚೆನ್ನಾಗಿ ಮೂಸಿನೋಡದೆ ಅದನ್ನು ನನಗೆ ತಲುಪಿಸುವುದೇ ಇಲ್ಲ. ಅದನ್ನು ಯಾರೋ ಕಮ್ಯುನಿಸ್ಟ್ ಕಾರ್ಯಕರ್ತನೇ ಬರೆದಿರಬೇಕೆಂಬ ಭಾವನೆ ನನ್ನ ತಂದೆಯದು. ಆದ್ದರಿಂದ ಅದನ್ನು ನನಗೆ ಕೊಡುವಾಗ

ಅವರು ಗಂಟುಮುಖ ಮಾಡಿಕೊಳ್ಳದಿರುವ ಪ್ರಮೇಯವೇ ಇಲ್ಲ. ಅದನ್ನು ಕಂಡು ನಾನು ಉದ್ವೇಗಗೊಳ್ಳಲೆ? ನಾನೇನು ಮಾಡುತ್ತಿದ್ದರೂ ತಂದೆಯ ಗಂಟುಮುಖ ಸದಾ ನನ್ನೆದುರಿಗಿರುತ್ತದೆ."

ಏಂಗೆಲ್ಸ್ ಇದರಿಂದ ವಿಚಲಿತರಾಗಲಿಲ್ಲ. ಅವರ ಸಂಗಾತಿಗಳಂತೂ ಈ ಚಿರನೂತನ ಯುವಕನ ಅಪ್ರತಿಮ ಪ್ರತಿಭೆ ಮತ್ತು ಸಂಘಟನಾ ಚಾತುರ್ಯಕ್ಕೆ ಮಾರುಹೋದರು. ಅಂಥವರ ಪೈಕಿ ಗಿಯೋರ್ಗ್ ವೀರ್ತ್ ಎಂಬೊಬ್ಬ ಆಗಿನ ಜರ್ಮನಿಯ ದುಡಿಯುವ ಜನತೆಯ ಪ್ರಾತಿನಿಧಿಕ ಕವಿ. ೧೮೪೫ರ ಜುಲೈ ೧೯ರಂದು ತನ್ನ ತಾಯಿಗೆ ಬರೆದ ಪತ್ರದಲ್ಲಿ ವೀರ್ತ್ ಹೇಳಿದ್ದಿದು: "ಕಾರ್ಖಾನೆ ಮುಂತಾದವುಗಳ ಮಾಲಿಕರು ಎಚ್ಚರದಿಂದಿರಲಿ, ಜನತೆಯ ಮಹಾಬಾಹುಗಳು ನಮ್ಮ ಕಡೆಗಿವೆ; ಅಂತೆಯೇ, ಎಲ್ಲ ದೇಶಗಳ ಉತ್ಕೃಷ್ಟ ಮನಸ್ಸುಗಳು ಕ್ರಮೇಣ ನಮ್ಮ ಕಡೆಗೆ ಜಾರುತ್ತಿವೆ. ನನ್ನ ಪ್ರೀತಿಯ ಮಿತ್ರ, ಬಾರ್ಮೆನ್ನಿನ ಫ್ರೆಡರಿಕ್ ಏಂಗೆಲ್ಸ್‌ನ ಉದಾಹರಣೆಯನ್ನೇ ನೋಡಬಹುದು. ಇಂಗ್ಲೆಂಡಿನ ದುಡಿಯುವ ಜನರನ್ನು ಕುರಿತ ಒಂದು ಪುಸ್ತಕವನ್ನಾತ ಬರೆದಿದ್ದಾನೆ. ಆ ದೇಶದ ಕಾರ್ಖಾನೆಗಳ ಮಾಲಿಕರ ಜನ್ಮವನ್ನು ಜಾಲಾಡಿದ್ದಾನೆ. ಸ್ವತಃ ಅವನ ತಂದೆ ಇಂಗ್ಲೆಂಡ್ ಮತ್ತು ಜರ್ಮನಿಗಳಲ್ಲಿ ಇಂತಹ ಕಾರ್ಖಾನೆಗಳ ಮಾಲಿಕ. ತನ್ನ ಕುಟುಂಬದೊಡನೆ ಫ್ರೆಡರಿಕ್‌ನ ಸಂಬಂಧಗಳು ಸ್ವಲ್ಪ ಹದಗೆಟ್ಟಿವೆ. ಕುಟುಂಬದವರು ಆತನನ್ನು ದೈವನಿಂದಕ, ಪಾಷಂಡಿ ಎಂದು ಏನೇನೋ ಕರೆಯುತ್ತಾರೆ. ...ಆದರೆ ನನಗೆ ಗೊತ್ತು: ಈ ಯುವಕ ಉದಾತ್ತ ಮಾನವ ಪ್ರೇಮಿ, ಕರುಣಾಳು. ಅವನ ಬುದ್ಧಿಮತ್ತೆ ಅತಿ ವಿಶಿಷ್ಟವಾದ್ದು, ಹೊಳಹುಗಳು ಅಮೋಘವಾದವು; ದುಡಿಯುವ ಜನರ ಒಳಿತಿಗಾಗಿ ಹಗಲು ರಾತ್ರಿಯೆನ್ನದೆ ನಿರಂತರವಾಗಿ ತನ್ನೆಲ್ಲ ಶಕ್ತಿಯನ್ನೂ ತೊಡಗಿಸಿ ಶ್ರಮಿಸುವ ಉದಾತ್ತ ಜೀವಿ ಅವನು."

❑❑

೨

ವಿಕಾಸದ ಹಾದಿ

ತನ್ನ ಸೋದರಿ ಮಾರೀ ಏಂಗೆಲ್ಸ್‌ಗೆ ೧೮೩೯ರ ಸೆಪ್ಟೆಂಬರ್ ೨೮ರಂದು ಬರೆದ ಪತ್ರದಲ್ಲಿ ತನ್ನ ಭಾಷಾಪಂಡಿತ್ಯದ ಬಗ್ಗೆ ತನ್ನನ್ನು ತಾನು ತಮಾಷೆ ಮಾಡಿಕೊಂಡಿರುವುದು ಏಂಗೆಲ್ಸ್‌ರ ಸದಭಿರುಚಿಗೆ ಹಿಡಿದ ಒಂದು ಕನ್ನಡಿ. ಆಗ್ಗೆ ಬ್ರೆಮೆನ್ ಎಂಬಲ್ಲಿ ಕಾರ್ಖಾನೆ ವ್ಯವಹಾರಗಳನ್ನು ಕಲಿಯಲು ತನ್ನ ತಂದೆಯ ಪರಿಚಿತರೊಬ್ಬರಲ್ಲಿ ನೇಮಕಗೊಂಡಿದ್ದ ಏಂಗೆಲ್ಸ್ ಸ್ನೇಹಿತರೊಡಗೂಡಿ ವಿಹಾರಕ್ಕೆ ಹೋಗಿದ್ದುದರ ಅನುಭವವನ್ನು ತಿಳಿಯಹೇಳುವ ಪತ್ರ ಅದು. ಡೆಲ್ಮೆನ್‌ಹೋರ್ಸ್ಟ್ ಎಂಬಲ್ಲಿಗೆ ಹೋಗಿದ್ದ ಸ್ನೇಹಿತರು ಕುದುರೆ ಸವಾರಿ ಮಾಡುತ್ತಾ ಚೆಲ್ಲಾಪಿಲ್ಲಿಯಾಗಿ ಚದುರಿ ಹೋಗಿದ್ದು ಮತ್ತೆ ಕೂಡಿಕೊಂಡಾಗ ಆಗಲೇ ರಾತ್ರಿ ವೇಳೆಯಾಗಿತ್ತು. ಆದ್ದರಿಂದ ಅಲ್ಲೇ ಒಂದು ಕ್ಲಬ್ಬಿಗೆ ಹೋಗಿ ಊಟ ಮಾಡಿದರು. ಆ ಕ್ಲಬ್ಬಿನ ಎರಡು ವೈಶಿಷ್ಟ್ಯಗಳೆಂದರೆ ಅರುಚಿಕರವಾದ ಊಟ ಮತ್ತು ರುಚಿಕರವಾದ ಪತ್ರಿಕೆಗಳು. ಡಚ್, ಇಂಗ್ಲಿಷ್, ಅಮೆರಿಕನ್, ಫ್ರೆಂಚ್, ಜರ್ಮನ್, ಟರ್ಕಿಷ್, ಜಾಪನೀಸ್ ಹೀಗೆ ಹತ್ತಾರು ದೇಶಗಳ ಭಾಷೆಗಳ ಪತ್ರಿಕೆಗಳು ಅಲ್ಲಿದ್ದವು. ಅದನ್ನು ಪ್ರಸ್ತಾಪಿಸುತ್ತಾ ಏಂಗೆಲ್ಸ್ ತನ್ನ ತಂಗಿಗೆ ಹೇಳುವುದಿದು: ''ಈಗ ನಾನು ಇಪ್ಪತ್ತೈದು ಭಾಷೆಗಳನ್ನು ಅರ್ಥಮಾಡಿಕೊಳ್ಳಬಲ್ಲೆ.''

ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಹೀಗೆ ಹಾಸ್ಯ ಮಾಡಿಕೊಂಡ ಏಂಗೆಲ್ಸ್ ಮೂವತ್ತೊಂದನೆಯ ವಯಸ್ಸಿನಲ್ಲಿ ಮ್ಯಾಂಚೆಸ್ಟರ್‌ಗೆ ಹೋದ ತರುವಾಯದಲ್ಲಿ (ಡಿಸೆಂಬರ್ ೧೮೫೦) ನಿಜಕ್ಕೂ ಬಹುಭಾಷಾ ವಿಶಾರದನಾಗಲು ಸಿದ್ಧನಾದ. ಜರ್ಮನ್, ಫ್ರೆಂಚ್, ಲ್ಯಾಟಿನ್ ಭಾಷೆಗಳಲ್ಲಿ ಆಗಲೇ ಪರಿಣಿತಿಯನ್ನು ಹೊಂದಿದ್ದ ಏಂಗೆಲ್ಸ್ ಈಗ ರಷ್ಯನ್ ಕಲಿಯಲಾರಂಭಿಸಿದ. ಜೊತೆಜೊತೆಗೆ ಬೇರೆ ಸ್ಲಾವ್ ಭಾಷೆಗಳತ್ತಲೂ ಗಮನ ನೀಡಿದ. ಸೆರ್ಬೋ-ಕ್ರೋಟ್, ಸ್ಲೋವೇನ್ ಮತ್ತು ವಾಲ್ಚಿಯನ್ ಭಾಷೆಗಳ ಹೆಸರುಗಳು ಸಹ ಆಗ್ಗೆ ಮ್ಯಾಂಚೆಸ್ಟರ್‌ನಲ್ಲಿ ಪ್ರಸಿದ್ಧವಾಗಿರಲಿಲ್ಲ. ಆದರೆ ಸ್ವಂತವಾಗಿ ಅವನ್ನು ಕಲಿಯಲು ಮುನ್ನುಗ್ಗಿ ೧೮೫೨ರ ಮಾರ್ಚ್ ವೇಳೆಗೆ ಮಾರ್ಕ್ಸ್‌ಗೆ ಬರೆದ ಒಂದು ಪತ್ರದಲ್ಲಿ ಹೀಗೆ ಹೇಳಲು ಸಮರ್ಥರಾದರು ಏಂಗೆಲ್ಸ್: "ಕಳೆದೆರಡು ವಾರಗಳಲ್ಲಿ ರಷ್ಯನ್ ಒಂದೇ ನನ್ನಲ್ಲಿ ತುಂಬಿಕೊಂಡಿದೆ. ಅದರ ವ್ಯಾಕರಣವನ್ನು ಕ್ರಮಬದ್ಧವಾಗಿ ಅಭ್ಯಾಸ ಮಾಡಿದ್ದೇನೆ. ಇನ್ನೆರಡು ತಿಂಗಳಲ್ಲಿ ಆ ಭಾಷೆಯ ಶಬ್ದಜ್ಞಾನವೂ ಬೆಳೆಯುವ ನಿರೀಕ್ಷೆ ಇದೆ. ಆಗ ಬೇರೊಂದು ಭಾಷೆಯನ್ನು ಕಲಿಯಲು ಮುಂದಾಗಬಹುದು. ಈ ವರ್ಷ ಸ್ಲಾವ್ ಭಾಷೆಗಳನ್ನು ಕರಗತ ಮಾಡಿಕೊಂಡುಬಿಡಬೇಕು. ಅವೇನೂ ಅಷ್ಟು ಕಷ್ಟದ ಭಾಷೆಗಳಲ್ಲ." ಅದಾದ ಒಂದು ವರ್ಷದ ನಂತರ ಅರಾಬಿಕ್ ಮತ್ತು ಪರ್ಷಿಯನ್ ಭಾಷೆಗಳಿಗೆ ತಮ್ಮನ್ನು ಒಡ್ಡಿಕೊಂಡು ಆಮೇಲೆ ಪ್ರಾಚೀನ ಜರ್ಮನ್ ಭಾಷೆಯಾದ ಗಾಥಿಕ್ ಮೇಲೆ ಮನಸ್ಸನ್ನು ಕೇಂದ್ರೀಕರಿಸಿದರು. ಅದರ ಬಗ್ಗೆ ಮಾರ್ಕ್ಸ್‌ಗೆ ಬರೆದಿದ್ದು ಹೀಗೆ: "ಆಶ್ಚರ್ಯವೆನಿಸುವಂತೆ, ನಾನು ಅಂದುಕೊಂಡಿದ್ದುದಕ್ಕಿಂತ ಹೆಚ್ಚು ಗೊತ್ತಿದೆ ನನಗೆ ಈ ಗಾಥಿಕ್ ಭಾಷೆ, ಎಂಬ ಅರಿವುಂಟಾಗಿದೆ. ಒಂದು ಪಠ್ಯಪುಸ್ತಕ ಸಂಪಾದಿಸಿಕೊಂಡರೆ ಎರಡು ವಾರಗಳಲ್ಲಿ ಆ ಭಾಷೆಯ ಮೇಲೆ ಸ್ವಲ್ಪ ಪ್ರಭುತ್ವ ಪಡೆದುಕೊಳ್ಳುವ ಭರವಸೆ ಇದೆ. ಆಮೇಲೆ ಪ್ರಾಚೀನ್ ನಾರ್ಡಿಕ್ ಮತ್ತು ಪ್ರಾಚೀನ ಇಂಗ್ಲಿಷ್ ಕಲಿಯಲು ಉತ್ಸುಕನಾಗಿದ್ದೇನೆ."

ಮಾರ್ಕ್ಸ್ ಸೇರಿದಂತೆ ಎಷ್ಟೋ ಯುವಕರು ಕಾವ್ಯಸೃಷ್ಟಿಯತ್ತ ಧಾಳಿ ಇಡುತ್ತಿದ್ದುದು ೧೯ನೇ ಶತಮಾನದ ಮಧ್ಯಭಾಗದ ಒಂದು ಲಕ್ಷಣವಾಗಿದ್ದಿತು. ಅದರಂತೆ ಏಂಗೆಲ್ಸ್ ಕೂಡ ಕವನ ಬರೆಯುವ ಗೀಳು ಬೆಳೆಸಿಕೊಂಡಿದ್ದುದುಂಟು. ಆದರೆ ಸಾಕಷ್ಟು ಮುಂಚೆಯೇ ಜ್ಞಾನೋದಯವಾಗಿ ಆ ಹವ್ಯಾಸವನ್ನು ಕೈಬಿಡಲು ೧೮೩೮ರಲ್ಲಿ ಗಯಟೆ ಕವಿಯ ಕೆಲವು ಸಾಲುಗಳು ನೆರವಾದವು. "ಯುವ ಕವಿಗಳಿಗಾಗಿ" ಎಂಬ ಎರಡು ಸಂಕ್ಷಿಪ್ತ ಪ್ರಬಂಧಗಳನ್ನು ಗಯಟೆ ಬರೆದಿದ್ದಾನೆ. ಅದರಲ್ಲಿ ಮುಖ್ಯವಾಗಿ ಹೇಳಿರುವುದಿದು: ಜರ್ಮನ್ ಭಾಷೆಯು ಎಷ್ಟು ಎತ್ತರಕ್ಕೆ ಬೆಳೆದಿದೆಯೆಂದರೆ ಆ ಭಾಷೆಯನ್ನು ತಿಳಿದವರು ಯಾರೇ ಆಗಲಿ ತಮ್ಮ ಅನಿಸಿಕೆಗಳನ್ನು ಛಂದೋಬದ್ಧವಾಗಿ ವ್ಯಕ್ತಪಡಿಸಲು ಸಾಧ್ಯವಿದೆ; ಆದರೆ ಹಾಗೆ ಬರೆದದ್ದೆಲ್ಲಾ ಕವನ ಎನಿಸಿಕೊಳ್ಳಲಾರದು. ಪ್ರಬಂಧದ ಕೊನೆಯಲ್ಲಿ ಗಯಟೆ ನಾಲ್ಕು ಸಾಲಿನ ಪದ್ಯವೊಂದನ್ನು ಬರೆದಿದ್ದ. ಅದರ ಸಾರಾಂಶ ಇದು: "ಯುವ ಬರಹಗಾರನೇ, ಎಚ್ಚರಿಕೆ ವಹಿಸು; ಹೃದಯ ಮತ್ತು ಆತ್ಮಗಳೆರಡೂ ಮಿಡಿಯುವ ಸಂದರ್ಭಗಳಲ್ಲಿ ಸಹಜವಾಗಿಯೇ ನಿನ್ನನ್ನು ಕಾವ್ಯವು ಮುನ್ನಡೆಸಲು ಬರಬಹುದು. ಆದರೆ ಜೋಕೆ, ಅದು ಎಂದಿಗೂ ನಿನ್ನ ಮಾರ್ಗದರ್ಶಿ

ಆಗಲಾರದು.'' ಇದರ ಹಿನ್ನೆಲೆಯಲ್ಲಿ ತಾನು ಬರೆದಿದ್ದ "ಕವನ''ಗಳನ್ನು ಪರಾಮರ್ಶಿಸಿಕೊಂಡು, ಕಾವ್ಯಸ್ಫೂರ್ತಿ ತನ್ನಲ್ಲಿಲ್ಲವೆಂದು ತೀರ್ಮಾನಿಸಲು ಏಂಗೆಲ್ಸ್‌ಗೆ ಬಹಳ ಸಮಯ ಹಿಡಿಯಲಿಲ್ಲ. "ನನ್ನಂತಹ ಅಥವಾ ನನಗಿಂತಲೂ ದೊಡ್ಡ ಕತ್ತೆಗಳೇ ಆಗಾಗ್ಗೆ ಕವನಗಳನ್ನು ಪ್ರಕಟಿಸುತ್ತಿರುವಾಗ ನಾನೂ ಅದನ್ನು ಮಾಡಹೊರಟರೆ ಜರ್ಮನ್ ಭಾಷೆಗೆ ಆಘಾತವೇನೂ ಉಂಟಾಗಲಾರದು'' ಎಂಬ ಸಮಾಧಾನದಿಂದ ಏಂಗೆಲ್ಸ್ ಕೆಲವು ಕವನಗಳನ್ನು ನಂತರದಲ್ಲೂ ಪ್ರಕಟಿಸಿದರಾದರೂ ಅದನ್ನು ಹೆಮ್ಮೆಯ ಸಾಧನೆಯೆಂದು ಬಗೆಯಲಿಲ್ಲ. ಸಮಕಾಲೀನ ಕವಿಗಳ ಕೃತಿಗಳನ್ನು ಹಾಸ್ಯಭರಿತವಾಗಿ ಮತ್ತು ಮೊನಚಾಗಿ ವಿಮರ್ಶಿಸುವ ಪ್ರವೃತ್ತಿಯನ್ನೂ ಪ್ರದರ್ಶಿಸುತ್ತಾ ಒಮ್ಮೆ ಹೀಗೆ ಬರೆದರು: "ಆಹಾ! ಎಂಥ ಒಳ್ಳೆಯ ಪಂಗಡ: ವಾಸ್ತವದಲ್ಲಿ ಇಲ್ಲದಿರುವುದನ್ನೇ ಕಾವ್ಯದಲ್ಲಿ ಸೃಷ್ಟಿಸಿ ಹೊರದಬ್ಬುವ ಈ ಮೇಧಾವಿಗಳಿಗೆ ಏನೆನ್ನಬೇಕು! ಇವನು, ಈ ಥಿಯೋಡರ್ ಮುಂಟ್, ಕಾವ್ಯದಲ್ಲಿ ದೆಮ್ವಾಸೆಲ್ ತಾಗ್ಲಿಯೋನಳ ಬಗ್ಗೆ ಅಧ್ವಾನವಾದದ್ದೇನೇನನ್ನೋ ಬರೆದು ತುಂಬುತ್ತಾನೆ. ಗಯಟೆಯ ಕಾವ್ಯವನ್ನು ನೃತ್ಯರೂಪದಲ್ಲಿ ಅರ್ಥೈಸುವ ಕಲಾವಿದೆ ಅವಳು. ಮುಂಟ್ ಎಂತಹ ಅದ್ಭುತ ಕವಿಯೆಂದರೆ ಗಯಟೆ, ಹೈನ್, ರಾಹೆಲ್ ಮತ್ತು ಸ್ಟೀಗ್ಲಿಟ್ಸ್, ಎಲ್ಲರ ಗರಿಗಳನ್ನು ತೆಗೆದುಕೊಂಡು ತಾನೇ ಸಿಂಗರಿಸಿಕೊಂಡು ಬಿಡುತ್ತಾನೆ. ...ಇನ್ನು ಹಾಯ್ನ್‌ರಿಕ್ ಲೌಬ್ ಬಗ್ಗೆ ಹೇಳುವುದೇ ಬೇಡ: ಅಸ್ತಿತ್ವದಲ್ಲಿರುವ ಪಾತ್ರಗಳನ್ನು ಒಂದರಮೇಲೊಂದು ಕಡೆದು ತೆಗೆಯುತ್ತಾನೆ. ಅವನ ಪ್ರವಾಸ ಕಥನಗಳಿಗಂತೂ ಎಗ್ಗೆ ಇಲ್ಲ; ಅನರ್ಥಗಳ ಪರಂಪರೆಗೆ ಶ್ರೇಷ್ಠ ಉದಾಹರಣೆಗಳು. ಎಷ್ಟು ಅಸಹ್ಯ!'' (೧೮೩೯ರ ಜನವರಿ ೧೦ರ ಒಂದು ಪತ್ರ).

ಈ ಮಧ್ಯೆ ೧೮೪೧ರ ಮಾರ್ಚ್‌ನಲ್ಲಿ ತನ್ನ ವೃತ್ತಿ ತರಬೇತಿಯನ್ನು ಮುಗಿಸಿಕೊಂಡು ಬ್ರೆಮೆನ್ ನಿಂದ ಏಂಗೆಲ್ಸ್ ಬಾರ್ಮೆನ್‌ಗೆ ಹಿಂದಿರುಗಿದ ಮೇಲೆ ಆಳವಾದ ಅಧ್ಯಯನದಲ್ಲಿ ನಿರತನಾದನು. ಬರ್ಲಿನ್ನಿಗೆ ತೆರಳಿ ಸ್ವಲ್ಪಕಾಲ ಮಿಲಿಟರಿ ಸೇವೆಯಲ್ಲಿ ತೊಡಗುವುದೆಂದೂ ಅದಾದ ನಂತರ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ಮತ್ತು ಸಾಹಿತ್ಯ ಕಲಿಯುವುದೆಂದೂ ಆತನ ಎಣಿಕೆಯಾಗಿತ್ತು. ಶ್ರೀಮಂತ ಕುಟುಂಬದ ಯುವಕರಿಗೆ ಕಡ್ಡಾಯ ಮಿಲಿಟರಿ ಸೇವೆಯಿಂದ ತಪ್ಪಿಸಿಕೊಳ್ಳುವುದು ಅಷ್ಟೇನೂ ಕಷ್ಟವಿರಲಿಲ್ಲ. ಇಂತಿಷ್ಟು ಹಣವೆಂದು ಪಾವತಿ ಮಾಡಿದ್ದರೆ ಆಗಿತ್ತು. ಹಾಗೆ ಮಾಡದೆ ಏಂಗೆಲ್ಸ್ ೧೮೪೧ರ ಸೆಪ್ಟೆಂಬರ್‌ನಲ್ಲಿ ಬರ್ಲಿನ್ ವಿಶ್ವವಿದ್ಯಾಲಯದ ಸನಿಹದಲ್ಲೇ ಇದ್ದ ಸೈನ್ಯದ ತುಕಡಿಯಲ್ಲಿ ಭರ್ತಿಯಾಗಿ ಮಿಲಿಟರಿ ಕಾರ್ಯಾಚರಣೆಗಳ ಸೂಕ್ಷ್ಮ ಪರಿಚಯವನ್ನು ನೇರವಾದ ಅನುಭವದಿಂದ ಪಡೆದುಕೊಂಡರು. ಹೊರಗಿದ್ದುಕೊಂಡೇ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿ ದಾಖಲು ಮಾಡಿಸಿಕೊಂಡರು. ತತ್ತ್ವಶಾಸ್ತ್ರವನ್ನು ಪ್ರಮುಖ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿದ್ದ ಏಂಗೆಲ್ಸ್ ಮತಧರ್ಮಗಳ ಇತಿಹಾಸವನ್ನು ವಿಶೇಷ ಅಧ್ಯಯನದ ವಿಷಯವಾಗಿಸಿಕೊಂಡರು. ಆಗ್ಗೆ ಪ್ರಪಂಚ ತತ್ತ್ವಜ್ಞಾನಿಯಾಗಿ ಮೆರೆದಿದ್ದವನು ಹೆಗೆಲ್. ಏಂಗೆಲ್ಸ್ ಬರ್ಲಿನ್ನಿಗೆ ಹೋಗುವ ವೇಳೆಗಾಗಲೆ ಹೆಗೆಲ್‌ನ ಅನುಯಾಯಿಗಳು ಒಡೆದು ಹಂಚಿಹೋಗಿದ್ದರು. ಹೆರ್ಮನ್ ಹಿನ್ರಿಕ್ಸ್,

ಗಿಯೋರ್ಗ್ ಗ್ಯಾಬ್ಲರ್, ಮುಂತಾದವರನ್ನು ಬಲಪಂಥೀಯ ಹೆಗೆಲಿಯನ್ನರೆಂದು ಕರೆಯಲಾಗುತ್ತಿತ್ತು. ಹೆಗೆಲ್‌ನ ತತ್ತ್ವವನ್ನು ಕ್ರೈಸ್ತಮತದ ಸಂಪ್ರದಾಯದ ಮೂಸೆಯಲ್ಲಿ ವ್ಯಾಖ್ಯಾನಿಸುವುದು ಅವರ ಪದ್ಧತಿಯಾಗಿತ್ತು. ಅವರೆಲ್ಲಾ ಕಟ್ಟಾ ಧಾರ್ಮಿಕ ಪರಂಪರೆಯವರಾಗಿದ್ದರು ಮತ್ತು ಅಂದಿನ ರಾಜಕೀಯ ವ್ಯವಸ್ಥೆಯನ್ನು ನಿಷ್ಠೆಯಿಂದ ಬೆಂಬಲಿಸುವವರಾಗಿದ್ದರು. ಇದಕ್ಕೆ ಪ್ರತಿಯಾಗಿ ಎಡಪಂಥೀಯ ಹೆಗೆಲಿಯನ್ನರ ಪ್ರಬಲ ಪಂಗಡವೊಂದು ರಚನೆಗೊಂಡಿತ್ತು. ಅದರಲ್ಲಿ ಡೇವಿಡ್ ಸ್ಟ್ರಾಸ್, ಬ್ರೂನೋ ಬಾಯರ್, ಎಡ್ಗರ್ ಬಾಯರ್, ಆರ್ನಾಲ್ಡ್ ರೂಷ್, ಮ್ಯಾಕ್ಸ್ ಸ್ಟರ್ನರ್, ಮುಂತಾದವರು ಪ್ರಮುಖರಾಗಿದ್ದರು. ಮೊದಲಿಗೆ ಕಾರ್ಲ್ ಮಾರ್ಕ್ಸ್ ಸಹ ಈ ಪಂಗಡದಲ್ಲಿದ್ದು, ಏಂಗೆಲ್ಸ್ ಬರ್ಲಿನ್ನಿಗೆ ಬರುವ ಮುನ್ನವೇ ಅಲ್ಲಿಂದ ನಿರ್ಗಮಿಸಿದ್ದರು. ಇವರನ್ನು ''ಯುವ ಹೆಗೆಲಿಯನ್ನರು'' ಎಂದೂ ಕರೆಯಲಾಗುತ್ತಿತ್ತು.

ಹೆಗೆಲ್‌ನ ದಾರ್ಶನಿಕ ಚಿಂತನೆಯನ್ನು ಇವರು ನಾಸ್ತಿಕತೆ ಮತ್ತು ಪ್ರಗತಿಗಾಮಿ ಆಯಾಮದಿಂದ ಅರ್ಥೈಸುತ್ತಿದ್ದರು. ಪ್ರತಿಯೊಂದು ಧಾರ್ಮಿಕ ನಂಬಿಕೆಯನ್ನೂ ಇವರು ತೀವ್ರವಾಗಿ ವಿಮರ್ಶೆ ಮಾಡಿ ಕ್ರೈಸ್ತಧರ್ಮದ ಬುನಾದಿಯನ್ನೇ ಅಲುಗಿಸಿಬಿಡುತ್ತಿದ್ದರು ಮತ್ತು ಆವರೆಗೆ ಜರ್ಮನಿಯಲ್ಲಿ ಕೇಳರಿಯದಂತಹ ರಾಜಕೀಯ ತತ್ವಗಳನ್ನು ಯಾವ ಅಳುಕೂ ಇಲ್ಲದೆ ಪ್ರತಿಪಾದಿಸುತ್ತಿದ್ದರು. ಸಾಂಪ್ರದಾಯಿಕ ಹೆಗೆಲ್ ಅನುಯಾಯಿಗಳಿಗೂ ಯುವ ಹೆಗೆಲಿಯನ್ನರಿಗೂ ಇದ್ದ ಅತಿಮುಖ್ಯ ವ್ಯತ್ಯಾಸವು ಹೆಗೆಲ್ ಪ್ರತಿಪಾದಿಸಿದ್ದ ದ್ವಂದ್ವಮಾನ ಗ್ರಹಿಕೆಗೆ ಸಂಬಂಧಿಸಿದ್ದಾಗಿತ್ತು. ಪ್ರತಿಯೊಂದು ವಸ್ತುವೂ ಸದಾಕಾಲ ಬದಲಾವಣೆಗೆ ಪಾತ್ರವಾಗಿರುತ್ತದೆ ಮತ್ತು ತನ್ನ ಆಂತರಿಕ ಬೆಳವಣಿಗೆಯಿಂದಾಗಿ, ಅಸ್ತಿತ್ವದಲ್ಲಿರುವ ಪ್ರತಿಯೊಂದು ವಸ್ತುವೂ ಕ್ರಮೇಣ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಿರುತ್ತದೆ ಮತ್ತು ಹೊಸದಾದ ಹಾಗೂ ಹೆಚ್ಚು ತರ್ಕಬದ್ಧವಾದ ಸ್ವರೂಪವನ್ನು ತಾಳುತ್ತಿರುತ್ತದೆ ಎಂಬುದು ಈ ಗ್ರಹಿಕೆ. ಹಾಗೆ ಬದಲಾಗುವ ವಸ್ತುಗಳಲ್ಲಿ ಸಮಾಜವೂ ಸೇರಿದೆ. ಇದು ಕೇವಲ ತತ್ವವಾಗಿ ಉಳಿಯದೆ ಪ್ರಾಯೋಗಿಕವಾಗಿ ಮಹತ್ತರ ಸೂಚನೆಗಳನ್ನು ನೀಡುವಂತಹ ವಿಚಾರವಾಗಿತ್ತು. ಅಂದಿನ ಜರ್ಮನಿಯ ಸನ್ನಿವೇಶಕ್ಕೆ ಅನ್ವಯಿಸಿದಾಗ ಈ ವಿಚಾರವು ಬಹುಮುಖವಾಗಿ ತೆರೆದುಕೊಳ್ಳುತ್ತಿತ್ತು. ಬಹುಮುಖ್ಯವಾದ ಸೂಚನೆಯೆಂದರೆ, ಜರ್ಮನಿಯಲ್ಲಿ ಅಸ್ತಿತ್ವದಲ್ಲಿದ್ದ ಪ್ರಭುತ್ವವು ಹಾಗೆಯೇ ಉಳಿಯಬೇಕಾಗಿಲ್ಲ ಮತ್ತು ಉಳಿಯಲಾರದು ಎಂಬುದಾಗಿತ್ತು. ಅದನ್ನೇ ಮುಂದುವರಿಸಿದರೆ ಇನ್ನೊಂದು ಸೂಚನೆಯೂ ಅದರಲ್ಲಿ ಅಡಗಿತ್ತು: ಸದ್ಯದಲ್ಲಿರುವ ಪ್ರಭುತ್ವ ರಚನೆಯು ಅತಾರ್ಕಿಕವಾದ್ದು ಮತ್ತು ಅಶಾಶ್ವತವಾದ್ದು. ಅಂದರೆ, ಅದನ್ನು ಕಿತ್ತೊಗೆಯಬೇಕೆಂದರ್ಥ.

ಚರ್ಚಿನ ಅಧಿಕಾರವನ್ನು ಪ್ರಶ್ನಿಸುವುದಲ್ಲದೆ ರಾಜಕೀಯ ಸಂರಚನೆಯನ್ನು ಪ್ರಶ್ನಿಸುವ ಈ ನಿಲುವು ಅಧಿಕಾರದಲ್ಲಿದ್ದವರಿಗೆ ಅಪಥ್ಯವೆನಿಸುವುದು ಸ್ವಾಭಾವಿಕವಾಗಿತ್ತು. ತರ್ಕದ ಮಂಥನದಿಂದ ಹೊರಹೊಮ್ಮಿದ ಅಂಶಗಳನ್ನು ಮಾತ್ರವೇ ಮಾನ್ಯ ಮಾಡಬೇಕೆಂಬ ಯುವ

ಹೆಗೆಲಿಯನ್ನರ ಸಿದ್ಧಾಂತವು ಆಳುವ ವರ್ಗಕ್ಕೆ ಕಸಿವಿಸಿಯನ್ನುಂಟುಮಾಡಿತು. ತತ್ತ್ವಶಾಸ್ತ್ರದ ಪರಿಧಿಯಲ್ಲಿ ಇದೊಂದು ಹೊಸ ಉಪಕ್ರಮ; ಏಕೆಂದರೆ, ಮತಧರ್ಮದ ವಿಮರ್ಶೆಯನ್ನು ದಾಟಿ ಅವರು ರಾಜಕೀಯ ಹಾಗೂ ಅದಕ್ಕೆ ಬುನಾದಿಯಾಗಿದ್ದ ಸಿದ್ಧಾಂತವನ್ನು ವಿಮರ್ಶಿಸಲು ಹೊರಟಿದ್ದರು. ನಿರಂಕುಶವಾಗಿ ಪ್ರಭುತ್ವ ನಡೆಸುತ್ತಿದ್ದವರಿಗೆ ತತ್ತ್ವಶಾಸ್ತ್ರದ ಎಲ್ಲೆಯನ್ನು ಹೀಗೆ ಹಿಗ್ಗಿಸುವುದು ಬೇಕಿರಲಿಲ್ಲ. ಆದರೆ ಏಂಗೆಲ್ಸ್‌ಗೆ ಇದು ಬಹುವಾಗಿ ಹಿಡಿಸಿತ್ತು; ಬರ್ಲಿನ್ನಿನ ಯುವ ಹೆಗೆಲಿಯನ್ನರ ತಂಡಕ್ಕೆ ಕೂಡಲೆ ಸೇರಿಕೊಂಡು ಅವರ ಸೈದ್ಧಾಂತಿಕ ಹೋರಾಟಗಳಲ್ಲಿ ಭಾಗಿಯಾಗಲು ಉತ್ಸಾಹ ತೋರಿದ.

೧೮೪೧ರ ಸೆಪ್ಟೆಂಬರ್‌ನಲ್ಲಿ ಏಂಗೆಲ್ಸ್ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಫ್ರೆಡರಿಕ್ ಶೆಲ್ಲಿಂಗ್‌ರ ಉಪನ್ಯಾಸಗಳಿಗೆ ಹಾಜರಾಗಲಾರಂಭಿಸಿದ. ಈತ ಆರಂಭದಲ್ಲಿ ಹೆಗೆಲ್ಲನ ಸಂಗತಿಯಾಗಿದ್ದು ಆಮೇಲೆ ಆತನ ಸಿದ್ಧಾಂತದಲ್ಲಿದ್ದ ಪ್ರತಿಯೊಂದು ಪ್ರಗತಿಗಾಮಿ ಅಂಶವನ್ನೂ ಬಲವಾಗಿ ವಿರೋಧಿಸುತ್ತಿದ್ದವನು. ಅಂತಹ ವ್ಯಕ್ತಿಯನ್ನು ವಿಶ್ವವಿದ್ಯಾಲಯ ದಲ್ಲಿ ನೇಮಕ ಮಾಡಿದರೆ ಯುವ ಹೆಗೆಲಿಯನ್ನರನ್ನು ಎದುರಿಸಲು ಶಕ್ಯವಾಗುತ್ತದೆಂಬ ಹುನ್ನಾರ ಕಣ್ಣಿಗೆ ರಾಚುವಂತಿತ್ತು. ಶೆಲ್ಲಿಂಗ್ ಪ್ರತಿಪಾದಿಸುತ್ತಿದ್ದ "ಆವಿಷ್ಕರಣದ ತತ್ತ್ವ ಶಾಸ್ತ್ರವು" ಬೈಬಲ್ಲಿನ ಯಥಾವತ್ತಾದ ನಿರೂಪಣೆಯೆಂಬ ಖ್ಯಾತಿಯನ್ನು ಪಡೆದಿತ್ತು. ಆದರೆ ಇದು ಶುಷ್ಕ ತರ್ಕವೆಂದು ಮನಗಂಡ ಏಂಗೆಲ್ಸ್ ಕೂಡಲೆ ಶೆಲ್ಲಿಂಗನ ವಿಜ್ಞಾನ-ವಿರೋಧಿ ನಿಲುವನ್ನು ಅಂಧಶ್ರದ್ಧೆ ಮತ್ತು ಗುಲಾಮಿ ಭಕ್ತಿ ಎಂದು ಟೀಕಿಸಿದ್ದಲ್ಲದೆ ಶೆಲ್ಲಿಂಗ್‌ನ ಮೂಲೋದ್ದೇಶವು ಪ್ರಷ್ಯದ ದೊರೆಯ ಸೇವೆ ಮಾಡುವುದೇ ಆಗಿದೆಯೆಂದು ಮೂದಲಿಸಿ ದರು. ಸ್ವತಂತ್ರ ತತ್ತ್ವಶಾಸ್ತ್ರದ ವಿಕಾಸಕ್ಕೆ ತಡೆಯೊಡ್ಡುವ ಶೆಲ್ಲಿಂಗ್‌ನಂತಹ ತತ್ತ್ವಜ್ಞಾನಿಗಳನ್ನು ಆಮೂಲಾಗ್ರವಾಗಿ ವಿರೋಧಿಸಬೇಕೆಂದು ಬಹಿರಂಗವಾಗಿ ಹೇಳುತ್ತಾ ಶೆಲ್ಲಿಂಗನ ಬಗ್ಗೆ ನಾಲ್ಕಾರು ಕಿರುಹೊತ್ತಿಗೆಗಳನ್ನು ಏಂಗೆಲ್ಸ್ ಹೊರತಂದರು. ಹೆಗೆಲ್‌ನ ತತ್ತ್ವವನ್ನು ಅರ್ಥೈಸು ವಾಗ ಶೆಲ್ಲಿಂಗ್ ಒತ್ತುಕೊಟ್ಟಿದ್ದ ಅಂಶ ಇದು: ತರ್ಕಬದ್ಧವಾದ್ದು ಕೇವಲ ಸಾಧ್ಯತೆಯ ಲಕ್ಷಣವನ್ನು ಹೊಂದಿದೆ. (ಅಂದರೆ, ಅದರ ಅಸ್ತಿತ್ವವು ಮನೋಭೂಮಿಕೆಯಲ್ಲಿ ಮಾತ್ರವೇ ಉಳಿಯುವಂಥದು; ನೈಜವಾಗಿ, ಪ್ರಾಯೋಗಿಕವಾಗಿ ಅಸ್ತಿತ್ವವನ್ನು ಹೊಂದಲಾರದು). ಇದಕ್ಕೆ ಪ್ರತಿಯಾಗಿ ಏಂಗೆಲ್ಸ್ ಹೆಗೆಲ್ಲಿನ ಪ್ರಮೇಯವನ್ನು ಸಾಧಾರವಾಗಿ ನಿರೂಪಿಸಿದ್ದು ಹೀಗೆ: ಪ್ರತಿಯೊಂದು ತರ್ಕಬದ್ಧವಾದ ಅಂಶದಲ್ಲೂ ವಾಸ್ತವವಿದೆ ಮತ್ತು ವಾಸ್ತವವಾದದ್ದೆಲ್ಲಾ ತರ್ಕಬದ್ಧವಾಗಿಯೇ ಇರುತ್ತದೆ. (ಅಂದರೆ, ಹೆಗೆಲ್ಲನ ಪ್ರಕಾರ ವಿಶ್ವವು ತರ್ಕಬದ್ಧವಾಗಿದೆ; ಆದ್ದರಿಂದ ತತ್ತ್ವಶಾಸ್ತ್ರವೂ ತರ್ಕಬದ್ಧವಾಗಿರಬೇಕು. ಅರ್ಥಾತ್, ವಾಸ್ತವವೆಂಬುದು ವಸ್ತುನಿಷ್ಠವಾದ ನಿಯಮಗಳನ್ನು ಹೊಂದಿದೆ; ಆದ್ದರಿಂದ ದಿನನಿತ್ಯದ ಪ್ರಾಯೋಗಿಕ ಚಟುವಟಿಕೆಗಳಿಗೆ ತತ್ತ್ವಶಾಸ್ತ್ರವು ಮುಖ್ಯವಾದ ಸಾಧನವಾಗಬಲ್ಲದು).

ಇದೆಲ್ಲಾ ಮೊದಲ ನೋಟಕ್ಕೆ ತೀರಾ ಕ್ಲಿಷ್ಟವಾದ ಮತ್ತು ಅಮೂರ್ತವಾದ ಚರ್ಚೆಯಂತೆ ತೋರಬಹುದು. ಆದರೆ ಯಾವುದಾದರೂ ನಿರ್ದಿಷ್ಟ ಸಂದರ್ಭಕ್ಕೆ ಅನ್ವಯ ಮಾಡಹೊರಟರೆ

ಅದರ ಪ್ರಸ್ತುತತೆ ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಯಾವುದಾದರೊಂದು ಸ್ವರೂಪದ ಸಮಾಜವನ್ನು ಗಮನಿಸಬಹುದು. ಅದು ತರ್ಕಬದ್ಧವೇ ಅಥವಾ ತರ್ಕಹೀನವೇ? ಅಂದರೆ, ಆ ಸಮಾಜದ ಸ್ವರೂಪವನ್ನು ನಿರ್ಧರಿಸುವ ನಿರ್ದಿಷ್ಟ ಸೂತ್ರಗಳು ಅಥವಾ ನಿಯಮಗಳು ಉಂಟೆ? ಬೇರೆ ರೀತಿಯಲ್ಲಿ ಹೇಳುವುದಾದರೆ, ನಿರ್ದಿಷ್ಟ ಲಕ್ಷಣಗಳನ್ನುಳ್ಳ ಒಂದು ಸಮಾಜವು ವಾಸ್ತವವೇ ಅಥವಾ ಮನೋಭೂಮಿಕೆಯಲ್ಲಿ ಉಳಿದುಬಿಡುವ ಕಲ್ಪನೆಯೇ? ಶೆಲ್ಲಿಂಗ್ ಪ್ರಕಾರ ಅಂತಹ ಸಮಾಜಕ್ಕೆ ನೈಜವಾದ ಅಸ್ತಿತ್ವವಿಲ್ಲ, ಅಸ್ತಿತ್ವವನ್ನು ಹೊಂದುವ ಸಾಧ್ಯತೆ ಇದೆ, ಅಷ್ಟೆ. ಅದಕ್ಕೆ ಪ್ರತಿಯಾಗಿ ಏಂಗೆಲ್ಸ್ ಹೇಳುವುದಿಷ್ಟೆ: ಕಣ್ಣು ಬಿಟ್ಟು ನೋಡಿದರೆ ವಾಸ್ತವದ ಅರಿವಾಗುತ್ತದೆ. ಒಂದು ಕಾರ್ಖಾನೆ, ಒಬ್ಬ ದುಡಿಮೆಗಾರ, ಒಬ್ಬ ಭೂಮಾಲಿಕ, ಒಬ್ಬ ಕೃಷಿ ಕೂಲಿಕಾರ, ಇವರೆಲ್ಲಾ ಅಸ್ತಿತ್ವದ ಸಾಧ್ಯತೆ ಇರುವವರಲ್ಲ; ಅವರು ಅಸ್ತಿತ್ವದಲ್ಲೇ ಇದ್ದಾರೆ. ಅವರ ನಡುವೆ ನಿರ್ದಿಷ್ಟ ಸಂಬಂಧಗಳಿವೆ. ಅವನ್ನು ತಿಳಿಯಲು ಸಾಧ್ಯ; ಅಂತೆಯೇ, ಅವನ್ನು ಬದಲಾಯಿಸಲು ಸಹ ಸಾಧ್ಯ. ವಸ್ತುನಿಷ್ಠ ಪ್ರಪಂಚವನ್ನು ಮತ್ತು ಅಲ್ಲಿಯ ಅಂತಸ್ಸಂಬಂಧಗಳನ್ನು ಭ್ರಮಾತ್ಮಕವೆಂದೋ "ಅಸ್ತಿತ್ವದ ಸಾಧ್ಯತೆ ಮಾತ್ರ ಇರುವ ಅಂಶ ಗಳು" ಎಂದೋ ವ್ಯಾಖ್ಯಾನಿಸಿದರೆ ಸದ್ಯದ ಸನ್ನಿವೇಶವನ್ನು ಬದಲಾಗದಂತೆ ನೋಡಿಕೊಳ್ಳುವ ಹುನ್ನಾರವಾಗುತ್ತದೆ. ಅದು ಸ್ಥಗಿತತೆಯ ಮಾದರಿ. ಆದರೆ ಪ್ರಪಂಚವು ಸ್ಥಗಿತವಲ್ಲ, ವಾಸ್ತವವಾಗಿ ಬದಲಾಗಬಲ್ಲ ಹಾಗೂ ಬದಲಾಗುತ್ತಿರುವ ವಸ್ತು. ಯಥಾಸ್ಥಿತಿವಾದಿಗಳಿಗೆ ಎಲ್ಲವೂ ನಿರಂತರವಾಗಿ ನಿಂತ ನೀರಿನಂತಿರುತ್ತದೆ ಅಥವಾ ಇರಬೇಕೆಂದು ಅವರು ಆಶಿಸುತ್ತಾರೆ. ಪ್ರಷ್ಯದ ಪ್ರಭುತ್ವವು ನಿರಂತರವಾಗಿ ಯಾವುದೋ ದೊರೆಯ ವಂಶದ್ದಾಗಿರು ತ್ತದೆ ಅಥವಾ ಆಗಿರಬೇಕು ಎಂಬುದು ಶೆಲ್ಲಿಂಗ್‌ನ ನಿಲುವು. ಅದಕ್ಕೆ ಹೆಗೆಲ್ಲನ ತತ್ತ್ವಶಾಸ್ತ್ರದ ಆಧಾರವನ್ನು ಉಲ್ಲೇಖಿಸುತ್ತಾನೆ. ಆದರೆ ಅದು ಹೆಗೆಲ್ಲನ ಸಿದ್ಧಾಂತವೇ ಅಲ್ಲವೆಂದು ಏಂಗೆಲ್ಸ್ ಪ್ರತಿಪಾದನೆ. ಯಥಾಸ್ಥಿತಿ ಮತ್ತು ಪರಿವರ್ತನೆ, ಇವು ತತ್ತ್ವಶಾಸ್ತ್ರದ ಮೂಲ ಸೂತ್ರಗಳು; ಪ್ರತಿಯೊಂದು ಪ್ರಣಾಳಿಕೆಯೂ ಒಂದಿಲ್ಲೊಂದು ಆಶಯವನ್ನು ಎತ್ತಿಹಿಡಿಯು ತ್ತದೆ. ಭಾರತೀಯ ತತ್ತ್ವಶಾಸ್ತ್ರ ವಿಭಾಗಗಳು ಹಾಗೂ ಸಾಮಾಜಿಕ ಇತಿಹಾಸವನ್ನು ಅಭ್ಯಾಸ ಮಾಡಿದಾಗಲೂ ಇದೇ ಆಶಯವನ್ನು ಗುರುತಿಸಲು ಸಾಧ್ಯವಿದೆ.

ಶೆಲ್ಲಿಂಗ್ ಜೊತೆಯಲ್ಲಿ ನಡೆದ ಇನ್ನೊಂದು ವಾದವು ವಿಶ್ವದ ಏಕತೆಗೆ ಸಂಬಂಧಿಸಿದ್ದು. (ಏಕತೆ ಎಂದರೆ ಐಕ್ಯತೆಯೆಂದು ತಿಳಿಯಬಾರದು). ವಿಶ್ವದಲ್ಲಿ ಒಂದು ಅವಿರತವಾದ ನಿಯಮವಿದೆ. ಋಗ್ವೇದದಲ್ಲಿ ಇದನ್ನು 'ಋತ' ಎಂಬ ಪರಿಕಲ್ಪನೆಯಿಂದ ಗುರುತಿಸಲಾಗಿದೆ. ಈ ನಿಯತಿಯು ಅನುಲ್ಲಂಘನೀಯ. ಅದರಿಂದಾಗಿ ಮಾನವನ ಸ್ವಾತಂತ್ರ್ಯಕ್ಕೆ ನಿರ್ಬಂಧ ಹೇರಲಾಗಿದೆಯೆಂಬುದನ್ನು ಏಂಗೆಲ್ಸ್ ನಿರಾಕರಿಸಿದ್ದರು. ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರ ವೆಂಬಂತೆ ವ್ಯಾಖ್ಯಾನ ಮಾಡಿದ್ದ ಶೆಲ್ಲಿಂಗ್‌ನ ಅಭಿಪ್ರಾಯವನ್ನು ತಳ್ಳಿಹಾಕಿ ಏಂಗೆಲ್ಸ್ ಮಹ ತ್ವದ ಒಂದು ನಿರೂಪಣೆಯನ್ನು ಒದಗಿಸಿದ್ದಾರೆ: ನೈಜವಾದ ಸ್ವಾತಂತ್ರ್ಯವು ಸ್ವಚ್ಛಂದವಲ್ಲ; ಆಯಾ ಸಂದರ್ಭದಲ್ಲಿ ನಿಗದಿತವಾದ ಸೀಮಿತತೆಯನ್ನು ಪ್ರಜ್ಞಾಪೂರ್ವಕವಾಗಿ ತಿಳಿದು ಆ ಎಲ್ಲೆಯನ್ನು ಮೀರದೆ ಕ್ರಿಯೆಯಲ್ಲಿ ತೊಡಗುವುದು ಸ್ವಾತಂತ್ರ್ಯವೆನಿಸಿಕೊಳ್ಳುತ್ತದೆ.

ಇದನ್ನು ಅರ್ಥಮಾಡಿಕೊಳ್ಳುವುದು ಸುಲಭ. ನೈಸರ್ಗಿಕ ನಿಯಮಗಳನ್ನು ಮೀರಿ ಸ್ವತಂತ್ರರಾಗಿರಲು ನಮಗೆ ಸಾಧ್ಯವಿಲ್ಲ. ಉದಾಹರಣೆಗೆ, ಉಸಿರಾಡದೆ ಬದುಕಿರಲು ನಮಗೆ ಸಾಧ್ಯವಿಲ್ಲ. ಹಾಗೆಂದರೆ, ನಾವು ಸ್ವಾತಂತ್ರ್ಯಹೀನರೆಂದು ಅರ್ಥವಲ್ಲ. ಒಂದು ಚೌಕಟ್ಟನ್ನು ಮೀರಿ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ಸಾಧ್ಯವಿಲ್ಲವೆಂದಷ್ಟೇ ಅದರರ್ಥ. ನೈಸರ್ಗಿಕ ಅನುಲ್ಲಂಘನೀಯ ಶಾಸನವು ಇರುವಂತೆ ಆಯಾ ಕಾಲಘಟ್ಟದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಚೌಕಟ್ಟುಗಳು ಸಹ ಇರುತ್ತವೆ. ಅವು ಆಯಾ ಹಂತಗಳಲ್ಲಿ ಸ್ವಾತಂತ್ರ್ಯದ ಪರಿಧಿಯನ್ನು ನಿಗದಿಗೊಳಿಸುತ್ತವೆ. ಆದರೆ ಅವು ಸ್ಥಗಿತವಲ್ಲ. ವಿವಿಧ ಚೌಕಟ್ಟುಗಳ ನಿಯಮವನ್ನರಿತು ಪ್ರಜ್ಞಾಪೂರ್ವಕವಾದ ಮಧ್ಯಪ್ರವೇಶದಿಂದ ಸ್ವಾತಂತ್ರ್ಯದ ಎಲ್ಲೆಯನ್ನು ವಿಸ್ತರಿಸಲು ಸಾಧ್ಯವಿದೆ. ಉದಾಹರಣೆಗೆ, ಗುಲಾಮರ ಸ್ವಾತಂತ್ರ್ಯವು ತೀರಾ ಸೀಮಿತವಾಗಿದ್ದ ಕಾಲಘಟ್ಟವೊಂದಿತ್ತು. ಅಂದಿನ ಸಾಮಾಜಿಕ ಮತ್ತು ಆರ್ಥಿಕ ಚೌಕಟ್ಟುಗಳನ್ನು ಭೇದಿಸದೆ ಅವರ ಸ್ವಾತಂತ್ರ್ಯದ ವಿಸ್ತರಣೆ ಸಾಧ್ಯವಿರಲಿಲ್ಲ. ಸಾಮೂಹಿಕ ಮಧ್ಯಪ್ರವೇಶದಿಂದ ಆ ಚೌಕಟ್ಟುಗಳನ್ನು ಮುರಿದಾಗ ಗುಲಾಮರು ಗುಲಾಮರಾಗಿ ಉಳಿಯಬೇಕಾಗಲಿಲ್ಲ. ಯಾವುದೇ ಸಾಮಾಜಿಕ-ಆರ್ಥಿಕ ರಚನೆಯಲ್ಲೂ ಇಂತಹ ಮಿತಿಗಳಿರುವಂತೆ ಅವನ್ನು ಭೇದಿಸಿ ಮುನ್ನಡೆಯುವ ಮಾರ್ಗಗಳೂ ಇರುತ್ತವೆ. ಆ ಕ್ರಿಯೆಯು ಆಯಾ ಸಂದರ್ಭದ ಸ್ವಾತಂತ್ರ್ಯದ ಪರಿಧಿಯನ್ನು ಹಿಗ್ಗಿಸುತ್ತದೆ. ಇದಕ್ಕೆ ಅಗತ್ಯವಾದ ಪರಿಕರಗಳೆಂದರೆ ನಿಯಮದ ನಿಷ್ಕೃಷ್ಟವಾದ ಜ್ಞಾನ ಮತ್ತು ಅದನ್ನುಪಯೋಗಿಸಿಕೊಂಡು ಪ್ರಜ್ಞಾಪೂರ್ವಕವಾಗಿ ಮಧ್ಯಪ್ರವೇಶದ ಕ್ರಿಯೆಯನ್ನು ಸಂಯೋಜಿಸಿಕೊಳ್ಳುವುದು.

ನಮ್ಮ ಇಂದಿನ ಒಂದು ಸಾಮಾಜಿಕ ಪಿಡುಗನ್ನು ಇನ್ನೊಂದು ಉದಾಹರಣೆಯಾಗಿ ನೋಡಬಹುದು. ಅಸ್ಪೃಶ್ಯನೊಬ್ಬನ ಸ್ವಾತಂತ್ರ್ಯವು ಇಚ್ಛಾಬಲದಿಂದ ನಿವಾರಣೆಯಾಗುವುದಿಲ್ಲ. ಹಾಗೆ ಅವನನ್ನು ನಡೆಸಿಕೊಳ್ಳುವವನ ಕರುಣೆಯಿಂದಾಗಲಿ ಸೌಜನ್ಯದಿಂದಾಗಲಿ ಅದು ಪೂರ್ಣವಾಗಿ ನಶಿಸಿಹೋಗುವುದಿಲ್ಲ. ಶೆಲ್ಲಿಂಗ್ ನಿರಾಕರಿಸಿದ ಮತ್ತು ಏಂಗೆಲ್ಸ್ ಎತ್ತಿಹಿಡಿದ ಸೂತ್ರದಂತೆ ಆ ಪಿಡುಗಿಗೆ ಒಂದು ನಿರ್ದಿಷ್ಟ ಸಾಮಾಜಿಕ ಮತ್ತು ಆರ್ಥಿಕ ಚೌಕಟ್ಟಿದೆ. ಅದು ಭೂಮಾಲಿಕತ್ವ ಮತ್ತು ಸಾಂಪ್ರದಾಯಿಕ ಆಚರಣೆಗಳ ಫಲ. ಬೇರೆ ಕಾರಣಗಳೂ ಇರಬಹುದು, ಅವನ್ನು ಅನ್ವೇಷಿಸಿ ತಿಳಿಯಬೇಕು. ಅಸ್ಪೃಶ್ಯನ ಸ್ವಾತಂತ್ರ್ಯ ಹಿಗ್ಗಬೇಕಾದರೆ ಆ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿರುವ ಚೌಕಟ್ಟನ್ನು ಭೇದಿಸಿ ಮುನ್ನಡೆಯಬೇಕು. ಇಷ್ಟು ಸರಳವಾದ ತಿಳುವಳಿಕೆಯನ್ನು ಗ್ರಹಿಸದೆ ನಾವು ಮನಸ್ಸನ್ನು ಪರಿವರ್ತಿಸುವ ಮಾರ್ಗೋಪಾಯಗಳನ್ನು ಹುಡುಕುತ್ತೇವೆ, ಸಂವಿಧಾನದಲ್ಲಿ ಅಸ್ಪೃಶ್ಯತೆಯನ್ನು ನಿವಾರಿಸಿ ನಿಜಜೀವನದಲ್ಲಿ ಇನ್ನೂ ಅದೇಕೆ ನಿವಾರಣೆಯಾಗಿಲ್ಲವೆಂದು ಜಿಜ್ಞಾಸೆ ನಡೆಸುತ್ತೇವೆ, ಯಾರೋ ಒಬ್ಬ ಧೀರೋದಾತ್ತ ವ್ಯಕ್ತಿತ್ವದ ನಾಯಕ ಬಂದು ಅದನ್ನು ಅಳಿಸಿಹಾಕುತ್ತಾನೆಂದು ಚಾತಕ ಪಕ್ಷಿಗಳಂತೆ ಕಾಯುತ್ತಾ ಕೂಡುತ್ತೇವೆ. ಅದೆಲ್ಲಾ ನಿರರ್ಥಕ; ಅದಕ್ಕಿರುವ ಏಕಮೇವ ಮಾರ್ಗವೆಂದರೆ ಅದನ್ನು ಪೋಷಿಸುವ ಚೌಕಟ್ಟನ್ನು ಮುರಿದುಹಾಕುವುದು. ಅದನ್ನು ಮಾಡದೆ

ಎಷ್ಟು ತಲೆ ಚಚ್ಚಿಕೊಂಡರೂ ಆಗುವುದೆಲ್ಲಾ ತೇಪೇದಾರಿ ಕೆಲಸವಷ್ಟೇ. ಹೆಗೆಲ್‌ನನ್ನು ಅರ್ಥೈಸುವಲ್ಲಿ ಶೆಲ್ಲಿಂಗ್ ಮತ್ತು ಏಂಗೆಲ್ಸ್‌ರ ನಡುವೆ ಇಷ್ಟು ಮಹತ್ವದ ಭಿನ್ನತೆಯಿದೆ. ಸ್ವತಃ ಹೆಗೆಲ್ ಸಹ ತನ್ನ ನಿರೂಪಣೆಯ ಸೂಕ್ಷ್ಮತೆಯನ್ನು ಗ್ರಹಿಸಿರಲಿಲ್ಲವೆಂಬಷ್ಟು ಮಟ್ಟಿಗೆ ಏಂಗೆಲ್ಸ್ ಅದಕ್ಕೆ ಕ್ರಾಂತಿಕಾರಿ ಅರ್ಥವನ್ನು ಕಲ್ಪಿಸಿಕೊಟ್ಟಿದ್ದಾರೆ. ತನ್ನ ಸಾಮಾಜಿಕ-ರಾಜಕೀಯ ಸಾಂಪ್ರದಾಯಿಕತೆಯಿಂದಾಗಿ ಹೆಗೆಲ್ ಸಂಕುಚಿತವಾದ ಆಯಾಮದಲ್ಲಿ ವಿಹರಿಸಿದರೆ, ಏಂಗೆಲ್ಸ್ ವಿಸ್ತಾರವಾದ ಪ್ರಜಾಪ್ರಭುತ್ವದ ನೆಲೆಯಿಂದ ಅದಕ್ಕೆ ವೈಶಾಲ್ಯವನ್ನು ಕಟ್ಟಿಕೊಡುತ್ತಾರೆ. ಶೆಲ್ಲಿಂಗ್‌ನನ್ನು ಹೀಗೆ ಕಟುವಾಗಿ ಟೀಕೆಗೆ ಗುರಿಮಾಡಿದ್ದರಿಂದ ಎಷ್ಟೋ ಮಂದಿ ಹೆಗೆಲ್ ಅನುಯಾಯಿಗಳು ಏಂಗೆಲ್ಸ್ ವಿರುದ್ಧ ತಿರುಗಿಬಿದ್ದರು. ಅನೇಕ ಪ್ರಮುಖ ಪತ್ರಿಕೆಗಳೂ ಏಂಗೆಲ್ಸ್‌ರನ್ನು ತರಾಟೆಗೆ ತೆಗೆದುಕೊಂಡವು. ಅಂತೆಯೇ ಅವರ ಪರವಾಗಿ ನಿಂತ ವ್ಯಕ್ತಿಗಳೂ ಪತ್ರಿಕೆಗಳೂ ಕಡಿಮೆಯೇನಿರಲಿಲ್ಲ. ಏಂಗೆಲ್ಸ್‌ರ ಪರಿಚಯವಿರದ ಆರ್ನಾಲ್ಡ್ ರೂಷ್ ಹೇಗೋ ವಿಳಾಸ ಪತ್ತೆಮಾಡಿ ಒಂದು ಪ್ರಶಂಸಾಪತ್ರವನ್ನು ಬರೆಯುತ್ತಾ ಏಂಗೆಲ್ಸ್‌ರನ್ನು "ತತ್ತ್ವಶಾಸ್ತ್ರದ ವಿದ್ವಾಂಸ" (ಡಾಕ್ಟರ್ ಆಫ್ ಫಿಲಾಸಫಿ) ಎಂದು ಸಂಬೋಧಿಸಿದ. ಅದಕ್ಕೆ ೧೮೪೨ರ ಜೂನ್ ೧೫ರಂದು ಉತ್ತರ ಬರೆದು ಕಡೆಯಲ್ಲಿ ಹೀಗೆ ಬರೆದರು: "ಅದೆಲ್ಲಾ ಅಂತಿರಲಿ, ನಾನಿನ್ನೊಂದು ಮಾತು ಹೇಳಬೇಕು. ನಾನು ಡಾಕ್ಟರ್ ಅಲ್ಲ, ಆಗುವ ಸಂಭವವೂ ಇಲ್ಲ. ನಾನೊಬ್ಬ ವ್ಯಾಪಾರಿ ಮಾತ್ರ. ಜೊತೆಗೆ ಪ್ರಷ್ಯದ ಪ್ರಭುತ್ವದ ಸೈನಿಕ ತುಕಡಿಯ ಯೋಧ. ಆದ್ದರಿಂದ 'ಡಾಕ್ಟರ್' ಎನ್ನುವ ಪ್ರಶಸ್ತಿ ಬೇಡ."

ಈ ಸಂಬಂಧದಲ್ಲಿ ಇಂಗ್ಲೆಂಡಿನ ಖ್ಯಾತ ಚಿಂತಕ ಥಾಮಸ್ ಕಾರ್ಲೈಲ್ ಬಗ್ಗೆ ಏಂಗೆಲ್ಸ್ ಮಾಡಿದ್ದ ವಿಮರ್ಶೆಯನ್ನು ಗಮನಿಸುವುದು ಅವಶ್ಯಕ. ಅನೇಕ ಗ್ರಂಥಗಳನ್ನು ಪ್ರಕಟಿಸಿದ್ದ ಕಾರ್ಲೈಲ್ ಇತಿಹಾಸದ ತತ್ವಾರ್ಥದ ಬಗೆಗೂ ಬರೆದಿದ್ದ. ಇತಿಹಾಸದಲ್ಲಿ ಅಥವಾ ಒಂದು ದೇಶದಲ್ಲಿ, ಒಂದು ಸಮಾಜದಲ್ಲಿ, ಕಾಣಬರುವ ಮುಖ್ಯಸಂಗತಿ ಚಲನೆ. ಇದನ್ನೇ 'ಇತಿಹಾಸದ ಗತಿ' ಎನ್ನುತ್ತಾರೆ. ಅದಕ್ಕೆ ಚಾಲನೆ ಕೊಡುವವರು ಯಾರು? ಕಾರ್ಲೈಲ್ ಪ್ರಕಾರ ಅದಕ್ಕೆ ಯಾರೋ ಒಬ್ಬ ಧೀಮಂತ ನಾಯಕ ಕಾರಣ. ಅವನನ್ನು 'ಹೀರೋ' ಎಂದು ಬಣ್ಣಿಸಬಹುದು. ಅಂದರೆ, ಆ ಧೀಮಂತ ನಾಯಕ ಇತಿಹಾಸದ ಕಾರಣಪುರುಷನಾಗುತ್ತಾನೆ. ಅದು ಕ್ರಾಮ್‌ವೆಲ್ ಆಗಬಹುದು, ನೆಪೋಲಿಯನ್ ಆಗಬಹುದು, ಗಾಂಧೀಜಿ ಆಗಬಹುದು, ಲೆನಿನ್ ಆಗಬಹುದು. ಅವರು ಒಂದು ಅಮೂರ್ತ ಶಕ್ತಿಯೋಪಾದಿಯಲ್ಲಿ ಪ್ರೇರಕರಾಗುತ್ತಾರೆ, ಇತಿಹಾಸದ ನಿರ್ಮಾತೃಗಳಾಗುತ್ತಾರೆ. ಕಾರ್ಲೈಲ್‌ನ ಪ್ರತಿಪಾದನೆ ಇಷ್ಟು ಸರಳವಲ್ಲ; ಪ್ರಸ್ತುತ ಚರ್ಚೆಗಾಗಿ ಅದನ್ನು ಸರಳೀಕರಿಸಿ ಹೇಳಲಾಗಿದೆ. ಕಾರ್ಲೈಲ್‌ನ ಈ ತತ್ವವನ್ನು ವಿಶ್ಲೇಷಿಸುವ ಒಂದು ಲೇಖನದಲ್ಲಿ ಏಂಗೆಲ್ಸ್ ಅದನ್ನು ನಿರಾಕರಿಸಿ ಬೇರೊಂದು ವಿವರಣೆಯನ್ನು ನೀಡಿದ್ದಾರೆ. ಯಾರೋ ಒಬ್ಬ ಕಾರಣಪುರುಷನಾಗುತ್ತಾನೆಂದರೆ ಅವನು ಯಾವಾಗ ಬೇಕಾದರೂ ಇತಿಹಾಸದ ರಂಗಸ್ಥಳದಲ್ಲಿ ಅವತರಿಸಿ ತನಗೆ ಸರಿದೋರಿದಂತೆ ಸಮಾಜಕ್ಕೆ ತಿರುವ ನೀಡಬಲ್ಲ ಎಂದರ್ಥವಾಗುತ್ತದೆ. ಒಂದು ರೀತಿ ಭಗವಂತನ

ಅವತಾರವಿದ್ದಂತೆ ಅದು. ಧರ್ಮದ ಗ್ಲಾನಿ ಉಂಟಾಗಿದೆಯೆಂದು ಅವನಿಗನಿಸಿದಾಗ ಭಗವಂತ ಅವತಾರವೆತ್ತಿ ಅಧರ್ಮವನ್ನು ನಿರ್ಮೂಲನ ಮಾಡಬಹುದು. ಅವನು ಅವತಾರವೆತ್ತುವ ವರೆಗೆ ಹುಲುಮಾನವರಾದ ನಾವು ಮಾಡಬಹುದಾದಂಥದೇನೂ ಇಲ್ಲ. ಕೈಕಟ್ಟಿ ಅವನ ನಿರೀಕ್ಷೆಯಲ್ಲಿ ಕೂಡಬೇಕು, ಇಲ್ಲವೆ ಅವನ ಆಗಮನವನ್ನು ಕ್ಷಿಪ್ರಗೊಳಿಸಲು ಧರ್ಮದ ಗ್ಲಾನಿಯನ್ನು ಹೆಚ್ಚಿಸುವ ಕ್ರಿಯೆಯಲ್ಲಿ ತೊಡಗಬೇಕು!

ಇತಿಹಾಸದಲ್ಲಿ ವಸ್ತುಸ್ಥಿತಿ ಇಷ್ಟು ಕಠಿಣವಾಗಿಲ್ಲ. ಕಾರಣಪುರುಷರು ಎನ್ನಲಾದವರು ಯಾರೂ ಏಕಾಂಗಿಗಳಾಗಿ ವಿಜಯ ಸಾಧಿಸಿಲ್ಲ ಮತ್ತು ಸನ್ನಿವೇಶದ ಒತ್ತಾಯವನ್ನು ಬದಿಗೊತ್ತಿ ಮುನ್ನಡೆದಿಲ್ಲ; ಅಥವಾ, ಕ್ಲುಪ್ತವಾದ ಕಾಲಾವಧಿಯಲ್ಲಿ ತಿರುವು ಕೊಡಲು ಸಮರ್ಥರೂ ಆಗಿಲ್ಲ. ಸನ್ನಿವೇಶ ಮತ್ತು ಜನರ ಭಾಗವಹಿಸುವಿಕೆ ಇಲ್ಲದೆ ಅವರಾರೂ ಯಶಸ್ಸು ಗಳಿಸಿಲ್ಲ. ಜನಮನವನ್ನು ಸ್ಪಷ್ಟವಾಗಿ ತಿಳಿದು ಅದನ್ನು ಪ್ರತಿಫಲಿಸಿಯೇ ಎಲ್ಲ ನಾಯಕರೂ ಮುಂದಕ್ಕೆ ಹೆಜ್ಜೆ ಹಾಕಿದ್ದಾರೆ. ಜನರ ನಾಡಿ ಮಿಡಿತವನ್ನು ತಿಳಿಯದವನು ನಾಯಕನಾಗಿ ಬೆಳೆದಿಲ್ಲ, ಇತಿಹಾಸಪುರುಷನಾಗಿಲ್ಲ. ಜನರನ್ನು ಕ್ರಿಯೆಗೆ ಎಳೆದು ತರುವಾಗಲೂ ನಿಧಾನವಾಗಿ ಹೆಜ್ಜೆ ಹಾಕುತ್ತಾ ಅವರನ್ನು ತನ್ನೊಡನೆ ನಡೆಸಿಕೊಂಡು ಹೋಗುತ್ತಾನೆ. ತಾನು ನೂರು ಗಜ ಮುಂದೆ ಹೋಗಿ, ಜನ ಅವನಷ್ಟು ವೇಗವಾಗಿ ಸ್ಪಂದಿಸದಿದ್ದಾಗ ಈ ನಾಯಕನ ಪಾಡು ಹೇಳಬೇಕಾಗಿಲ್ಲ. ಅಂದರೆ, ಧೀಮಂತ ನಾಯಕನನ್ನು ರೂಪಿಸುವವರು ಜನರೇ ಹೊರತು, ಅವನು ತನ್ನಷ್ಟಕ್ಕೆ ತಾನೇ ಇತಿಹಾಸಪುರುಷನಾಗುವುದಿಲ್ಲ. ಗಾಂಧೀಜಿಯಂತಹ ಒಬ್ಬ ಧೀಮಂತ ನಾಯಕನ ಬೆಳವಣಿಗೆಯನ್ನು ಗಮನಿಸಿದರೆ ಇದು ಚೆನ್ನಾಗಿ ಮನದಟ್ಟಾಗುತ್ತದೆ. ಈ ಮಹಾನ್ ನಾಯಕ ದಕ್ಷಿಣ ಆಫ್ರಿಕಾದಿಂದ ಹಿಂದಿರುಗಿದ ತರುವಾಯದಲ್ಲಿ ಕೂಡಲೆ ಬ್ರಿಟಿಷರಿಗೆ 'ಭಾರತ ಬಿಟ್ಟು ತೊಲಗಿ' ಎಂದು ಹೇಳಲಿಲ್ಲ, ಅವರನ್ನು ತೊಲಗಿಸಿ ಎಂದು ಜನಕ್ಕೂ ಹೇಳಲಿಲ್ಲ. ಹತ್ತಾರು ಕಾರ್ಯಾಚರಣೆಗಳಲ್ಲಿ ಭಾಗವಹಿಸಿದ ನಂತರವೇ ಜನ ಅಂತಹ ಘೋಷಣೆಗೆ ಸ್ಪಂದಿಸಬಹುದಾಗಿತ್ತು. ಅದನ್ನು ಗ್ರಹಿಸಿದ್ದು ಗಾಂಧೀಜಿಯ ಧೀಮಂತಿಕೆ. ಆದ್ದರಿಂದಲೇ ಕಾರ್ಲೈಲ್ ಸಿದ್ಧಾಂತವನ್ನು ವಿರೋಧಿಸಿ ಅದಕ್ಕೆ ಪರ್ಯಾಯವಾಗಿ ಏಂಗೆಲ್ಸ್ ತಮ್ಮ ನಿಲುವನ್ನು ಪ್ರಕಟಿಸಿದ್ದು: ಇತಿಹಾಸದ ಮುನ್ನಡೆಗೆ ಯಾವುದೋ ಅಮೂರ್ತ ಶಕ್ತಿಯು ಕಾರಣವಲ್ಲ; ಅದನ್ನು ಮುನ್ನಡೆಸುವುದು ಜನಸಾಮಾನ್ಯರ ಮೂರ್ತವಾದ ಕ್ರಿಯೆ. ಯಾವುದು ಸ್ವಾಭಾವಿಕವಾದ ಸನ್ನಿವೇಶವೆಂದು ತೋರುತ್ತದೋ ಅದರ ವಿರುದ್ಧ ಸೆಣಸಾಡಿ ಗೆಲುವು ಸಾಧಿಸುವವರು ಜನ. ಆದ್ದರಿಂದ ಬದಲಾವಣೆಯ ಹರಿಕಾರರೆಂದರೆ ಅವರೇ. ಕಾರ್ಲೈಲ್ ಪ್ರತಿಪಾದಿಸಿದ್ದ ಇನ್ನೂ ಅನೇಕ ತತ್ವಗಳನ್ನು ಏಂಗೆಲ್ಸ್ ಖಂಡತುಂಡವಾಗಿ ನಿರಾಕರಿಸಿದ್ದರು. ಅವನ್ನೆಲ್ಲಾ ಸಂಗ್ರಹಿಸುವ ಗೋಜಿಗೆ ಹೋಗದೆ ಇನ್ನೊಂದಂಶವನ್ನು ಮಾತ್ರವೇ ಇಲ್ಲಿ ದಾಖಲಿಸಬಹುದು. ಹತ್ತೊಂಭತ್ತನೆಯ ಶತಮಾನದ ಇಂಗ್ಲೆಂಡನ್ನು ಆಮೂಲಾಗ್ರವಾಗಿ ವಿವೇಚಿಸಿದ್ದಾಗಿ ಭಾವಿಸಿದ್ದ ಕಾರ್ಲೈಲ್ ಅಂದಿನ ದುಡಿಯುವ ಜನತೆಯ ಕಾರ್ಪಣ್ಯವನ್ನು ಅನಿವಾರ್ಯವಾದ

ಪ್ರಸಂಗವೆಂದು ವ್ಯಾಖ್ಯಾನಿಸಿದ್ದ. ಇಂತಹ ವ್ಯಕ್ತಿನಿಷ್ಠ ತೀರ್ಮಾನಗಳನ್ನು ಅವಿವೇಕವೆಂದು ಅಲ್ಲಗಳೆದ ಏಂಗೆಲ್ಸ್ ಬೇರೆಯೇ ಅಭಿಪ್ರಾಯವನ್ನು ಪ್ರಕಟಿಸಿದರು. ತಮ್ಮ ಬಂಧನದಿಂದ ಮುಕ್ತರಾಗುವ ಚೈತನ್ಯವನ್ನು ದುಡಿಯುವ ಜನ ಹೊಂದಿದ್ದಾರೆಂದು ಹೇಳಿದ ಏಂಗೆಲ್ಸ್ ಆ ಜನರು ಇತಿಹಾಸದ ನಿರ್ಮಿತಿಗೆ ಸಮರ್ಥರೆಂದು ಘೋಷಿಸಿದರು: "ಈ ದುಡಿಯುವ ಜನರನ್ನು ಇಂಗ್ಲೆಂಡಿನ ಪರಯ್ಯಾಗಳೆಂದು ಮೂಗು ಮುರಿಯುವವರಿದ್ದಾರೆ. ಆದರೆ ಈ ನಿರ್ಗತಿಕರೇ ನಿಜಕ್ಕೂ ಗೌರವಕ್ಕೆ ಪಾತ್ರರಾಗಬೇಕಾದವರು. ಅವರಿಂದಲೇ ಇಂಗ್ಲೆಂಡಿಗೆ ಮುಕ್ತಿ ಸಾಧ್ಯ. ಅವರು ಮಾತ್ರವೇ ಇನ್ನೂ ಉಪಯುಕ್ತವಾದ ಜನರಾಗಿ ಉಳಿದಿರುವವರು. ಅವರಿಗೆ ವಿದ್ಯೆಯಿಲ್ಲ, ನಿಜ; ಆದರೆ ಅವರಿಗೆ ಪೂರ್ವಗ್ರಹಗಳೂ ಇಲ್ಲ. ಒಂದು ಅಮೋಘವಾದ ರಾಷ್ಟ್ರೀಯ ಹೆಗ್ಗಳಿಕೆಗೆ ಅವರಲ್ಲಿನ್ನೂ ಚೈತನ್ಯ ಉಳಿದಿದೆ. ಅವರಿಗೆ ಖಚಿತವಾದ ಭವಿಷ್ಯವಿದೆ." ಬಹುಶಃ ಈ ಮಾತನ್ನು ಯಾವುದೇ ಕಾಲದ ದುಡಿಯುವ ಜನತೆಯ ಬಗ್ಗೆ ಹೇಳಬಹುದೆನಿಸುತ್ತದೆ. ಇದನ್ನೇ ಹೆಗೆಲ್ ಬೇರೊಂದು ರೀತಿಯಲ್ಲಿ ವ್ಯಕ್ತಪಡಿಸಿದ್ದ: ಪರಮಾಂತಿಕವಾದ ಚೈತನ್ಯವೊಂದಿದೆ; ಅದೇ ಇತಿಹಾಸದ ನಿರ್ಮಾತೃ. ಆದರೆ ಈ ನಿರ್ಮಾಣಕ್ಕೆ ಆ ಚೈತನ್ಯವು ಜನಸಾಮಾನ್ಯರನ್ನು ಸಾಮಗ್ರಿಯಾಗಿ ಬಳಸಿಕೊಳ್ಳುತ್ತದೆ. ಆ ಸಾಮಗ್ರಿಯಿಲ್ಲದೆ ಚಾರಿತ್ರಿಕ ಕ್ರಿಯೆ ಸರ್ವಥಾ ಅಸಾಧ್ಯ.

೧೮೩೦ ಮತ್ತು ೪೦ರ ದಶಕಗಳಲ್ಲಿ ಇಂಗ್ಲೆಂಡಿನಲ್ಲಿ ದುಡಿಮೆಗಾರರ ಒಂದು ಬೃಹತ್ ಚಳುವಳಿ ಜಾರಿಯಲ್ಲಿತ್ತು. ಅದನ್ನು 'ಚಾರ್ಟಿಸ್ಟ್ ಚಳುವಳಿ' ಎಂದು ಕರೆಯುವುದು ವಾಡಿಕೆ. ೧೮೩೮ರ ಮೇ ತಿಂಗಳಲ್ಲಿ ಈ ಚಳುವಳಿಯ ಪರವಾಗಿ ಹನ್ನೆರಡು ಲಕ್ಕಕ್ಕೂ ಹೆಚ್ಚು ಕೆಲಸಗಾರರು ಸಹಿ ಮಾಡಿದ್ದ ಒಂದು ಜ್ಞಾಪನಾಪತ್ರವನ್ನು ಸಿದ್ಧಗೊಳಿಸಿ ಅದೇ ಜೂನ್ ೧೪ರಂದು ಚಳುವಳಿಯ ಪರವಾಗಿ ಆಟ್ ವುಡ್ ಮತ್ತು ಫೀಲ್ಡೆನ್ ಎಂಬುವವರು ಅದನ್ನು ಪಾರ್ಲಿಮೆಂಟಿಗೆ ಅರ್ಪಿಸಿದರು. ಚಾರ್ಟಿಸ್ಟರ ಹಕ್ಕೊತ್ತಾಯಗಳು ದುಡಿಮೆಯ ಅವಧಿ, ಕೂಲಿ ಮತ್ತು ಸೌಲಭ್ಯಗಳನ್ನು ಕುರಿತಾಗಿದ್ದು ಇಡೀ ಇಂಗ್ಲೆಂಡಿನಲ್ಲಿ ಅವುಗಳನ್ನು ಪಡೆಯಲು ವ್ಯಾಪಕ ಹೋರಾಟಗಳು ನಡೆದಿದ್ದವು. ಬೆಂಜಮಿನ್ ವಿಲ್ಸನ್ ಎಂಬಾತ ಚಾರ್ಟಿಸ್ಟರ ಆಗ್ರಹಗಳನ್ನು ವಿವರಿಸಿರುವುದು ಹೀಗೆ: "ಅವರಿಗೆ ಬೇಕಾಗಿದ್ದುದು ಕಾನೂನು ಮಾಡುವುದ ರಲ್ಲಿ ಅವರ ಭಾಗವಹಿಸುವಿಕೆ. ಯಾವ ಕಾನೂನನ್ನು ಅವರು ಪಾಲಿಸಬೇಕಾಗಿದ್ದಿತೋ ಅದನ್ನು ರೂಪಿಸುವುದರಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಅಪೇಕ್ಷಿಸುವುದು ಅಸಹಜವೇನಲ್ಲ. ಅವರು ತೆರಿಗೆಗಳನ್ನು ತೆರಬೇಕಾಗಿತ್ತು. ಆದರೆ ಅದನ್ನು ನಿಗದಿಗೊಳಿಸುವುದರಲ್ಲಿ ಅವರಿಗೆ ಪ್ರಾತಿನಿಧ್ಯವಿರಲಿಲ್ಲ. ಅದನ್ನು ಅವರು ನಿರಂಕುಶ ಪ್ರಭುತ್ವವೆಂದು ಬಗೆದು ಅದಕ್ಕೆ ಪ್ರತಿರೋಧ ಒಡ್ಡಿದರು. ಹತ್ತು ಗಂಟೆಗಳ ದುಡಿಮೆಯ ಪರವಾಗಿ ಅವರು ಹೋರಾಟಗಳನ್ನು ನಡೆಸಬೇಕಾಗಿಬಂದಿತು. ಜ್ಞಾನ, ಶಿಕ್ಷಣ, ಸಹಕಾರ, ನಾಗರಿಕ ಮತ್ತು ಧಾರ್ಮಿಕ ಹಕ್ಕುಗಳು, ಭೂಮಿ ಮುಂತಾದ ಮೂಲಭೂತ ಅಗತ್ಯಗಳ ಮೇಲೆ ಸುಂಕ ವಿಧಿಸುವುದನ್ನು ಅವರು ತೀವ್ರವಾಗಿ ವಿರೋಧಿಸಿದರು. ಅವರ ಕಾಲದ ಅತಿದೊಡ್ಡ ಚಳುವಳಿಗಳಲ್ಲಿ ಅವರೇ ಮೊದಲಿಗರು ಎಂದರೆ ತಪ್ಪಾಗುವುದಿಲ್ಲ."

ಮ್ಯಾಂಚೆಸ್ಟರಿನಲ್ಲಿ ಈ ಚಳುವಳಿಯ ಪ್ರಮುಖ ನಾಯಕ ಜೇಮ್ಸ್ ಲೀಚ್ . ಆಗ್ಗೆ ಆ ಪಟ್ಟಣದಲ್ಲಿ ನೆಲೆಸಿದ್ದ ಏಂಗೆಲ್ಸ್ ಆತನೊಡನೆ ನಿಕಟ ಸಂಪರ್ಕ ಸಾಧಿಸಿ ಇಂಗ್ಲೆಂಡಿನ ದುಡಿಯುವ ಜನತೆಯ ಸಂಕಷ್ಟಗಳ ನೇರ ಪರಿಚಯ ಪಡೆದುಕೊಂಡರು. ಚಳುವಳಿಗೆ ತಮ್ಮ ಕಾಣಿಕೆಯನ್ನು ಲೇಖನಗಳ ಮುಖಾಂತರ ಹಾಗೂ ಸಂಘಟನೆಯನ್ನು ಭದ್ರಗೊಳಿಸಲು ಶ್ರಮಿಸುವುದರ ಮೂಲಕ ಕೊಡಲು ಏಂಗೆಲ್ಸ್ ಮುಂದಾದರು. ೧೮೪೩ರಲ್ಲಿ ಚಾರ್ಟಿಸ್ಟರ ಇನ್ನೊಬ್ಬ ನಾಯಕ ಜಾರ್ಜ್ ಜೂಲಿಯನ್ ಹಾರ್ನೆಯನ್ನು ಭೇಟಿಯಾಗಲು ಲೀಡ್ಸ್‌ಗೆ ಹೋಗಿ, ಚಾರ್ಟಿಸ್ಟರು ಪ್ರಕಟಿಸುತ್ತಿದ್ದ 'ದಿ ನಾರ್ದರ್ನ್ ಸ್ಟಾರ್ ' ಪತ್ರಿಕೆಯ ಪರಿಚಯ ಮಾಡಿಕೊಂಡ ಏಂಗೆಲ್ಸ್ ಆಮೇಲೆ ಆ ಪತ್ರಿಕೆಗೆ ಅನೇಕ ವಿಶ್ಲೇಷಣಾತ್ಮಕ ಲೇಖನಗಳನ್ನು ಬರೆದರು. ಅದೇ ಸಮಯದಲ್ಲಿ ಇಂಗ್ಲೆಂಡಿನಲ್ಲಿ ರಾಬರ್ಟ್ ಓವೆನ್ನನ ಅನುಯಾಯಿಗಳು ಕೆಲವರಿದ್ದರು. ಓವೆನ್ ಒಬ್ಬ ಪ್ರಸಿದ್ಧ ಕಾಲ್ಪನಿಕ ಸಮಾಜವಾದಿ ನೇತಾರ. ಆತನ ಬಣದೊಡನೆಯೂ ಏಂಗೆಲ್ಸ್ ಸಂಪರ್ಕವಿರಿಸಿಕೊಂಡಿದ್ದರು. ಇದೆಲ್ಲಾ ಏನು ಸೂಚಿಸುತ್ತದೆಯೆಂದರೆ ಬದಲಾದ ಸಮಾಜವೊಂದು ಏಂಗೆಲ್ಸ್‌ಗೆ ಪ್ರಮುಖ ಆಕಾಂಕ್ಷೆಯಾಗಿತ್ತು. ಕಂದಾಚಾರಗಳು, ಆರ್ಥಿಕ ಶೋಷಣೆ, ಸಾಮಾಜಿಕ ಕೀಳುತನ, ಇವನ್ನೆಲ್ಲಾ ದೂರಮಾಡಿದ ಸಮಾಜದ ರಚನೆಯಾಗದೆ ದುಡಿಯುವ ಜನರ ಆಶೋತ್ತರಗಳು ಈಡೇರಲಾರವೆಂಬ ನಂಬಿಕೆ ಏಂಗೆಲ್ಸ್‌ರಲ್ಲಿ ಆಗ್ಗೆ ಆಗಲೇ ಬಲವಾಗಿ ಬೇರೂರಿತ್ತು.

೧೮೩೪ರಲ್ಲಿ ಗತಿಸಿದ ಮಾಲ್ತಸ್ ಎಂಬ ಕ್ರೈಸ್ತಪಾದ್ರಿ ಒಂದು ಪುಸ್ತಕವನ್ನು ಪ್ರಕಟಿಸಿದ್ದ. ಅದರ ಹೆಸರು "ಜನಸಂಖ್ಯೆಯ ನಿಯಮವನ್ನು ಕುರಿತ ಒಂದು ಪ್ರಬಂಧ" ಎಂದು. ಬಹಳ ಅವೈಜ್ಞಾನಿಕ ಪ್ರತಿಪಾದನೆಯು ಆ ಪುಸ್ತಕದ ತುಂಬ ಹರಡಿಕೊಂಡಿತ್ತಾದರೂ ಆಗ್ಗೆ ಮಾಲ್ತಸ್‌ನ ವಿಚಾರಧಾರೆಯು ಸಾಕಷ್ಟು ಪ್ರಭಾವವನ್ನು ಬೀರಿತ್ತು ಮತ್ತು ಅನೇಕ ಸಮಾಜ ವಿಜ್ಞಾನಿಗಳು ಅವನ ಮಂಡನೆಯನ್ನು ಮುಕ್ತವಾಗಿ ಅಂಗೀಕರಿಸಿದ್ದರು. ಸಮಾಜದ ಬೆಳವಣಿಗೆಗೆ ಅಡ್ಡಿಯುಂಟಾಗುವುದು ಜನಸಂಖ್ಯೆಯು ಅತಿವೇಗವಾಗಿ ವೃದ್ಧಿಯಾಗುವುದರಿಂದ ಮತ್ತು ಆ ಹೆಚ್ಚಳಕ್ಕೆ ಅನುಗುಣವಾಗಿ ಜೀವನಾವಶ್ಯಕ ವಸ್ತುಗಳ ಉತ್ಪಾದನೆಯು ಅಷ್ಟೇ ವೇಗವಾಗಿ ಹೆಚ್ಚದಿರುವುದರಿಂದ ಎಂಬುದು ಅವನ ಮೂಲಸಿದ್ಧಾಂತ. ಮದುವೆಗಳನ್ನು ಕಡಿಮೆ ಮಾಡುವುದು, ಮಕ್ಕಳ ಜನನವನ್ನು ನಿಯಂತ್ರಿಸುವುದು ಮುಂತಾದ ಕ್ರಮಗಳಿಂದ ಜನಸಂಖ್ಯೆಯ ವೃದ್ಧಿಯನ್ನು ತಡೆದರೆ ಸಾಮಾಜಿಕ ಬೆಳವಣಿಗೆಯು ಸುಸೂತ್ರವಾಗಿ ಜರುಗುವುದೆಂದು ಮಾಲ್ತಸ್ ಅಭಿಪ್ರಾಯಪಟ್ಟಿದ್ದ. ಈ ನಿಯಂತ್ರಣಕ್ಕೆ ಹಸಿವು, ಯುದ್ಧ ಮತ್ತು ಸಾಂಕ್ರಾಮಿಕ ರೋಗಗಳು ಕೂಡ ಸಹಾಯಕವಾಗಬಹುದೆಂದು ಅವನು ಹೇಳಿದ್ದ. ಥಾಮಸ್ ಮಾಲ್ತಸ್ "ನಿತ್ಯ ನಿಯಮಗಳು" ಎಂಬರ್ಥದಲ್ಲಿ ತನ್ನ ವಾದವನ್ನು ಮಂಡಿಸಿದ್ದ. ಅವನ ಸಂದೇಶವಿಷ್ಟೆ: ದುಡಿಮೆಗಾರರ ಸಂಕಷ್ಟಗಳಿಗೆ ಸ್ವತಃ ಅವರೇ ಜವಾಬ್ದಾರರು, ಎಂದು. ಏಂಗೆಲ್ಸ್ ಇದನ್ನು ತೀವ್ರವಾಗಿ ಖಂಡಿಸಿದರು ಮತ್ತು ಹುರುಳಿಲ್ಲದ ವಾದವೆಂದು ಅದನ್ನು ವಿಶ್ಲೇಷಿಸಿ ತೋರಿಸಿದರು. "ಈ ಕುಪ್ರಸಿದ್ಧ, ಕ್ಷುದ್ರ ನಿರೂಪಣೆಯು

ಪ್ರಕೃತಿ ಮತ್ತು ಮಾನವತೆಗಳೆರಡನ್ನೂ ದುಷ್ಟ ದರಿದ್ರ ಸತ್ತ್ವಗಳೆಂದು ಮೂದಲಿಸುತ್ತದೆ" ಎಂದು ಏಂಗೆಲ್ಸ್ ಪ್ರತಿಭಟಿಸಿದರು. ಜನಸಂಖ್ಯೆಯನ್ನು ನಿಯಂತ್ರಿಸುವುದನ್ನು ಏಂಗೆಲ್ಸ್ ವಿರೋಧಿಸಲಿಲ್ಲ. ಆದರೆ ಜನಸಂಖ್ಯೆಯ ಹೆಚ್ಚಳವು ಅನಿವಾರ್ಯವಾದ ಜೀವಶಾಸ್ತ್ರ ನಿಯಮವೆಂಬ ಮಾಲ್ತಸ್‌ನ ನಿರೂಪಣೆಯನ್ನು ಖಂಡಿಸುತ್ತಾ, ಆತನ ನಿರೂಪಣೆಗೂ ಬಂಡವಳಿಗನ ಎಲ್ಲೆಯಿಲ್ಲದ ಸಂಪತ್ತಿನ ಶೇಖರಣೆಗೂ ನೇರ ಸಂಬಂಧವಿದೆಯೆಂದು ಅಂಕಿ-ಸಂಖ್ಯೆಗಳ ಆಧಾರದಿಂದ ತೋರಿಸಿಕೊಟ್ಟರು.

ಏಂಗೆಲ್ಸರ ಬೌದ್ಧಿಕ ಬೆಳವಣಿಗೆಯ ಹಾದಿಯಲ್ಲಿ ಹೆಗೆಲ್‌ನ ಚಿಂತನೆಗೆ ಆದ್ಯತೆ ಇದೆ. ಅದರೊಟ್ಟಿಗೆ ಬೇರೆ ಹಲವು ಚಿಂತನಾ ಪದ್ಧತಿಗಳು ಕೂಡ ಅವರ ದೃಷ್ಟಿವೈಶಾಲ್ಯಕ್ಕೆ ಹಾಗೂ ಪ್ರಖರತೆಗೆ ಕಾರಣೀಭೂತವಾಗಿದ್ದುವೆಂಬುದನ್ನು ಮರೆಯಲಾಗದು.

❑❑

೩

ಅಪೂರ್ವ ಬಾಂಧವ್ಯ

೧೮೧೮ ರಿಂದ ೧೮೮೩ರವರೆಗೆ ಜೀವಿಸಿದ್ದ ಕಾರ್ಲ್ ಮಾರ್ಕ್ಸ್ ವಯಸ್ಸಿನಲ್ಲಿ ಏಂಗೆಲ್ಸ್‌ಗಿಂತ ಎರಡು ವರ್ಷ ದೊಡ್ಡವರು. ಆತ ೬೫ ವರ್ಷ ಜೀವಿಸಿದ್ದು, ಏಂಗೆಲ್ಸ್ ೭೫ ವರ್ಷ ಜೀವಿಸಿದ್ದರು (೧೮೨೦-೧೮೯೫). ಮಾರ್ಕ್ಸ್ ಸಹ ಏಂಗೆಲ್ಸರಂತೆ ಯುವ ಹೆಗೆಲಿಯನ್ನರಾಗಿ ಆರಂಭವಾಗಿ ನಂತರ ರಾಜಕೀಯವಾಗಿ ಹೆಗೆಲ್‌ನನ್ನು ನಿರಾಕರಿಸಿದವರು. ದುಡಿಯುವ ವರ್ಗದ ಚಾರಿತ್ರಿಕ ಪಾತ್ರವನ್ನು ಸಮಗ್ರವಾಗಿ ವಿಶ್ಲೇಷಿಸಿ, ವಿಶ್ವದ ಬಗೆಗೆ ಆ ವರ್ಗವು ವೈಜ್ಞಾನಿಕವಾಗಿ ತಳೆಯಬೇಕಾದ ನಿಲುವನ್ನು ಸೈದ್ಧಾಂತಿಕ ರೂಪದಲ್ಲಿ ನಿರೂಪಿಸಿದ ಕೀರ್ತಿ ಮಾರ್ಕ್ಸ್‌ಗೆ ಸಲ್ಲುತ್ತದೆ. ವೈಜ್ಞಾನಿಕ ಸಮಾಜವಾದದ ಪ್ರತಿಪಾದಕರೆಂದು ಹೆಸರಾದ ಮಾರ್ಕ್ಸ್ ಆಗಲಿ, ಅವರೊಟ್ಟಿಗೆ ನಾಲ್ಕು ದಶಕಗಳ ಕಾಲ ನಿರಂತರವಾಗಿ ಕೆಲಸ ಮಾಡಿದ ಏಂಗೆಲ್ಸ್ ಆಗಲಿ, ಯಾವಾಗಲೂ ತಾವೊಬ್ಬರೆ ಮಾರ್ಕ್ಸ್‌ವಾದಿ ಸಿದ್ಧಾಂತದ ಪ್ರತಿಪಾದಕರೆಂದು ಬಗೆಯಲಿಲ್ಲ. ಅದು ಇಬ್ಬರೂ ಸೇರಿ ನಡೆಸಿದ ಅಧ್ಯಯನ ಮತ್ತು ಅದರಿಂದ ಮೂಡಿಬಂದ ಸಿದ್ಧಾಂತ ಹಾಗೂ ಕ್ರಿಯೆ ಎಂದೇ ಮಾರ್ಕ್ಸ್ ಮತ್ತು ಏಂಗೆಲ್ಸ್ ಭಾವಿಸಿದ್ದರು. ಆದ್ದರಿಂದ ಒಬ್ಬರನ್ನು ಬಿಟ್ಟು ಇನ್ನೊಬ್ಬರನ್ನು ಅರ್ಥೈಸುವುದು ಆಗದು. ಅವರಿಬ್ಬರನ್ನೂ

ಕುರಿತು ಅವರ ಸಹಯೋಗದಲ್ಲಿ ಹಲವು ಕಾಲ ಕೆಲಸಮಾಡಿದ್ದ ಫ್ರಾನ್ತ್ಸ್ ಮೇರಿಂಗ್ ಹೇಳುವುದಿದು: "ಅವರಿಬ್ಬರೂ ಸದಾ ತೇಜಃಪುಂಜರಾಗಿ ಕಂಗ್ಗೊಳಿಸಿದವರು. ಅವರ ಧೀಶಕ್ತಿ ಪ್ರಚಂಡ ಮತ್ತು ಮಾತು ಅತ್ಯಂತ ಹರಿತ. ಅಜಗರದಂತೆ ಬಿದ್ದುಕೊಂಡಿದ್ದ ಯೂರೋಪನ್ನು ಕ್ರಾಂತಿಯ ಹಾದಿಯಲ್ಲಿ ಮುನ್ನಡೆಸುತ್ತಾ ಎಚ್ಚರಗೊಳಿಸಿದವರು ಅವರು. ಅವರಿಬ್ಬರೂ ಯಾರಿಗಾಗಿ ಜೀವಿಸಿದರೋ, ಹೋರಾಡಿದರೋ ಮತ್ತು ತಮ್ಮ ಅಮರ ಕೃತಿಗಳನ್ನು ರಚಿಸಿದರೋ ಅವರು ಅವರಿಬ್ಬರನ್ನೂ ಯಾವಾಗಲೂ ಸ್ಮರಿಸಿಕೊಳ್ಳುವುದೇ ಹಾಗೆ."

ಇವರಿಬ್ಬರ ಅಪೂರ್ವ ಬಾಂಧವ್ಯದ ಪರಿಚಯ ಮಾಡಿಕೊಳ್ಳುವುದು ಏಂಗೆಲ್ಸರ ಚಿಂತನೆಯನ್ನು ಚೆನ್ನಾಗಿ ಹದಗೊಳಿಸಿಕೊಳ್ಳಲು ಇರುವ ಒಂದು ಮಾರ್ಗ. ಲಂಡನ್ನಿನಲ್ಲಿ ಮಾರ್ಕ್ಸ್ ೧೮೮೩ರ ಮಾರ್ಚ್ ೧೪ರಂದು ತೀರಿಕೊಂಡಾಗ ಅತಿಹೆಚ್ಚಿನ ಆಘಾತ ಅನುಭವಿಸಿದ್ದು ಏಂಗೆಲ್ಸ್. ಆಗ್ಗೆ ಜರ್ಮನಿಯ ಲೈಪ್‌ಜಿಗ್‌ನಲ್ಲಿ ವಾಸವಾಗಿದ್ದ ಮಾರ್ಕ್ಸ್‌ರ ಇನ್ನೊಬ್ಬ ಆಜನ್ಮ ಮಿತ್ರ ವಿಲ್ಹೆಲ್ಮ್ ಲೀಬ್‌ನೆಕ್ಟ್‌ಗೆ ಅಂದೇ ಪತ್ರ ಬರೆದರು: "ಸದ್ಯಕ್ಕೆ ನನ್ನಲ್ಲಿರುವುದು ಶ್ರೀಮತಿ. ಬೆಬೆಲ್‌ರ ವಿಳಾಸ ಮಾತ್ರ. ಆಕೆಗೆ ತಂತಿ ಸಂದೇಶ ಕಳಿಸಿದ್ದೇನೆ. ಯೂರೋಪಿನ ಸಮಾಜವಾದಿ ಕ್ರಾಂತಿಕಾರಿ ಪಕ್ಷಕ್ಕೆ ಒದಗಿರುವ ಅಗಾಧ ನಷ್ಟದ ಮಾಹಿತಿ ಆಕೆಯಿಂದ ನಿನಗೆ ಲಭಿಸಿರಬೇಕು. ಕಳೆದ ಶುಕ್ರವಾರ ಇಲ್ಲಿಯ ನಿಷ್ಣಾತ ವೈದ್ಯರೊಬ್ಬರು ಮಾರ್ಕ್ಸ್‌ರ ದೇಹಸ್ಥಿತಿಯನ್ನು ಪರೀಕ್ಷಿಸಿ ಮತ್ತೆ ಯಥಾಸ್ಥಿತಿಗೆ ಬರಬಹುದೆಂಬ ಅಭಿಪ್ರಾಯ ಕೊಟ್ಟಿದ್ದರು. ಪುಷ್ಟಿಯುತ ಆಹಾರದಿಂದ ಚೇತರಿಕೆ ಸಾಧ್ಯವೆಂದು ಹೇಳಿದ್ದರು. ಮಾರ್ಕ್ಸ್ ಆಹಾರ ಸ್ವೀಕರಿಸಲು ಮುಂದಾದದ್ದೇನೋ ನಿಜ, ಆದರೆ ಇಂದು ಮಧ್ಯಾಹ್ನ ೨ ಘಂಟೆಯ ನಂತರ ಮನೆಯಲ್ಲಿ ರೋದನ ಕಂಡೆ. ಮಾರ್ಕ್ಸ್ ತೀರಾ ನಿಶ್ಯಕ್ತರಾಗಿದ್ದರು. ಲೆನ್‌ಶೆನ್ ನನ್ನನ್ನು ಮಹಡಿಗೆ ಕರೆದೊಯ್ದಾಗ ಹೇಳಿದ್ದು ಮಾರ್ಕ್ಸ್ ಎರಡು ನಿಮಿಷ ಮುಂಚೆ ಅರೆನಿದ್ರೆಯಲ್ಲಿ ಇದ್ದರೆಂದು. ನಾನು ಹೋದಾಗ ಕಂಡಿದ್ದು ಬೇರೆ. ಮಾರ್ಕ್ಸ್ ನಿದ್ರೆಯಲ್ಲಿದ್ದರು, ಆದರೆ ಚಿರನಿದ್ರೆಯಲ್ಲಿ. ಈ ಶತಮಾನದ ಉತ್ತರಾರ್ಧದ ಅತಿದೊಡ್ಡ ಮೇಧಾಶಕ್ತಿ ಸಂಪೂರ್ಣವಾಗಿ ಸುಪ್ತವಾಗಿಹೋಗಿತ್ತು. ...ನಾನಿನ್ನೂ ಒಂದಂಶವನ್ನು ನಂಬಲಾರೆ: ಈ ಮೇಧಾವಿಯ ಮಿದುಳಿನ ಶಕ್ತಿಯಿಂದ ಸಂಭವಿಸಿರುವ ದುಡಿಯುವ ವರ್ಗದ ಚಳುವಳಿಯು ಫಲಕಾರಿಯಾಗದಿರಲು ಸಾಧ್ಯವೇ ಎಂಬುದೇ ಆ ಅಂಶ. ಇಂದು ನಾವೆಲ್ಲಾ ಏನಾಗಿದ್ದೇವೋ ಅದು ಆತನಿಂದಲೇ ಎಂಬುದಂತೂ ಶತಸ್ಸಿದ್ಧ. ಚಳುವಳಿಯು ಮುನ್ನಡೆದಿರುವುದೂ ಈತನ ಮಹತ್ತರ ಸೈದ್ಧಾಂತಿಕ ಮತ್ತು ಕ್ರಿಯಾತ್ಮಕ ಚಟುವಟಿಕೆಗಳಿಂದ. ಆತನಿಲ್ಲದೆ ಈಗಲೂ ನಾವು ಕಂಗಾಲಾಗುವುದು ಸ್ವಾಭಾವಿಕವೇ ಎನಿಸುತ್ತದೆ."

ಮಾರನೆಯ ದಿನ ಜಿನೀವಾದಲ್ಲಿದ್ದ ಇನ್ನೊಬ್ಬ ಸ್ನೇಹಿತ ಜೊಹಾನ್ ಫಿಲಿಪ್ ಬೇಕರ್‌ಗೆ ಪತ್ರ ಬರೆಯುವಾಗ ಏಂಗೆಲ್ಸ್ ಮತ್ತೆ ಅದೇ ದುಃಖವನ್ನು ತೋಡಿಕೊಂಡರು: "ಕಳೆದ ಶರತ್ಕಾಲದಲ್ಲಿ ನೀನು ಮಾರ್ಕ್ಸ್‌ರನ್ನು ಕಂಡಿದ್ದೆಯೆಂದು ಸಂತಸಪಟ್ಟುಕೊ. ಆತನನ್ನು ನೀನು ಮತ್ತೆ ಕಾಣಲಾರೆ. ...ನಮ್ಮ ಪಕ್ಷದ ಅತ್ಯಂತ ಶಕ್ತಿಯುತವಾದ ಮಿದುಳು ಕಂದಿಹೋಯಿತು.

ನಾನು ಕಂಡರಿತಿದ್ದ ಅತ್ಯಂತ ಪ್ರಬಲ ಹೃದಯವು ಇಂದು ಸ್ತಬ್ಧವಾಗಿದೆ. ೧೮೫೮ರ ಹಿಂದಿನ ಕಾಲದ ನಾವಿಬ್ಬರು ಬಹುಶಃ ಹಳೆಯ ಪೀಳಿಗೆಗೆ ಸೇರಿ ಉಳಿದಿದ್ದ ಎರಡೇ ಹಿಂದಿನ ತಲೆಗಳು. ...ಗುಂಡುಗಳು ಹಾರುತ್ತಿವೆ, ಸ್ನೇಹಿತರು ಉರುಳುತ್ತಿದ್ದಾರೆ. ಅದನ್ನೆಲ್ಲಾ ನಾವು ಹಿಂದೆಯೂ ನೋಡಿದ್ದಾಗಿದೆ. ನಮ್ಮಲ್ಲೊಬ್ಬರಿಗೆ ಗುಂಡು ತಾಕಿದರೆ ಅದೇನೂ ಅಸಂಭಾವ್ಯವಲ್ಲ. ಆದರೆ ಅದರ ಹೊಡೆತದ ಪರಿಣಾಮವನ್ನು ತಡೆದುಕೊಳ್ಳಲು ಬಹುಕಾಲ ಬಾಳದಿದ್ದರೆ ಅಷ್ಟೇ ಸಾಕು."

ಮಾರ್ಚ್ ೧೮ರಂದು ಲಂಡನ್ನಿನ ಹೈಗೇಟ್ ಸ್ಮಶಾನಭೂಮಿಯಲ್ಲಿ ಎಂದಿನಂತೆ ಸ್ಥೈರ್ಯ ದಿಂದ ಏಂಗೆಲ್ಸ್ ನುಡಿದರು: "ಮಾರ್ಚ್ ೧೪ರಂದು ಮಧ್ಯಾಹ್ನ ಎರಡು ಮುಕ್ಕಾಲು ಗಂಟೆಯ ವೇಳೆಯಲ್ಲಿ ಜಗತ್ತಿನ ಅತ್ಯಂತ ಶ್ರೇಷ್ಠ ಚಿಂತಕನು ತನ್ನ ವಿಚಾರಲಹರಿಗೆ ಇತಿಶ್ರೀ ಹಾಡಿದ. ಯೂರೋಪ್ ಮತ್ತು ಅಮೆರಿಕಾಗಳ ಕ್ರಾಂತಿಕಾರಿ ದುಡಿಯುವ ವರ್ಗವು ಅಳೆಯ ಲಾಗದಷ್ಟು ನಷ್ಟವನ್ನು ಇದರಿಂದಾಗಿ ಅನುಭವಿಸಿದೆ. ಚಾರಿತ್ರಿಕ ವಿಜ್ಞಾನದ ಕ್ಷೇತ್ರಕ್ಕೆ ಉಂಟಾಗಿ ರುವ ನಷ್ಟವೂ ಅಷ್ಟೇ ಪ್ರಮಾಣದ್ದು. ಈ ಉದಾತ್ತ ಚೇತನವು ನಿಷ್ಪಂದವಾಗಿರುವುದರ ಪರಿಣಾಮವನ್ನು ಸದ್ಯದಲ್ಲೇ ನಾವು ನೋಡುತ್ತೇವೆ." ನಂತರ ಮಾತನಾಡಿದ ಲೀಬ್‌ನೆಕ್ಟ್ ಹೇಳಿದ: "ಎಂದೆಂದಿಗೂ ಮರೆಯಲಾಗದ ನನ್ನ ಗುರು ಮತ್ತು ಪ್ರಾಮಾಣಿಕ ಮಿತ್ರನಿಗೆ ನನ್ನ ಪ್ರೀತಿ ಮತ್ತು ಕೃತಜ್ಞತೆಗಳನ್ನು ಅರುಹಲು ಜರ್ಮನಿಯಿಂದ ನಾನು ಬಂದಿದ್ದೇನೆ. ಮಾರ್ಕ್ಸ್ ಈ ಶತಮಾನದಲ್ಲಿ ಅತಿಹೆಚ್ಚಿನ ದ್ವೇಷಕ್ಕೆ ಪಾತ್ರನಾದ ವ್ಯಕ್ತಿ. ಆದರೆ ಆತ ಅತಿಹೆಚ್ಚಿನ ಪ್ರೀತ್ಯಾದರಗಳಿಗೆ ಪಾತ್ರನಾದ ವ್ಯಕ್ತಿಯೂ ಹೌದು. ಅತಿಹೆಚ್ಚಿನ ದ್ವೇಷಕ್ಕೆ ಗುರಿಯಾದುದು ಜನತೆಯ ಕರಾಳ ಶೋಷಕರಿಂದ ಮತ್ತು ಪ್ರೀತ್ಯಾದರಗಳನ್ನು ಗಳಿಸಿದ್ದು ಜಗತ್ತಿನ ಅಸಂಖ್ಯಾತ ಮರ್ದಿತ ಹಾಗೂ ಶೋಷಿತ ಜನತೆಯಿಂದ. ಇವರೆಲ್ಲಾ ಆತನನ್ನು ಪ್ರೀತಿಸುವುದು ಆತ ಇವರನ್ನೆಲ್ಲಾ ಹಿಂದೆಂದೂ ಕಾಣದ ಅಭಿಮಾನ ಮತ್ತು ಪ್ರೀತಿಗಳಿಂದ ಕಂಡನೆಂಬ ಕಾರಣಕ್ಕಾಗಿ. ಈಗ ನಿಧನನಾಗಿರುವ ಮಾರ್ಕ್ಸ್, ದ್ವೇಷಿಸಲು ಎಷ್ಟು ಶಕ್ತನಾಗಿದ್ದನೋ ಅದಕ್ಕಿಂತಲೂ ಹೆಚ್ಚಾಗಿ ಪ್ರೀತಿಸಲು ತವಕಿಸುತ್ತಿದ್ದ. ಆತನ ದ್ವೇಷಕ್ಕೆ ಪ್ರೀತಿಯೇ ಮೂಲ. ಆತನ ಬುದ್ಧಿಶಕ್ತಿಯಂತೆ ಹೃದಯವೂ ವಿಶಾಲವಾಗಿತ್ತು. ಆತನ ಪರಿಚಯವಿದ್ದವರಿಗೆಲ್ಲಾ ಇದು ತಿಳಿದೇ ಇದೆ."

ಇಂತಹ ಅವರ್ಣನೀಯ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಲ್ಲಿ ಕೇವಲ ಬುದ್ಧಿಶಕ್ತಿ ಕಾರಣ ವಾಗಿರಲಿಲ್ಲ; ಬದಲಾಗಿ, ಮಾರ್ಕ್ಸ್‌ಗೆ ಸತತ ಹೋರಾಟಗಳು ಅನುಭವವನ್ನು ಹಿಗ್ಗಿಸಿದುವು. ಕೆಲವೊಮ್ಮೆ ಹೋರಾಟದಲ್ಲಿ ಮಾನವ ಸಹಜವಾದ ನಿಸ್ತೇಜವನ್ನು ಅನುಭವಿಸಿದ್ದೂ ಉಂಟು. ಹಾಗಾದಾಗಲೆಲ್ಲಾ ಅವರಿಗೆ ಆಸರೆ ದೊರೆತದ್ದು ಪರಮಮಿತ್ರ ಏಂಗೆಲ್ಸರಲ್ಲಿ. ಔದಾರ್ಯ, ತ್ಯಾಗ, ನಿಷ್ಠೆ ಮತ್ತು ಹುಮ್ಮಸ್ಸಿನಲ್ಲಿ ಏಂಗೆಲ್ಸ್ ಅಪ್ರತಿಮ.

ಇತಿಹಾಸ ಪ್ರಸಿದ್ಧವಾದ ವ್ಯಕ್ತಿಗಳ ಬಾಂಧವ್ಯಗಳು ಎಷ್ಟೋ ಇವೆ, ಆದರೆ ಇವರಿಬ್ಬರ ಬಾಂಧವ್ಯಕ್ಕೆ ಸಮಾನವಾದವು ಬಹಳವಿಲ್ಲ. ಹೊರಗಿನ ಚರ್ಯೆಗಳಲ್ಲಿ ಇಬ್ಬರೂ ವಿಭಿನ್ನರು.

ಈಗಾಗಲೆ ನಾವು ತಿಳಿದಿರುವಂತೆ ಏಂಗೆಲ್ಸ್ ಎತ್ತರದ ನಸು ಹೊಂಬಣ್ಣದ ವ್ಯಕ್ತಿ; ಒಬ್ಬ ಇಂಗ್ಲಿಷ್ ನಾಗರಿಕನ ನಡೆವಳಿಕೆ, ಠೀವಿ ಆತನದು. ಉಡುಪಿನ ಬಗೆಗೆ ಸಾಕಷ್ಟು ಆಸಕ್ತಿ. ಸೈನ್ಯದಲ್ಲಿದ್ದು ಆಮೇಲೆ ಕಚೇರಿಯಲ್ಲಿ ಕೆಲಸಮಾಡಿದ್ದ ಆತನಿಗೆ ಯಾವಾಗಲೂ ಒಂದು ನಮೂನೆಯ ಶಿಸ್ತು. ಆತನೊಮ್ಮೆ ಹೀಗೆ ಉದ್ಗರಿಸಿದ್ದ: "ಅರವತ್ತು ಜನ ಸಲಹೆಗಾರರಿದ್ದಾರೆ ಎನ್ನೋಣ. ಅವರು ಗುಂಡಗೆ ಬರೆಯಲು ಸಹ ಅಶಕ್ತರಿರಬಹುದು, ಆದರೆ ಪುಸ್ತಕಗಳನ್ನು ಚೆನ್ನಾಗಿ ತಿರುವಿಹಾಕಿರಬಹುದಾದಂಥವರು. ಆದರೇನು ಪ್ರಯೋಜನ! ಅವರು ಹೇಳುವ ವಿಷಯಗಳ ತಲೆ-ಬಾಲ ಅವರಿಗೇ ತಿಳಿಯದೆ ಹೋಗಬಹುದು. ಅಂತಹ ಅರವತ್ತು ಮಂದಿಗೆ ಬದಲು ಆರು ಜನ ಕಾರಕೂನರನ್ನು ಕೊಡಿ. ಅವರನ್ನೇ ಉಪಯೋಗಿಸಿಕೊಂಡು ಸರಳವಾದ ಹಾಗೂ ಪರಿಣಾಮಕಾರಿಯಾದ ಆಡಳಿತಕ್ರಮವನ್ನು ನಾನು ರಚಿಸಿಕೊಡಬಲ್ಲೆ." ಇದಕ್ಕೆ ಭಿನ್ನವಾಗಿ ಮಾರ್ಕ್ಸ್ ಸ್ವಲ್ಪ ಮೋಟು ಮನುಷ್ಯ, ಸಾಕಷ್ಟು ದೃಢವಾಗಿ ಬೆಳೆದಿದ್ದ ವ್ಯಕ್ತಿ. ಮಿಂಚುವ ಕಪ್ಪನೆಯ ಕಣ್ಣುಗಳು. ಸಿಂಹದ ಕುತ್ತಿಗೆ ಕೂದಲಿನಂತೆ ಬೆಳೆದಿದ್ದ ಕಪ್ಪು ಕರಿ ಕೂದಲಿನ ತಲೆ. ಸಂಕಷ್ಟಕ್ಕೆ ಸಿಲುಕಿದ ಸಂಸಾರವೊಂದರ ಯಜಮಾನ. ಲಂಡನ್ನಿನ ವ್ಯಾಪಾರ ವ್ಯವಹಾರಗಳ ನಡುವೆಯೇ ಇದ್ದರೂ ಅದರಲ್ಲಿ ಆತನದು ಕಿಂಚಿತ್ತಾದರೂ ಪಾಲಿಲ್ಲ. ಬೌದ್ಧಿಕ ಶ್ರಮಕ್ಕೆ ಮಾತ್ರ ಮಿತಿಯಿಲ್ಲ. ಎಷ್ಟೋ ಬಾರಿ ಊಟಕ್ಕೂ ಪುರಸೊತ್ತಿಲ್ಲದಂತೆ ರಾತ್ರಿ ಅವೇಳೆಯವರೆಗೂ ಈತನ ಓದು ಬರಹ. ಅದರಿಂದಾಗಿ ಆತನ ಆರೋಗ್ಯವೂ ಅಷ್ಟಕ್ಕಷ್ಟೇ. ಆತನ ಬಹುಮೆಚ್ಚಿನ ಸುಖಾನುಭವವೆಂದರೆ ಚಿಂತನಾಶೀಲನಾಗುವುದರಲ್ಲಿ. ಆತ ಆಗಾಗ ಹೇಳುತ್ತಿದ್ದುದುಂಟು: "ಸ್ವರ್ಗದ ಎಷ್ಟೋ ಅದ್ಭುತಗಳಿಗಿಂತಲೂ ಒಬ್ಬ ನಿಕೃಷ್ಟ ಮಂದಬುದ್ಧಿಯವನ ದೋಷಾತ್ಮಕ ಚಿಂತನೆಯ ತುಣುಕಿನಲ್ಲೂ ಸಹ ಹೆಚ್ಚು ಗಂಭೀರವಾದ ಅದ್ಭುತ ಅಡಕವಾಗಿರಲು ಸಾಧ್ಯ."

ಮಾರ್ಕ್ಸ್ ಚಿಂತನೆಯಲ್ಲಿ ಒಂದು ಸೊಗಸಿದೆ. ಅದೆಂದರೆ ಎಲ್ಲ ಚಿಂತನೆಯನ್ನು ಕಾರ್ಯರೂಪಕ್ಕಿಳಿಸುವ ಹಂಬಲ, ಶಕ್ತಿ. ಚಿಕ್ಕ ವಿಷಯಗಳಲ್ಲಿ ಬಹಳಮಟ್ಟಿಗೆ ಆತ ಅವ್ಯವಹಾರಿ; ಆದರೆ ಪ್ರಮುಖ ವಿಷಯಗಳಲ್ಲಿ ಅಸಾಧಾರಣವಾದ ಕಾರ್ಯಶಕ್ತಿ. ಒಂದು ಚಿಕ್ಕ ಸಂಸಾರವನ್ನು ಸರಿಯಾಗಿ ನಡೆಸಲಾರದಿದ್ದ ಈ ವ್ಯಕ್ತಿ ಜನತೆಯ ಒಂದು ಬೃಹತ್ಸೇನೆಯನ್ನು ಸಂಘಟಿಸಿ ವಿಶ್ವವನ್ನೇ ಬದಲಾಯಿಸುವ ಸಮರಕ್ಕಿಳಿದು ಯಶಸ್ಸು ಪಡೆಯುವಷ್ಟು ಮೇಧಾಶಕ್ತಿ ಹೊಂದಿದ್ದ. ಲೇಖನಶೈಲಿಯಲ್ಲಿ ಇಬ್ಬರೂ ಭಿನ್ನರು; ಇಬ್ಬರೂ ಬಹುಭಾಷಾ ಕೋವಿದರು. ಆದರೆ ಏಂಗೆಲ್ಸ್ ಬರೆಯಲಾರಂಭಿಸಿದರೆ ಒಂದು ಪದ ಹೆಚ್ಚಿಲ್ಲ, ಒಂದು ಪದ ಕಡಿಮೆಯಿಲ್ಲ ಎಂಬಂತೆ ಅರ್ಥದ ಅಭಿವ್ಯಕ್ತಿ ನೇರವಾಗಿ ಮಾಡಿಕೊಡಬಲ್ಲವರು. ಮಾರ್ಕ್ಸ್ ಹಾಗಲ್ಲ. ಅವರ ಭಾಷಾ ಪ್ರಯೋಗದಲ್ಲಿ ಲಾಲಿತ್ಯ ಕಡಿಮೆ, ಪ್ರಯಾಸ ಜಾಸ್ತಿ.

ಮಾರ್ಕ್ಸ್‌ರ ಉನ್ನತ ಮೇಧಾಶಕ್ತಿಯನ್ನು ಗುರುತಿಸಿ ಮೊದಲಿನಿಂದಲೂ ಏಂಗೆಲ್ಸ್ ತಾನೇನಿದ್ದರೂ ಪಕ್ಕವಾದ್ಯದವನಂತಿರಲು ಮಾತ್ರ ಸಾಧ್ಯವೆಂದು ತಿಳಿದಂತಿದ್ದರು, ಹೆಚ್ಚಿನ ಗಳಿಕೆಗೆ ಹಾತೊರೆಯಲಿಲ್ಲ. ಹಾಗೆಂದಮಾತ್ರಕ್ಕೆ ಈತ ಕೇವಲ ಮಾರ್ಕ್ಸ್‌ರ ವ್ಯಾಖ್ಯಾನಕಾರ

ಅಥವಾ ಸಹಾಯಕ ಎಂದು ಬಗೆಯುವಂತಿಲ್ಲ. ಇಬ್ಬರೂ ಜೊತೆಗೂಡಿ ಕೆಲಸಮಾಡಿದ್ದು ನಿಜ; ಆದರೆ ಪರಸ್ಪರ ಸಹಾಯಕರಾಗಿ ಅಲ್ಲ, ಸ್ವತಂತ್ರರಾಗಿ. ಬೌದ್ಧಿಕ ಕಾರ್ಯಗಳಲ್ಲಿ ಇಬ್ಬರದೂ ಸ್ವತಂತ್ರ ಮಾರ್ಗಗಳಿದ್ದವು, ಪ್ರಕ್ರಿಯೆಗಳಿದ್ದವು. ಮಾರ್ಕ್ಸ್‌ಗೆ ಸಮನಾಗಿ ನಿಲ್ಲುವ ಧೀಶಕ್ತಿ ಏಂಗೆಲ್ಸರಲ್ಲಿತ್ತು. ಅವರಿಬ್ಬರ ಬಾಂಧವ್ಯ ಬೆಳೆದ ಮೊದಲ ದಿನಗಳಿಂದಲೂ ಒಂದು ಕ್ಷೇತ್ರದಲ್ಲಿ ಏಂಗೆಲ್ಸ್‌ದು ಎತ್ತಿದ ಕೈ. ಸ್ವತಃ ಮಾರ್ಕ್ಸ್ ಒಂದು ಪತ್ರದಲ್ಲಿ ಹೀಗೆಂದಿದ್ದರು: "ನಿನಗೆ ತಿಳಿದೇ ಇರುವಂತೆ ನಾನು ಸಿದ್ಧಾಂತ ರೂಪಿಸಿಕೊಳ್ಳುವುದರಲ್ಲಿ ಬಹಳ ನಿಧಾನಿಗ; ಅಲ್ಲದೆ ನೀನು ಹೋದ ದಾರಿಯಲ್ಲಿ ಬರುವುದನ್ನು ತಾನೆ ನಾನು ಮಾಡುವುದು!" ಏಂಗೆಲ್ಸರ ಸ್ವತಂತ್ರ ವೈಚಾರಿಕ ಸಾಮರ್ಥ್ಯಕ್ಕೆ ಇದಕ್ಕಿಂತಲೂ ಉತ್ತಮ ನಿದರ್ಶನ ಬೇರೊಂದು ಬೇಕಿಲ್ಲ. ಮಾರ್ಕ್ಸ್‌ರಷ್ಟು ಆಳವಾಗಿ ಹೊಕ್ಕು ವಿಷಯಗಳ ಮೂಲಭೂತ ವಿಶ್ಲೇಷಣೆ ಮತ್ತು ನಿರೂಪಣೆಗಳಲ್ಲಿ ತೊಡಗುವುದು ಏಂಗೆಲ್ಸರ ಸ್ವಭಾವವಲ್ಲ. ಆದರೆ ಪ್ರತಿಯೊಂದು ಪ್ರಶ್ನೆಗೂ ಉತ್ತರ ದೊರಕುವಂತಹ ದಿಕ್ಕಿನಲ್ಲಿ ಸೂಕ್ತವಾದ ಸೂಚನೆ ನೀಡುವುದರಲ್ಲಿ ಏಂಗೆಲ್ಸ್ ಗಟ್ಟಿಗರು. ಹೀಗಾಗಿ ಯಾವೊಂದು ಕ್ಷೇತ್ರದಲ್ಲೇ ಆಗಿರಲಿ ಏಂಗೆಲ್ಸರ ಪರಿಜ್ಞಾನ ಬಹಳ ಉಪಯುಕ್ತವಾಗಿರುತ್ತಿತ್ತು. ಆದ್ದರಿಂದಲೇ ರಾಜಕೀಯ ಪ್ರಶ್ನೆಗಳನ್ನು ಇತ್ಯರ್ಥ ಮಾಡುವಾಗ ಏಂಗೆಲ್ಸರೊಡನೆ ಚರ್ಚಿಸದೆ ಮಾರ್ಕ್ಸ್ ಯಾವತ್ತೂ ಮುಂದುವರಿಯುತ್ತಿರಲಿಲ್ಲ. ತಮ್ಮ ವೈಜ್ಞಾನಿಕ ಅಧ್ಯಯನ-ವಿಶ್ಲೇಷಣೆಗಳನ್ನು ಮುಗಿಸಿ ಬೇಗಬೇಗ ಕೃತಿಗಳನ್ನು ರಚಿಸಬೇಕೆಂದು ಏಂಗೆಲ್ಸ್ ಹಲವೊಮ್ಮೆ ಮಾರ್ಕ್ಸ್‌ಗೆ ಸೂಚಿಸಿದ್ದುಂಟು: "ಅಷ್ಟೊಂದು ನಿಷ್ಠೆ ಮತ್ತು ಆತ್ಮಸಾಕ್ಷಿಯ ಕೆಲಸ ಕೈಬಿಡು. ಅದರಿಂದ ಜನಸಾಮಾನ್ಯರಿಗೆ ಯಾವ ನಷ್ಟವೂ ಉಂಟಾಗುವುದಿಲ್ಲ. ಮುಖ್ಯ ವಿಷಯವೆಂದರೆ ನೀನು ಜಾಗ್ರತೆ ಪುಸ್ತಕಗಳನ್ನು ಬರೆದು ಮುಗಿಸಿ ಅವನ್ನು ಪ್ರಕಟಿಸಬೇಕು. ವಿಷಯ ಸಂಗ್ರಹಣೆಯಲ್ಲಿ ಎಲ್ಲೋ ಒಂದು ನ್ಯೂನತೆ ಉಳಿದುಬಿಟ್ಟರೆ ಏನೂ ಬಾಧಕವಿಲ್ಲ. ಆ ನ್ಯೂನತೆ ನಿನ್ನ ಕಣ್ಣಿಗೆ ಮಾತ್ರವೇ ಬೀಳಲು ಸಾಧ್ಯ." ಮಹಾಭಾರತದ ಯಕ್ಷಪ್ರಶ್ನೆಯ ಪ್ರಸಂಗದಲ್ಲಿ ಧರ್ಮರಾಯನಿಗೆ ಯಕ್ಷನ ಒಂದು ಪ್ರಶ್ನೆ "ಪಾಂಡಿತ್ಯ ಎಂದರೇನು?" ಎಂಬುದು. ಅದಕ್ಕೆ ವ್ಯಾಸರ ಉತ್ತರ: "ಪಾಂಡಿತ್ಯವೆಂದರೆ ಪರಿಚ್ಛೇದ." ಅದನ್ನೇ ನಾವು ನಿಷ್ಪುಷ್ಟತೆ ಎನ್ನುತ್ತೇವೆ. ಮಾರ್ಕ್ಸ್‌ರ ಪಾಂಡಿತ್ಯ ಅಂತಹದು. ಆದ್ದರಿಂದಲೇ ಅವರ ಜೀವಿತಕಾಲದಲ್ಲಿ ಬಂಡವಾಳವನ್ನು ಕುರಿತ ಅವರ ಕೃತಿಗಳು ಪೂರ್ತಿಯಾಗಿ ಪ್ರಕಾಶವನ್ನು ಕಾಣಲಿಲ್ಲ. ಅವರ ಮರಣದ ನಂತರ ಏಂಗೆಲ್ಸ್ ಅವನ್ನು ಪ್ರಕಟಣೆಗೆ ಸಿದ್ಧಗೊಳಿಸಬೇಕಾಯಿತು. ತಮ್ಮ ಕೃತಿಯ ಎರಡನೆಯ ಸಂಪುಟದ ರಚನೆಯಲ್ಲಿ ತೊಡಗಿದ್ದಾಗ ರಷ್ಯಾದೇಶದ ಕೃಷಿಕ್ಷೇತ್ರಕ್ಕೆ ಸಂಬಂಧಿಸಿದ ಪ್ರಶ್ನೆಯೊಂದು ಮಾರ್ಕ್ಸ್‌ರನ್ನು ಕಾಡತೊಡಗಿತು. ಅದನ್ನು ಬಗೆಹರಿಸಿಕೊಳ್ಳದೆಯೂ ಮುಂದುವರೆಯಲು ಅವರಿಗೆ ಸಾಧ್ಯವಿತ್ತು. ಆದರೆ ಮಾರ್ಕ್ಸ್ ಅದಕ್ಕೆ ಸಿದ್ಧರಿರಲಿಲ್ಲ. ರಷ್ಯಾದ ವ್ಯವಸಾಯ ಇಲಾಖೆಯ ಎಲ್ಲ ವರದಿಗಳನ್ನು ಕಣ್ಣಲ್ಲಿ ಕಣ್ಣಿಟ್ಟು ಓದತೊಡಗಿದರು. ಹೀಗೆ ಎಷ್ಟೋ ತಿಂಗಳುಗಳೇ ಉರುಳಿಹೋದವು. ಈ ಗಾಢ ಅಧ್ಯಯನವನ್ನು ಕುರಿತು ಏಂಗೆಲ್ಸರಿಗೆ ಒಂದು ಪತ್ರ ಬರೆದಾಗ

ಅವರಿಂದ ಬಂದ ಮಾರುತ್ತರ ಹೀಗಿತ್ತು: "ಆ ವರದಿಗಳೆಲ್ಲಾ ಬೆಂಕಿಯಲ್ಲಿ ಸುಟ್ಟುಹೋದರೆ ನನಗೆ ಆನಂದವೆನಿಸೀತು. ಆಗಲಾದರೂ ನಿನ್ನ ಎರಡನೆಯ ಸಂಪುಟ ತ್ವರಿತಗತಿಯಲ್ಲಿ ಮುಂದಕ್ಕೆ ಸಾಗಬಹುದೆಂದು ನನ್ನ ನಂಬಿಕೆ." ಇದು ಅಸಹನೆಯ ಸೂಚನೆಯೇ ಹೊರತು ಬೇಕಾಬಿಟ್ಟಿ ಕೆಲಸವನ್ನು ಮುಗಿಸಬೇಕೆಂಬ ಸಲಹೆಯಲ್ಲ. ಏಂಗೆಲ್ಸರ ಪಾಂಡಿತ್ಯ ಪೊಳ್ಳಾಗಿತ್ತೆಂದು ಭಾವಿಸಿದರೆ ಅದು ತಪ್ಪು ಗ್ರಹಿಕೆಯಾಗುತ್ತದೆ. ಅವರ ತಾರ್ಕಿಕ ತೀಕ್ಷ್ಣಮತಿಗೆ ನಿಲುಕದ ವಸ್ತುವಿಲ್ಲ. ಸಾಹಿತ್ಯ, ತತ್ತ್ವಶಾಸ್ತ್ರ, ವಿಜ್ಞಾನ, ಅರ್ಥಶಾಸ್ತ್ರ ಹೀಗೆ ಎಲ್ಲ ಶಿಸ್ತುಗಳಲ್ಲೂ ಅವರಿಗೆ ಪಕ್ವವಾದ ಅಭ್ಯಾಸವಿತ್ತು.

"ನೌವಾ ರೈನಿಶ್ ಜೈಟುಂಗ್" ಎಂಬ ಪತ್ರಿಕೆಯನ್ನು ಮಾರ್ಕ್ಸ್ ಕೆಲಕಾಲ ನಡೆಸಿದ್ದರು. ೧೮೫೦ರಲ್ಲಿ ಅದು ನಿಂತುಹೋಯಿತು. ಆಗ ಲಂಡನ್ನಿನಿಂದ ಒಂದು ಪತ್ರಿಕೆಯನ್ನು ಹೊರತರಬೇಕೆಂದು ಮಾರ್ಕ್ಸ್ ಮತ್ತು ಏಂಗೆಲ್ಸ್ ಬಯಸಿದ್ದರು. ೧೮೫೭ರಲ್ಲಿ ಮಾರ್ಕ್ಸ್ ಒಂದು ಪತ್ರದಲ್ಲಿ ಏಂಗೆಲ್ಸ್‌ಗೆ ಬರೆದರು: "ನಾವು ಮೊದಲೇ ಯೋಚಿಸಿದ್ದಂತೆ ಲಂಡನ್ನಿನಲ್ಲಿ ನಿನ್ನ ಇಂಗ್ಲಿಷ್ ವ್ಯವಹಾರ ಶಾಖೆಯನ್ನು ಆರಂಭಿಸಿದ್ದಿದ್ದರೆ ನೀನೀಗ ಮ್ಯಾಂಚೆಸ್ಟರ್‌ನಲ್ಲಿ ಇರಬೇಕಾಗುತ್ತಿರಲಿಲ್ಲ. ಅಲ್ಲಿಯೋ ನಿನಗೆ ಸದಾ ನಿನ್ನ ವ್ಯವಹಾರಗಳದ್ದೇ ಬಾಧೆ. ನನಗೆ ಇಲ್ಲಿ ಸಾಲಗಳ ಸಂತಾಪ ತೀರುವಂತೆಯೂ ಇಲ್ಲ." ತನ್ನ ತಂದೆಯ ವ್ಯಾಪಾರ ವ್ಯವಹಾರಗಳಲ್ಲಿ ಪಾಲ್ಗೊಂಡು ಕೆಲಸಮಾಡಲು ಏಂಗೆಲ್ಸ್ ಮ್ಯಾಂಚೆಸ್ಟರ್‌ನಲ್ಲಿ ಅನೇಕ ವರ್ಷಗಳ ಕಾಲ ನೆಲೆಸಿದ್ದರು. ೧೮೫೪ರಲ್ಲಿ ವ್ಯಾಪಾರ ಕ್ಷೇತ್ರವನ್ನು ತೊರೆದು, ಲಂಡನ್ನಿನಲ್ಲಿ ನಿಂತು ಬರವಣಿಗೆಗೆ ಗಮನ ನೀಡಬೇಕೆಂಬ ಉದ್ದೇಶವಿದ್ದಿತು. ಆದರೆ ಹಾಗೆ ಮಾಡಲಾಗಲಿಲ್ಲ. ಬಹುಕಾಲ ಏಂಗೆಲ್ಸ್ ತನ್ನ ತಂದೆಯ ಮ್ಯಾಂಚೆಸ್ಟರ್ ಕಾರ್ಖಾನೆಯಲ್ಲಿ ನೌಕರನಾಗಿಯೇ ಇದ್ದದ್ದು; ಪಾಲುದಾರನಾದದ್ದು ನಂತರವೇ. ಬೆಳಗಿನ ವೇಳೆ ಕಾರ್ಖಾನೆಯಲ್ಲಿ ಕೆಲಸ; ರಾತ್ರಿಯ ವೇಳೆ ಮನೆಯಲ್ಲಿ. ಮೊದಲ ದಿನಗಳಲ್ಲಿ ಮಾರ್ಕ್ಸ್‌ಗೆ ಆಂಗ್ಲಭಾಷೆಯ ಮೇಲೆ ಸಾಕಷ್ಟು ಹಿಡಿತವಿರಲಿಲ್ಲವಾದ್ದರಿಂದ ಅವರು ಬರೆದ ಲೇಖನಗಳನ್ನು ತಿದ್ದುವುದು ಇಲ್ಲವೆ ಭಾಷಾಂತರಿಸುವುದು ಏಂಗೆಲ್ಸ್ ಪಾಲಿನ ಕೆಲಸವಾಗಿರುತ್ತಿತ್ತು. ತನ್ನ ಸಮಯವು ವ್ಯರ್ಥವಾಯಿತೆಂದು ಪರಿತಪಿಸದೆ ಏಂಗೆಲ್ಸ್ ಈ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಿದ್ದದ್ದು ಒಂದು ತ್ಯಾಗವೆಂದೇ ಹೇಳಬಹುದು. ಸ್ವಯಂ ತಾನು ಅನುಭವಿ, ವಿದ್ವಾಂಸ, ವೈಜ್ಞಾನಿಕ ವಿಶ್ಲೇಷಕ. ಇಂತಹ ಪ್ರತಿಭೆಯನ್ನು ಸ್ವತಂತ್ರ ಅಧ್ಯಯನ-ಬರವಣಿಗೆಗಳಿಗೆ ಏಂಗೆಲ್ಸ್ ಇನ್ನೂ ಹೆಚ್ಚಾಗಿ ಮೀಸಲಿಡಬಹುದಿತ್ತು. ಅಂದರೆ, ತನ್ನ ವಿದ್ವತ್ತನ್ನು ಮಾರ್ಕ್ಸ್‌ರ ಅಧ್ಯಯನ, ಸಂಶೋಧನೆ ಮತ್ತು ಪ್ರಕಟಣೆಗಳಿಗೆ ಪೂರಕವನ್ನಾಗಿ ಮಾತ್ರ ಮಾಡದೆ ಯಥೇಚ್ಛವಾಗಿ ತನ್ನದೇ ಸ್ವಂತ ಪ್ರಣಾಲಿಕೆಯನ್ನು ಬೆಳೆಸಬಹುದಿತ್ತು. ಭಾಷಾಪ್ರಪಂಚ ಮತ್ತು ಮಿಲಿಟರಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಮಾತ್ರವೇ ಏಂಗೆಲ್ಸ್ ಸಂಪೂರ್ಣ ಸ್ವತಂತ್ರರಾಗಿ ತಮ್ಮ ಅಧ್ಯಯನ ಮತ್ತು ಪ್ರಕಟಣೆಗಳನ್ನು ಮಾಡಿದ್ದು. ಇನ್ನುಳಿದ ಅವರ ಉದ್ಗ್ರಂಥಗಳು ಒಂದರ್ಥದಲ್ಲಿ ಮಾರ್ಕ್ಸ್ ಕೃತಿಗಳಿಗೆ ಪೂರಕವಾಗಿ ಬಂದಿವೆ.

ದುಡಿಯುವ ವರ್ಗದ ಚಳುವಳಿ, ಹಿತ ಮತ್ತು ಧ್ಯೇಯಗಳಿಗಾಗಿ ಇಬ್ಬರೂ ಸಮನಾದ ಆಸ್ಥೆಯಿಂದ ಹೋರಾಡುತ್ತಿದ್ದುದರಿಂದ ಈ ರೀತಿಯ ಪೂರಕ ಅಧ್ಯಯನ ಸಾಧ್ಯವಾಗಿತ್ತು. ಇಬ್ಬರಲ್ಲಿ ಯಾರೇ ನೂತನ ವಿಷಯದತ್ತ ಗಮನ ಹೊರಳಿಸಲಿ, ಅದನ್ನು ತಕ್ಷಣ ದುಡಿಯುವ ವರ್ಗದ ಚಳುವಳಿಗೆ ಅಳವಡಿಸಲು ಇಬ್ಬರೂ ಆಸಕ್ತಿ ವಹಿಸುತ್ತಿದ್ದರು. ಅಂತಹ ಪ್ರಯೋಜನ ಫಲಿಸಿದರೆ ಸಾಕು, ಇಬ್ಬರಿಗೂ ಒಂದೇ ತೆರನಾದ ತೃಪ್ತಿ. ಹೀಗೆ ಮಾರ್ಕ್ಸ್ ಮತ್ತು ಏಂಗೆಲ್ಸ್ ಬೌದ್ಧಿಕವಾಗಿ ಅವಿಭಾಜ್ಯವಾದಂತಹ ಜೀವನ ನಡೆಸಿದವರು. ಅಧ್ಯಯನ, ಸಾಂಸಾರಿಕ ಜೀವನ, ರಾಜಕೀಯ ಸಂಘಟನೆ, ಆರ್ಥಿಕ ಚಿಂತನೆ, ಬೇರೆ ಹೋರಾಟಗಾರರಿಗೆ ಮಾರ್ಗದರ್ಶನ ನೀಡುವುದು, ವಿರೋಧಿ ರಾಜಕೀಯ ತತ್ವಗಳನ್ನು ವಿರೋಧಿಸಿ ಖಂಡಿಸುವುದು - ಹೀಗೆ ಇಬ್ಬರೂ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡವರು. ಜನಸಾಮಾನ್ಯರ ಆಶೋತ್ತರಗಳನ್ನು ತಮ್ಮದನ್ನಾಗಿ ಮಾಡಿಕೊಂಡು, ಎಂತಹ ತ್ಯಾಗಕ್ಕಾದರೂ ಸಿದ್ಧರಾಗಿ, ಎಂದೆಂದಿಗೂ ತಮ್ಮ ಜೀವನದ ಕಷ್ಟಕಾರ್ಪಣ್ಯಗಳಿಗಾಗಿ ಮರುಗದೆ, ಜಗತ್ತಿನ ಹೋರಾಟದ ಹಾದಿಯಲ್ಲಿ ತಮ್ಮೀರ್ವರ ಪ್ರಧಾನ ಪಾತ್ರಕ್ಕಾಗಿ ಯಾವತ್ತೂ ವೃಥಾ ಅಭಿಮಾನ ಪಟ್ಟುಕೊಳ್ಳದೆ, ನಿಸ್ವಾರ್ಥ-ನಿಷ್ಕಪಟತೆಯಿಂದ ತಮ್ಮ ಸರ್ವಸ್ವವನ್ನೂ ವಿಶ್ವಕ್ಕೆ ನೀಡಿದ ಮಹಾನ್ ದಾರ್ಶನಿಕರು, ಹೋರಾಟಗಾರರು ಮತ್ತು ಶ್ರೇಷ್ಠ ಮನುಜರು ಮಾರ್ಕ್ಸ್ ಮತ್ತು ಏಂಗೆಲ್ಸ್. ಅಷ್ಟು ಉದಾತ್ತ ಧ್ಯೇಯಗಳಿಗಾಗಿ ಅವರಿಬ್ಬರಲ್ಲಿ ಬೆಳೆದ, ಎಂದೂ ಒಡೆಯಲಾಗದಂತಹ ಬಾಂಧವ್ಯ ಇತಿಹಾಸದಲ್ಲಿ ಅಪೂರ್ವವಾಗಿದೆ.

❑❑

೪

ಆಹಾ! ಪವಿತ್ರ ಕುಟುಂಬವಿದು

ಸರಿದೋರಿದಾಗ ತೀಕ್ಷ್ಣವಾಗಿ ವಿಡಂಬನೆ ಮಾಡುವುದು ಮಾರ್ಕ್ಸ್ ಮತ್ತು ಏಂಗೆಲ್ಸರಿಬ್ಬರೂ ರೂಢಿಸಿಕೊಂಡಿದ್ದ ಒಂದು ಸ್ವಭಾವ. ಅವರಿಬ್ಬರೂ ಸೇರಿ ಬರೆದ ಮೊದಲ ಪುಸ್ತಕದ ಶೀರ್ಷಿಕೆಯಲ್ಲಿ ಈ ವಿಡಂಬನೆಯ ಛಾಯೆ ದಟ್ಟವಾಗಿದೆ. ಆ ಶೀರ್ಷಿಕೆಯನ್ನು ನೋಡಿದರೆ ಪುಸ್ತಕದಲ್ಲಿ ಅಂತರ್ಗತವಾಗಿರುವ ವಿಷಯ ಮತ್ತು ವಿಮರ್ಶೆಗಳ ಬಗ್ಗೆ ಕೂಡಲೆ ಕಲ್ಪನೆ ಬರುವುದಿಲ್ಲ. ಪುಸ್ತಕದ ಹೆಸರು "ಪವಿತ್ರ ಕುಟುಂಬ" ಎಂದು, ಆದರೆ ಅದು ಕುಟುಂಬದ ಒಳಿತು-ಕೆಡಕುಗಳ ಚರ್ಚೆ ಇರುವ ಪುಸ್ತಕವಲ್ಲ. ಅದು ಪೂರ್ತಿಯಾಗಿ ತತ್ತ್ವಶಾಸ್ತ್ರದ ಗ್ರಹಿಕೆಗಳಿಗೆ ಸಂಬಂಧಿಸಿದ ಗ್ರಂಥ, ಯುವ ಹೆಗೆಲಿಯನ್ನರು ಎಡವಿಬಿದ್ದಿದ್ದ ಅಂಶಗಳತ್ತ ಗಮನ ಸೆಳೆಯುವ ಗ್ರಂಥ. ಹಿಂದೆ ಪ್ರಸ್ತಾಪಿಸಿದ್ದಂತೆ ಈ ಯುವ ಹೆಗೆಲಿಯನ್ನರು ಆರಂಭದ ತಮ್ಮ ಪುರೋಗಾಮಿತ್ವ ಮತ್ತು ಪ್ರಜಾಪ್ರಭುತ್ವವಾದಿ ನಂಬಿಕೆಗಳನ್ನು ದೂರಮಾಡಿ "ವಿಮರ್ಶಾತ್ಮಕ ವಿಮರ್ಶೆ" ಎಂಬ ಹೆಸರಿನಲ್ಲಿ "ಆತ್ಯಂತಿಕ ಸ್ವಯಂ-ಪ್ರಜ್ಞೆ" ಎಂಬುದನ್ನು ವೈಭವೀಕರಿಸಿದರು. ಜನಸಮುದಾಯವನ್ನು ತುಚ್ಛೀಕರಿಸುವುದು ಅವರ ಮುಂದಿನ ಹೆಜ್ಜೆಯಾಯಿತು. ಸಾಮಾಜಿಕ ಅಭಿವೃದ್ಧಿಯಲ್ಲಿ ಸಮುದಾಯದ

ಪಾತ್ರವು ನಗಣ್ಯವೆಂದು ಹೇಳುತ್ತಾ ಅವರನ್ನು "ಪರಿಮಿತ ಪ್ರಮಾಣದ ಘಟಕ" ಎಂದು ಇವರು ವ್ಯಾಖ್ಯಾನಿಸಿದರು. "ಅಪರಿಮಿತ ಕ್ರಿಯಾವಂತ ಆತ್ಮ"ದ ವಿಕಾಸಕ್ಕೆ ನಿರ್ಬಂಧ ಒಡ್ಡುವ ಘಟಕವೆಂದು ಸಹ ಜನಸಮುದಾಯವನ್ನು ಇವರು ಬಣ್ಣಿಸಿದರು. ಗಿಯೋರ್ಗ್ ಯುಂಗ್ ಎಂಬ ಮಾರ್ಕ್ಸ್‌ರ ಸ್ನೇಹಿತ ಜುಲೈ ೧೮೪೪ರ ಒಂದು ಪತ್ರದಲ್ಲಿ ಯುವ ಹೆಗೆಲಿಯನ್ನರ ಪೈಕಿ ಪ್ರಮುಖನಾಗಿದ್ದ ಬ್ರೂನೋ ಬಾಯರ್ ನ ಅಭಿಪ್ರಾಯವನ್ನು ಹೀಗೆ ಪ್ರಸ್ತಾಪಿಸಿದ್ದಾನೆ: "ಅವನಿಗೆ ಟೀಕೆ ಮಾಡುವುದೇ ಒಂದು ಜಾಡ್ಯವಾಗಿ ಅಂಟಿದಂತಿದೆ. ಈಚಿನ ಒಂದು ಲೇಖನದಲ್ಲಿ ಅವನು ಹೇಳಿರುವಂತೆ, ಸಮಾಜವನ್ನು ಹಾಗೂ ವಿಶೇಷ ಸೌಲಭ್ಯಗಳನ್ನುಳ್ಳ ಆಸ್ತಿವಂತರನ್ನು ಟೀಕಿಸಿದರೆ ಸಾಲದು; ಆಸ್ತಿಹೀನರಾದ ದುಡಿಯುವ ಜನರನ್ನೂ ಅಷ್ಟೇ ತೀವ್ರವಾಗಿ ಟೀಕಿಸಬೇಕು." ಇಂಥದೇ ನಿಲುವನ್ನು ಬ್ರೂನೋ ಬಾಯರ್‌ನ ಸೋದರ ಎಡ್ಗರ್ ಸಹ ಹೊಂದಿದ್ದ. ಅಮೂರ್ತ ವಿಷಯಗಳ ಜಿಜ್ಞಾಸೆಯೇ ಪರಮಾರ್ಥ ಸಾಧನೆಯೆಂಬ ಅವರಿಬ್ಬರ ಪ್ರತಿಪಾದನೆಯನ್ನು ಖಂಡತುಂಡವಾಗಿ ವಿರೋಧಿಸುವ ಗ್ರಂಥ "ಪವಿತ್ರ ಕುಟುಂಬ". ಈ ಶೀರ್ಷಿಕೆಯನ್ನು ಬೈಬಲ್ಲಿನಿಂದ ತೆಗೆದುಕೊಳ್ಳಲಾಗಿದೆ; ಆದರೆ ಅದಕ್ಕೆ ವಿಡಂಬನೆಯ ಅರ್ಥವನ್ನು ನೀಡಿ ಹಿಗ್ಗಿಸಲಾಗಿದೆ.

ಭಾವನಾವಾದಿ ತತ್ತ್ವಶಾಸ್ತ್ರವನ್ನು ಎತ್ತಿಹಿಡಿಯುವಾಗ ಸಹ ಹೆಗೆಲ್ ತನ್ನ ಪ್ರಣಾಲಿಕೆಯಲ್ಲಿ ತಾರ್ಕಿಕ ಮತಿಗೆ ಸ್ಥಾನ ಕಲ್ಪಿಸಿಕೊಟ್ಟಿದ್ದಾನೆ. ಅವನ ಅನುಯಾಯಿಗಳೆಂದು ಕರೆದುಕೊಂಡ ಬಾಯರ್ ಸೋದರರು ಮತ್ತು ಅವರ ತಂಡ ತರ್ಕವನ್ನು ಹೊರದೂಡಿ ವಿತರ್ಕದ ಜಿಜ್ಞಾಸೆಯನ್ನು ಮುಂದುಮಾಡಿದರು. ಇತಿಹಾಸದ ಪ್ರಮುಖ ನಿರ್ಮಾತೃ "ಆತ್ಯಂತಿಕ ಆತ್ಮ" ಎಂದ ಹೆಗೆಲ್ ಆ ಆತ್ಮನ ಕ್ರಿಯೆಗೆ ಜನರು ಅನಿವಾರ್ಯವೆಂದು ಹೇಳಿದ. ಜನರಿಲ್ಲದೆ ಐತಿಹಾಸಿಕ ಕ್ರಿಯೆ ಅನೂಹ್ಯವೆಂದು ಅವನು ನಿರೂಪಿಸಿದ್ದ. ಅದನ್ನು ಅಲ್ಲಗಳೆದು ಬಾಯರ್ ಬಂಧುಗಳು ಭೌತವಾದಿ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ನಿರಾಕರಿಸಿದರು. ಹೆಗೆಲ್‌ಗಿಂತಲೂ ಮುಂದೆ ಸಾಗಿ ಇತಿಹಾಸದ ಗತಿಯನ್ನು ಅರ್ಥೈಸುವ ಬದಲು ಅವರು ಇನ್ನೂ ಹಿಂದಕ್ಕೆ ಹೋಗಿ ಸ್ವಯಂ-ಪ್ರಜ್ಞೆಯ ಆರಾಧಕರಾದರು. ಅದಷ್ಟೇ ಸಾಲದೆಂಬಂತೆ, ಅವರು ಇನ್ನೊಂದು ಘೋಷಣೆಯನ್ನು ಹೊರಡಿಸಿದರು: ಜರ್ಮನಿಯು ತನ್ನ ತತ್ತ್ವಶಾಸ್ತ್ರದ ಘನತೆಯಿಂದಾಗಿ ಬೇರೆಲ್ಲ ರಾಷ್ಟ್ರಗಳಿಗಿಂತಲೂ ಹೆಚ್ಚು ಶ್ರೇಷ್ಠತೆಯನ್ನು ಸಾಧಿಸಿದೆ, ಎಂದು.

ಇಂತಹ ಅಪಕ್ವ ಅನಿಸಿಕೆಗಳು ಏಂಗೆಲ್ಸ್‌ಗೆ ರುಚಿಸುತ್ತಿರಲಿಲ್ಲ. ಸಾಮಾಜಿಕ ಮತ್ತು ರಾಜಕೀಯ ವಿಶ್ಲೇಷಣೆಗಳನ್ನು ನೀಡುತ್ತಾ ಬಂದಿದ್ದ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳ ಸಾಧನೆಯನ್ನು ತಳ್ಳಿಹಾಕುವುದು ವಾಸ್ತವಿಕತೆಯನ್ನು ನಿರಾಕರಿಸುವಷ್ಟೇ ಕಳಪೆಯ ಚಿಂತನೆಯೆಂದು ಏಂಗೆಲ್ಸ್ ಭಾವಿಸಿದ್ದರು. ಯುವ ಹೆಗೆಲಿಯನ್ನರು ಮಾನವ ಜನಾಂಗವನ್ನು ಹೊರತುಪಡಿಸಿ ಗಾಢ ಅಮೂರ್ತತೆಯಲ್ಲಿ ಲೀನವಾಗಿದ್ದು ಅಮೋಘ ಸಾಧನೆಯೇ, ಎಂಬ ಪ್ರಶ್ನೆಯನ್ನೆತ್ತಿ ಏಂಗೆಲ್ಸ್ ಹೇಳಿದ್ದಿದು: "ಇದಕ್ಕೆ ಭಿನ್ನವಾಗಿ ಫ್ರಾನ್ಸಿನ ಹಾಗೂ ಇಂಗ್ಲೆಂಡಿನ

ತತ್ತ್ವವಿಮರ್ಶಕರು ಜೀವಂತವಾಗಿರುವ ಜನರ ಕ್ರಿಯೆಗಳನ್ನು ಕೇಂದ್ರವಾಗಿರಿಸಿಕೊಂಡು ಸಮಾಜದಲ್ಲಿ ಅವರ ತುಡಿತಗಳನ್ನು ವಿಶ್ಲೇಷಣೆಗೆ ಒಡ್ಡಿದರು."

ಸರಳವಾಗಿ ಹೇಳುವುದಾದರೆ, ಮಾರ್ಕ್ಸ್ ಮತ್ತು ಏಂಗೆಲ್ಸ್ ತಮ್ಮ "ಪವಿತ್ರ ಕುಟುಂಬ" ಎಂಬ ಗ್ರಂಥದಲ್ಲಿ ಭೌತವಾದಿ ನೆಲೆಯನ್ನು ಸ್ಪಷ್ಟವಾಗಿ ಕಂಡುಕೊಂಡು, ಇತಿಹಾಸವು ನಡೆದು ಬಂದ ದಾರಿಯನ್ನು ಸಮರ್ಥವಾಗಿ ಪ್ರತಿಪಾದಿಸುವ ವಿಧಾನವನ್ನು ಗ್ರಹಿಸಿದರು ಎನ್ನಬಹುದು. ಇತಿಹಾಸವು ಯಾದೃಚ್ಛಿಕವಲ್ಲ; ಅಂದರೆ, ಅದು ಬೇಕಾಬಿಟ್ಟಿಯಾಗಿ, ನಿಯಮರಹಿತವಾಗಿ, ವರ್ತಿಸುವುದಿಲ್ಲ. ಆಯಾ ಕಾಲಘಟ್ಟಗಳಲ್ಲಿ ಎಂತಹ ಸಾಮಾಜಿಕ ಸಂಬಂಧಗಳಿರಲು ಸಾಧ್ಯವೆನ್ನುವುದು ಇಚ್ಛಾಮಾತ್ರದಿಂದ ನಿರ್ಧರಿತವಾಗುವುದಿಲ್ಲ. ಉದಾಹರಣೆಗೆ, ಗುಲಾಮಿ ಪದ್ಧತಿ ಜಾರಿ ಇರುವಾಗ ಉತ್ಪಾದನಾ ಸಂಬಂಧಗಳು ಒಂದು ನಿರ್ದಿಷ್ಟ ಸ್ವರೂಪದ್ದೇ ಆಗಿರಬೇಕು. ಅಂತಹ ಪದ್ಧತಿಯಲ್ಲಿ ಅದರ ಸಾಧ್ಯತೆಗಳನ್ನು ಮೀರಿ ಚರಿತ್ರೆಯ ಪಾತ್ರಗಳು ಬೇರೇನನ್ನೋ ಕಲ್ಪಿಸಿಕೊಂಡು ಅದನ್ನು ಈಡೇರಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಗುಲಾಮರು ಎಂಟು ಗಂಟೆ ಅವಧಿಯ ದುಡಿಮೆಗಾಗಿ ಸಂಘಟಿತ ಹೋರಾಟ ಮಾಡಬಹುದಿತ್ತೇ ಎಂಬ ಪ್ರಶ್ನೆ ನಿರರ್ಥಕ. ಏಕೆಂದರೆ, ಉತ್ಪಾದನಾ ವಿಧಾನವು ಯಾವ ಹಂತವನ್ನು ಆ ಕಾಲದಲ್ಲಿ ಮುಟ್ಟಿದ್ದಿತೋ ಅದಕ್ಕಿಂತ ಬಹುದೂರ ಮುನ್ನಡೆದು ಬೇರೆ ರೀತಿಯ ಉತ್ಪಾದನಾ ಸಂಬಂಧಗಳನ್ನು ಸಿದ್ಧಿಸಿಕೊಳ್ಳುವುದು ಕೇವಲ ಕಾಲ್ಪನಿಕವಾಗಿ ಉಳಿಯುತ್ತದೆ. ಸಮಾಜದ ವಿಕಾಸವು ಉತ್ಪಾದನಾ ಸಂಬಂಧಗಳನ್ನು ಅವಲಂಬಿಸುವುದು ವಾಸ್ತವಿಕ ಮಾತ್ರವಲ್ಲ, ಅದು ಅನಿವಾರ್ಯ ಕೂಡ.

ಈ ರೀತಿಯ ಚಿಂತನೆಯಲ್ಲಿ ಅಷ್ಟೊಂದು ಮಹತ್ವದ ಅಂಶವೇನಿದೆಯೆಂಬ ಪ್ರಶ್ನೆ ಅಪ್ರಸ್ತುತವಲ್ಲ. ಮಾನವನ ಇಚ್ಛಾಶಕ್ತಿ ಕೇವಲ ಗೌಣವೇ ಎಂಬ ಸಂಶಯವೂ ತಲೆದೋರಬಹುದು. ಆದರೆ ಪ್ರಾಯೋಗಿಕವಾಗಿ ಇತಿಹಾಸದ ಸಂದರ್ಭಗಳನ್ನು ಅವಲೋಕಿಸಿದರೆ ಇತಿಹಾಸದಲ್ಲಿ ಭೌತವಾದಿ ಪ್ರಕ್ರಿಯೆಯ ಸ್ಥಾನದ ಅರಿವುಂಟಾಗುತ್ತದೆ. ನಮ್ಮ ದೇಶದಲ್ಲಿ ಶತಮಾನಗಳಿಂದ ಒಂದು ಪಿಡುಗಾಗಿ ಬಂದಿರುವ ಅಸ್ಪೃಶ್ಯತೆಯ ಪ್ರಶ್ನೆಯನ್ನೇ ಉದಾಹರಣೆಯಾಗಿ ನೋಡಬಹುದು. ನಮ್ಮ ಮನಸ್ಸುಗಳಲ್ಲಿ ಸಮಾಜವು ಹುಟ್ಟುಹಾಕಿರುವ ಭಾವನೆಯೆಂದು ಅದನ್ನು ಪರಿಗಣಿಸಿ ಮಾನಸಿಕ ಬದಲಾವಣೆಗಾಗಿ ಯತ್ನಿಸಬೇಕೆಂದು ಅನೇಕ ಸುಧಾರಕರು ಹೇಳಿರುವುದನ್ನು ನಾವು ನೋಡಿದ್ದೇವೆ. ಆ ನಿಟ್ಟಿನಲ್ಲಿ ಅವರು ಅದ್ಭುತವಾದ ಫಲವನ್ನು ನೀಡಿರುವುದೂ ಉಂಟು. ಆದರೆ ಮೂಲಭೂತವಾದ ಪ್ರಶ್ನೆ ಹಾಗೆಯೇ ಉಳಿದಿದೆ: ಮೊದಲಿಗೆ, ಅದು ಅಸ್ತಿತ್ವಕ್ಕೆ ಬಂದಿದ್ದು ಹೇಗೆ? ಮತ್ತು ಅದಿನ್ನೂ ನಿರ್ಮೂಲವಾಗದಿರಲು ಕಾರಣವೇನು? ನಮ್ಮ ಸಂವಿಧಾನದಲ್ಲಿ ಅಸ್ಪೃಶ್ಯತೆಯನ್ನು ಅಪರಾಧವೆಂದು ಸಹ ಸಾರಿದ್ದೇವೆ, ಆದರೆ ಇನ್ನೂ ಅಪರಾಧಿಗಳ ಸಂಖ್ಯೆ ಸೊನ್ನೆಯನ್ನು ಮುಟ್ಟಿಲ್ಲ. ಚಾರಿತ್ರಿಕ ಭೌತವಾದವು ಮಾನಸಿಕ ಆಯಾಮವನ್ನು ತಿರಸ್ಕರಿಸುವುದಿಲ್ಲ; ಒಂದು ಮಟ್ಟವನ್ನು ಮುಟ್ಟಿದಾಗ ಅದೂ ಒಂದು ಭೌತಿಕ ಪರ್ಯಾವರಣದ ಅವಿಭಾಜ್ಯ ಅಂಗವಾಗಿ

ಕೆಲಸ ಮಾಡುತ್ತದೆ; ಆದರೆ ಅದಷ್ಟೇ ಪರಿವರ್ತನೆಗೆ ಸಾಧನವಾಗುವುದಿಲ್ಲ. ಗುಲಾಮಿ ಪದ್ಧತಿಯು ಗ್ರೀಸ್ ಮತ್ತು ರೋಮ್‌ನಲ್ಲಿ ಇದ್ದಂತೆ ನಮ್ಮ ದೇಶದಲ್ಲಿ ಇದ್ದಿರಲಾರದೆಂದು ಇತಿಹಾಸತಜ್ಞರು ವಾದಿಸಿದ್ದಾರೆ. ತತ್ಸಮವಲ್ಲದಿದ್ದರೂ ತತ್ಸಂವಾದಿಯಾಗಿ ನಮ್ಮಲ್ಲಿ ದಾಸ್ಯ ಪದ್ಧತಿ ಇದ್ದಿತು. ಉಪದೇಶಾಮೃತವನ್ನು ಸ್ವೀಕರಿಸಿ ನಮ್ಮ ಸಮಾಜ ಅದನ್ನು ಬಿಟ್ಟು ಮುಂದೆ ಬಂದಿತೆ? ಅಥವಾ, ಸಾಮಾಜಿಕ-ಆರ್ಥಿಕ ಬೆಳವಣಿಗೆಗಳಿಂದಾಗಿ ಹಿಂದಿನ ಪದ್ಧತಿಯ ಜಾಗದಲ್ಲಿ ಹೊಸದೊಂದು ಪದ್ಧತಿ ಜಾರಿಗೆ ಬಂದಿತೆ? ಉಪದೇಶವನ್ನು ಸ್ವೀಕರಿಸಿ, ಮನಸ್ಸಿನ ಪರಿವರ್ತನೆಯಾಗಿ, ಅದರಿಂದ ಹೊಸ ಪದ್ಧತಿ ಬಂದಿತೆನ್ನುವುದಾದರೆ, ಮೊದಲ ಹಂತದಲ್ಲೇ ಏಕೆ ಉಪದೇಶವು ಫಲಕಾರಿಯಾಗಲಿಲ್ಲ?

ಒಂದು ಆರ್ಥಿಕ ಸಂರಚನೆಯು ತನ್ನ ಸಾಧ್ಯತೆಗಳನ್ನು ಪೂರ್ಣಪ್ರಮಾಣದಲ್ಲಿ ಪೂರೈಸುವವರೆಗೂ ಶಿಥಿಲವಾಗಿ ಕುಸಿದುಬೀಳುವುದಿಲ್ಲ. ಹೊಸ ಉತ್ಪಾದನಾ ಸಲಕರಣೆಗಳು, ವಿಧಾನಗಳು ಮತ್ತು ಸಂಬಂಧಗಳು ಇಡೀ ಸಂರಚನೆಗೆ ಹೊಸ ಸ್ವರೂಪವನ್ನು ಕಲ್ಪಿಸಿಕೊಡುತ್ತವೆ. ಎಂತಹ ಅಡಿಪಾಯವಿದೆ ಎಂಬುದನ್ನು ಅಲಕ್ಷಿಸಿ ಮೇಲುಕಟ್ಟಡದ ರಚನೆಯನ್ನು ಮನಸ್ಸಿಗೆ ತೋಚಿದಂತೆ ಮಾಡಲಾಗದು. ಸಮಾಜದಲ್ಲಿ ಯಾರಿಗೆ ಎಷ್ಟು ಕನಿಷ್ಠ ಸೌಲಭ್ಯಗಳು ದೊರೆಯಬಹುದೆಂಬುದು ಆ ಸಮಾಜದ ಮೂಲಬುನಾದಿಯ ಲಕ್ಷಣವನ್ನು ಹೊಂದಿಕೊಂಡಿರುತ್ತದೆ. ಉದಾಹರಣೆಗೆ, ಗುಲಾಮಪದ್ಧತಿ ಇರುವ ಸಮಾಜದಲ್ಲಿ ಗುಲಾಮರ ಕುಟುಂಬದ ಸ್ವರೂಪ ಮತ್ತು ಜವಾಬ್ದಾರಿಗಳು ಊಳಿಗಮಾನ್ಯ ಪದ್ಧತಿ ಇರುವ ಸಮಾಜದಲ್ಲಿನ ಒಬ್ಬ ತೊತ್ತಿನ ಕುಟುಂಬದ ಸ್ವರೂಪ ಮತ್ತು ಜವಾಬ್ದಾರಿಗಳಿಗಿಂತ ಮೂಲಭೂತವಾಗಿ ಭಿನ್ನವಾಗಿರುತ್ತವೆ. ಗುಲಾಮನ ಸ್ವಾತಂತ್ರ್ಯದ ಎಲ್ಲೆಯನ್ನು ಇಂದಿನ ದುಡಿಯುವ ಕಾರ್ಮಿಕನೊಬ್ಬನ ಸ್ವಾತಂತ್ರ್ಯದ ಎಲ್ಲೆಯೊಡನೆ ಹೋಲಿಸಿ ನೋಡಿದರೆ ಇದು ಇನ್ನೂ ಹೆಚ್ಚು ಸ್ಪಷ್ಟವಾಗುತ್ತದೆ. ಅಥವಾ, ಗುಲಾಮಪದ್ಧತಿಯ ಸಮಾಜದ ಸಂಸ್ಕೃತಿಯನ್ನು ಬೇರೊಂದು ಲಕ್ಷಣದ ಸಮಾಜದ ಸಂಸ್ಕೃತಿಯೊಡನೆ ಹೋಲಿಸಿದರೂ ಇದು ಮನದಟ್ಟಾಗುತ್ತದೆ. ಸಂಸ್ಕೃತಿಯು ಸಮಾಜದ ಮೇಲುಕಟ್ಟಡದ ಒಂದು ಭಾಗ; ಮೂಲಬುನಾದಿಯ ಲಕ್ಷಣವನ್ನು ಪೂರ್ತಿಯಾಗಿ ಕಳೆದುಕೊಂಡು ಅದು ವಿಜೃಂಭಿಸಲಾರದು.

ಹಾಗಾದರೆ, ಸಮಾಜದ ಬದಲಾವಣೆ ಹೇಗುಂಟಾಗುತ್ತದೆ? ನಾವು ಅದರ ನಿಯಮವನ್ನು ತಿಳಿಯದಿದ್ದರೆ ಅದಕ್ಕೆ ನಿಯಮವಿಲ್ಲವೆಂದೇನೂ ಅಲ್ಲ. ಏಂಗೆಲ್ಸರು ಪ್ರತಿಪಾದಿಸಿದ ಚಾರಿತ್ರಿಕ ಭೌತವಾದದ ಪ್ರಕಾರ ಇತಿಹಾಸದ ನಿಜವಾದ ನಿರ್ಮಾಪಕರೆಂದರೆ ಜನ. ಅವರೇ ಸಾಮಾಜಿಕ ಪ್ರಗತಿಯ ಕಾರಣಕರ್ತರು. ಯುವ ಹೆಗೆಲಿಯನ್ನರು ಇಂತಹ ಅರಿವಿಗೆ ಬರಲಾರದೆ ಹೋದರು. ಆದರೆ ಅವರ ಸಮಕಾಲೀನನಾಗಿದ್ದ ಲುಡ್ವಿಗ್ ಫಾಯರ್‌ಬಾಕ್ ಮತಧರ್ಮ ಹಾಗೂ ಹೆಗೆಲ್‌ನ ಭಾವನಾವಾದಗಳನ್ನು ವಸ್ತುನಿಷ್ಠವಾಗಿ ವಿಮರ್ಶೆಗೆ ಗುರಿಮಾಡಿದ್ದನು. ಅದನ್ನು ಏಂಗೆಲ್ಸ್ ವಿಶೇಷವಾಗಿ ಸಮರ್ಥಿಸಿದ್ದೂ ಉಂಟು. ಒಟ್ಟಿನಲ್ಲಿ ಹೇಳುವುದಾದರೆ

“ಪವಿತ್ರ ಕುಟುಂಬ” ಎಂಬ ಗ್ರಂಥವು ಮಾರ್ಕ್ಸ್‌ವಾದದ ಮೊದಲ ಮೌಲಿಕ ಗ್ರಂಥ. ಅದರಲ್ಲಿ ಪ್ರಕಟವಾದ ಅಭಿಪ್ರಾಯಗಳು ನಂತರ ವಿಕಾಸವಾಗುತ್ತಾ ಹೋದವು. ಫಾವರ್‌ಬಾಕ್ ಮಂಡಿಸಿದ್ದ ಭೌತವಾದದ ವ್ಯಾಖ್ಯಾನವನ್ನು ಈ ಗ್ರಂಥವು ಬಹಳಮಟ್ಟಿಗೆ ಮಾನ್ಯಮಾಡಿದೆ; ಆದರೆ ಕ್ರಮೇಣ ಅದು ಗಟ್ಟಿಯಾದದ್ದು ಫಾವರ್‌ಬಾಕ್ ನೆಲೆಯಲ್ಲಲ್ಲ. ಅದಕ್ಕೆ ಇನ್ನೂ ಹೆಚ್ಚಿನ ನಿಷ್ಕೃಷ್ಟತೆ ದೊರೆಯುವಂತೆ ಮಾಡಿದ್ದು ಏಂಗೆಲ್ಸರ ಒಂದು ಪ್ರಮುಖ ಕೊಡುಗೆ. ಹಾಗೆ ನೋಡಿದರೆ, “ಪವಿತ್ರ ಕುಟುಂಬ”ದಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸ್ “ಭೌತವಾದ” ಎಂಬುದನ್ನು ಆ ಪದದಿಂದ ನಿರ್ದೇಶಿಸಿರಲಿಲ್ಲ. ಅದನ್ನವರು “ನೈಜ ಮಾನವತಾವಾದ” ಎಂದು ಕರೆದಿದ್ದರು. ಮಾನವೀಯತೆಯನ್ನಲ್ಲದೆ ಇತಿಹಾಸದ ನಿರ್ಮಾಣದಲ್ಲಿ ಮಾನವನ ಪಾತ್ರವನ್ನು ಸೂಚಿಸುವಂತಹ ಕಲ್ಪನೆ ಇದಾಗಿತ್ತು.

❑❑

೫

ದುಡಿಯುವ ಜನರ ಪರಿಸ್ಥಿತಿಯ ಅಧ್ಯಯನ

ಏಂಗೆಲ್ಸರ ರಾಜಕೀಯ ಚಟುವಟಿಕೆಗಳು ಅವರ ತಂದೆಗೆ ಸರ್ವಥಾ ಸರಿಕಾಣಲಿಲ್ಲ. ಆದ್ದರಿಂದ ಅವರಿಬ್ಬರ ನಡುವೆ ಒಂದು ರೀತಿಯ ಸಂಘರ್ಷದ ವಾತಾವರಣ ಏರ್ಪಟ್ಟಿತ್ತು. ಅದರ ಮೊದಲ ಪರಿಣಾಮವಾಗಿ ತಂದೆ ಹೆಚ್ಚುಹೆಚ್ಚು ಧಾರ್ಮಿಕ ಉನ್ಮಾದದತ್ತ ಸರಿದರು ಮತ್ತು ಮಗನು ಕಾರ್ಖಾನೆಯ ಉಸ್ತುವಾರಿಯಲ್ಲಿ ಆಸಕ್ತಿ ಬೆಳೆಸಿಕೊಳ್ಳಲಿಲ್ಲವೆಂದು ಕೋಪಗೊಂಡರು. ಅಂದಿನ ಕೌಟುಂಬಿಕ ಸನ್ನಿವೇಶವನ್ನು ಕುರಿತಂತೆ ಏಂಗೆಲ್ಸ್ ಹೇಳುವುದಿದು: “ನನಗೇನಾದರೂ ಪತ್ರ ಬಂದಿತೋ, ಅದನ್ನು ಚೆನ್ನಾಗಿ ಮೂಸಿನೋಡುವುದು ಅಪ್ಪನ ಅಭ್ಯಾಸ; ಅದರಲ್ಲೇನಿದೆಯೆಂದು ತಿಳಿಯುವ ಉತ್ಸುಕತೆ ಇದು. ಪತ್ರಗಳನ್ನು ಯಾರೋ ಕಮ್ಯುನಿಸ್ಟರೇ ಬರೆದಿರುತ್ತಾರೆಂದು ತಂದಗೆ ಖಾತ್ರಿಯಾಗಿದೆ. ಆದ್ದರಿಂದ ಪತ್ರಗಳು ಬಂದಾಗ ಅವರು ಮೂತಿ ಸೊಟ್ಟಗೆ ಮಾಡಿಕೊಳ್ಳುವುದು ಯಾವಾಗಲೂ ಇದ್ದದ್ದೇ. ಅವರ ಈ ಮುಖಭಾವವನ್ನು ನೋಡಿದರೆ ಹುಚ್ಚು ಹಿಡಿದಂತಾಗುತ್ತದೆ. ನಾನು ಕೊಠಡಿಗೆ ಮರಳಿ ನನ್ನ ಅಧ್ಯಯನ ಮುಂದುವರಿಸಿದಾಗಲೂ

ಮುಖಭಾವ ಅಳಿಸಿರುವುದಿಲ್ಲ. ನಾನು ತಿನ್ನಲಿ, ಕುಡಿಯಲಿ, ಮಲಗಲಿ ಅಥವಾ ಬೇರೇನೇ ಮಾಡಲಿ ತಂದೆಯ ಈ ಮುಖಚರ್ಯೆ ಸದಾ ನನ್ನೊಂದಿಗಿದ್ದು ಕಾಡುತ್ತದೆ."

ಬಾರ್ಮೆನ್ ಬಿಟ್ಟು ಮ್ಯಾಂಚೆಸ್ಟರ್‌ಗೆ ಹೋದಾಗ ಏಂಗೆಲ್ಸ್‌ಗೆ ಸ್ವಲ್ಪ ನೆಮ್ಮದಿ; ತಂದೆಯ ಬಿಗಿನೋಟ ತಪ್ಪಿತಲ್ಲಾ ಎಂದು. ಜೊತೆಗೆ, ಅಲ್ಲಿಯ ಕಾರ್ಖಾನೆಯಲ್ಲಿ ಕೆಲಸಗಾರರ ಬವಣೆಯನ್ನು ಕಂಡು ಅದರ ಹಿಂದು-ಮುಂದುಗಳನ್ನು ವಿಚಾರ ಮಾಡಹೊರಟಾಗ ಹೊಸದೊಂದು ಪ್ರಪಂಚದ ದರ್ಶನ ಅವರಿಗೆ ದೊರೆತಂತಾಯ್ತು. ಆದರೆ ಮ್ಯಾಂಚೆಸ್ಟರ್‌ನ ಅನುಭವಗಳನ್ನು ಒಂದು ಪುಸ್ತಕದ ರೂಪದಲ್ಲಿ ಏಂಗೆಲ್ಸ್ ದಾಖಲಿಸಿದ್ದು ಬಾರ್ಮೆನ್ ನಲ್ಲೇ; ಸೆಪ್ಟೆಂಬರ್ ೧೮೪೪ರಲ್ಲಿ. ಪುಸ್ತಕದ ಹೆಸರು "ಇಂಗ್ಲೆಂಡಿನಲ್ಲಿ ದುಡಿಯುವ ವರ್ಗದವರ ಸ್ಥಿತಿಗತಿಗಳು." ಸಮಾಜಶಾಸ್ತ್ರೀಯ ಶಿಸ್ತಿನ ಅಧ್ಯಯನಗಳಿಗೆ ಈ ಗ್ರಂಥವನ್ನು ಮಾದರಿಯೆಂದು ಪರಿಗಣಿಸಲಾಗಿದೆ. ಆಂಗ್ಲ ಕಾದಂಬರಿಕಾರ ಚಾರ್ಲ್ಸ್ ಡಿಕಿನ್ಸನ ಕೃತಿಗಳನ್ನೋದಿದರೆ ೧೯ನೆಯ ಶತಮಾನದಲ್ಲಿ ಇಂಗ್ಲೆಂಡಿನ ದುಡಿಯುವ ಜನ ಎಷ್ಟು ಸಂಕಷ್ಟಕ್ಕೆ ಗುರಿಯಾಗಿದ್ದರೆಂಬುದು ತಿಳಿಯುತ್ತದೆ. ದಿನಕ್ಕೆ ಹದಿನಾಲ್ಕು ಗಂಟೆ ದುಡಿಯುವ ೧೨-೧೩ ವರ್ಷದ ಎಷ್ಟೋ ಮಕ್ಕಳಿಗೆ ಕಾರ್ಖಾನೆಯಲ್ಲಿಯೇ ಮನೆ. ದಿನದ ದುಡಿಮೆ ಮುಗಿದಾಗ ಅಲ್ಲೇ ಎಲ್ಲೋ ಮುದುರಿಕೊಳ್ಳುವುದು, ಮತ್ತೆ ಮಾರನೆಯ ಬೆಳಿಗ್ಗೆ ಕೆಲಸ ಆರಂಭಿಸುವುದು. ಬೆಳಕನ್ನೇ ಕಾಣದ ಗಣಿ ಕೆಲಸಗಾರರು; ಬೆಳಗಿನ ನಸುಕಿನಲ್ಲಿ ಗಣಿಯನ್ನು ಹೊಕ್ಕರೆ ಮನೆಗೆ ಬರುವಾಗ್ಗೆ ಕತ್ತಲು. ಹೀಗಾಗಿ ಅವರು ಮಕ್ಕಳನ್ನು ನೋಡಿ ನಲಿಯುವ ಪ್ರಶ್ನೆಯೇ ಇರಲಿಲ್ಲ; ಏಕೆಂದರೆ ಕೆಲಸಕ್ಕೆ ಹೊರಡುವಾಗ್ಗೆ ಮಕ್ಕಳಿನ್ನೂ ಎದ್ದಿರುವುದಿಲ್ಲ, ಹಿಂದಿರುಗುವ ವೇಳೆಗೆ ಮಲಗಿರುತ್ತವೆ. ಅಷ್ಟು ದುಡಿದರೂ ಕೂಲಿ ದೊರೆಯುತ್ತಿದ್ದದ್ದು ಅಷ್ಟಕ್ಕಷ್ಟೇ. ಕುಟುಂಬದ ವಸತಿ ಮತ್ತು ಆಹಾರ ಕನಿಷ್ಠ ಮಟ್ಟದ್ದು. ಮಕ್ಕಳಿಗೆ ವಿದ್ಯಾಭ್ಯಾಸದ ಹೆಸರೇ ಇಲ್ಲ. ಆರೋಗ್ಯವಂತೂ ಪ್ರಕೃತಿಯ ಕೃಪೆಗೆ ಬಿಟ್ಟಿದ್ದು. ಇವರ ದುಡಿಮೆಯ ಲಾಭವೆಲ್ಲಾ ಮಾಲಿಕರಿಗೆ. ಪ್ರಭುತ್ವದ ಕಾನೂನು ಅದೇ ಮಾಲಿಕರ ಅನುಕೂಲಕ್ಕೆ. ನ್ಯಾಯಾಲಯದ ಬಾಗಿಲು ಇವರಿಗೆಂದೂ ತೆರೆಯಲಿಲ್ಲ. ಇಷ್ಟೆಲ್ಲಾ ಹೀನಾಯ ಪರಿಸ್ಥಿತಿ ಇದ್ದರೂ ಅದನ್ನು ಸುಧಾರಿಸುವ ಪ್ರಯತ್ನಕ್ಕಿಂತಲೂ ಅದನ್ನು ಹೇಗೋ ಸಹಿಸಬೇಕೆಂಬ ಸಾಂತ್ವನವೊಂದೇ ಚರ್ಚಿನ ಧರ್ಮಗುರು ಕೊಡುತ್ತಿದ್ದುದು. ವಿದ್ಯಾವಂತ ಜನರೋ ಇದರತ್ತ ಕಣ್ಣೆತ್ತಿ ನೋಡುವಷ್ಟು ಸಹನೆಯನ್ನೂ ಹೊಂದಿರಲಿಲ್ಲ. ಕೆಲವು ಸಾಹಿತಿಗಳು ಮಾತ್ರ ಇವರ ದಾರುಣ ಜೀವನವನ್ನು ಸಹಾನುಭೂತಿಯಿಂದ ಚಿತ್ರಿಸಿದ್ದರು. ವಿಲಿಯಂ ಬ್ಲೇಕ್ ತನ್ನ ಅನೇಕ ಕವನಗಳಲ್ಲಿ ಔದ್ಯೋಗಿಕ ಕ್ರಾಂತಿಯು ಮಕ್ಕಳಿಗೆ ತಂದಿತ್ತ ಘೋರಶಾಪವನ್ನು ಸಾಕಷ್ಟು ಸಿಟ್ಟಿನಿಂದ ವಿವರಿಸಿದ್ದಾನೆ. ಮಾರ್ಕ್ಸ್ ಒಮ್ಮೆ ಹೇಳಿದ್ದುಂಟು: ಇಂಗ್ಲೆಂಡಿನಲ್ಲಿ ದುಡಿಯುವ ಜನ ಅನುಭವಿಸಿದ ಬವಣೆಯನ್ನು ಶ್ರೀಮತಿ ಗ್ಯಾಟ್‌ಸ್ಕೆಲ್ ಮುಂತಾದ ಕಾದಂಬರಿಕಾರರು ಅದ್ಭುತವಾಗಿ ಚಿತ್ರಿಸಿದ್ದಾರೆ, ಎಂದು. ಡಿಕಿನ್ಸ್, ಗ್ಯಾಟ್‌ಸ್ಕೆಲ್ ಮುಂತಾದವರು ಸಮಸ್ಯೆಯ ಅನೇಕ ಮುಖಗಳನ್ನು ತೆರೆದಿಟ್ಟರೆಂಬುದು ನಿಜ, ಆದರೆ ಅವರಾರೂ ಅದರ ಮೂಲಕ್ಕೆ

ಹೋಗಿ ಅದರ ಕಾರಣಗಳನ್ನು ಬಿಡಿಸಿ ಹೇಳಲಿಲ್ಲ. ಪರಿಹಾರವಂತೂ ದೂರದ ಮಾತೇ ಆಯಿತು. ಯಾರೋ ಒಬ್ಬ ಕೃಪಾಳು ಹೇಗೋ ಕಾಣಿಸಿಕೊಳ್ಳುತ್ತಾನೆ, ಅವನು ಕಷ್ಟದ ನಿವಾರಣೆ ಮಾಡುತ್ತಾನೆ. ಅಂತಹ ವ್ಯಕ್ತಿಗಳಿರಲಿಲ್ಲವೆಂದಲ್ಲ. ಆದರೆ, ಅದು ಸಾಮೂಹಿಕ ಪರಿಹಾರ ವಾಗುವುದಿಲ್ಲ. ದಯಾಳುವೊಬ್ಬ ಅವತರಿಸುವವರೆಗೆ ಕಾದು ಕುಳಿತಿರುವುದಷ್ಟೇ ದುಡಿದು ಬೆಂದುಹೋದ ಜೀವ ಮಾಡಬಹುದಾದ್ದು!

ಈ ಹಿನ್ನೆಲೆಯಲ್ಲಿ ಏಂಗೆಲ್ಸರ ಕೃತಿ ಹೊಸ ಅಲೆಯ ಹರಿಕಾರನಂತೆ ಮೂಡಿಬಂತು. ಬಂಡವಳಿಗ ಮಾಲಿಕರ ಪಾಪದ ಹೊರೆಯನ್ನು ತೂಗಿನೋಡುವ ದೃಷ್ಟಿಯಿಂದ ಬರೆದ ಗ್ರಂಥವಾಗಿರದೆ ಇದು ಅನನ್ಯ ವಿಶ್ಲೇಷಣಾತ್ಮಕ ಪದ್ಧತಿಯ ಚಿಂತನೆಯನ್ನು ಆಮೂಲಾಗ್ರ ವಾಗಿ ಮೈಗೂಡಿಸಿಕೊಂಡಿತ್ತು. ಒಂದು ನಿದರ್ಶನವಾಗಿ ಅಂದಿನ ಶೈಕ್ಷಣಿಕ ಪದ್ಧತಿಯ ಬಗ್ಗೆ ಏಂಗೆಲ್ಸ್ ಹೇಳಿರುವುದನ್ನು ಗಮನಿಸಬಹುದು: "ದುಡಿಯುವವರಿಗೆ ಬಂಡವಳಿಗನು ದಯಪಾಲಿಸುವ ಜೀವನದ ಅವಧಿ ಹೆಚ್ಚಿನದೇನೂ ಅಲ್ಲ. ಅವನ ದುಡಿಮೆಯ ಲಾಭ ಬಂಡವಳಿಗನಿಗೆ ದಕ್ಕುವ ವರೆಗೆ ಅವನು ಜೀವಂತವಾಗಿದ್ದರೆ ಸಾಕು. (ಆಮೇಲೆ ಆ ಮುದಿಗುದುರೆಯ ಹೊರೆ ಯಾರಿಗೆ ಬೇಕು!) ಆದ್ದರಿಂದ ಅವನಿಗೆ ಎಷ್ಟು ಶಿಕ್ಷಣ ನೀಡಲಾಗುತ್ತದೆಂಬುದು ಅಚ್ಚರಿ ಉಂಟುಮಾಡಬೇಕಾಗಿಲ್ಲ. ಬಂಡವಳಿಗನ ಹಿತಕ್ಕೆ ಎಷ್ಟು ಅವಶ್ಯಕವೋ ಅಷ್ಟು ಶಿಕ್ಷಣವನ್ನು ದುಡಿಮೆಗಾರನಿಗೆ ನೀಡಿದರೆ ಸಾಕು. ನಿಜಕ್ಕೂ ಅದೇನೂ ಬಹಳ ಹೆಚ್ಚಿನದಲ್ಲ. ಜನಸಂಖ್ಯೆಯ ಪ್ರಮಾಣಕ್ಕೆ ಹೋಲಿಸಿದರೆ ಇಂಗ್ಲೆಂಡಿನಲ್ಲಿ ಶಿಕ್ಷಣ ವನ್ನು ಬಹಳ ದೊಡ್ಡಮಟ್ಟದಲ್ಲಿ ಮಿತಗೊಳಿಸಲಾಗಿದೆ. ದುಡಿಯುವ ವರ್ಗದವರಿಗೆ ಲಭ್ಯ ವಿರುವ ಕೆಲವು ಶಾಖೆಗಳು ಅತ್ಯಂತ ಕಡಿಮೆ ಸಂಖ್ಯೆಯ ಜನರಿಗೆ ಮಾತ್ರವೇ ಸಾಕಾಗುತ್ತದೆ. ಅಲ್ಲದೆ, ಅವು ಕಳಪೆ ಮಟ್ಟದವು ಕೂಡ. ದುಡಿದು ಸುಣ್ಣವಾಗಿ ಬಂದವರೇ ಕೆಲವರು ಇಲ್ಲಿ ಉಪಾಧ್ಯಾಯರು; ಇಲ್ಲವೇ, ಜೀವನ ಹೊರೆಯಲು ಅನ್ಯಮಾರ್ಗ ತಿಳಿಯದೆ ಈ ಕೆಲಸಕ್ಕೆ ಬಂದಿರುವ ಅಪ್ರಯೋಜಕರು ಕೆಲವರು ಉಪಾಧ್ಯಾಯ ವೃತ್ತಿಯಲ್ಲಿದ್ದಾರೆ. ಅವರಿಗೆ ಅಧ್ಯಾಪಕರಾಗಲು ಅಗತ್ಯವಿರುವ ಪ್ರಾಥಮಿಕ ಜ್ಞಾನವೂ ಇಲ್ಲದಿರಬಹುದು; ನೈತಿಕ ಶಿಸ್ತನ್ನಂತೂ ಅವರು ಕೇಳಿಯೂ ತಿಳಿಯದವರು. ಅಂತಹವರು ಇನ್ನೆಂತಹ ಉಪಾಧ್ಯಾಯ ರಾದಾರು! ಇನ್ನು ಸಾರ್ವಜನಿಕ ಉಸ್ತುವಾರಿಯೆಂಬುದರ ಹೆಸರೂ ಇಲ್ಲ. ಹೀಗಿರುವಾಗ ಶಿಕ್ಷಣದ ಗತಿ ಏನಾಗಬಹುದು! ಇಲ್ಲೂ ಮುಕ್ತ ಸ್ಪರ್ಧೆಯದೇ ನಿರ್ಧಾರಕ ಅಂಶ. ಯಥಾಪ್ರಕಾರ, ಶ್ರೀಮಂತರು ಅದರಿಂದ ಲಾಭ ಪಡೆಯುತ್ತಾರೆ. ಬಡವರಿಗಾದರೋ ಸ್ಪರ್ಧೆ ಕೂಡ ಮುಕ್ತವಲ್ಲ; ಸರಿಯಾದ ತೀರ್ಮಾನ ಕೈಗೊಳ್ಳಲು ಅಗತ್ಯವಾದ ಪರಿಜ್ಞಾನ ಅವರಲ್ಲಿಲ್ಲ. ಅದರಿಂದಾಗಿ ಅನಪೇಕ್ಷಣೀಯ ಪರಿಣಾಮ ಅವರ ಬೆನ್ನೇರುತ್ತದೆ."

ನಮ್ಮಲ್ಲಿ ಇಂದಿಗೂ ವಿಪುಲವಾಗಿ ಚರ್ಚೆಗೆ ಬರುವ ವಿಷಯ ಎಲ್ಲ ಮಕ್ಕಳೂ ಏಕೆ ಶಾಲೆಗಳಿಗೆ ಹೋಗುತ್ತಿಲ್ಲ ಎಂಬುದು. ಕೆಲವರ ಪ್ರಕಾರ ಅದಕ್ಕೆ ಕಾರಣ ಅಶ್ರದ್ಧೆ, ಇಲ್ಲವೆ ತಂದೆ-ತಾಯಿಯರ ಅಜ್ಞಾನ, ಬೇಜವಾಬ್ದಾರಿತನ. ಅವರಿಗೆ ವಿದ್ಯೆಯ ಬೆಲೆ ಗೊತ್ತಿಲ್ಲ

ವೆಂಬುದು ಇನ್ನೊಂದು ವಿವರಣೆ. ಮಕ್ಕಳನ್ನು ದುಡಿಮೆಗೆ ಹಚ್ಚದಿದ್ದರೆ ಸಮಸ್ಯೆ ಬಗೆಹರಿಯುವುದೆಂದು ಮತ್ತೊಂದು ಅಮೋಘ ಸಂಶೋಧನೆ. ಇಂಗ್ಲಿಷ್ ಕಲಿಸುತ್ತೇವೆಂದು ಹೇಳಿದರೆ ಎಲ್ಲ ಮಕ್ಕಳೂ ಶಾಲೆಗೆ ಓಡಿಬರುತ್ತಾರೆಂಬ ನಿರೀಕ್ಷೆಯೂ ಉಂಟು. ಆದರೆ ಇವೆಲ್ಲಾ ಹೊರವಲಯದ ವೀಕ್ಷಣೆಗಳಾಗುತ್ತವೆಯೇ ವಿನಾ ಸಮಸ್ಯೆಯನ್ನು ಆಳವಾಗಿ ಒಳಹೊಕ್ಕು ವಿಶ್ಲೇಷಿಸುವ ಪ್ರಯತ್ನವಾಗುವುದಿಲ್ಲ. ಮಕ್ಕಳಿಗೆ ಆರ್ಥಿಕ ಕ್ಷೇತ್ರದಲ್ಲಿ ದುಡಿಮೆ ಅನಿವಾರ್ಯವಾಗುವುದು ಏಕೆ ಎಂಬ ಪ್ರಶ್ನೆಯನ್ನು ಹಾಕಿಕೊಂಡು ಎದುರಿಸದಿದ್ದರೆ ಪರಿಹಾರ ಮರೀಚಿಕೆಯ ಸ್ವರೂಪದ್ದೇ ಆಗಿರುತ್ತದೆ. ಅದರಿಂದ ಮುಕ್ತರಾಗಲು ಅವರ ಕುಟುಂಬದ ದುಡಿಮೆಗೆ ಹೆಚ್ಚಿನ ಆದಾಯ ದಕ್ಕುವಂತಾಗಬೇಕು, ಅಷ್ಟೆ. ಆದರೆ ಲಾಭಗಡುಕ ವ್ಯವಸ್ಥೆಯಲ್ಲಿ ಅದು ಸಾಧ್ಯವಾಗಿಲ್ಲ ಮತ್ತು ಮಕ್ಕಳ ದುಡಿಮೆ ತಪ್ಪಿಲ್ಲ. ಮಕ್ಕಳನ್ನು ಶಾಲೆಗೆ ಕಳಿಸದಿದ್ದರೆ ತಂದೆ-ತಾಯಂದಿರಿಗೆ ಶಿಕ್ಷೆ ವಿಧಿಸಬೇಕೆಂಬ ಶಾಸನ ಜಾರಿಗೆ ಬಂದರೂ ಸಮಸ್ಯೆ ಕೊನೆಗೊಳ್ಳುವುದಿಲ್ಲ. ಶಿಕ್ಷೆಯನ್ನು ಅನುಭವಿಸುವ ಹೊಸ ಸನ್ನಿವೇಶ ಅವರದಾಗುತ್ತದೆ, ಮಕ್ಕಳು ಶಾಲೆಗಳ ಹೊರಗೇ ಉಳಿಯುತ್ತಾರೆ. ಮಕ್ಕಳ ಊಟೋಪಚಾರ, ವಸತಿ, ಬಟ್ಟೆ ಮುಂತಾದ ಅಗತ್ಯಗಳನ್ನು ಸಮಾಜವು ಭರಿಸುವುದಾದರೆ ಅವರು ಯಾರದೋ ಕುರಿ ಕಾಯಲು ಹೋಗುವುದರ ಬದಲು ಶಾಲೆಗೇ ಹೋದಾರು! ಆದರೆ ನಮ್ಮ ೨೧ನೆಯ ಶತಮಾನದ ಅಸಾಧಾರಣ ರಾಷ್ಟ್ರೀಯ ನೀತಿಯ ಪ್ರಕಾರ ಶಿಕ್ಷಣ ಕ್ಷೇತ್ರದಲ್ಲಿ ಯಾರಿಗೂ ವಿಶೇಷ ಧನಸಹಾಯ ಅಥವಾ ಅನುಕೂಲ ನೀಡಬಾರದೆಂದು ವಿಶ್ವಬ್ಯಾಂಕ್ ನಿರ್ದೇಶನ ನೀಡಿದರೆ ಅದರ ಪಾಲನೆಯಾಗಬೇಕು! ಅಂದರೆ, ವಂಚಿತರು ಇನ್ನೂ ಹೆಚ್ಚಿನ ವಂಚನೆಗೆ ಗುರಿಯಾಗಬೇಕು. ಇಂತಹ ವ್ಯವಸ್ಥೆಯ ಮರ್ಮವನ್ನು ಹೊರಗೆಡಹಿದ್ದು ಏಂಗೆಲ್ಸರ ಕೃತಿಯ ಒಂದು ಅಂಗ. ಇಂತಹ ನೂರಾರು ಒಳನೋಟಗಳಿರುವ ಕೃತಿ “ಇಂಗ್ಲೆಂಡಿನಲ್ಲಿ ದುಡಿಯುವ ವರ್ಗದವರ ಸ್ಥಿತಿಗತಿಗಳು.”

ಈ ಕೃತಿಯುದ್ದಕ್ಕೂ ಎದ್ದುಕಾಣುವ ಇನ್ನೊಂದು ಅಂಶವೆಂದರೆ ಸಾಮಾಜಿಕ ಪ್ರಕ್ರಿಯೆಗಳಲ್ಲಿ ಅಡಗಿರುವ ಭೌತವಾದಿ ಪ್ರೇರಣೆ. ಬಂಡವಾಳಶಾಹಿ ಉತ್ಪಾದನಾ ವಿಧಾನದಲ್ಲಿ ದುಡಿಮೆಗೆ ದಕ್ಕುವ ಪ್ರತಿಫಲ ಯಾವಾಗಲೂ ಕಡಿಮೆ ಮಟ್ಟದಲ್ಲೇ ಉಳಿದು ಬಂಡವಳಿಗನ ಲಾಭಾಂಶ ಹೆಚ್ಚುತ್ತಿರುವುದು ಸಹಜವೆಂಬುದನ್ನೂ ಏಂಗೆಲ್ಸ್ ಇಲ್ಲಿ ಕಾಣಿಸಿದ್ದಾರೆ. ಹೀಗಿರುವಲ್ಲಿ ಸಮಾಜದ ಬೆಳವಣಿಗೆಯ ಹಾದಿ ಯಾವುದೆಂಬುದನ್ನು ವರ್ಗ ವಿರೋಧ ಮತ್ತು ವರ್ಗ ಹೋರಾಟಗಳು ನಿರ್ಧರಿಸುತ್ತವೆಂಬುದು ಕೃತಿಯ ಇನ್ನೊಂದು ಸೂಚನೆ. ನೂಲುವವರು, ನೇಯುವವರು, ಕಸೂತಿ ಕೆಲಸಗಾರರು, ಸಿಂಪಿಗರು, ಗಣಿ ಕೆಲಸಗಾರರು, ಕೃಷಿ ಕೂಲಿಯಾಳುಗಳು ಹೀಗೆ ಬೇರೆ ಬೇರೆ ವಿಭಾಗಗಳಿಗೆ ಸೇರಿದ ದುಡಿಯುವ ಜನರ ಜೀವನ ಮತ್ತು ಆಚರಣೆಗಳ ಸಮಗ್ರ ಗ್ರಹಿಕೆಯು ಇಲ್ಲಿದೆ. “೧೮೪೪ರ ಮುಂಚೆಯಾಗಲಿ ಆಮೇಲಾಗಲಿ ದುಡಿಯುವ ವರ್ಗದ ಬವಣೆಯ ಚಿತ್ರವನ್ನು ಅಷ್ಟು ನೈಜವಾಗಿ ಮತ್ತು ಸಾರಭೂತವಾಗಿ ನೀಡುವ ಬೇರೊಂದು ಕೃತಿ ನನಗೆ ತಿಳಿದಿಲ್ಲ” ಎಂದು ಲೆನಿನ್ ಒಮ್ಮೆ ಏಂಗೆಲ್ಸರ ಈ ಕೃತಿಯ ಮಹತ್ವವನ್ನು ಗುರುತಿಸಿದ್ದರು. ಕಾರ್ಮಿಕ ಸಂಘಟನೆಗಳ ಪಾತ್ರವನ್ನು ವಿವರಿಸುವ ಮೊಟ್ಟಮೊದಲ ಪುಸ್ತಕವಿದೆಂದು ಹೇಳಿದರೆ ತಪ್ಪಾಗಲಾರದು. ದುಡಿಯುವ

ಜನರ ಹಿತವನ್ನು ಕಾಪಾಡಲು ಮತ್ತು ಸಂವರ್ಧಿಸಲು ಈ ಸಂಘಟನೆಗಳು ಅಗತ್ಯವೆಂದು ಹೇಳುವುದರ ಜೊತೆಗೆ ಕಾರ್ಮಿಕರ ಐಕ್ಯತೆ ಮತ್ತು ಧೀರ ಹೋರಾಟಗಳಿಗೂ ಇದು ಸಾಧನ ವೆಂದು ಏಂಗೆಲ್ಸ್ ಇಲ್ಲಿ ಪ್ರತಿಪಾದಿಸಿದ್ದಾರೆ. ೧೮೯೨ರಲ್ಲಿ ಈ ಪುಸ್ತಕದ ಎರಡನೆಯ ಜರ್ಮನ್ ಆವೃತ್ತಿಯು ಪ್ರಕಟವಾಯಿತು. ಅದರ ಮುನ್ನುಡಿಯಲ್ಲಿ ಏಂಗೆಲ್ಸ್ ಆತ್ಮಾವ ಲೋಕನ ಮಾಡಿಕೊಂಡು ತಾನು ನುಡಿದಿದ್ದ ಭವಿಷ್ಯ ಎಷ್ಟರಮಟ್ಟಿಗೆ ನಿಜವಾಯಿತೆಂಬುದನ್ನು ವಿಮರ್ಶೆ ಮಾಡಿಕೊಂಡಿದ್ದಾರೆ. ಇಂಗ್ಲೆಂಡಿನ ಔದ್ಯಮಿಕ ಸಂಬಂಧಗಳು ಮತ್ತು ಸಾಮಾಜಿಕ ಬೆಳವಣಿಗೆಗಳನ್ನು ಕುರಿತಂತೆ ಏಂಗೆಲ್ಸ್ ನಿರೀಕ್ಷಿಸಿದ್ದ ಎಷ್ಟೋ ಬದಲಾವಣೆಗಳು ಉಂಟಾಗಿರಲಿಲ್ಲ. ಅವುಗಳನ್ನು ಪಟ್ಟಿಮಾಡಿ ಏಂಗೆಲ್ಸ್ ಬರೆದರು: "ನಾನು ಹೇಳಿದ್ದ ಅನೇಕ ಸಂಗತಿಗಳು ಘಟಿಸಲಿಲ್ಲವೆಂಬುದು ಆಶ್ಚರ್ಯವಲ್ಲ; ಆದರೆ, ಹೀಗಾಗುತ್ತದೆಂದು ನಾನು ನುಡಿದಿದ್ದ ಅದೆಷ್ಟೋ ಸಂಗತಿಗಳು ನಿಜವಾಯಿತೆಂಬುದು ಆಶ್ಚರ್ಯ."

ಈ ಪುಸ್ತಕದಲ್ಲಿ ಅಲ್ಲಲ್ಲಿ ಬರುವ ಕೆಲವು ವಿಮರ್ಶಾತ್ಮಕ ಮಾತುಗಳನ್ನು ಟಿಪ್ಪಣಿಯ ರೂಪದಲ್ಲಿ ನೀಡಿ ಪ್ರಸ್ತುತ ಅಧ್ಯಾಯವನ್ನು ಮುಕ್ತಾಯ ಮಾಡಬಹುದು.

❖ ಶಾಲೆಗೆ ಹೋಗಬೇಕೆಂಬ ಕಡ್ಡಾಯ ಮಕ್ಕಳಿಗಿಲ್ಲ. ೧೮೪೩ರಲ್ಲಿ ಸರ್ಕಾರದ ಸಚಿವಾಲಯವು ಅದನ್ನು ಕಡ್ಡಾಯಗೊಳಿಸಬೇಕೆಂದಿತ್ತು. ಕಾರ್ಖಾನೆಗಳಲ್ಲೇ ಸೂಕ್ತ ಸೌಲಭ್ಯ ಒದಗಿಸಬೇಕೆಂದು ಅದರ ಇಂಗಿತ, ಆದರೆ ಮಾಲಿಕರು ಅದನ್ನು ತೀವ್ರವಾಗಿ ವಿರೋಧಿಸಿದರು. ಕಾರ್ಮಿಕರು ಮಾತ್ರ ಅದರ ಪರವಾಗಿ ನಿಂತರು. ಇಡೀ ವಾರ ಮೈಮುರಿದು ದುಡಿದ ಮಕ್ಕಳು ಶಾಲೆಗಳ ಲಾಭ ಪಡೆಯಬಹುದೇ! ಸಂಜೆ ಶಾಲೆಗಳ ಯೋಜನೆಯೂ ಬಂದಷ್ಟೇ ಶೀಘ್ರವಾಗಿ ಮುರಿದುಬಿತ್ತು. ದಿನವಿಡೀ ಕೆಲಸ ಮಾಡಿದ್ದ ಮಕ್ಕಳಿಗೆ ಸಂಜೆಯ ಶಾಲೆ ಫಲ ನೀಡಬೇಕೆಂಬ ನಿರೀಕ್ಷೆಯೇ ತಪ್ಪು. ಹನ್ನೆರಡು ಗಂಟೆ ಕೆಲಸ ಮಾಡಿದ ನಂತರ ಶಾಲೆಗೆ ಹೋದ ಮಕ್ಕಳು ಅಲ್ಲೇ ನಿದ್ದೆ ಮಾಡಿದರು. ಇನ್ನು, ಭಾನುವಾರದ ಶಾಲೆಗಳ ಯೋಜನೆ: ಅವು ಬಹುಮಟ್ಟಿಗೆ ಖಾಲಿ ಇರುತ್ತಿದ್ದವು. ಅಧ್ಯಾಪಕರೂ ಇಲ್ಲ. ಬೇರೆ ದಿನಗಳಲ್ಲಿ ಸ್ವಲ್ಪ ಕಲಿತಿರುವವರಿಗೆ ಮಾತ್ರವೇ ಅನುಕೂಲವಾಗಬಹುದಾದಂತಹವು ಈ ಭಾನುವಾರದ ಶಾಲೆಗಳು. ...ಚರ್ಚು ಗಳು ನಡೆಸುವ ಶಾಲೆಗಳಲ್ಲಿ ಶಿಕ್ಷಣವೆಂದರೆ ಧಾರ್ಮಿಕ ಜಡ್ಡುತನದ ಪಾಠಗಳು. ಏನೇನೋ ಕಂಠಪಾಠ ಮಾಡುವುದೇ ಅದರ ವೈಶಿಷ್ಟ್ಯ. ತಾರ್ಕಿಕ ಮತ್ತು ನೈತಿಕ ತರಬೇತಿಯ ಬದಲು ಅಲ್ಲಿ ಪರಮತ ದ್ವೇಷದ ಬೀಜಗಳನ್ನು ಬಿತ್ತಲಾಗುತ್ತದೆ. ದುಡಿಯುವ ವರ್ಗವು ಧರ್ಮ ನಿರಪೇಕ್ಷ ಶಿಕ್ಷಣವನ್ನು ನೀಡುವಂತೆ ಶಾಸನ ಮಾಡಬೇಕೆಂದು ಪಾರ್ಲಿಮೆಂಟನ್ನು ಹಲವು ಬಾರಿ ಆಗ್ರಹಿಸಿದೆ. ಆದರೆ ಸರ್ಕಾರದ ಸಚಿವನು ಬಂಡವಳಿಗರ ವಿಧೇಯ ಆಳಿನಂತೆ ವರ್ತಿಸು ತ್ತಾನೆ. ಬಂಡವಳಿಗರಲ್ಲಿ ಅನೇಕ ಧಾರ್ಮಿಕ ಪಂಗಡಗಳಿರುವಂತೆ ಶಿಕ್ಷಣದಲ್ಲೂ ಆಯಾಯಾ ಪಂಗಡಕ್ಕೆ ಸೀಮಿತವಾದ ಶಿಕ್ಷಣ ನೀಡಬೇಕೆಂಬ ವಿಧೇಯಕವನ್ನು ಆತ ಮಂಡಿಸುತ್ತಾನೆ.

❖ ಶಾಲೆಯಲ್ಲಿ ನೀಡಲಾಗಿಲ್ಲದ ನೈತಿಕ ತರಬೇತಿಯು ದುಡಿಮೆಗಾರನಿಗೆ ಜೀವನದ ಬೇರೆ ಸನ್ನಿವೇಶಗಳಲ್ಲಿ ದೊರೆಯುವುದಾದರೂ ಹೇಗೆ? ಬಂಡವಳಿಗನು ಪರಿಭಾವಿಸಿಕೊಳ್ಳುವ

ನೈತಿಕತೆಯೇ ನಿಜವಾದ ನೈತಿಕತೆ ಎಂದು ನಂಬಿಸಲಾಗುತ್ತದೆ. ಅವನ ಪರಿಸರ ಮತ್ತು ಪರಿಸ್ಥಿತಿಗಳು ದುಡಿಮೆಗಾರನನ್ನು ಅನೈತಿಕತೆಯತ್ತ ದೂಡಿದರೆ ಆಶ್ಚರ್ಯವಿಲ್ಲ. ಅವನು ಬಡವ, ಜೀವನ ಅವನಿಗೆ ರಮ್ಯವಾದದ್ದೇನನ್ನೂ ಕೊಡುವುದಿಲ್ಲ, ಜೀವನದಲ್ಲಿ ಅವನಿಗೆ ಸಂತೋಷವೆಂಬುದಿಲ್ಲ. ಹೀಗಾಗಿ ಕಾನೂನಿನ ಶಿಕ್ಷೆಯೆಂಬುದು ಅವನಿಗೆ ಭಯವನ್ನೇನೂ ಹುಟ್ಟಿಸುವುದಿಲ್ಲ. ತನ್ನ ಆಸೆಗಳನ್ನು ಅದುಮಿಟ್ಟುಕೊಳ್ಳಬೇಕಾದ ಅವಶ್ಯಕತೆ ಅವನಿಗಿಲ್ಲ. "ಆಸ್ತಿಯು ಪವಿತ್ರ" ಎಂಬ ಮಾತು ಬಂಡವಳಿಗನ ಕಿವಿಗೆ ಅಮೃತಪ್ರಾಯವಾದರೆ, ಆಸ್ತಿಯೇ ಇಲ್ಲದವನಿಗೆ ಆ ಮಾತು ಸತ್ತ ಪದಗಳಾಗಿ ಕಾಣುತ್ತವೆ. ಈ ಪ್ರಪಂಚದ ದೇವರು ದುಡ್ಡು. ದುಡಿಯುವವನ ದುಡ್ಡನ್ನು ಬಂಡವಳಿಗ ಕಿತ್ತುಕೊಂಡುಬಿಟ್ಟಿದ್ದಾನೆ. ಆದ್ದರಿಂದ ಒಂದರ್ಥದಲ್ಲಿ ಆಗಲೆ ದುಡಿಯುವವನಿಗೆ ದೇವರಿಲ್ಲ. ಇನ್ನು ಪ್ರಾಪಂಚಿಕ ದೇವರಾದ ದುಡ್ಡಿನ ಪಾವಿತ್ರ್ಯ ಮತ್ತು ಅಧಿಕಾರವನ್ನು ದುಡಿಯುವವನು ಗೌರವಿಸಬೇಕೇಕೆ?

❖ ಬಂಡವಳಿಗರು ದುಡಿಯುವ ವರ್ಗಕ್ಕೆ ಕಲ್ಪಿಸಿಕೊಟ್ಟಿರುವ ಎರಡು ದುಷ್ಟ ಸೌಲಭ್ಯಗಳೆಂದರೆ ಕುಡಿತ ಮತ್ತು ಲೈಂಗಿಕತೆ. ಬೇರೆಷ್ಟೋ ದುರ್ಭರ ಕಷ್ಟಗಳನ್ನು ಹೇರಿಸಿಕೊಂಡಿರುವ ದುಡಿಯುವ ವರ್ಗ ಈ ಎರಡು ಸೌಲಭ್ಯಗಳಿಗೆ ಅತಿಯಾಗಿ ಜೋತುಬೀಳುವ ಚಾಳಿ ಬೆಳೆಸಿಕೊಂಡಿದೆ. ಮೃಗೀಯ ಜೀವನದ ಕಟ್ಟುಪಾಡುಗಳಿಂದ ಬಂಧನಕ್ಕೆ ಸಿಲುಕಿರುವ ದುಡಿಯುವ ವರ್ಗಕ್ಕಿರುವ ಸಾಧ್ಯತೆಗಳು ಎರಡು: ಮೃಗತ್ವಕ್ಕೆ ಎದುರಾಗಿ ಬಂಡೇಳುವುದು ಇಲ್ಲವೇ ಅದಕ್ಕೆ ಮಣಿದು ಜೋತುಬೀಳುವುದು. ...ಒಂದು ವರ್ಗವು ತನ್ನೆಲ್ಲ ದುಡಿಮೆಯಿಂದ ಕನಿಷ್ಠ ಸುಖವನ್ನು ಪಡೆಯುವಷ್ಟು ಕೂಲಿಯನ್ನೂ ಸಂಪಾದಿಸಲಾಗದಿದ್ದರೆ ಅದು ಆಯ್ದುಕೊಳ್ಳುವ ಸೌಖ್ಯ ಇನ್ನಾವ ತೆರನದ್ದಾಗಿರಲು ಸಾಧ್ಯ?

❖ ತಾಯಂದಿರು ಅತಿಹೆಚ್ಚಿನ ದುಡಿಮೆಯಲ್ಲಿ ತೊಡಗಬೇಕಾದಾಗ ಅವರ ಮಕ್ಕಳನ್ನು ಎಲ್ಲಿ ಬಿಡಬೇಕು? ಮಕ್ಕಳಿಗೆ ಮದ್ದುಣಿಸುವ ಅಭ್ಯಾಸ ಹುಟ್ಟಿಕೊಂಡಿರುವುದು ಇದರಿಂದ. ಮ್ಯಾಂಚೆಸ್ಟರ್‌ನ ಪ್ರಮುಖ ಕುಲಸಚಿವ ಡಾ. ಜಾನ್ಸ್ ಪ್ರಕಾರ ಮಕ್ಕಳು ಕಂಪನದಿಂದ ಸಾಯುವುದು ಈ ಕಾರಣದಿಂದ. ಹೆಂಡತಿಯು ಕೆಲಸಕ್ಕೆ ಹೋಗಬೇಕಾದಾಗ ಅನಿವಾರ್ಯವಾಗಿ ಕುಟುಂಬದಲ್ಲಿ ಛಿದ್ರವು ಕಾಣಿಸಿಕೊಳ್ಳುತ್ತದೆ. ನಮ್ಮ ಸಮಾಜವು ಕುಟುಂಬವನ್ನು ಆಧರಿಸಿದ ಘಟಕವಾಗಿಯೇ ಉಳಿದಿರುವಾಗ ಮಗುವಿನ ತಾಯಿಗೆ ಕಂದನನ್ನು ನೋಡಿಕೊಳ್ಳಲು ವೇಳೆಯಿಲ್ಲದಾಗಿದೆ. ಆ ಮಗುವಿನ ಪೋಷಣೆಗೆ ಸಮಾಜವು ಅನ್ಯ ವ್ಯವಸ್ಥೆಯನ್ನು ಕಲ್ಪಿಸಿಲ್ಲ. ಅಂತಹ ಮಗುವಿನ ಭವಿಷ್ಯ ಹೇಗೆ ರೂಪುಗೊಳ್ಳುತ್ತದೆ? ಕುಟುಂಬದಲ್ಲಿ ತಂದೆಯು ವಹಿಸುವ ಜವಾಬ್ದಾರಿ ಎಂಥದು? ಇತ್ತ ಕಡೆ ದುಡಿಮೆಯಿಂದ ಸರಿಯಾದ ಸಂಪಾದನೆಯೂ ಇಲ್ಲ, ಅತ್ತ ಕಡೆ ಮಕ್ಕಳ ಪಾಲನೆಯಲ್ಲೂ ಭಾಗವಹಿಸುವುದಿಲ್ಲ. ಗಂಡ-ಹೆಂಡಿರಿಬ್ಬರೂ ತಮ್ಮ ತಮ್ಮ ಲಿಂಗಸ್ವಭಾವವನ್ನು ಕಳೆದುಕೊಂಡೂ ಇಲ್ಲ, ಉಳಿಸಿಕೊಂಡೂ ಇಲ್ಲ. ಇಬ್ಬರ ಬೆಳವಣಿಗೆಗೂ ಘಾತುಕವಾಗುವ ಈ ಸನ್ನಿವೇಶವು ಮಾನವಜನಾಂಗಕ್ಕೆ ಮಾರಕವಾದದ್ದು. ತನ್ನ ಮತ್ತು ಭವಿಷ್ಯದ ಒಳಿತನ್ನು ಸಾಧಿಸಹೊರಟು ನಮ್ಮ ನಾಗರಿಕತೆ ಯಶಸ್ವಿಯಾಗಿರುವುದು

ಹೀಗೆ! ಮಾನವ ಜನಾಂಗದ ಬಗ್ಗೆ ಭ್ರಮೆಯನ್ನಿಟ್ಟುಕೊಳ್ಳುವುದೇ ಸರಿಯಲ್ಲವೆನಿಸಿಬಿಡುತ್ತದೆ. ಇದರರ್ಥ ಇಷ್ಟೆ: ಮಾನವ ಸಮಾಜವು ಈವರೆಗೆ ಸರಿಯಾದ ದಿಕ್ಕಿನಲ್ಲಿ ಮುನ್ನಡೆದು ತನ್ನ ಏಳಿಗೆಯನ್ನು ಸಾಧಿಸಿಕೊಳ್ಳುವ ಯತ್ನ ಮಾಡಿಲ್ಲ. ಇಂದು ಲಿಂಗ ಪ್ರತ್ಯೇಕತೆಯು ತಿರುಗು ಮುರುಗಾಗಿದೆ ಎನ್ನುವುದು ಏನೂ ತೋರಿಸುತ್ತದೆಯೆಂದರೆ ಮೊದಲಿಂದಲೂ ನಾವು ಲಿಂಗ ಭೇದವನ್ನು ತಪ್ಪಾಗಿಯೇ ಅರ್ಥೈಸುತ್ತಾ ಬಂದಿದ್ದೇವೆ ಎಂಬುದನ್ನು. ಇಂದಿನ ಕಾರ್ಖಾನೆಗಳ ಪದ್ಧತಿಯಿಂದಾಗಿ ಹೆಂಡತಿಯು ಗಂಡನ ಮೇಲೆ ಅಧಿಕಾರ ಸ್ಥಾಪಿಸಿಕೊಳ್ಳುವುದು ಅಸ್ವಾಭಾವಿಕ ವೆನ್ನುವುದಾದರೆ, ಹಿಂದಿನಿಂದ ಬಂದಿರುವಂತೆ ಹೆಂಡತಿಯ ಮೇಲಿನ ಗಂಡನ ಅನಿರ್ಬಂಧಿತ ಅಧಿಕಾರವೂ ಅಸ್ವಾಭಾವಿಕವೇ ಎನ್ನಬೇಕು.

❖ ೧೮೩೮ರ ಆರಂಭದ ದಿನಗಳಿಂದಲೂ ಚಾರ್ಟಿಸ್ಟರು ಪ್ರಮುಖವಾಗಿ ದುಡಿಯುವ ಜನರ ನಡುವೆಯೇ ಚಳುವಳಿಯನ್ನು ನಡೆಸುತ್ತಿದ್ದುದು. ಆ ಚಳುವಳಿಯ ನೇತಾರರಲ್ಲಿ ಒಬ್ಬನಾದ ಸ್ಟೀಫನ್ಸ್ ಎಂಬಾತ ಮೆಥಡಿಸ್ಟ್ ಚರ್ಚಿನ ಒಬ್ಬ ಪಾದ್ರಿ. ಆತ ದುಡಿಯುವ ಜನರು ಸಶಸ್ತ್ರ ಹೋರಾಟದಲ್ಲಿ ತೊಡಗಬೇಕೆಂದು ಹೇಳುತ್ತಾ ಫ್ರಾನ್ಸಿನ ಕ್ರಾಂತಿಯ ವೇಳೆ ಯಲ್ಲಿ ಜನಸಾಮಾನ್ಯರು ಬಳಸುತ್ತಿದ್ದಂತಹ ಆಯುಧಗಳನ್ನು ಸಂಗ್ರಹ ಮಾಡುತ್ತಿದ್ದ. ೧೮೩೮ರಲ್ಲಿ ಮ್ಯಾಂಚೆಸ್ಟರಿನ ದುಡಿಯುವ ಜನರನ್ನುದ್ದೇಶಿಸಿ ಅವನು ಹೇಳಿದ್ದಿದು: "ಸರ್ಕಾರದ ಪ್ರಾಬಲ್ಯವನ್ನು ಕಂಡು ನೀವು ಅಂಜಬೇಕಾಗಿಲ್ಲ. ಅವರ ಸೈನಿಕರು, ಬಂದೂಕು ಗಳು, ಮದ್ದು-ಗುಂಡುಗಳು ಇರುವುದೇ ನಿಮ್ಮನ್ನು ಹತೋಟಿಯಲ್ಲಿಟ್ಟುಕೊಂಡು ಹಿಂಸಿಸುವು ದಕ್ಕಾಗಿ. ಅದೆಲ್ಲಕ್ಕಿಂತಲೂ ಪ್ರಬಲವಾದ ಅಸ್ತ್ರವೊಂದು ನಿಮ್ಮಲ್ಲಿದೆ. ಅದರ ಮುಂದೆ ಬಂದೂಕು ಮತ್ತು ಮದ್ದು-ಗುಂಡುಗಳ ಆಟ ನಡೆಯುವುದಿಲ್ಲ. ಹತ್ತು ವರ್ಷದ ಬಾಲಕ ಕೂಡ ಅದನ್ನು ಪ್ರಯೋಗಿಸಬಲ್ಲ. ಎರಡು ಬೆಂಕಿಕಡ್ಡಿ ಮತ್ತು ಒಂದಷ್ಟು ಒಣಹುಲ್ಲು ನಿಮ್ಮ ಕೈಗೆ ತೆಗೆದುಕೊಳ್ಳಿ, ಈ ಸರ್ಕಾರ ಮತ್ತು ಅದರ ಸಾವಿರಾರು ಸೈನಿಕರು ಅದೇನು ಮಾಡುತ್ತಾರೋ ನೋಡಿಯೇಬಿಡೋಣ. ನಿಮ್ಮ ಒಂದು ಆಯುಧವನ್ನು ಸರಿಯಾಗಿ ಬಳಸಿ ದರೆ ಅವರೆಲ್ಲಾ ತತ್ತರಿಸಿಹೋಗುತ್ತಾರೆ."

ಅದೇ ವರ್ಷದ ಆರಂಭದಲ್ಲಿ ಚಾರ್ಟಿಸ್ಟ್ ಚಳುವಳಿಯ ಸಾಮಾಜಿಕ ಆಯಾಮವು ಸ್ಪಷ್ಟವಾಗಿ ಪ್ರಕಟಗೊಂಡಿತು. ಅದೇ ಸ್ಟೀಫನ್ಸ್ ಇಪ್ಪತ್ತು ಸಾವಿರ ದುಡಿಮೆಗಾರರ ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಮ್ಯಾಂಚೆಸ್ಟರಿನ ಕೆರ್ಸಾಲ್ ಮೂರ್ ಎಂಬಲ್ಲಿ ಗುಡುಗಿದ: "ಸ್ನೇಹಿತರೇ, ಚಾರ್ಟಿಸ್ಟ್ ಚಳುವಳಿಯೆಂದರೆ ನಿಮ್ಮ ಮತದಾನದ ಹಕ್ಕನ್ನು ಪಡೆಯುವುದಕ್ಕಾಗಿ ಒಂದು ರಾಜಕೀಯ ಚಳುವಳಿಯಷ್ಟೇ ಅಲ್ಲ. ಅದು ತಟ್ಟೆ-ರೊಟ್ಟಿಯ ಪ್ರಶ್ನೆ. ಚಾರ್ಟರ್ ಎಂದರೆ ಒಂದು ಒಳ್ಳೆಯ ಮನೆ, ಒಳ್ಳೆಯ ಆಹಾರ, ಪಾನೀಯ, ಏಳಿಗೆ ಮತ್ತು ಕಡಿಮೆ ಪ್ರಮಾಣದ ದುಡಿಮೆಯ ಕಾಲ."

❑❑

೬

ಕಮ್ಯುನಿಸ್ಟ್ ಪ್ರಣಾಲಿಕೆ

೧೮೪೭ರ ಜೂನ್ ೨ರಂದು ಲಂಡನ್ನಿನಲ್ಲಿ ಒಂದು ಅಧಿವೇಶನ ನಡೆಯಿತು. ಕಮ್ಯುನಿಸ್ಟ್ ಪಂಗಡಗಳ ಮೊದಲ ಜಂಟಿ ಸಭೆ ಇದಾಗಿತ್ತು. ಹಣದ ಮುಗ್ಗಟ್ಟಿನಿಂದಾಗಿ ಮಾರ್ಕ್ಸ್ ಈ ಸಭೆಗೆ ಬಂದಿರಲಿಲ್ಲ. ಆದರೆ ಏಂಗೆಲ್ಸ್ ಫ್ರಾನ್ಸಿನ ಸದಸ್ಯ ಗಣದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಇಡೀ ಅಧಿವೇಶನ ದಲ್ಲಿ ಏಂಗೆಲ್ಸ್ ಪ್ರಮುಖ ಪಾತ್ರ ವಹಿಸಿ ಮಾರ್ಗನಿರ್ದೇಶಕ ನಿರ್ಣಯಗಳನ್ನು ಮಂಡಿಸಿದರು. ಮುಂದಿನ ಕಮ್ಯುನಿಸ್ಟ್ ಚಳುವಳಿಗಳಿಗೆ ಈ ನಿರ್ಣಯಗಳು ಭದ್ರವಾದ ಬುನಾದಿಯನ್ನು ಹಾಕಿಕೊಟ್ಟವು. ನಿರ್ದಿಷ್ಟ ಅವಧಿಯಲ್ಲಿ ಅಧಿವೇಶನಗಳು ನೆಡೆಯುತ್ತಿರಬೇಕು, ಚಳುವಳಿಯ ಹಾದಿಯನ್ನು ರೂಪಿಸುವ ಜವಾಬ್ದಾರಿ ಅಂತಿಮವಾಗಿ ಅಧಿವೇಶನದ್ದಾಗಬೇಕು, ಕೇಂದ್ರೀಯ ಸಮಿತಿಯೊಂದನ್ನು ರಚಿಸಿ ಅದು ಎಲ್ಲಿದ್ದುಕೊಂಡು ಕಾರ್ಯ ನಿರ್ವಹಿಸಬೇಕು ಎಂಬ ತೀರ್ಮಾನವನ್ನು ಅಧಿವೇಶನ ಕೈಗೊಳ್ಳ ಬೇಕು, ಎಂಬಿತ್ಯಾದಿ ನಿರ್ಣಯಗಳನ್ನು ಅಧಿವೇಶನವು ಸ್ವೀಕರಿ ಸಿತು. ಹಲವು ದೇಶಗಳಲ್ಲಿ ಆವರೆಗೆ ಕಮ್ಯುನಿಸ್ಟ್ ಚಳುವಳಿಗಳು ಗುಟ್ಟಾಗಿ ಸಂಘಟಿಸಲ್ಪಡುತ್ತಿದ್ದವು. ಏಂಗೆಲ್ಸ್ ನೇತೃತ್ವದಲ್ಲಿ, ಚಳುವಳಿಯು ಬಹಿರಂಗವಾಗಿರಬೇಕು, ಪ್ರಜಾಸತ್ತಾತ್ಮಕ

ವಾಗಿರಬೇಕು ಎಂಬ ನಿರ್ಧಾರವನ್ನು ಅಧಿವೇಶನವು ಮೊಟ್ಟಮೊದಲ ಬಾರಿಗೆ ಅಂಗೀಕರಿಸಿತು. ಆದರೂ ಕಮ್ಯುನಿಸ್ಟ್ ತಂಡಗಳ ಗುರಿಯನ್ನು ಇನ್ನೂ ಸ್ಪಷ್ಟವಾಗಿ ಗುರಿತಿಸಲಾಗಿರಲಿಲ್ಲ. ಅಧಿವೇಶನಕ್ಕೆ ಮುನ್ನ ಇದ್ದ ಘೋಷಣೆ "ಮಾನವರೆಲ್ಲಾ ಸೋದರರು" ಎಂಬುದು; ಅದನ್ನು "ಎಲ್ಲ ದೇಶದ ದುಡಿಯುವ ಜನರೇ, ಒಂದಾಗಿ" ಎಂದು ಅಧಿವೇಶನವು ಮಾರ್ಪಡಿಸಿತು. ಅಂದರೆ, ವರ್ಗ ಭಿನ್ನತೆ ಮತ್ತು ವರ್ಗ ಹೋರಾಟಗಳನ್ನು ಯಾವ ಮುಚ್ಚುಮರೆಯೂ ಇಲ್ಲದೆ ಅಂಗೀಕರಿಸಲಾಯಿತು, ಘೋಷಿಸಲಾಯಿತು.

ಕಮ್ಯುನಿಸ್ಟ್ ಚಳುವಳಿಯ ಉದ್ದೇಶಗಳನ್ನು ತಿಳಿಯಪಡಿಸುವಂತಹ ಒಂದು ಪ್ರಶ್ನೋತ್ತರ ರೂಪದ ಕರಡನ್ನು ಏಂಗೆಲ್ಸ್ ಸಿದ್ಧಪಡಿಸಿದ್ದರು. ಅದನ್ನು "ಕಮ್ಯುನಿಸ್ಟ್ ಧೋರಣೆಯ ಜ್ಞಾಪನಾಪತ್ರ" ಎಂದು ಕರೆಯಲಾಗಿತ್ತು. ಸಾಮಾಜಿಕ ಬೆಳವಣಿಗೆಯ ರೂಪುರೇಷೆಗಳನ್ನು ಚಾರಿತ್ರಿಕ ಭೌತವಾದೀ ನೆಲೆಯಲ್ಲಿ ನಿರೂಪಿಸುವ ಈ ಪ್ರಶ್ನೋತ್ತರ ಮಾಲೆಯು ದುಡಿಯುವ ವರ್ಗದ ವಿಕಾಸದ ಚರಿತ್ರೆಯನ್ನು ಒಳಗೊಂಡಿತ್ತು. ಆಧುನಿಕ ಕಾರ್ಮಿಕ ವರ್ಗದ ವ್ಯಕ್ತಿಯು ಹಿಂದಿನ ಗುಲಾಮ, ತೊತ್ತಿನ ಆಳು, ಕುಶಲಕರ್ಮಿ, ಇವರುಗಳಿಗಿಂತ ಭಿನ್ನವಾಗಿ ಬಂಡವಾಳಶಾಹಿ ವ್ಯವಸ್ಥೆಯ ಎದುರು ಹೋರಾಟಕ್ಕೆ ನಿಂತಿರುವವನು, ಎಂದು ವಿವರಿಸ ಲಾಗಿತ್ತು. ಸಾರ್ವಜನಿಕರ ದುಡಿಮೆಯಿಂದ ಉತ್ಪನ್ನವಾದ ವಸ್ತುಗಳು ಖಾಸಗಿ ಆಸ್ತಿಯಾಗಿ ಮಾರ್ಪಟ್ಟಿರುವುದು ಬಂಡವಾಳಶಾಹಿಯ ಒಂದು ಲಕ್ಷಣ. ಆ ಆಸ್ತಿಯನ್ನು ಸಾರ್ವಜನಿಕ ಆಸ್ತಿಯನ್ನಾಗಿ ಪರಿವರ್ತಿಸಲು ಒಂದು ಕ್ರಾಂತಿಕಾರಿ ಹೋರಾಟದ ಅವಶ್ಯಕತೆ ಇದೆಯೆಂದು ಪ್ರತಿಪಾದಿಸಲಾಗಿತ್ತು ಮತ್ತು ಕ್ರಾಂತಿಯ ನಂತರದ ಉಪಕ್ರಮಗಳು ಹೇಗಿರಬೇಕೆಂಬುದನ್ನು ಸಹ ಸೂಚಿಸಲಾಗಿತ್ತು.

ಲಂಡನ್ ಅಧಿವೇಶನದ ತರುವಾಯದಲ್ಲಿ ಈ ಧೋರಣಾಪತ್ರವನ್ನು ಕೇಂದ್ರ ಸಮಿತಿಯು ಎಲ್ಲಾ ಘಟಕಗಳಿಗೂ ಕಳಿಸಿ ಚರ್ಚೆಗೆ ಆಹ್ವಾನ ನೀಡಿತು. ಹಾಗೆ ಪ್ಯಾರಿಸ್ಸಿನ ಘಟಕದಲ್ಲಿ ಚರ್ಚೆ ನಡೆದಾಗ ಮೋಸೆಸ್ ಹೆಸ್ ಎಂಬಾತ ಏಂಗೆಲ್ಸರ ಕರಡನ್ನು ಕಟುವಾಗಿ ಟೀಕಿಸಿದ. ಅದಕ್ಕೆ ಏಂಗೆಲ್ಸ್ ಪ್ರತಿಕ್ರಿಯಿಸಿದ ನಂತರ ಘಟಕವು ಒಂದು ಸೂಚನೆ ನೀಡಿ ಏಂಗೆಲ್ಸ್ ಹೊಸದೊಂದು ಘೋಷಣಾಪತ್ರವನ್ನು ಸಿದ್ಧಪಡಿಸಬೇಕೆಂದು ತಿಳಿಸಿತು. ಆಗ "ಕಮ್ಯುನಿಸ್ಟ್ ಸಿದ್ಧಾಂತದ ತತ್ತ್ವಗಳು" ಎಂಬ ಹೊತ್ತಿಗೆಯನ್ನು ಮತ್ತೆ ಪ್ರಶ್ನೋತ್ತರ ಮಾದರಿಯಲ್ಲೇ ಬರೆಯಲಾಯಿತು. ೧೮೪೭ರ ನವಂಬರ್‌ನಲ್ಲಿ ಮಾರ್ಕ್ಸ್‌ಗೆ ಬರೆದ ಪತ್ರದಲ್ಲಿ ಈ ಮಾದರಿ ಸರಿಹೊಂದುವುದಿಲ್ಲವೆಂದು ತಿಳಿಸಿದ ಏಂಗೆಲ್ಸ್ ಅದಕ್ಕೆ "ಪ್ರಣಾಲಿಕೆ" ಎಂಬ ಹೆಸರು ಸೂಕ್ತವಾಗಿರುತ್ತದೆಂದು ಸೂಚಿಸಿದರು. ಹೊತ್ತಿಗೆಯು ಕಮ್ಯುನಿಸಂ ಎಂದರೇನೆಂಬುದನ್ನು ವಿವರಿಸಿ ನಂತರ ಕಾರ್ಮಿಕ ವರ್ಗದ ಉಗಮ ಮತ್ತು ವಿಕಾಸವನ್ನು ಚರ್ಚಿಸುತ್ತದೆ. ಬಂಡವಾಳ ಶಾಹಿಗಿಂತಲೂ ಹಿಂದಿನ ಕಾಲದ ದುಡಿಯುವ ಜನರಿಂದ ಭಿನ್ನವಾಗಿ ಕಾರ್ಮಿಕ ವರ್ಗವು ದುಡಿಮೆಯ ಶಕ್ತಿಯೊಂದನ್ನೇ ಮಾರಿ ಜೀವನ ಹೊರೆಯಬೇಕಾಗಿದೆ ಎಂಬುದನ್ನು ಇಲ್ಲಿ ಒತ್ತಿಹೇಳಲಾಗಿದೆ. ಬಂಡವಾಳಶಾಹಿಯ ಆಂತರಿಕ ಮುಗ್ಗಟ್ಟುಗಳನ್ನು ಸಹ ಸೂಕ್ಷ್ಮವಾಗಿ

ಪ್ರಸ್ತಾಪಿಸಲಾಗಿದೆ. ೨೫ ಪ್ರಶ್ನೆಗಳಿಗೆ ಉತ್ತರ ರೂಪದಲ್ಲಿರುವ ಈ ಕಿರುಗ್ರಂಥವು ಬ್ರಿಟನ್ನಿನ ಔದ್ಯೋಗಿಕ ಕ್ರಾಂತಿಯ ಪರಿಣಾಮಗಳನ್ನು ವಿವೇಚಿಸುತ್ತಾ ದೈಹಿಕ ದುಡಿಮೆಯು ಗೌಣವಾಗುತ್ತಿರುವುದನ್ನು ಗಮನಿಸುತ್ತದೆ ಮತ್ತು ಕಾರ್ಮಿಕರ ಹೀನಸ್ಥಿತಿಯ ಬಗ್ಗೆ ಮಾಹಿತಿ ನೀಡುತ್ತದೆ. ಉತ್ಪಾದನಾ ಸಲಕರಣೆಯ ರೂಪದಲ್ಲಿರುವ ಎಲ್ಲ ಖಾಸಗಿ ಆಸ್ತಿಯೂ ಸಾರ್ವಜನಿಕ ಒಡೆತನದಲ್ಲಿರಬೇಕೆಂಬ ಆಶಯವನ್ನು ಇಲ್ಲಿ ವ್ಯಕ್ತಪಡಿಸಲಾಗಿದೆ. ಅದರಿಂದಾಗಿ ವರ್ಗಭೇದವು ಸಮಾಜದಲ್ಲಿ ಇಲ್ಲವಾಗುತ್ತದೆಯೆಂಬ ಭರವಸೆಯೊಂದಿಗೆ ಕಾರ್ಮಿಕ ವರ್ಗದ ಕ್ರಿಯಾಶೀಲತೆಗೆ ಕರೆ ನೀಡಲಾಗಿದೆ.

ವಿಶೇಷವಾಗಿ ಗಮನಿಸಬೇಕಾದ ಒಂದು ಪ್ರಶ್ನೆ ಈ ಹೊತ್ತಿಗೆಯಲ್ಲಿ ೧೬ನೆಯ ಪ್ರಶ್ನೆಯಾಗಿ ನಮೂದಾಗಿದೆ: "(ಉತ್ಪಾದನಾ ಸಲಕರಣೆಯ ರೂಪದ) ಖಾಸಗಿ ಆಸ್ತಿಯನ್ನು ಶಾಂತಿಯುತವಾದ ಮಾರ್ಗಗಳಿಂದ ಕೊನೆಗಾಣಿಸಲು ಸಾಧ್ಯವೇ?" ಅದಕ್ಕೆ ಉತ್ತರವನ್ನು ಏಂಗೆಲ್ಸರ ಮಾತುಗಳಲ್ಲೇ ಕೇಳುವುದು ಉಚಿತ: "ಸಾಮಾಜಿಕ ಕ್ರಾಂತಿಯು ಶಾಂತಿಯುತವಾಗಿ ಮೂಡಿಬರುವುದನ್ನು ಕಮ್ಯುನಿಸ್ಟರು ಸರ್ವಥಾ ವಿರೋಧಿಸುವುದಿಲ್ಲ. ಷಡ್ಯಂತ್ರಗಳು ನಿಷ್ಫಲ ಹಾಗೂ ಅಪಾಯಕರವೆಂಬುದನ್ನು ಕಮ್ಯುನಿಸ್ಟರು ಅರಿತಿದ್ದಾರೆ. ಕ್ರಾಂತಿಯನ್ನು ಯಾದೃಚ್ಛಿಕವಾಗಿ ಮತ್ತು ಖುಷಿಗಾಗಿ ಆಯೋಜಿಸುವ ಹುನ್ನಾರ ಕಮ್ಯುನಿಸ್ಟರಿಗಿಲ್ಲ. ಎಲ್ಲೆಲ್ಲಿ ಕ್ರಾಂತಿ ಜರುಗಿದೆಯೋ ಅಲ್ಲೆಲ್ಲಾ ಅದು ಅಂದಂದಿನ ಸನ್ನಿವೇಶಗಳ ಪರಿಣಾಮವಾಗಿ ಜರುಗಿದೆಯೇ ವಿನಾ ಯಾವುದೇ ಪಕ್ಷಗಳ ಮತ್ತು ವರ್ಗಗಳ ಇಚ್ಛೆಯಂತೆ ನಡೆದಿಲ್ಲ. ನಾವು ಸ್ಪಷ್ಟವಾಗಿ ತಿಳಿಯಬೇಕಾದ ಅಂಶವೊಂದಿದೆ. ಅದೇನೆಂದರೆ, ಕಾರ್ಮಿಕ ವರ್ಗದ ಬೆಳವಣಿಗೆಯನ್ನು ಎಲ್ಲ ನಾಗರಿಕ ದೇಶಗಳಲ್ಲೂ ಬಲಾತ್ಕಾರವಾಗಿ ಪ್ರತಿರೋಧಿಸಲಾಗುತ್ತಿದೆ. ಅಂದರೆ, ಕಮ್ಯುನಿಸ್ಟರ ವಿರೋಧಿಗಳು ಕ್ರಾಂತಿಯನ್ನು ಸರ್ವಥಾ ಪ್ರಚೋದಿಸುತ್ತಿದ್ದಾರೆ ಎಂದರ್ಥ. ಮರ್ದಿತ ಕಾರ್ಮಿಕ ವರ್ಗವು ಕಡೆಗೆ ಕ್ರಾಂತಿಯನ್ನು ಆಯ್ದುಕೊಂಡರೆ ಕಮ್ಯುನಿಸ್ಟರು ಶತಾಯ ಗತಾಯ ಕಾರ್ಮಿಕ ವರ್ಗವನ್ನು ಬೆಂಬಲಿಸುತ್ತಾರೆ; ಅದೂ ಕಾಯಾ ವಾಚಾ ಮನಸಾ."

ಹೊತ್ತಿಗೆಯಲ್ಲಿ ಪ್ರಧಾನವಾಗಿ ಉಕ್ತವಾಗಿರುವ ಇನ್ನೊಂದು ಅಂಶ ನಂತರದ ಪ್ರಸಿದ್ಧ ಗ್ರಂಥವಾದ "ಜರ್ಮನಿಯ ಸೈದ್ಧಾಂತಿಕ ಒಲವು" ಎಂಬಲ್ಲಿ ವಿಸ್ತಾರವಾಗಿ ಚರ್ಚೆಗೆ ಬಂದಿದೆ. ಕಾರ್ಮಿಕ ವರ್ಗದ ಕ್ರಾಂತಿಯು ಯಾವುದೋ ಒಂದು ದೇಶದಲ್ಲಿ ಪ್ರತ್ಯೇಕವಾಗಿ ಸಿದ್ಧಿಸುವಂಥದಲ್ಲ ಎಂಬುದು ಆ ಅಂಶ. ಬಂಡವಾಳಶಾಹಿಯ ಹಾದಿಯಲ್ಲಿ ಮುನ್ನಡೆದ ಹಲವು ದೇಶಗಳಲ್ಲಿ ಏಕಕಾಲಕ್ಕೆ ಸಂಭವಿಸುವುದು ಕ್ರಾಂತಿಯ ಲಕ್ಷಣವೆಂದು ಇಲ್ಲಿ ವಿವರಿಸಲಾಗಿದೆ. ಅದಕ್ಕೆ ಏಂಗೆಲ್ಸ್ ನೀಡುವ ಸಮರ್ಥನೆ ಇದು: "ನಾಗರಿಕ ದೇಶಗಳಲ್ಲಿ ದೊಡ್ಡ ಪ್ರಮಾಣದ ಉದ್ಯಮಗಳು ಸಾಮಾಜಿಕ ಬೆಳವಣಿಗೆಯನ್ನು ಒಂದು ಸಮಾನ ಹಂತಕ್ಕೆ ಮುಟ್ಟಿಸಿವೆ. ಈ ಎಲ್ಲ ದೇಶಗಳಲ್ಲೂ ಬಂಡವಳಿಗರು ಮತ್ತು ಕಾರ್ಮಿಕ ವರ್ಗವು ನಿರ್ಣಾಯಕವಾದ ಎರಡು ವರ್ಗಗಳಾಗಿ ರೂಪು ತಳೆದಿವೆ ಮತ್ತು ಅಲ್ಲೆಲ್ಲಾ ದಿನನಿತ್ಯದ

ಹೋರಾಟಗಳೆಂದರೆ ಈ ಎರಡು ವರ್ಗಗಳ ನಡುವಣ ಹೋರಾಟವೇ ಆಗಿದೆ. ಆದ್ದರಿಂದ ಕಮ್ಯುನಿಸ್ಟ್ ಕ್ರಾಂತಿಯು ಪ್ರತ್ಯೇಕವಾಗಿ ಒಂದು ರಾಷ್ಟ್ರಕ್ಕೆ ಸೀಮಿತವಾಗಿರದೆ ಎಲ್ಲ ಔದ್ಯಮಿಕ ರಾಷ್ಟ್ರಗಳಲ್ಲೂ ಒಮ್ಮೆಲೇ ಘಟಿಸುತ್ತದೆ. ಇಂಗ್ಲೆಂಡ್, ಅಮೆರಿಕಾ, ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಇದು ಏಕಕಾಲಕ್ಕೆ ಸಂಭವಿಸುತ್ತದೆ.'' ೧೮೭೦ರ ದಶಕದಲ್ಲಿ ಇದಕ್ಕೆ ತಿದ್ದುಪಡಿಯಾಗಿ ಏಂಗೆಲ್ಸ್ ಒಂದಂಶವನ್ನು ಸೇರಿಸಿ "ಕ್ರಾಂತಿಯು ಇಡಿಯಾಗಿ ಒಂದು ಚಾರಿತ್ರಿಕ ಕಾಲಘಟ್ಟವನ್ನು ಆವರಿಸುತ್ತದೆ"ಎಂದು ಸ್ಪಷ್ಟೀಕರಿಸಿದರು. ಅಂದರೆ, ಒಂದೆಡೆ ಸಂಭವಿಸುವ ಕ್ರಾಂತಿಯು ಬೇರೆಡೆಗಳಲ್ಲಿ ಕ್ರಾಂತಿಗೆ ಸ್ಫುರಣೆ ನೀಡುತ್ತದೆ; ಪ್ರಮುಖವಾದ ಎಲ್ಲ ದೊಡ್ಡ ಬಂಡವಾಳಶಾಹಿ ದೇಶಗಳನ್ನೂ ಆವರಿಸುವವರೆಗೆ ಕ್ರಾಂತಿಯ ವಿಜಯವು ಅಂತಿಮವೆನಿಸಿಕೊಳ್ಳುವುದಿಲ್ಲ.

ಹೀಗೆ ಏಂಗೆಲ್ಸ್‌ರಿಂದ ರಚನೆಗೊಂಡ "ಕಮ್ಯುನಿಸ್ಟ್ ಸಿದ್ಧಾಂತದ ತತ್ತ್ವಗಳು'' ಎಂಬ ಹೊತ್ತಿಗೆಯನ್ನು ೧೮೪೭ರ ನವಂಬರ್ ೨೯ರಂದು ಲಂಡನ್ನಿನಲ್ಲಿ ನಡೆದ ಕಮ್ಯುನಿಸ್ಟ್ ತಂಡಗಳ ಎರಡನೆಯ ಅಧಿವೇಶನದ ಮುಂದೆ ಇರಿಸಲಾಯಿತು. ಈ ಅಧಿವೇಶನದಲ್ಲಿ ಹತ್ತಾರು ದೇಶಗಳ ಪ್ರತಿನಿಧಿಗಳಿದ್ದರು. ಆದ್ದರಿಂದ ಅದನ್ನು ಏಂಗೆಲ್ಸ್ "ಕಾರ್ಮಿಕ ವರ್ಗದ ಮೊದಲನೆಯ ಅಂತರರಾಷ್ಟ್ರೀಯ ಅಧಿವೇಶನ'' ಎಂದು ಕರೆದರು. ಈ ಅಧಿವೇಶನದ ಪ್ರಧಾನ ಕಾರ್ಯದರ್ಶಿ ಫ್ರೆಡರಿಕ್ ಏಂಗೆಲ್ಸ್. ಹತ್ತು ದಿನಗಳ ಪರ್ಯಂತ ನಡೆದ ಈ ಸಮಾವೇಶವು ತನ್ನ ಮೊದಲ ಆಕಾಂಕ್ಷಾ ವಾಕ್ಯವನ್ನು ಹೀಗೆ ನಮೂದಿಸಿತು: "ಕಮ್ಯುನಿಸ್ಟ್ ಲೀಗ್‌ನ ಗುರಿಯು ಬಂಡವಾಳಶಾಹಿಯನ್ನು ಬುಡಮೇಲು ಮಾಡಿ ದುಡಿಯುವ ವರ್ಗದ ಆಳ್ವಿಕೆಯನ್ನು ಸ್ಥಾಪಿಸುವುದೇ ಆಗಿದೆ. ವರ್ಗ ವಿರೋಧಗಳ ಆಧಾರದ ಮೇಲೆ ನಿಂತಿರುವ ಬಂಡವಾಳಶಾಹಿ ಸಮಾಜದ ಸ್ಥಾನದಲ್ಲಿ ವರ್ಗರಹಿತವಾದ ಮತ್ತು (ಉತ್ಪಾದನಾ ಸಲಕರಣೆಯ ರೂಪದ) ಖಾಸಗಿ ಆಸ್ತಿ ರಹಿತವಾದ ಒಂದು ಹೊಸ ಸಮಾಜವನ್ನು ನಿರ್ಮಿಸುವುದು ಲೀಗಿನ ಉದ್ದೇಶ."

ಇನ್ನೊಂದು ನಿರ್ಣಯದ ಪ್ರಕಾರ ಕಮ್ಯುನಿಸ್ಟ್ ಲೀಗನ್ನು "ಕಮ್ಯುನಿಸ್ಟ್ ಪಕ್ಷ'' ಎಂದು ಕರೆಯಲಾಯಿತು ಮತ್ತು ಪಕ್ಷದ ಸೈದ್ಧಾಂತಿಕ ತತ್ತ್ವಗಳನ್ನು ಬಹಿರಂಗವಾಗಿ ಘೋಷಿಸಲಾಯಿತು. ತೆರೆಯ ಹಿಂದಿನ ಕಾರ್ಯಾಚರಣೆಗೆ ಇತಿಶ್ರೀ ಹಾಡಿ ಹೊಸ ಅಧ್ಯಾಯವೊಂದನ್ನು ಇದರಿಂದ ಆರಂಭಿಸಿದಂತಾಯಿತು. ಪಕ್ಷದ ಪ್ರಣಾಲಿಕೆಯನ್ನು ತಯಾರಿಸಲು ಮಾರ್ಕ್ಸ್ ಮತ್ತು ಏಂಗೆಲ್ಸರಿಗೆ ಅಧಿವೇಶನವು ಆದೇಶ ನೀಡಿತು. ಏಂಗೆಲ್ಸರ "ಕಮ್ಯುನಿಸ್ಟ್ ಸಿದ್ಧಾಂತದ ತತ್ತ್ವಗಳು'' ಮತ್ತು ಅದರ ಮೇಲೆ ಬೇರೆಬೇರೆ ಘಟಕಗಳಿಂದ ಬಂದಿದ್ದ ಟೀಕೆ-ಟಿಪ್ಪಣಿಗಳನ್ನು ಆಧರಿಸಿ ಪ್ರಣಾಲಿಕೆಯು ರಚನೆಯಾಗಬೇಕೆಂದು ಅಧಿವೇಶನದ ತೀರ್ಮಾನವಾಗಿತ್ತು.

ಅಧಿವೇಶನವು ಆರಂಭಗೊಂಡ ದಿನ ಏಂಗೆಲ್ಸ್ ಬೇರೊಂದು ಸಭೆಯನ್ನು ಉದ್ದೇಶಿಸಿಯೂ ಭಾಷಣ ಮಾಡಿದ್ದರು. ೧೮೩೦ರ ನವಂಬರ್ ೨೯ರಂದು ಪೋಲೆಂಡಿನಲ್ಲಿ ಒಂದು

ಸಶಸ್ತ್ರ ಬಂಡಾಯ ನಡೆದಿದ್ದಿತು. ಅದರ ವಾರ್ಷಿಕ ಸಮಾರಂಭದ ಆಚರಣೆಯನ್ನು ಅಧಿವೇಶನದ ದಿನದಂದೇ ಆಯೋಜಿಸಲಾಗಿತ್ತು. ಅದು ಅಂತರರಾಷ್ಟ್ರೀಯ ಪ್ರಜಾಪ್ರಭುತ್ವವಾದಿಗಳ ಒಂದು ಸಭೆ. ಅಲ್ಲಿ ಮಾತನಾಡುತ್ತಾ ಏಂಗೆಲ್ಸ್ ಹೇಳಿದ ಮಾತುಗಳು ಇಂದಿಗೂ ಪ್ರಸಿದ್ಧವಾಗಿವೆ, ಅರ್ಥವತ್ತಾಗಿವೆ. ಇಂದಿನ ಸನ್ನಿವೇಶಗಳಿಗೆ ಸೂಕ್ತ ಮಾರ್ಪಾಡುಗಳೊಂದಿಗೆ ಅದರ ಮನನ ಮಾಡಿಕೊಳ್ಳುವುದು ಆರೋಗ್ಯಕರ: "ಬೇರೆ ದೇಶಗಳನ್ನು ಮರ್ದಿಸುತ್ತಿರುವ ಯಾವುದೇ ದೇಶವು ಸ್ವತಃ ತಾನು ಸ್ವತಂತ್ರವಾಗಿರುವುದು ಶಕ್ಯವಿಲ್ಲ. (ಅಂದರೆ, ಆಂತರಿಕವಾಗಿಯೂ ಅದು ಒಂದು ಜನವಿಭಾಗವನ್ನು ಮರ್ದಿಸುತ್ತಿರಬೇಕಾಗುತ್ತದೆ). ...ಪೋಲೆಂಡಿನ ವಿಮೋಚನೆಯಲ್ಲಿ ಜರ್ಮನಿಯ ಪ್ರಜಾಪ್ರಭುತ್ವವಾದಿಗಳಾದ ನಮಗೆ ಒಂದು ವಿಶೇಷ ಆಸಕ್ತಿ ಇದೆ. ಪೋಲೆಂಡನ್ನು ವಿಭಜಿಸುವುದರಿಂದ ಹೆಚ್ಚಿನ ಅನುಕೂಲ ಪಡೆದವರೆಂದರೆ ಜರ್ಮನಿಯ ರಾಜಕುಮಾರರು. ಗ್ಯಾಲೀಸಿಯಾ ಮತ್ತು ಪೋಸೆನ್‌ಗಳನ್ನು ಈಗಲೂ ತಮ್ಮ ಹಿಡಿತದಲ್ಲಿರಿಸಿಕೊಂಡಿರುವವರು ಜರ್ಮನಿಯ ಸೈನಿಕರು. ನಮ್ಮ ದೇಶಕ್ಕೆ ಇದೊಂದು ಬೀಭತ್ಸವಾದ ಕಪ್ಪುಚುಕ್ಕೆ. ಅದನ್ನು ಅಳಿಸಿಹಾಕಬೇಕಾದವರು ನಾವು, ಜರ್ಮನರು; ವಿಶೇಷತಃ ಆ ಜವಾಬ್ದಾರಿ ಇರುವುದು ನಮ್ಮ ಮೇಲೆ, ಜರ್ಮನಿಯ ಪ್ರಜಾಪ್ರಭುತ್ವವಾದಿಗಳ ಮೇಲೆ."

ಈ ಅಮೋಘ ಮಾತುಗಳ ಅಂತರಾರ್ಥವನ್ನು ಗ್ರಹಿಸಿದರೆ ಪ್ರತಿಯೊಂದು ದೇಶದ ನಾಗರಿಕರೂ ಆಯಾ ಸರ್ಕಾರಗಳ ಮೇಲೆ ಎಂತಹ ಒತ್ತಡ ತರಬೇಕೆಂಬುದು ಸ್ಪಷ್ಟವಾಗುತ್ತದೆ. ತಾನು ಸ್ವಾತಂತ್ರ್ಯದ ಪರಮ ಆರಾಧಕನೆಂದು ಬೀಗುವ ಅಮೆರಿಕಾ ಅಥವಾ ಬ್ರಿಟನ್ನಿನಂತಹ ರಾಷ್ಟ್ರಗಳಿಗೆ ಅನ್ವಯಿಸಿದರೆ ಪೂರ್ಣಾರ್ಥದಲ್ಲಿ ಅವು ಸ್ವತಂತ್ರ ರಾಷ್ಟ್ರಗಳಲ್ಲ. ಆಂತರಿಕವಾಗಿ ಕೆಲವು ವಿಭಾಗಗಳ ಮೇಲೆ ಆ ದೇಶಗಳಲ್ಲಿ ದೌರ್ಜನ್ಯಗಳ ಸರಮಾಲೆಯೇ ಇದೆ. ಅದು ಜನಾಂಗೀಯ ಪೂರ್ವಗ್ರಹದ ಫಲವಿರುವಂತೆ ಆರ್ಥಿಕ ದಬ್ಬಾಳಿಕೆಯ ಫಲವೂ ಹೌದು. ಬೇರೆ ದೇಶಗಳನ್ನು ಶಸ್ತ್ರಾಸ್ತ್ರಗಳ ಬಲದಿಂದ ಹಾಗೂ ತಮ್ಮ ಬಹುರಾಷ್ಟ್ರೀಯ ಕಂಪನಿಗಳನ್ನು ಸಾಧನವಾಗಿ ಬಳಸಿ ಲೂಟಿ ಮಾಡುವ ಅಮೆರಿಕಾ ಮತ್ತು ಬ್ರಿಟನ್‌ಗಳಂತಹ ದೇಶಗಳು ಲೂಟಿಯ ಒಂದು ಚಿಕ್ಕಭಾಗವನ್ನು ತಮ್ಮ ಜನಗಳಲ್ಲಿ ಹಂಚಬಹುದು. ಆದರೆ ಏನೂ ದಕ್ಕದೇ ಹೋಗುವ ಮತ್ತು ಅಂತಹ ಲೂಟಿಯ ಲಾಭವನ್ನು ದಕ್ಕಿಸಿಕೊಳ್ಳಲು ಇಚ್ಛೆಪಡದ ಜನವಿಭಾಗಗಳೂ ಅಲ್ಲಿರುತ್ತವೆ. ಅವು ತಮ್ಮ ದೇಶಗಳ ನೀತಿಯನ್ನು ವಿಮರ್ಶಿಸಿ ಬದಲಾವಣೆಗಾಗಿ ಆಗ್ರಹಿಸುತ್ತವೆ. ವ್ಯವಸ್ಥೆಯ ವಿರೋಧಿಗಳು ಎಂಬ ಕಾರಣಕ್ಕಾಗಿ ಅವರ ಮೇಲೆ ಹಲ್ಲೆಗಳು ಜರುಗುತ್ತವೆ. ಅಂದರೆ, ಬೇರೆ ರಾಷ್ಟ್ರಗಳ ಮೇಲೆ ದಬ್ಬಾಳಿಕೆ ಹೇರುವ ದೇಶ ಸ್ವತಃ ತನ್ನ ದೇಶದಲ್ಲಿ ಸ್ವಾತಂತ್ರ್ಯವನ್ನು ಎಲ್ಲರಿಗೂ ಲಭಿಸುವಂತೆ ನೋಡಿಕೊಳ್ಳಲಾರದು. ಅಂತಹ ದೇಶಗಳಲ್ಲಿ ಪ್ರಜಾಪ್ರಭುತ್ವವಾದಿಗಳ ಜವಾಬ್ದಾರಿ ಎಂಥದು? ತಮ್ಮ ದೇಶವು ಲಂಗು-ಲಗಾಮಿಲ್ಲದೆ ಗೂಳಿಯಂತೆ ಧಾಳಿ ಮಾಡುವುದನ್ನು ತಡೆಯುವುದು. ಒಂದು ಉದಾಹರಣೆಯನ್ನು ನೋಡುವುದಾದರೆ, ಬ್ರಿಟನ್ ಮತ್ತು ಅಮೆರಿಕಾ ದೇಶಗಳಲ್ಲಿ ಇರಾಕಿನ

ವಿರುದ್ಧ ಯುದ್ಧ ಮಾಡಬಾರದೆಂದು ಆಗ್ರಹಿಸಲು ಲಕ್ಷೋಪಲಕ್ಷ ಜನ ೨೦೦೩ರ ಫೆಬ್ರವರಿಯಲ್ಲಿ ಬೀದಿಗಿಳಿದರು. ಅದು ಪ್ರಜಾಪ್ರಭುತ್ವವಾದಿಗಳ ಮೂಲಭೂತ ಲಕ್ಷಣ. ದೇಶಪ್ರೇಮದ ಹೆಸರಿನಲ್ಲಿ ತನ್ನ ದೇಶ ಇತರರ ಮೇಲೆ ನಡೆಸುವ ವಿಪತ್ಕಾರಕ ಆಕ್ರಮಣಗಳನ್ನಾಗಲಿ ಅಥವಾ ತನ್ನದೇ ದೇಶದ ಒಂದು ಜನವಿಭಾಗದ ಮೇಲೆ ಎಸಗುವ ದೌರ್ಜನ್ಯವನ್ನಾಗಲಿ ಸಮರ್ಥಿಸುವುದು ಒಬ್ಬ ಪ್ರಜಾಪ್ರಭುತ್ವವಾದಿಯ ಲಕ್ಷಣವಲ್ಲ. ಐಕ್ಯಗೊಂಡ ಅಂತರರಾಷ್ಟ್ರೀಯ ಹೋರಾಟವೊಂದು ನಿಜವಾದ ಪ್ರಜಾಪ್ರಭುತ್ವವಾದಿಗಳ ಮಹತ್ತರ ಕೊಡುಗೆಯಾಗಿರುತ್ತದೆ ಮತ್ತು ಅದರಲ್ಲಿ ಎಲ್ಲ ದೇಶದ ಜನರೂ ಸೇರಿರುತ್ತಾರೆ. ಇಂತಹ ಮೌಲಿಕ ಆಶಯ ಏಂಗೆಲ್ಸರ ಮಾತುಗಳಲ್ಲಿದೆ ಎಂಬುದನ್ನು ಗಮನಿಸಬೇಕು.

೧೮೪೭ರಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸ್ ಇಬ್ಬರೂ ಬ್ರಸೆಲ್ಸ್‌ನಲ್ಲಿದ್ದರು. ಆಗ ಕಮ್ಯುನಿಸ್ಟ್ ಪ್ರಣಾಲಿಕೆಯ ಕೆಲಸ ಆರಂಭಗೊಂಡಿತ್ತು. ಡಿಸೆಂಬರ್‌ನಲ್ಲಿ ಏಂಗೆಲ್ಸ್ ಬ್ರಸೆಲ್ಸ್‌ನಿಂದ ಹೊರಹೋದರಾದ್ದರಿಂದ ಬರವಣಿಗೆಯ ಕೆಲಸ ಮಾರ್ಕ್ಸ್ ಪಾಲಿಗೆ ಬಂತು. ಜನವರಿ ೧೮೪೮ರಲ್ಲಿ ಅದನ್ನು ಬರೆದು ಮುಗಿಸಿ ಕೂಡಲೆ ಕಮ್ಯುನಿಸ್ಟ್ ಲೀಗಿನ ಲಂಡನ್ ಕೇಂದ್ರ ಕಚೇರಿಗೆ ಕಳಿಸಿದರು. ಕೇಂದ್ರ ಸಮಿತಿಯು ಅದನ್ನು ಅಂಗೀಕರಿಸಿ ಫೆಬ್ರವರಿ ೧೮೪೮ರಲ್ಲಿ ಪ್ರಕಟಿಸಿತು. ನಂತರ ಹತ್ತಾರು ಭಾಷೆಗಳಲ್ಲಿ ಅದು ಹೊರಬಂದಿತು. ದುಡಿಯುವ ವರ್ಗದ ಸುವಾರ್ತೆ ಎನ್ನುವಷ್ಟರ ಮಟ್ಟಿಗೆ ಅದರ ಪ್ರಭಾವ ಹಬ್ಬಿತು. ಭಾರತದ ದರ್ಶನಗಳ ಪೈಕಿ ವೇದಾಂತವೂ ಒಂದು. "ಬ್ರಹ್ಮಸೂತ್ರ" ಎಂಬ ಗ್ರಂಥದಲ್ಲಿ ಅದರ ಸಾರಸರ್ವಸ್ವವನ್ನೂ ಹಿಡಿದಿಡಲಾಗಿದೆ ಎನ್ನುತ್ತಾರೆ. ಕೇವಲ ೫೫೫ ಸೂತ್ರಗಳಲ್ಲಿ ಉಪನಿಷತ್ತುಗಳ ಪ್ರಮುಖ ಗ್ರಹಿಕೆಗಳನ್ನು ಅಚ್ಚುಕಟ್ಟಾಗಿ ನಿರೂಪಿಸುವುದು ಬ್ರಹ್ಮಸೂತ್ರಗಳ ವೈಶಿಷ್ಟ್ಯ. ಅದರ ಅರ್ಥವನ್ನು ಹಿಗ್ಗಿಸಿ ಅನೇಕ ಆಚಾರ್ಯರು ತಮ್ಮ ತಮ್ಮ ಭಾಷ್ಯಗಳನ್ನು ಬರೆದಿದ್ದಾರೆ. ಕಮ್ಯುನಿಸ್ಟ್ ಸಿದ್ಧಾಂತವನ್ನು ಸಂಕ್ಷಿಪ್ತವಾಗಿ, ಆದರೆ ಯಾವ ಸಂದಿಗ್ಧತೆಗೂ ಅವಕಾಶವಿಲ್ಲದಂತೆ, ಘೋಷಿಸುವ ಮಹದ್ಗ್ರಂಥ "ಕಮ್ಯುನಿಸ್ಟ್ ಪ್ರಣಾಲಿಕೆ." ಅದರ ಮನೋಜ್ಞ ಭಾಷೆ, ಪ್ರಬಲವಾದ ರೂಪಕಗಳು, ಕಾವ್ಯಾತ್ಮಕ ಶೈಲಿ ಮತ್ತು ಚಾರಿತ್ರಿಕ ವಿಶ್ಲೇಷಣೆಗಳು ಈ ಗ್ರಂಥಕ್ಕೆ ಒಂದು ಅನನ್ಯತೆಯನ್ನು ತಂದುಕೊಟ್ಟಿವೆ. ಮಾನವ ಜನಾಂಗದ ಭವಿಷ್ಯದ ಬಗೆಗಿನ ಕನಸು-ಕಾಳಜಿಗಳು, ಆ ಭವಿಷ್ಯದ ನಿರ್ಮಿತಿಗೆ ಸಂಘಟನೆಯ ಕೊಡುಗೆ, ಕಾರ್ಮಿಕ ವರ್ಗದ ಐತಿಹಾಸಿಕ ಪಾತ್ರ, ಸಮಾಜ ವಿಕಾಸವಾಗುತ್ತಾ ಬಂದಿರುವ ಮಾರ್ಗದ ವೈಜ್ಞಾನಿಕ ನೋಟ, ಎಲ್ಲದಕ್ಕಿಂತಲೂ ಮಿಗಿಲಾಗಿ ಸಾಂದ್ರವಾದ ಮಾನವೀಯತೆಯ ಪ್ರಕಾಶ, ಇವೆಲ್ಲಾ ಪ್ರಣಾಲಿಕೆಯನ್ನು ಒಂದು ಅಸಾಧಾರಣ ಕೃತಿಯನ್ನಾಗಿಸಿವೆ. ಶಂಕರಾಚಾರ್ಯರ ಸಿದ್ಧಾಂತವನ್ನು ಒಪ್ಪದವರು ಕೂಡ ಅವರ ಶಾರೀರಕ ಭಾಷ್ಯದ ಸೊಗಸನ್ನು ಸವಿದು ತಲೆಯಾಡಿಸದೆ ಇರಲಾರರು. ಅಂತಹ ಪ್ರಚಂಡ ಗದ್ಯ ಅವರದು. ಕಮ್ಯುನಿಸ್ಟ್ ಪ್ರಣಾಲಿಕೆಗೆ ಈ ಮಾತು ಅಕ್ಷರಶಃ ಅನ್ವಯವಾಗುತ್ತದೆ. ಸಾಹಿತ್ಯದ ಭಾಷೆಗೆ, ವಿದ್ವತ್ಪೂರ್ಣವಾದ ವಿಶ್ಲೇಷಣೆಗೆ ಮತ್ತು ಗಂಭೀರವಾದ ವೈಚಾರಿಕ ಚಿಂತನೆಗೆ ಪ್ರಣಾಲಿಕೆಯು ಅತ್ಯಂತ

ಔಚಿತ್ಯಪೂರ್ಣವಾದ ಮಾದರಿಯಾಗಬಲ್ಲದು. ದ್ವಂದ್ವಮಾನ ಭೌತವಾದ, ಚಾರಿತ್ರಿಕ ಭೌತವಾದ, ರಾಜಕೀಯ ಅರ್ಥಶಾಸ್ತ್ರ ಮತ್ತು ವೈಜ್ಞಾನಿಕ ಸಮಾಜವಾದ, ಇವುಗಳ ತಿರುಳು ಅತ್ಯಾಕರ್ಷಣೀಯವಾಗಿ ಪ್ರಣಾಲಿಕೆಯಲ್ಲಿ ನೀಡಲಾಗಿದೆ. ಈ ಗ್ರಂಥದ ಕೊಡುಗೆಯನ್ನು ಶ್ಲಾಘಿಸುತ್ತಾ ಒಮ್ಮೆ ಲೆನಿನ್ ಹೇಳಿದ ಮಾತುಗಳಿವು: "ಈ ಕಿರುಹೊತ್ತಿಗೆಯು ಅನೇಕ ಸಂಪುಟಗಳಿಗೆ ಸಮನಾದ್ದು. ಇಂದಿಗೂ ಅದು ಸ್ಫೂರ್ತಿದಾಯಕವಾಗಿ ಉಳಿದಿದೆ, ಇಡೀ ವಿಶ್ವದ ದುಡಿಯುವ ವರ್ಗದ ಸಂಘಟಿತ ಹೋರಾಟಕ್ಕೆ ಚೈತನ್ಯದ ಚಿಲುಮೆಯಾಗಿದೆ, ಮಾರ್ಗದರ್ಶಕ ಸೂತ್ರವಾಗಿದೆ."

ಸ್ವಾರಸ್ಯದ ಸಂಗತಿಯೇನೆಂದರೆ ೧೮೪೮ರಿಂದ ಇಂದಿನವರೆಗೆ ಅನೇಕ ತಥಾಕಥಿತ ವಿದ್ವಾಂಸರು ಪ್ರತಿಯೊಂದು ದಶಕದಲ್ಲೂ ಕಮ್ಯುನಿಸ್ಟ್ ಪ್ರಣಾಲಿಕೆ ಗತಿಸಿತೆಂದು ಸಾರುತ್ತಲೇ ಬಂದಿದ್ದಾರೆ; ಆದರೆ ಪ್ರತಿ ದಶಕದಲ್ಲೂ ಅದು ಗತಿಸಲಿಲ್ಲವಲ್ಲಾ ಎಂಬ ಆತಂಕವನ್ನು ಅನುಭವಿಸುತ್ತಲೇ ಬಂದಿದ್ದಾರೆ. ಮತ್ತೆ ಅದೇ ಸಂತಸ-ಸಂತಾಪಗಳನ್ನು ಮುಂದಿನ ದಶಕಕ್ಕೆ ಬಳುವಳಿಯಾಗಿ ನೀಡುತ್ತಲೂ ಬಂದಿದ್ದಾರೆ. ಅದು, ಅಂದರೆ ಮಾರ್ಕ್ಸ್‌ವಾದವು, ನಿರರ್ಥಕವಾದ್ದು, ಹುರುಳಿಲ್ಲದ್ದು, ಅದು ಸತ್ತುಹೋಯಿತು, ಎಂದು ಹೇಳಹೇಳುತ್ತಲೇ ಅದರ ಜೀವಂತಿಕೆಯನ್ನು ಈ ವಿದ್ವಾಂಸರು, ಬಂಡವಾಳಶಾಹಿಯ ನೆಚ್ಚಿನ ಬಂಧುಗಳು, ಒಪ್ಪಬೇಕಾದ ಅನಿವಾರ್ಯತೆಯನ್ನು ಮನಗಂಡಿದ್ದಾರೆ. ಅದು ನಿಜಕ್ಕೂ ಸತ್ತುಹೋಗಿದ್ದರೆ ಮತ್ತೇಕೆ ಅದರ ಬಗೆಗಿನ ಆತಂಕ! ಸತ್ತ ಕುದುರೆಯನ್ನು ಬಡಿಯುವ ಬಾಲಿಶ ಹವ್ಯಾಸವಾದರೂ ಏಕೆ? ಅವರಿಗೆ ತಿಳಿದಿದೆ, ದುಡಿಯುವ ವರ್ಗ ಯಾವಾಗಲೂ ಪ್ರಜ್ಞಾಪೂರ್ವಕವಾಗಿ ವರ್ಗಹೋರಾಟದಲ್ಲಿ ಭಾಗಿಯಾಗದೆ ಉಳಿದುಬಿಡಬಹುದು, ರಾಜಕೀಯವಾಗಿ ಅದು ಪ್ರಣಾಲಿಕೆಯ ಸೂತ್ರಗಳನ್ನು ಅಳವಡಿಸಿಕೊಳ್ಳದೆ ಹೋಗಬಹುದು, ಸಾಂಸ್ಕೃತಿಕವಾಗಿ ಹೊಸ ದಿಗಂತದತ್ತ ನೇರವಾಗಿ ಮುನ್ನಡೆಯದಿರಬಹುದು, ಆದರೆ ಪ್ರಣಾಲಿಕೆಯ ಮೂಲ ಆಶಯವನ್ನು ಬಿಟ್ಟುಕೊಡುವುದಿಲ್ಲ, ಎಂದು. ಆದ್ದರಿಂದಲೇ ಸ್ವಯಮಾಚಾರ್ಯರಂತೆ ಏನೇನೋ ಲಪಲಪಿಸುತ್ತಾರೆ ಮತ್ತು ಅದೆಲ್ಲಾ ಪೊಳ್ಳೆಂದು ನಡುಕ ಹುಟ್ಟಿಸಿಕೊಳ್ಳುತ್ತಾರೆ. ಇಪ್ಪತ್ತನೆಯ ಶತಮಾನದ ಅಂತ್ಯದ ವೇಳೆಗೆ ಕಡೆಗೂ ಮಾರ್ಕ್ಸ್‌ವಾದ ನಶಿಸಿಹೋಯಿತೆಂದು ನಿಟ್ಟುಸಿರಿಟ್ಟು ಫುಕುಯಾಮಾನಂತಹ ಪ್ರತಿಭಾವಂತರು "ಇತಿಹಾಸದ ಅಂತ್ಯ" ಎಂಬ ಪುಸ್ತಕಗಳನ್ನು ಬರೆದು ಪ್ರಶಸ್ತಿಗಳನ್ನು ಪಡೆದುಕೊಂಡರು. ಪ್ರಶಸ್ತಿಯನ್ನು ಮನೆಯಲ್ಲಿ ತೂಗಿಹಾಕುವ ವೇಳೆಗಾಗಲೆ ಅಂತ್ಯವಾಗಿದ್ದ ಇತಿಹಾಸ ಮರುಕಳಿಸಲಾರಂಭಿಸಿತ್ತು. ವಾಸ್ತವಿಕತೆಯಿಂದ ತಾವೆಷ್ಟು ದೂರವಿದ್ದಾರೆಂಬುದನ್ನು ಒಪ್ಪಿಕೊಳ್ಳಲು ಇವರಿಗೆ ಸಂಕೋಚ. ಮಾರ್ಕ್ಸ್‌ವಾದದ ವಿನಾಶವು "ಇತಿಹಾಸದ ಅಂತ್ಯ"ವೆಂದು ನುಡಿಯುವಾಗ ತಮಗರಿವಿಲ್ಲದಂತೆ ಒಂದು ಸತ್ಯವನ್ನು ಇವರೆಲ್ಲಾ ಹೊರಗೆಡಹುತ್ತಾರೆ. ಅದೇನೆಂದರೆ, ನಿಜವಾಗಿಯೂ ಇತಿಹಾಸದ ನಿರ್ಮಾತೃಗಳು ದುಡಿಯುವ ಜನ ಮತ್ತು ಅವರ ಸಿದ್ಧಾಂತ ಮಾರ್ಕ್ಸ್‌ವಾದ, ಎಂಬುದು.

ಏಂಗೆಲ್ಸ್ ಹೇಳುವಂತೆ 'ಕಮ್ಯುನಿಸ್ಟ್ ಪ್ರಣಾಲಿಕೆ'ಯ ಪ್ರಮುಖ ಇಂಗಿತ ಇದು: "ಆರ್ಥಿಕ ಉತ್ಪಾದನೆಯು ಆಯಾ ಕಾಲಘಟ್ಟಗಳಲ್ಲಿ ಸಮಾಜದ ರಚನೆಯನ್ನು ನಿರ್ಧರಿಸುತ್ತದೆ. ಆ ಕಾಲಘಟ್ಟಗಳಲ್ಲಿ ರಾಜಕೀಯ ಮತ್ತು ಬೌದ್ಧಿಕ ವಿಕಾಸವು ಯಾವ ತೆರನಾದ್ದೆಂಬುದಕ್ಕೆ ಇದೇ ಮೂಲಾಧಾರವಾಗಿರುತ್ತದೆ. ಇದರಿಂದ ಪ್ರಮಾಣಿತವಾಗುವ ಅಂಶವೇನೆಂದರೆ, ಆದಿಮ ಕಾಲದಲ್ಲಿ ಭೂಮಿಯ ಒಡೆತನವು ಸಾಮೂಹಿಕವಾಗಿದ್ದ ಹಂತವನ್ನು ಬಿಟ್ಟು ಮುಂದಿನ ಎಲ್ಲ ಹಂತಗಳಲ್ಲೂ ಇತಿಹಾಸವು ವರ್ಗ ಹೋರಾಟಗಳ ಇತಿಹಾಸವೇ ಆಗಿದೆ. ...ಇಂದಿನ ಸಂದರ್ಭದಲ್ಲಿ ಈ ಹೋರಾಟವು ಒಂದು ಮಜಲನ್ನು ಮುಟ್ಟಿದೆ. ಶೋಷಿತ ಮತ್ತು ಮರ್ದಿತ ವರ್ಗವಾದ ದುಡಿಯುವ ವರ್ಗವು ತನ್ನನ್ನು ಶೋಷಿಸುವ ಮತ್ತು ಮರ್ದಿಸುವ ವರ್ಗದಿಂದ ಬಿಡಿಸಿಕೊಳ್ಳಲು ಕೇವಲ ತನ್ನ ಸ್ವಂತದ ಆಶಯವನ್ನು ಸಿದ್ಧಿಸಿಕೊಳ್ಳುವಂತಿಲ್ಲ. ಬಂಡವಾಳಶಾಹಿಯ ಸ್ವರೂಪವೇ ಅಂಥದು. ದುಡಿಯುವ ವರ್ಗವು ಇಡೀ ಸಮಾಜವನ್ನು ಶೋಷಣೆ, ಮರ್ದನ ಮತ್ತು ವರ್ಗ ಹೋರಾಟಗಳಿಂದ ಮುಕ್ತವಾಗುವಂತೆ ಮಾಡದೆ ತನ್ನ ಪ್ರತ್ಯೇಕ ಬಿಡುಗಡೆಯನ್ನು ಪಡೆದುಕೊಳ್ಳಲಾರದು." ಪ್ರಣಾಲಿಕೆಯಲ್ಲಿ ಬಂಡವಾಳಶಾಹಿಯ ಸ್ವರೂಪವನ್ನು ವಿವರಿಸುತ್ತಾ ಅದು ಮೂಲತಃ 'ಕೂಲಿಗಾಗಿ ದಾಸ್ಯ'ದ ಪದ್ಧತಿ ಎಂದು ಹೇಳಲಾಗಿದೆ. ಬಂಡವಾಳಶಾಹಿಯಲ್ಲಿ ಅನಿವಾರ್ಯವಾಗಿ ಅಡಕವಾಗಿರುವ ಸಂಗತಿಗಳೆಂದರೆ ಸದಾ ಹೆಚ್ಚುತ್ತಿರುವ ಶೋಷಣಾ ಕ್ರಮ, ದುಡಿಯುವವರು ನಿರ್ಗತಿಕರಾಗುತ್ತಾ ಹೋಗುವುದು, ಎಲ್ಲೆಯಿಲ್ಲದ ಸ್ಪರ್ಧೆ, ಬಂಡವಾಳವು ಒಂದು ಕಡೆ ಕೇಂದ್ರೀಕೃತವಾಗುವುದು, ಆರ್ಥಿಕ ಮುಗ್ಗಟ್ಟುಗಳು, ಸಣ್ಣ ಬಂಡವಾಳಗಾರರ ವಿನಾಶ, ಮತ್ತು ಅವಿರತವಾಗಿ ಹರಿತವಾಗುತ್ತಲೇ ಹೋಗುವ ವರ್ಗ ಹೋರಾಟ.

ಲಾಭವನ್ನು ಅತಿ ಹೆಚ್ಚಿನ ಮಟ್ಟಕ್ಕೆ ಕೊಂಡೊಯ್ಯುವುದು ಬಂಡವಾಳಶಾಹಿಯ ಲಕ್ಷಣ. ಲಾಭಾಂಶದ ಜೊತೆಗೆ ಲಾಭದ ಮಟ್ಟವೂ ಏರುತ್ತಿರಬೇಕೆಂಬುದು ಅದರ ಸೂತ್ರ. ಅದಕ್ಕಾಗಿ ಹಲವು ಮಾರ್ಗಗಳನ್ನು ಅರಸುತ್ತಿರುವುದು ಅದರ ಮೂಲ ಗುಣ. ಲಾಭ ತುಂಬಿಕೊಳ್ಳುವುದರಲ್ಲಿ ಬಂಡವಾಳಶಾಹಿಗೆ ಯಾವ ನೈತಿಕ ಅಡಚಣೆಯೂ ಇಲ್ಲ. ಹಿಂಸೆ. ಕೊಲೆ, ಯುದ್ಧ, ಇವೆಲ್ಲಾ ಅದರ ಆಯುಧಗಳು. ಮಾರ್ಕ್ಸ್ ತನ್ನ "ಬಂಡವಾಳ" ಎಂಬ ಗ್ರಂಥದಲ್ಲಿ ಒಂದೆಡೆ ಹೇಳುವಂತೆ ಲಾಭದ ಸಾಧ್ಯತೆ ತೋರುವೆಡೆಗಳಿಗೆಲ್ಲಾ ಬಂಡವಾಳವು ನುಗ್ಗುತ್ತದೆ. "ಸಾಕಷ್ಟು ಲಾಭ ದೊರೆಯುವ ಸೂಚನೆ ಇದ್ದರೆ ಬಂಡವಾಳವು ಧೈರ್ಯದಿಂದ ಪ್ರವೇಶಿಸುತ್ತದೆ. ಶೇಕಡ ೧೦ರಷ್ಟು ಲಾಭ ಖಚಿತ ಎನ್ನುವುದಾದರೆ ಬಂಡವಾಳ ಹೂಡಲು ಯಾವ ಜಾಗಕ್ಕೆ ಬೇಕಾದರೂ ಹೋಗಲು ಸಿದ್ಧ. ಅದೇ ಶೇಕಡ ೨೦ ಲಾಭ ಎನ್ನುವುದಾದರೆ ಬಂಡವಾಳಕ್ಕೆ ಎಗ್ಗಿಲ್ಲದ ಧೈರ್ಯ ಮತ್ತು ಹಮ್ಮು. ಲಾಭವು ಶೇಕಡ ೧೦೦ರಷ್ಟು ಎನಿಸಿತೋ, ಬಂಡವಾಳವು ಎಂತಹ ಮಾನವೀಯ ನಿಯಮಗಳನ್ನಾದರೂ ತುಳಿದುಹಾಕಲು ಅಂಜುವುದಿಲ್ಲ. ಲಾಭವು ಶೇಕಡ ೩೦೦ ಎಲ್ಲಿ ಸಾಧ್ಯವೋ ಅಲ್ಲಿ ಬಂಡವಾಳವು ಯಾವ ನೈತಿಕ ಪ್ರಜ್ಞೆಯೂ ಇಲ್ಲದೆ ಎಂತಹ ಅಪರಾಧವನ್ನು ಬೇಕಾದರೂ ಎಸಗಲು ಸಿದ್ಧವಿರುತ್ತದೆ,

ಎಷ್ಟು ಅಪಾಯಕಾರಿ ಸನ್ನಿವೇಶವನ್ನು ಬೇಕಾದರೂ ಎದುರಿಸಲು ಸಜ್ಜಾಗುತ್ತದೆ. ಕಡೆಗೆ ತಾನೇ ನಾಶವಾಗುವ ಅಂಚಿಗೆ ಬಂದರೂ ಲಾಭದ ಆಸೆಯನ್ನು ಬಂಡವಾಳವು ಅದುಮಿಡಲು ಸಮರ್ಥವಾಗುವುದಿಲ್ಲ."

ದುಡಿಯುವವರ ಶೋಷಣೆಯ ಪ್ರಮಾಣವು ಯಾವಾಗಲೂ ಹೆಚ್ಚುವುದಕ್ಕೆ ಮತ್ತು ಬಲಿಷ್ಠವಾದ ಅಮೆರಿಕಾದಂತಹ ರಾಷ್ಟ್ರಗಳು ಸಂಪದ್ಭರಿತ ಇರಾಕಿನಂತಹ ದೇಶಗಳ ಮೇಲೆ ಯಾವಾಗಲೂ ಎರಗಿಹೋಗುವುದಕ್ಕೆ ಇದೇ ಕಾರಣ. ಹೊರಗಿನ ಪ್ರಪಂಚವು ಅಂಗೀಕರಿಸುವಂತೆ ಮಾಡಲು ಈ ಆಶಯಕ್ಕೆ ಎಂತೆಂಥದೋ ಮೆರಗು ಕೊಟ್ಟು ಕೌತುಕ ಉಂಟುಮಾಡುವಂತಹ ಮಾತುಗಳನ್ನಾಡಬಹುದು; ಆದರೆ ತೆರೆಯ ಹಿಂದೆ ನಾಟ್ಯವಾಡುವುದು ಲಾಭದ ಭೂತ, ಲಾಭದ ಮಟ್ಟದ ಆಕರ್ಷಣೆ. ಇದನ್ನು ಒಪ್ಪಿತವಾಗುವಂತೆ ಮಾಡುವ ಹುನ್ನಾರವನ್ನು "ಕಮ್ಯುನಿಸ್ಟ್ ಪ್ರಣಾಲಿಕೆ"ಯು ಗುರುತಿಸುತ್ತದೆ. ಬಂಡವಾಳಶಾಹಿಯ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ಸಂಸ್ಥೆಗಳ ಗುರಿ ಬಂಡವಾಳಶಾಹಿಯ ಆಸ್ತಿ ಮತ್ತು ಪ್ರಭುತ್ವಗಳ ರಕ್ಷಣೆಯೇ ಆಗಿರುತ್ತದೆ. ಅದು ಗಗನಕ್ಕೇರಿಸುವ ಪ್ರಜಾಪ್ರಭುತ್ವದ ಕಲ್ಪನೆ ಕೂಡ ಈ ಉದ್ದೇಶವನ್ನು ಸಫಲಗೊಳಿಸುವಂಥದೇ ಆಗಿರಬೇಕಾಗುತ್ತದೆ. ಅಂದರೆ, ಬಾಯಿಮಾತಿನಲ್ಲಿ ಅಭಿಪ್ರಾಯ ಸ್ವಾತಂತ್ರ್ಯದ ಘೋಷಣೆ ಮತ್ತು ಕ್ರಿಯೆಯಲ್ಲಿ ಯಾವ ಸಾಂಸ್ಥಿಕ ಬದಲಾವಣೆಗೂ ಅವಕಾಶವಿಲ್ಲದಿರುವಂತೆ ನೋಡಿಕೊಳ್ಳುವುದು. ಹಾಗಿದ್ದರೆ ಸರ್ಕಾರ ಅಥವಾ ಪ್ರಭುತ್ವದ ಕಾರ್ಯಗೌರವಗಳು ಯಾವುವು? ಬಂಡವಾಳಶಾಹಿ ವ್ಯವಸ್ಥೆಯನ್ನು ಅಲುಗಾಡದಂತೆ ಸಂರಕ್ಷಿಸುವುದು; ಇದೇ ಅದರ ಆದ್ಯ ಮತ್ತು ಅಂತಿಮ ಕರ್ತವ್ಯ. ರಾಜಕೀಯ ಅಧಿಕಾರವೆಂದರೆ ಇಲ್ಲಿ ಒಂದು ವರ್ಗವು ಸುಸಂಘಟಿತವಾಗಿ ಇನ್ನೊಂದು ವರ್ಗವನ್ನು ತುಳಿದಿಡುವ ಅಧಿಕಾರ. ಆದ್ದರಿಂದ "ಬಂಡವಾಳಶಾಹಿ ಸರ್ಕಾರ ಅಥವಾ ಪ್ರಭುತ್ವವು ಪರಿಣಾಮದ ದೃಷ್ಟಿಯಿಂದ ನೋಡಿದರೆ ಇಡೀ ಬಂಡವಳಿಗ ವರ್ಗದ ಅತಿಸಾಮಾನ್ಯ ಚಟುವಟಿಕೆಗಳನ್ನು ಕೂಡ ಆಡಳಿತಾತ್ಮಕವಾಗಿ ಸುಧಾರಿಸುವಂತಹ ಒಂದು ಕಾರ್ಯಕಾರಿ ಸಮಿತಿ, ಅಷ್ಟೆ."

ಇದರಲ್ಲಿ ವ್ಯತ್ಯಯ ಉಂಟಾಗುವುದು ಉತ್ಪಾದನಾ ಸಲಕರಣೆಗಳ ರೂಪದಲ್ಲಿರುವ ಖಾಸಗಿ ಆಸ್ತಿಯು ಸಾರ್ವಜನಿಕಗೊಂಡಾಗ ಮಾತ್ರ. ಆಗ ಲಾಭಕ್ಕಾಗಿ ಉತ್ಪಾದನೆ ಇರುವುದಿಲ್ಲ, ಅಗತ್ಯಗಳ ಪೂರೈಕೆಗಾಗಿ ಉತ್ಪಾದನೆ ಇರುತ್ತದೆ. ಪೈಪೋಟಿಯ ಭರದಲ್ಲಿ ಏಕಸ್ವಾಮ್ಯವು ಬೆಳೆಯುವ ಸನ್ನಿವೇಶ ಇರುವುದಿಲ್ಲ, ಬದಲಾಗಿ ಸಾರ್ವಜನಿಕ ವಲಯದಲ್ಲಿ ಯೋಜನಾಬದ್ಧ ಉತ್ಪಾದನೆ ಮತ್ತು ವಿತರಣೆಗಳಿರುತ್ತವೆ. ವರ್ಗ ಭಿನ್ನತೆಗಳು ಇಲ್ಲವಾಗಿ ರಾಜಕೀಯ ಅಧಿಕಾರವೆಂಬುದು ಜನತೆಯ ಅಧಿಕಾರವಾಗಿ ವಿಕಾಸಗೊಳ್ಳುತ್ತದೆ. ಬಂಡವಾಳವು ಮನುಷ್ಯ-ಮನುಷ್ಯ ಸಂಬಂಧಗಳನ್ನು ಸ್ವಹಿತದ ದೃಷ್ಟಿಯಿಂದ ನಿರ್ದೇಶಿಸಿದರೆ ಸಾಮ್ಯವಾದವು ಸಮಾಜದ ಅಂತಸ್ಸಂಬಂಧಗಳನ್ನು ಸಮಷ್ಟಿಯ ನೆಲೆಯಲ್ಲಿ ಸುಭದ್ರಗೊಳಿಸುತ್ತದೆ.

ಪ್ರಣಾಲಿಕೆಯಲ್ಲಿ ಪ್ರತಿಪಾದಿತವಾಗಿರುವ ಇನ್ನೊಂದು ಗಹನ ವಿಷಯ ಉದ್ಯಮ ಮತ್ತು ಮಾರುಕಟ್ಟೆಗೆ ಸಂಬಂಧಿಸಿದ್ದು. ಜಾಗತೀಕರಣವು ನೂತನವಾದ ಒಂದು ಕಲ್ಪನೆ ಎಂದು ಭ್ರಮಿಸಿರುವವರು ಇದನ್ನು ಗಂಭೀರವಾಗಿ ಪರಿಶೀಲಿಸುವ ಅಗತ್ಯವಿದೆ. ಬಂಡವಾಳದ ವಿಕಾಸವು ಸಹಜವಾಗಿ ಜಾಗತೀಕರಣದಂತಹ ಪ್ರಕ್ರಿಯೆಗೆ ಹಾದಿಮಾಡಿಕೊಡುತ್ತದೆ. ಹಾಗೆ ಬೆಳೆಯದಿದ್ದರೆ ಅದು ಕುಸಿತವನ್ನು ಅನುಭವಿಸಬೇಕಾಗುತ್ತದೆ. ಜಾಗತೀಕರಣವೆಂಬ ಹೆಸರು ಹೊಸದಿರಬಹುದು, ಆದರೆ ಅದು ಸೂಚಿಸುವ ಅಂಶ ೧೬೦ ವರ್ಷದಷ್ಟು ಹಳೆಯದು. ಭಾರಿ ಪ್ರಮಾಣದಲ್ಲಿ ಉದ್ಯಮವು ಬೆಳೆದಾಗ ಅದಕ್ಕೆ ವಿಶಾಲವಾದ ಮಾರುಕಟ್ಟೆ ಅಗತ್ಯವಾಗುತ್ತದೆ. ವಾಣಿಜ್ಯ, ನೌಕಾಯಾನ, ಸಾರಿಗೆ ಸಂಪರ್ಕ, ಇವೆಲ್ಲಾ ಹೆಚ್ಚುವುದು ಇದರ ಹಿನ್ನೆಲೆಯಲ್ಲಿ. ವಿಜ್ಞಾನ-ತಂತ್ರಜ್ಞಾನಗಳು ಕೂಡ ಉದ್ಯಮದಿಂದ ಬೆಳೆಯುತ್ತವೆ ಮತ್ತು ಅದೇ ಕಾಲದಲ್ಲಿ ಉದ್ಯಮಗಳನ್ನು ಬೆಳೆಸುತ್ತವೆ. ಮಾರುಕಟ್ಟೆಗಳನ್ನು ಹುಡುಕಿಕೊಂಡು ಹೋದಂತೆ ಅವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಒತ್ತಡವೂ ಹೆಚ್ಚುತ್ತದೆ. ವಸಾಹತುಶಾಹಿ ಮತ್ತು ಇಂದಿನ ನವ ವಸಾಹತುಶಾಹಿ ದೌರ್ಜನ್ಯಗಳಿಗೆ ಇದೇ ಮೂಲ. ಔದ್ಯಮಿಕ ಉತ್ಪಾದನೆಯ ಹೆಚ್ಚಳವನ್ನು ಚರ್ಚಿಸುವಾಗ ಪ್ರಣಾಲಿಕೆಯು ಒಂದು ಅರ್ಥವತ್ತಾದ ರೂಪಕವನ್ನು ಪ್ರಯೋಗಿಸಿದೆ: "ಮಾಂತ್ರಿಕನು ತನ್ನ ಮಾಟ-ಮಂತ್ರಗಳಿಂದ ಯಾವುವೋ ಗೂಢಶಕ್ತಿಗಳನ್ನು ಕರೆದೆಬ್ಬಿಸುತ್ತಾನೆ, ಆದರೆ ಅವುಗಳ ಮೇಲಿನ ನಿಯಂತ್ರಣವನ್ನು ಕಳೆದುಕೊಂಡುಬಿಡುತ್ತಾನೆ; ಅಂತೆಯೇ, ಬಂಡವಾಳಶಾಹಿಯು ಉತ್ಪಾದನಾ ಶಕ್ತಿಯನ್ನು ವಿಪುಲವಾಗಿ ಬೆಳೆಸಿ ಅವುಗಳ ಮೇಲಿನ ನಿಯಂತ್ರಣವನ್ನು ಕಳೆದುಕೊಳ್ಳುತ್ತದೆ. ಆ ಶಕ್ತಿಯನ್ನು ಆಡಳಿತಾತ್ಮಕವಾಗಿ ಹತೋಟಿಯಲ್ಲಿಟ್ಟುಕೊಳ್ಳಲು ಬಂಡವಾಳಶಾಹಿಗೆ ಶಕ್ಯವಿಲ್ಲ. ಆದ್ದರಿಂದಲೇ ಅದು ಕಾಲದಿಂದ ಕಾಲಕ್ಕೆ ಮುಗ್ಗಟ್ಟುಗಳಲ್ಲಿ ಸಿಲುಕಿಹಾಕಿಕೊಳ್ಳುತ್ತದೆ." ತನ್ನನ್ನು ತಾನು ಉಳಿಸಿಕೊಳ್ಳಲು ಅದು ಜಾಗತಿಕವಾಗಿ ಷಡ್ಯಂತ್ರಗಳನ್ನು ರಚಿಸಬೇಕಾಗುತ್ತದೆ. ಅದಕ್ಕೆ ಪ್ರಚಲಿತ ವಿದ್ಯಮಾನಗಳಲ್ಲಿ ಒಂದು ಉದಾಹರಣೆಯನ್ನು ನೋಡಬಹುದು. ೧೯೯೭ರಲ್ಲಿ ಪ್ರಕಟವಾದ ಒಂದು ಪುಸ್ತಕದಲ್ಲಿ ಜೋಶುವಾ ಕಾರ್ಲಿನರ್ ಎಂಬಾತ ವಿಶ್ವ ಬ್ಯಾಂಕಿನ ಅಧಿಕಾರಿಗಳು ೧೯೯೧ರಲ್ಲಿ ಯೋಜಿಸಿದ್ದ ಒಂದು ಹೊಲಸು ತಂತ್ರವನ್ನು ದಾಖಲಿಸಿದ್ದಾನೆ. ಆಗ್ಗೆ ವಿಶ್ವ ಬ್ಯಾಂಕಿನ ಪ್ರಧಾನ ಅರ್ಥಶಾಸ್ತ್ರಜ್ಞನಾಗಿದ್ದ ಲಾರೆನ್ಸ್ ಸಮರ್ಸ್ ತನ್ನ ಸಹೋದ್ಯೋಗಿಗೆ ಒಂದು ಟಿಪ್ಪಣಿ ಕಳಿಸಿದ: "ನಮ್ಮನಮ್ಮಲ್ಲೇ ಇಟ್ಟುಕೊಂಡು ಒಂದು ವಿಷಯವನ್ನು ಚರ್ಚಿಸೋಣ. ನಮ್ಮಲ್ಲಿ (ಅಂದರೆ, ಅಮೆರಿಕಾದಂತಹ ಅಭಿವೃದ್ಧ ದೇಶಗಳಲ್ಲಿ) ಇರುವ ಕೊಳಕು ಉದ್ಯಮಗಳನ್ನು ಅನಭಿವೃದ್ಧ ದೇಶಗಳಿಗೆ ರವಾನಿಸುವುದನ್ನು ವಿಶ್ವ ಬ್ಯಾಂಕ್ ಹೆಚ್ಚುಹೆಚ್ಚಾಗಿ ಉತ್ತೇಜನ ನೀಡಬೇಕಲ್ಲವೆ?" ಕೊಳಕು ಉದ್ಯಮಗಳೆಂದರೆ ಅಪಾಯಕಾರಿ ಕಾರ್ಖಾನೆಗಳು, ವಿಸರ್ಜಿತಗಳು ವಿಷಮಯ ಆಗಿರುವಂತಹ ಉದ್ಯಮಗಳು. ಅವುಗಳ ಉತ್ಪಾದನೆ ಬೇಕು, ಆದರೆ ಅಪಾಯ ಬೇಡ. ಆದ್ದರಿಂದ ಆಫ್ರಿಕಾಕ್ಕೋ ಭಾರತಕ್ಕೋ ಅದನ್ನು ಸ್ಥಳಾಂತರಿಸಬೇಕು. ಭೋಪಾಲಿಗೆ ಯೂನಿಯನ್ ಕಾರ್ಬೈಡ್ ತಂದ ದುರಂತ

ಇಂಥದೇ ಎಂಬುದನ್ನು ಮರೆಯಬಾರದು. ಸಮರ್ಸ್ ಮುಂದುವರೆದು ಹೇಳಿದ: "ವಿಷ ಪೂರಿತ ತ್ಯಾಜ್ಯಗಳನ್ನು ಅತಿಕಡಿಮೆ ಕೂಲಿ ಇರುವಂತಹ ದೇಶಗಳ ಮೇಲೆ ಸುರಿಯುವುದರ ಹಿಂದಿರುವ ಆರ್ಥಿಕ ತರ್ಕವು ನಿರ್ದುಷ್ಟವಾದುದು. ಅದನ್ನು ಧೈರ್ಯದಿಂದ ನಾವು ಸ್ವೀಕರಿಸಬೇಕು." ಅಂದರೆ, ಅನಭಿವೃದ್ಧ ದೇಶದ ಮಾನವ ಜೀವ ಬೇರೆ ದೇಶಗಳ ಜೀವಗಳಿಗಿಂತ ಕಳಪೆಯಾದುದು, ಅದು ನಷ್ಟವಾದರೆ ಅಂತಹ ಅನಾಹುತವೇನೂ ಇಲ್ಲ, ಎಂದರ್ಥ. ಕಡಿಮೆ ಕೂಲಿಗೆ ದುಡಿಯುವವನ ಜೀವದ ಬೆಲೆಯೂ ಕಡಿಮೆ! ಇದು ಬಂಡವಾಳಶಾಹಿಯ ನೈತಿಕತೆ, ಉತ್ಪಾದನಾ ವಿಧಾನ, ಮಾರುಕಟ್ಟೆಗಳ ಹುಡುಕಾಟ! ಈ ಟಿಪ್ಪಣಿಯನ್ನು ಬರೆದ ಒಂದೆರಡು ವರ್ಷಗಳಲ್ಲೇ ಲಾರೆನ್ಸ್ ಸಮರ್ಸ್ ಅಮೆರಿಕಾದ ಅರ್ಥಮಂತ್ರಿಯಾದ. ಆಮೇಲೆ ಅದೆಷ್ಟು ಬಡ ದೇಶಗಳ ಮೇಲೆ ವಿಷದ ಮಳೆ ಸುರಿಸಿದನೋ ಬಲ್ಲವರಾರು!

ಇಂತಹ ಬಂಡವಾಳಶಾಹಿಯ ಉಪಕ್ರಮದ ಫಲವೇ ಜಾಗತೀಕರಣ. ಅದನ್ನು ಎಲೆನ್ ಮೇಕ್ಸಿನ್ಸ್ ವುಡ್ ಎಂಬಾಕೆ ವಿವರಿಸಿರುವುದು ಹೀಗೆ: "ಜಾಗತಿಕ ವ್ಯವಸ್ಥೆಯಲ್ಲಿ ಬಂಡವಾಳವು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಹೊಸ ತತ್ತ್ವಗಳನ್ನು ಅರಸಿ ಆಯ್ದುಕೊಳ್ಳಬೇಕು. ಅದಕ್ಕೆ 'ಜಾಗತೀಕರಣ' ಎಂಬ ಹೆಸರು ಬಂದಿದೆ. ಈ ವ್ಯವಸ್ಥೆಯಲ್ಲಿ ಎಲ್ಲ ಪ್ರಮುಖ ಆರ್ಥಿಕ ಪಾತ್ರಧಾರಿಗಳೂ ಬಂಡವಾಳಶಾಹಿ ತರ್ಕಕ್ಕೆ ಬದ್ಧರಾಗಿಯೇ ಕೆಲಸ ಮಾಡುವುದು. ಹಿಂದೆ ಸಾಮ್ರಾಜ್ಯಶಾಹಿಯು ಮಾಡುತ್ತಿದ್ದುದೂ ಇದನ್ನೇ. ಅಂದರೆ, ಬಂಡವಾಳವು ಹೆಚ್ಚಾಗಿ ಇಲ್ಲದ ದೇಶಗಳಲ್ಲಿ ಬಂಡವಾಳದ ಹಿತಕ್ಕೆ ಅನುಗುಣವಾದ ತತ್ತ್ವಗಳನ್ನು ಅನುಷ್ಠಾನಕ್ಕೆ ತರುವುದು." ಸ್ವದೇಶದಲ್ಲಿ ಲಾಭದ ಗಳಿಕೆಗೆ ಹೊಸ ಅವಕಾಶಗಳು ಉಳಿದಿಲ್ಲದಿರುವಾಗ ಬೇರೆ ದೇಶಗಳ ಮಾರುಕಟ್ಟೆಗಳ ಮುತ್ತಿಗೆಗೆ ಜಾಗತೀಕರಣವೆಂದು ಹೆಸರು. ಅದು ಹೊಸದೂ ಅಲ್ಲ, ಶ್ರೇಯಸ್ಕರವಂತೂ ಅಲ್ಲವೇ ಅಲ್ಲ. ಇಸ್ತ್ವಾನ್ ಮೇಜರೋಸ್ ಎಂಬ ಇರಾನಿನ ಅರ್ಥಶಾಸ್ತ್ರಜ್ಞನ ಮಾತುಗಳಲ್ಲಿ ಹೇಳುವುದಾದರೆ, "ಈಚಿನ ದಿನಗಳಲ್ಲಿ ಕಂಡುಬಂದಿರುವ ಸಮಸ್ಯೆ ಮತ್ತು ವೈರುಧ್ಯಗಳಿಗೆಲ್ಲಾ ಅತ್ಯಂತ ಸ್ವಾಭಾವಿಕ ಪರಿಹಾರವೆಂಬಂತೆ ಜಾಗತೀಕರಣದ ಮಂತ್ರದಂಡವನ್ನು ನಮಗೆ ನೀಡಲಾಗುತ್ತಿದೆ. ಈ ಪರಿಹಾರವು ಸಂಪೂರ್ಣವಾಗಿ ನೂತನ ವಿಧಾನವೆಂಬಂತೆ ಚಿತ್ರಿಸಲಾಗುತ್ತಿದೆ. ಕಳೆದ ಒಂದೆರಡು ದಶಕಗಳಲ್ಲಿ ಮಾತ್ರವೇ ಇತಿಹಾಸದ ದಿಗಂತದಲ್ಲಿ ಜಾಗತೀಕರಣವೆಂಬ ಅಂಶವು ಕಾಣಿಸಿಕೊಂಡಿತೇನೋ ಎಂಬಂತೆ ಮಾತನಾಡುವುದುಂಟು. ಈ ಜಾಗತೀಕರಣವು ಸಾರ್ವತ್ರಿಕ ಪರೋಪಕಾರಿ ಎನ್ನುವಂತೆ ಅವತರಿಸಿದೆ. ಹಿಂದೆ 'ಅದೃಶ್ಯ ಹಸ್ತ'ವೆಂಬ ಕಲ್ಪನೆಯು ಹೀಗೆಯೇ ಅವತರಿಸಿತ್ತು, ಶ್ಲಾಘಿಸಲ್ಪಟ್ಟಿತ್ತು. ಆದರೆ ಆ ಹಸ್ತವು ಏನನ್ನೂ ನೀಡದೆ, ಸುಧಾರಿಸದೆ, ಮಾಯವಾಗಿಬಿಟ್ಟಿತು. ಹಾಗೆ ನೋಡಿದರೆ, ಬಂಡವಾಳಶಾಹಿ ವ್ಯವಸ್ಥೆಯು ಆರಂಭದಿಂದಲೇ ಅನಿವಾರ್ಯವಾಗಿ ಜಾಗತೀಕರಣದತ್ತ ದಾಪುಗಾಲು ಹಾಕುತ್ತಲೇ ಇತ್ತು." ಕಮ್ಯುನಿಸ್ಟ್ ಪ್ರಣಾಳಿಕೆಯು ೧೬೦ ವರ್ಷಗಳಷ್ಟು ಹಿಂದೆಯೇ ಈ ಅಂಶವನ್ನು ಸ್ಪಷ್ಟವಾಗಿ ವಿಶ್ಲೇಷಿಸಿ ಹೇಳಿತ್ತು: "ವಿಶ್ವದ ಮಾರುಕಟ್ಟೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾ ಬಂಡವಾಳಶಾಹಿಯು ಉತ್ಪಾದನೆ ಮತ್ತು ಅನುಭೋಗಗಳಿಗೆ ಅಂತರ

ರಾಷ್ಟ್ರೀಯ ಸ್ವರೂಪವನ್ನು ನೀಡುತ್ತಾ ಬಂದಿದೆ. ...ಹಿಂದೆ ಸ್ಥಳೀಯ ಮತ್ತು ದೇಶೀಯ ಏಕಾಂತದಲ್ಲಿ ಉತ್ಪಾದನೆ-ಅನುಭೋಗಗಳು ಜರುಗುತ್ತಿದ್ದವು ಮತ್ತು ಅದರಲ್ಲಿ ಸ್ವಾವಲಂಬನೆ ಇತ್ತು. ಅದರ ಜಾಗದಲ್ಲಿ ಇಂದು ದೇಶ-ದೇಶಗಳ ನಡುವೆ ಪ್ರತಿಯೊಂದು ದಿಕ್ಕಿನಲ್ಲೂ ಸಂಬಂಧಗಳು ಏರ್ಪಟ್ಟಿವೆ, ಸಾರ್ವತ್ರಿಕ ಅವಲಂಬನೆ ಕಂಡುಬಂದಿದೆ. ...ಸಂಕ್ಷಿಪ್ತವಾಗಿ ಹೇಳುವುದಾದರೆ, ಬಂಡವಾಳಶಾಹಿಯು ತನ್ನ ಪ್ರತಿಮೆಗೆ ಅನುರೂಪ ವಾಗಿಯೇ ಇಡೀ ವಿಶ್ವವನ್ನು ಸೃಷ್ಟಿಸಿಕೊಳ್ಳುತ್ತಿರುತ್ತದೆ." ಕಮ್ಯುನಿಸ್ಟ್ ಪ್ರಣಾಲಿಕೆಯ ಇಂತಹ ಸಾರ್ವತ್ರಿಕತೆಯಿಂದಾಗಿಯೇ ಬಂಡವಾಳಶಾಹಿಯ ವಕ್ತಾರರು ಅದನ್ನು ಪ್ರತಿಯೊಂದು ದಶಕದಲ್ಲೂ ಹತ್ಯೆಗೆ ಗುರಿಮಾಡುತ್ತಾ ಬಂದಿರುವುದು. ಆದರೆ ಪ್ರಣಾಲಿಕೆಯು ಅವರನ್ನು ನಿರಂತರವಾಗಿ ನಿರಾಶರನ್ನಾಗಿ ಮಾಡುತ್ತಲೇ ಬಂದಿದೆ. ಅದು ಅದರ ಜೀವಸತ್ವದ ಪ್ರತೀಕ.

ಪ್ರಣಾಲಿಕೆಯ ಇನ್ನೊಂದು ಅಂಶವನ್ನು ನಾವು ಒತ್ತುಕೊಟ್ಟು ಗಮನಿಸಬೇಕು: ಬಂಡವಾಳಶಾಹಿಯ ವೈರುಧ್ಯವನ್ನು ತೊಡೆದುಹಾಕುವ ವಿಧಾನಕ್ಕೆ ಸಂಬಂಧಪಟ್ಟ ಪ್ರಶ್ನೆ ಅದು. ಕಾರ್ಮಿಕ ವರ್ಗದ ನೇತೃತ್ವದಲ್ಲಿನ ಸಾಮಾಜಿಕ ಕ್ರಾಂತಿಯಿಂದ ಮಾತ್ರ ಆ ವೈರುಧ್ಯಕ್ಕೆ ಪರಿಹಾರ ದಕ್ಕಬಲ್ಲದು. ಬಂಡವಾಳಶಾಹಿಯ ದಮನಕ್ಕೆ ದಟ್ಟವಾಗಿ ಸಿಲುಕಿರುವ ವರ್ಗ ಇದು; ಆದ್ದರಿಂದ ವರ್ಗರಹಿತ ಸಮಾಜದ ಸೃಷ್ಟಿ, ಕ್ರಾಂತಿಕಾರಿ ಪುನರ್ರಚನೆ, ಇವು ಕೂಡ ಇದೇ ವರ್ಗದ ಚಾರಿತ್ರಿಕ ಜವಾಬ್ದಾರಿ. ದುಡಿಯುವ ಕಾರ್ಮಿಕ ಮತ್ತು ಬಂಡವಳಿಗನ ನಡುವೆ ಸತತವಾಗಿ ಹೋರಾಟವು ಸಾಗುತ್ತಾ ಬಂದಿದೆ. ಮೊದಲಿಗೊಂದು ಮಾರ್ಗವನ್ನು ಅನುಸರಿಸಲಾಯಿತು; ಅದರಲ್ಲಿ ಬಂಡವಳಿಗನ ಉತ್ಪಾದನಾ ಸಲಕರಣೆಗಳನ್ನು ದುಡಿಯುವ ವನು ಧ್ವಂಸಮಾಡಿದ. ಅವಿದ್ದರೆ ತಾನೆ ತನ್ನ ದಾಸ್ಯ ಸಾಧ್ಯವಾದೀತು ಎಂಬ ಹುಂಬತನದ ಪ್ರತಿಕ್ರಿಯೆ ಅದು. ಉತ್ಪಾದನಾ ಸಲಕರಣೆಗಳು ನಿರ್ಜೀವಿಗಳಾದರೆ ಗುಲಾಮರು "ಮಾತ ನಾಡುವ ಸಲಕರಣೆಗಳು" ಎಂದು ಅರಿಸ್ಟಾಟಲ್ ವಿವರಿಸಿದ್ದ. ಅಂದರೆ, ಅವನ ಪ್ರಕಾರ ಅವರು ಮನುಷ್ಯರಲ್ಲ, ಕೇವಲ ಉತ್ಪಾದನಾ ಸಾಧನಗಳು. ಗುಲಾಮಗಿರಿಯಿಂದ ವಿಮೋಚನೆ ಹೇಗೆ? ಹಾರೆ, ಗುದ್ದಲಿ, ನೇಗಿಲು, ಮುಂತಾದವಿದ್ದರೆ ಗುಲಾಮರು ಗಣಿಗಳಿಗೆ, ಹೊಲಗಳಿಗೆ, ತೆರಳಿ ದುಡಿಯಬೇಕು. ಅವಿಲ್ಲದಿದ್ದರೆ ಹೇಗೆ ದುಡಿಸಿಕೊಳ್ಳುತ್ತಾರೆ? ಆದ್ದರಿಂದ ಉಪಕರಣ ಗಳನ್ನು ಧ್ವಂಸ ಮಾಡುವುದೇ ಹಾದಿ! ಅವರಿಗೆ ತಿಳಿಯದೆ ಹೋದದ್ದು ಇದು: ಒಂದು ಉಪಕರಣ ನಾಶ ಮಾಡಿದರೆ ಅಂತಹ ಇನ್ನೊಂದು ಮಾಡಲು ಇದೇ ಗುಲಾಮರಿಗೆ ಕೆಲಸ ಹಚ್ಚಲಾಗುತ್ತದೆ. ಔದ್ಯಮಿಕ ಕ್ರಾಂತಿಗೆ ಮುನ್ನ ಯೂರೋಪಿನಲ್ಲಿ 'ಲಡ್ಡೈಟರು' ಎಂಬ ಖ್ಯಾತ ಬಂಡಾಯಕಾರರು ಸಹ ಇದೇ ಉಪಕರಣ-ಧ್ವಂಸದ ಮಾರ್ಗ ಹಿಡಿದಿದ್ದರು, ಕಾರ್ಖಾನೆಗಳಿಗೆ ಬೆಂಕಿ ಹಚ್ಚಿದ್ದರು. ಅದರಿಂದ ಬಂಡವಾಳಶಾಹಿ ಅಳಿಯಲಿಲ್ಲ. ಆಗ ಹೋರಾಟವು ಒಂದು ಸ್ತರ ಮೇಲಕ್ಕೇರಿತು. ತನ್ನ ಹಿತ ಎಲ್ಲಿದೆ ಎಂಬುದರ ಅರಿವಿನಿಂದ ದುಡಿಯುವ ಜನ ನಿಜವಾದ ಶತ್ರುವನ್ನು ಗುರುತಿಸಿದರು. ಹೋರಾಟವು ವೈಯಕ್ತಿಕವಾಗಿ ಒಬ್ಬ ಕಾರ್ಮಿಕ ಮತ್ತು ಒಬ್ಬ ಬಂಡವಳಿಗನ ನಡುವಿನದಲ್ಲ. ಹೋರಾಟವಿರುವುದು ಐಕ್ಯಗೊಂಡ ಕಾರ್ಮಿಕ ವರ್ಗ ಮತ್ತು

ಬಂಡವಾಳಶಾಹಿ ಪದ್ಧತಿಯ ಉತ್ಪಾದನಾ ಸಂಬಂಧಗಳ ನಡುವೆ. "ಪ್ರತಿಯೊಂದು ವರ್ಗ ಹೋರಾಟವೂ ಒಂದು ರಾಜಕೀಯ ಹೋರಾಟವೇ ಆಗಿರುತ್ತದೆ" ಎನ್ನುತ್ತದೆ ಕಮ್ಯುನಿಸ್ಟ್ ಪ್ರಣಾಲಿಕೆ.

ಕಮ್ಯುನಿಸ್ಟರ ಆಸಕ್ತಿ ಯಾವುದರಲ್ಲಿದೆ? ದುಡಿಯುವ ವರ್ಗದ ಆಸಕ್ತಿಗೆ ಭಿನ್ನವಾಗಿ ಅವರಿಗೆ ಬೇರಾವ ಆಸಕ್ತಿಯೂ ಇರಲು ಶಕ್ಯವಿಲ್ಲವೆನ್ನುತ್ತದೆ ಪ್ರಣಾಲಿಕೆ. ಆದರೆ ಅವರು ದುಡಿಯುವ ವರ್ಗದ ಅಂಗವಾಗಷ್ಟೇ ಉಳಿಯುವುದಿಲ್ಲ. ಆ ವರ್ಗದ ಕ್ರಾಂತಿಕಾರಿಗಳು, ರಾಜಕೀಯ ಪ್ರಜ್ಞೆಯುಳ್ಳವರು, ಮುಂಚೂಣಿಯಲ್ಲಿ ನಿಂತು ಹೋರಾಟ ನಡೆಸುವವರು ಕಮ್ಯುನಿಸ್ಟರು. ಅವರು ಕೇವಲ ಸಿದ್ಧಾಂತಿಗಳಲ್ಲ, ದುಡಿಯುವ ವರ್ಗದ ಅಧಿಕಾರವನ್ನು ಚಲಾಯಿಸುವುದರಲ್ಲಿ ಭಾಗಿಗಳು ಕೂಡ. ಕಮ್ಯುನಿಸ್ಟ್ ಪ್ರಣಾಲಿಕೆಯ ಇನ್ನೊಂದೆರಡು ಸಾಲುಗಳನ್ನು ಮನನ ಮಾಡುವುದು ಅಗತ್ಯ: "ಕಮ್ಯುನಿಸ್ಟರ ಸಿದ್ಧಾಂತವನ್ನು ಒಂದೇ ವಾಕ್ಯದಲ್ಲಿ ಸಂಗ್ರಹಿಸಿ ಹೇಳುವುದಾದರೆ ಅದು (ಉತ್ಪಾದನಾ ಸಾಧನಗಳ ರೂಪದಲ್ಲಿರುವ) ಖಾಸಗಿ ಆಸ್ತಿಯ ನಿರ್ಮೂಲನ." ಅಂದರೆ, ಅನುಭೋಗದ ವಸ್ತುಗಳನ್ನು ಆಸ್ತಿಯನ್ನಾಗಿ ಹೊಂದಲು ಕಮ್ಯುನಿಸ್ಟರ ವಿರೋಧವಿಲ್ಲವೆಂದರ್ಥ. ಅಂತಹ ಆಸ್ತಿ ವೃದ್ಧಿಯಾಗಬೇಕು, ಪ್ರತಿಯೊಬ್ಬರಿಗೂ ದಕ್ಕುವಂತಾಗಬೇಕು. ಸಾಮಾಜಿಕ ಉತ್ಪಾದನೆಯು ಇಡೀ ಸಮಾಜಕ್ಕೆ ಸೇರಿದ್ದು. ಆದರೆ ಸಾಮಾಜಿಕ ಉತ್ಪಾದನೆಯ ಭಾಗವನ್ನು ತನ್ನದಾಗಿಸಿಕೊಂಡು ಯಾರೂ ಬೇರೆಯವರ ದುಡಿಮೆಯನ್ನು ತನ್ನ ಅಧೀನಕ್ಕೆ ಪಡೆಯುವಂತಿರಕೂಡದು. ಒಂದು ಅಂಗಿ, ವಾಹನ, ಮನೆ ಇತ್ಯಾದಿಗಳಿಗೂ ಒಂದು ಕಾರ್ಖಾನೆ, ಭಾರಿ ಭೂ ಹಿಡುವಳಿ ಮುಂತಾದವುಗಳಿಗೂ ಇರುವ ವ್ಯತ್ಯಾಸ ಇದೇ. ಮೊದಲನೆಯ ವಿಭಾಗದ ವಸ್ತುಗಳು ಹೇರಳವಾಗಿ ಎಲ್ಲರಿಗೂ ಲಭ್ಯವಾಗಬೇಕು; ಎರಡನೆಯ ವಿಭಾಗದವು ಯಾರೊಬ್ಬರಿಗೂ ಸೇರುವಂತಿರಬಾರದು. "ಬಂಡವಾಳಶಾಹಿ ಪದ್ಧತಿಯಲ್ಲಿ ವರ್ಗಗಳು, ವರ್ಗ ವೈರುಧ್ಯಗಳು ಇವೆ. ಅದರ ಜಾಗದಲ್ಲಿ ನಾವು ಏರ್ಪಡಿಸುವ ವ್ಯವಸ್ಥೆ ಬೇರೆ ತೆರನಾದ್ದು. ನಮ್ಮ ಆ ಪರಸ್ಪರ ಸಂಬಂಧಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಮುಕ್ತ ಬೆಳವಣಿಗೆಯು ಇಡೀ ಸಮುದಾಯದ ಮುಕ್ತ ಬೆಳವಣಿಗೆಗೆ ಉಪಾಧಿಯಾಗಿರುತ್ತದೆ." ಮಾನವನಿಂದ ಮಾನವನ ಮತ್ತು ಒಂದು ದೇಶದಿಂದ ಇನ್ನೊಂದು ದೇಶದ ಶೋಷಣೆಯು ಅಂತ್ಯವಾಗುವುದು ಈ ಹಾದಿಯನ್ನು ಕ್ರಮಿಸಿದಾಗ ಮಾತ್ರವೇ ಸಾಧ್ಯ. ಆದ್ದರಿಂದಲೇ ಪ್ರಣಾಲಿಕೆಯು ಕೊಡುವ ಘೋಷಣೆ ಹೀಗಿದೆ: "ವಿಶ್ವದ ಎಲ್ಲ ದುಡಿಯುವ ಜನರೇ, ಒಂದಾಗಿ. ನಿಮ್ಮ ಬಂಧನಗಳನ್ನುಳಿದು ನೀವು ಕಳೆದುಕೊಳ್ಳುವಂಥದು ಬೇರೇನೂ ಇಲ್ಲ. ನೀವು ಜಯಿಸಿ ಹೊಂದಬೇಕಾದ ಒಂದು ಹೊಸ ವಿಶ್ವವೇ ಇದೆ."

❑❑

೭

ಜೀವನದ ಕೆಲವು ಅಧ್ಯಾಯಗಳು

"ಕಮ್ಯುನಿಸ್ಟ್ ಮ್ಯಾನಿಫೆಸ್ಟೊ" ಬರೆದು ಮುಗಿಸುವ ಮುನ್ನ ೧೮೪೫ರಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸ್ ಜಂಟಿಯಾಗಿ ಇನ್ನೊಂದು ಮೌಲಿಕ ಕೃತಿಯನ್ನು ರಚಿಸಿದ್ದರು. ಹೆಗೆಲ್ ನಂತರದ ತತ್ತ್ವಶಾಸ್ತ್ರದ ಪರಾಮರ್ಶೆಗೆ ಮೀಸಲಾದ ಈ ಗ್ರಂಥದ ಹೆಸರು "ಜರ್ಮನಿಯ ಸೈದ್ಧಾಂತಿಕ ತತ್ತ್ವ" (ದಿ ಜರ್ಮನ್ ಐಡಿಯಾಲಜಿ) ಎಂದು. ಬ್ರೂನೋ ಬಾಯರ್ ಮತ್ತು ಮ್ಯಾಕ್ಸ್ ಸ್ಟರ್ನರ್ ಇಬ್ಬರೂ ಅನೇಕ ಲೇಖನಗಳನ್ನು ಪ್ರಕಟಿಸಿದ್ದರು ಮತ್ತು ಅವುಗಳಲ್ಲಿ ತಮ್ಮನ್ನು ತಾವು "ನಿಜವಾದ ಸಮಾಜವಾದಿಗಳು" ಎಂದು ಕರೆದುಕೊಂಡಿದ್ದರು. ಫಾವರ್ ಬಾಕ್ ಸಹ ೧೮೪೫ರ ತನ್ನೊಂದು ಲೇಖನದಲ್ಲಿ ತನ್ನನ್ನು ತಾನು "ಕಮ್ಯುನಿಸ್ಟ್ " ಎಂದು ಕರೆದುಕೊಂಡಿದ್ದನು. ಈ ಹಿನ್ನೆಲೆಯಲ್ಲಿ "ಜರ್ಮನಿಯ ಸೈದ್ಧಾಂತಿಕ ತತ್ತ್ವ"ದ ರಚನೆಯಾಯಿತು. "ಪವಿತ್ರ ಕುಟುಂಬ" ಕ್ಕಿಂತಲೂ ಸಮಗ್ರವಾದ ಈ ಗ್ರಂಥದಲ್ಲಿ ಚಾರಿತ್ರಿಕ ಭೌತವಾದದ ಪರಿಕಲ್ಪನೆಯನ್ನು ವಿಸ್ತಾರವಾಗಿ ಚರ್ಚಿಸಲಾಗಿದೆ ಮತ್ತು ಅದು ವೈಜ್ಞಾನಿಕ ಸಾಮ್ಯವಾದಕ್ಕೆ ದಾರ್ಶನಿಕ ಬುನಾದಿಯೆಂದು ಪರಿಗಣನೆಗೆ ಬಂದಿದೆ. ಗ್ರಂಥದ ಮೊದಲ ಮೂರು ಅಧ್ಯಾಯಗಳಲ್ಲಿ

ಫಾವರ್‌ಬಾಕ್‌ನ ಸಿದ್ಧಾಂತವನ್ನು ವಿಮರ್ಶೆ ಮಾಡುವುದಲ್ಲದೆ ಭೌತವಾದ ಮತ್ತು ಭಾವನಾವಾದಗಳ ದೃಷ್ಟಿಕೋನಗಳನ್ನು ಪರಿಶೀಲಿಸಲಾಗಿದೆ. ಇದರ ಜೊತೆಗೆ ಬ್ರೂನೋ ಮತ್ತು ಸ್ಟರ್ನರ್ ಗಳ ಚಿಂತನದ ವಿಮರ್ಶೆಯೂ ಇದೆ. ಗ್ರಂಥದ ಮಿಕ್ಕ ಭಾಗದಲ್ಲಿ ಅನೇಕ "ನೈಜ ಸಮಾಜವಾದಿ"ಗಳ ವಿಮರ್ಶೆ ಇದೆ.

ಮಾರ್ಕ್ಸ್‌ನ ಕೊಡುಗೆಗಳಲ್ಲಿ ಎರಡು ಬಹಳ ಪ್ರಶಸ್ತವಾದುವೆಂದು ಏಂಗೆಲ್ಸ್ ಹೇಳುತ್ತಿದ್ದುದುಂಟು. ಚಾರಿತ್ರಿಕ ಭೌತವಾದ ಒಂದು; ಮಿಗುತಾಯ ಮೌಲ್ಯ ಇನ್ನೊಂದು. ಸಾಮಾಜಿಕ ಬದಲಾವಣೆ ಹಾಗೂ ಉತ್ಪಾದನಾ ವ್ಯವಸ್ಥೆಯ ನಡುವಣ ಸಂಬಂಧ ಮತ್ತು ಸಾಮಾಜಿಕ ರಚನೆಗಳು ವಿಕಾಸಗೊಳ್ಳುತ್ತಾ ಬದಲಾಗಿರುವ ವಿಧಾನವನ್ನು ಚಾರಿತ್ರಿಕ ಭೌತವಾದವು ವಿವರಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ದುಡಿಮೆಯೊಂದೇ ಮಾರಲು ಸರಕಾಗುಳ್ಳ ಕಾರ್ಮಿಕನ ಶೋಷಣೆಯ ಮೂಲವನ್ನು ವಿವರಿಸುವ ಕಲ್ಪನೆ ಮಿಗುತಾಯ ಮೌಲ್ಯವೆಂದು ಪ್ರಸಿದ್ಧವಾಗಿದೆ. "ಜರ್ಮನಿಯ ಸೈದ್ಧಾಂತಿಕ ತತ್ತ್ವ" ಪ್ರಮುಖವಾಗಿ ನಿರ್ವಹಿಸಿದ ಕೆಲಸವೆಂದರೆ ಕನಸಿನ ಸಾಮ್ರಾಜ್ಯವಾಗಿ ಉಳಿದಿದ್ದ ಸಮಾಜವಾದವನ್ನು ಒಂದು ವಿಜ್ಞಾನದ ಮಟ್ಟಕ್ಕೇರಿಸಿದ್ದು. ವಿಶ್ವದ ಬಗೆಗಿನ ಹೊಸ ದೃಷ್ಟಿಕೋನದ ಉದ್ಘಾಟನೆ ಈ ಕೃತಿಯಿಂದ ಆಯಿತೆಂದರೆ ಅತಿಶಯೋಕ್ತಿ ಎನಿಸುವುದಿಲ್ಲ. ಈ ದೃಷ್ಟಿಕೋನಕ್ಕೆ ಸಾಮಗ್ರಿ ಒದಗಿಸುವ ಅಂಗಗಳು ಮೂರು: ವ್ಯಕ್ತಿಗಳು, ಅವರ ಕ್ರಿಯೆ ಮತ್ತು ಕ್ರಿಯೆಗಿರುವ ಭೌತಿಕ ಸನ್ನಿವೇಶಗಳು. ಸಾಮಾಜಿಕ ಬದಲಾವಣೆಗೆ ಇವು ಅಡಿಗಲ್ಲುಗಳು. ಪ್ರಜ್ಞಾಪೂರ್ವಕ ಕ್ರಿಯೆಯು ವ್ಯಕ್ತಿಯನ್ನೂ ಸನ್ನಿವೇಶವನ್ನೂ ಬದಲಾಯಿಸಬಲ್ಲದು. ಇದಕ್ಕೆ ಯಾವುದೇ ಧೀರೋದಾತ್ತ ವ್ಯಕ್ತಿಯ ವಿಕಾಸವು ನಿದರ್ಶನವನ್ನು ಒದಗಿಸುತ್ತದೆ. ದಕ್ಷಿಣ ಆಫ್ರಿಕದ ಗಾಂಧಿ, ಜಲಿಯನ್‌ವಾಲಾ ಬಾಗ್ ಪ್ರಕರಣದ ಕಾಲದ ಗಾಂಧೀಜಿ ಮತ್ತು 'ಭಾರತ ಬಿಟ್ಟು ತೊಲಗಿ' ಕಾಲದ ಮಹಾತ್ಮಾ ಗಾಂಧಿ ಒಬ್ಬರೇ ಆದರೂ ಭಿನ್ನ. ಅವರಲ್ಲಿ ಉಂಟಾದ ವಿಕಾಸಕ್ಕೆ ಅವರ ಕ್ರಿಯೆ ಕಾರಣ; ಕ್ರಿಯೆಯು ಹೊಸ ಅರಿವನ್ನು ಮೂಡಿಸಿ ಬೇರೆ ಕ್ರಿಯೆಗಳಿಗೆ ಒತ್ತಾಸೆ ನೀಡಿದಂತೆ ಸನ್ನಿವೇಶದ ಬದಲಾವಣೆಗೂ ಕಾರಣವಾಯಿತು. ನಿಷ್ಕ್ರಿಯನಾದವನು ಗಾಂಧೀಜಿಯಂತೆ ವಿಕಾಸ ಹೊಂದುವ ಪ್ರಶ್ನೆಯೇ ಇಲ್ಲ. ಅವನು ಬದಲಾಗುವುದಿಲ್ಲ, ಸನ್ನಿವೇಶವನ್ನೂ ಬದಲಾಯಿಸಲಾರ. ಇನ್ನೊಂದು ದೃಷ್ಟಿಯಿಂದ ನೋಡಿದರೆ ಕ್ರಿಯೆಗೆ ಎರಡು ಮಗ್ಗುಲುಗಳಿವೆ: ಉತ್ಪಾದನೆ ಮತ್ತು ವ್ಯಕ್ತಿಗಳೊಡನೆ ಪರಸ್ಪರ ಸಂಬಂಧ. ಉತ್ಪಾದನೆಯು ವ್ಯಕ್ತಿ ಮತ್ತು ಪ್ರಕೃತಿಯ ನಡುವಣ ಸಂಬಂಧವನ್ನು ಒಳಗೊಂಡಿದೆ; ಇನ್ನೊಂದು, ಸಾಮಾಜಿಕ ಸಂಬಂಧಗಳನ್ನು ಸೂಚಿಸುತ್ತದೆ. ಆಯಾಕಾಲದ ಉತ್ಪಾದನಾ ವಿಧಾನವು ಸಾಮಾಜಿಕ ಸಂಬಂಧಗಳನ್ನು ನಿರ್ದೇಶಿಸುತ್ತದೆ. ಇದು ಸಾಮಾಜಿಕ ಬೆಳವಣಿಗೆಯ ನಿಯಮವೆಂಬುದನ್ನು ವಿಶೇಷವಾಗಿ ಪ್ರಕೃತದ ಗ್ರಂಥವು ಪ್ರಸ್ತುತಪಡಿಸುತ್ತದೆ. ಒಂದು ಇನ್ನೊಂದರ ಮೇಲೆ ಪಾರಸ್ಪರಿಕವಾಗಿ ಪ್ರಭಾವ ಬೀರುವುದು ಬೆಳವಣಿಗೆಯ ಮರ್ಮ. ಇದನ್ನು ಹೀಗೆ ವಿವರಿಸಬಹುದು: ಉತ್ಪಾದನಾ ವಿಧಾನವು ಸಾಮಾಜಿಕ ಸಂಬಂಧಗಳ ಸ್ವರೂಪವನ್ನು

ನಿರ್ಧರಿಸುತ್ತದೆ. ಉತ್ಪಾದನಾ ಸಲಕರಣೆಗಳು, ತಂತ್ರಜ್ಞಾನ ಮುಂತಾದ ಅಂಶಗಳ ಹೊಸಹೊಸ ಆವಿಷ್ಕಾರಗಳಿಂದಾಗಿ ಉತ್ಪಾದನಾ ವಿಧಾನದಲ್ಲಿ ಬದಲಾವಣೆಯುಂಟಾದಾಗ ಹಿಂದಿನ ಸಾಮಾಜಿಕ ಸಂಬಂಧಗಳು ಅಪ್ರಸ್ತುತ ಆಗಿಬಿಡುತ್ತವೆ, ಅಡಚಣೆಯನ್ನು ಉಂಟುಮಾಡುತ್ತವೆ. ಈ ವೈರುಧ್ಯದ ಪರಿಹಾರಕ್ಕೆ ಒಂದು ಸಾಮಾಜಿಕ ಕ್ರಾಂತಿ ಅಗತ್ಯವಾಗುತ್ತದೆ. ಅದರ ಫಲವಾಗಿ ಹೊಸ ಉತ್ಪಾದನಾ ವಿಧಾನಕ್ಕೆ ತಕ್ಕುದಾದ ಸಾಮಾಜಿಕ ಸಂಬಂಧಗಳು ನೆಲೆಗೊಳ್ಳುತ್ತವೆ. ಒಂದೊಂದು ವಿಧಾನದ ಹಂತದಲ್ಲೂ ದುಡಿಮೆಯ ವಿಭಜನೆಯು ಬೇರೆಬೇರೆಯಾಗಿ ಕಾಣಿಸಿಕೊಳ್ಳುತ್ತದೆ. ಉತ್ಪಾದನಾ ಸಾಧನಗಳ ಒಡೆತನದಲ್ಲಿ ಸಹ ವಿವಿಧ ಹಂತಗಳಲ್ಲಿ ಬೇರೆಬೇರೆ ಸ್ವರೂಪಗಳು ಕಾಣಬರುತ್ತವೆ. ಈ ಸ್ವರೂಪಗಳು ಅವಕ್ಕೆ ತಕ್ಕುದಾದ ಸಾಮಾಜಿಕ ಮತ್ತು ರಾಜಕೀಯ ಸಂಬಂಧಗಳನ್ನು ಸ್ಥಾಪಿಸುತ್ತವೆ.

ಭೌತಿಕ ಉತ್ಪಾದನೆ, ಸಾಮಾಜಿಕ ಸಂಬಂಧಗಳು ಮತ್ತು ವರ್ಗಹೋರಾಟ, ಇವು ಒಂದು ನಿರ್ದಿಷ್ಟ ಸ್ವರೂಪದ ಸಾಮಾಜಿಕ ಪ್ರಜ್ಞೆಗೆ ಕಾರಣವಾಗುತ್ತವೆ. ಇದರರ್ಥ ಪ್ರಜ್ಞೆಯು ಆಯಾ ಹಂತಗಳಲ್ಲಿ ಪೂರ್ತಿಯಾಗಿ ಏಕಪ್ರಕಾರವಾಗಿರುತ್ತದೆ ಎಂದಲ್ಲ; ಸಾಮಾನ್ಯವಾದ ಸಾಮೂಹಿಕ ಪ್ರಜ್ಞೆ, ಸಂಸ್ಥೀಕರಣ, ಮೇಲುರಚನೆಯ ಅಂಗಗಳು, ಇವುಗಳಲ್ಲಿ ಗಮನಾರ್ಹವಾದ ಸಮಾನತೆ ಇರುತ್ತದೆಯೆಂದರ್ಥ. ಮತಧರ್ಮ, ದಾರ್ಶನಿಕ ದೃಷ್ಟಿಕೋಣ, ನೈತಿಕತೆಯ ಕಲ್ಪನೆ, ನ್ಯಾಯದ ವಿತರಣೆ, ಶಿಕ್ಷಣದ ವ್ಯವಸ್ಥೆ ಮುಂತಾದವು ಸಾಮಾಜಿಕ ಪ್ರಜ್ಞೆಯನ್ನು ಪ್ರತಿಫಲಿಸುವಂತಹ ಅಂಗಗಳು. ಇವೆಲ್ಲಾ ಬೇರೆಬೇರೆ ಸಾಮಾಜಿಕ ವ್ಯವಸ್ಥೆಗಳಲ್ಲಿ ಬೇರೆಬೇರೆಯಾಗಿ ಕಂಡುಬರುತ್ತವೆ. ವೈಯ್ಯಕ್ತಿಕ ಮಟ್ಟದಲ್ಲಿ ಅದು ಭಿನ್ನವಾಗಿರಬಲ್ಲದು ಎಂಬುದು ಬೇರೆ ಪ್ರಶ್ನೆ. ಆದರೆ ಸಾಮೂಹಿಕ ಪ್ರಜ್ಞೆಯು ವಿವಿಧ ಅಂಗಸಂಸ್ಥೆಗಳ ಮೂಲಕ ಪ್ರಕಟವಾಗುವುದು ಒಂದು ಮಾದರಿಯಲ್ಲಿ. ಪ್ರಜ್ಞೆಯು ಸಾಮಾಜಿಕ ಬೆಳವಣಿಗೆಯನ್ನು ನಿರ್ಧರಿಸುತ್ತದೆಯೆಂಬ ಭಾವನಾವಾದಿ ಗ್ರಹಿಕೆಗೆ ಭಿನ್ನವಾಗಿ ಮಾರ್ಕ್ಸ್ ಮತ್ತು ಏಂಗೆಲ್ಸ್ ಹೇಳಿದ್ದಿದು: "ಜೀವನವು ಪ್ರಜ್ಞೆಯಿಂದ ನಿರ್ಧಾರವಾಗುವುದಿಲ್ಲ; ಬದಲಾಗಿ ಪ್ರಜ್ಞೆಯು ಜೀವನದಿಂದ ನಿರ್ಧಾರವಾಗುತ್ತದೆ." ಇದನ್ನೇ ವಿಸ್ತರಿಸಿ ಇನ್ನೊಂದು ರೀತಿಯಲ್ಲಿ ಪ್ರತಿಪಾದಿಸಿದರು: "ಪ್ರತಿಯೊಂದು ಚಾರಿತ್ರಿಕ ಘಟ್ಟದಲ್ಲೂ ಆಳುವ ವರ್ಗದ ಭಾವನೆಗಳು ಸಮಾಜವನ್ನಾಳುವ ಭಾವನೆಗಳಾಗಿ ಪ್ರಕಟವಾಗುತ್ತವೆ. ಅಂದರೆ, ಸಮಾಜದಲ್ಲಿ ಯಾವ ವರ್ಗವು ಭೌತಿಕ ವ್ಯವಸ್ಥೆಯನ್ನು ನಿಯಂತ್ರಿಸುತ್ತದೆಯೋ ಅದು ಸಮಾಜದ ಬೌದ್ಧಿಕ ವ್ಯವಸ್ಥೆಯನ್ನೂ ರೂಪಿಸುತ್ತಿರುತ್ತದೆ."

ಬೇರೊಂದೆಡೆ ಪ್ರಜ್ಞೆಯ ಪಾತ್ರವನ್ನು ವಿವರಿಸುವಾಗ ಏಂಗೆಲ್ಸ್ ಹೇಳುತ್ತಾರೆ: "ಒಂದು ಸಮುದಾಯದ ಮನಸ್ಸನ್ನು ಪ್ರಬಲವಾಗಿ ಆವರಿಸುವ ಭಾವನೆಯು ತಾನೇ ಒಂದು ಭೌತಿಕ ಶಕ್ತಿಯಾಗಿ ಪರಿಣಮಿಸುತ್ತದೆ." ಅಂದರೆ, ಪ್ರಜ್ಞೆ ಎಂಬುದು ಸ್ವಂತದ ವ್ಯಾಪ್ತಿಯನ್ನುಳ್ಳ ಒಂದು ಅಂಶ. ಹೇಗೆ ಭೌತಿಕ ವಿಷಯಗಳು ಪ್ರಜ್ಞೆಯನ್ನು ರೂಪಿಸುತ್ತವೆಯೋ ಹಾಗೆ ಸ್ವತಃ ಪ್ರಜ್ಞೆ ಕೂಡ ಒಂದು ಭೌತಿಕ ಅಂಶವಾಗಿ ಕೆಲಸ ಮಾಡುವುದಕ್ಕೆ ಸಾಧ್ಯ. ಉದಾಹರಣೆಗೆ,

ವ್ಯಾಪಕ ನಂಬಿಕೆಯಾದ 'ನಾ ಮಾಡಿದ ಕರ್ಮ' ಎಂಬುದು ಎಷ್ಟು ಗಾಢವಾಗಿ ಘನೀಭೂತವಾಗಬಹುದೆಂದರೆ ಬೇರಾವುದೇ ಭೌತಿಕ ಅಂಶಗಳಂತೆ ಇದೂ ಪ್ರಜ್ಞೆಯ ಸ್ವರೂಪವನ್ನು ನಿಯಮಿಸಬಲ್ಲದು. ಇಂತಹ ಪ್ರಜ್ಞೆಯು ಪಲ್ಲಟವಾಗಬೇಕಾದರೆ ಕ್ರಾಂತಿಯು ಜರುಗಬೇಕಾಗುತ್ತದೆ. ಕ್ರಾಂತಿಯ ನಂತರವೂ ಈ ಪ್ರಜ್ಞೆಯ ಅವಶೇಷಗಳನ್ನು ಕಾಣಬಹುದು. ಒಂದು ಭೌತಿಕಾಂಶವು ಬದಲಾಗುವಷ್ಟು ಸರಳವಾಗಿ ಭಾವನೆಗಳು ಬದಲಾಗುವುದಿಲ್ಲ. ಅದಕ್ಕೆ ದೀರ್ಘ ಕಾಲಾವಧಿಯ ಪ್ರಕ್ರಿಯೆ ಬೇಕಾಗುತ್ತದೆ. ಜಾರ್ಜ್ ಬರ್ನಾರ್ಡ್ ಶಾ ಒಮ್ಮೆ ಇದನ್ನು ವಿವರಿಸಿದ್ದು ಹೀಗೆ: "ರೈತನೊಬ್ಬನಿಗೆ ಹೊಸ ಉಪಕರಣವೊಂದನ್ನು ನೀಡಿ, ಅದನ್ನು ಉತ್ಪಾದನಾ ಕ್ರಿಯೆಗೆ ಕೂಡಲೆ ಬಳಸಿಕೊಳ್ಳುತ್ತಾನೆ; ಅವನಿಗೆ ಹೊಸದೊಂದು ಭಾವನೆ ನೀಡಿ, ಅದನ್ನು ಸ್ವೀಕರಿಸಲು ಅವನಿಗೆ ಬಹಳ ಕಾಲ ಹಿಡಿಯುತ್ತದೆ."

"ಜರ್ಮನಿಯ ಸೈದ್ಧಾಂತಿಕ ತತ್ತ್ವ" ಎಂಬ ಗ್ರಂಥದ ಇನ್ನೊಂದು ವಿಶೇಷ ಕೊಡುಗೆಯೆಂದರೆ ಅಸ್ತಿತ್ವದಲ್ಲಿರುವ ಸಂಬಂಧಗಳನ್ನು ಟೀಕಿಸಿದರೆ ಸಾಲದು, ಅವನ್ನು ಅರ್ಥೈಸಬೇಕು ಮತ್ತು ಬದಲಾಯಿಸಬೇಕು ಎಂಬುದು. ಯುವ ಹೆಗೆಲಿಯನ್ನರು ವ್ಯವಸ್ಥೆಯನ್ನು ಟೀಕೆಯ ಪ್ರಹಾರದಿಂದಲೇ ಬದಲಾಯಿಸಿಬಿಡುವ ಭ್ರಾಂತಿಯಲ್ಲಿದ್ದವರು; ಅಂತಹ "ಜರ್ಮನಿಯ ಸಿದ್ಧಾಂತ"ಗಳಿಗೆ ಪ್ರತಿಯಾಗಿ ಮಾರ್ಕ್ಸ್ ಮತ್ತು ಏಂಗೆಲ್ಸ್ ಕ್ರಿಯೆಯ ಮೂಲಾಧಾರವನ್ನು ಒತ್ತಿಹೇಳಿದರು. ಇದಕ್ಕೆ ನಿದರ್ಶನವಾಗಿ ಮ್ಯಾಕ್ಸ್ ಸ್ಟರ್ನರ್‌ನ ನಿಲುವು ಮತ್ತು ಅದನ್ನು ಏಂಗೆಲ್ಸ್ ಟೀಕಿಸಿದ್ದನ್ನು ಗಮನಿಸಬಹುದು. ಸ್ಟರ್ನರ್‌ನ ಬತ್ತಳಿಕೆಯಲ್ಲಿ ಪ್ರಖರವಾದ ವಾಗ್ಬಾಣಗಳು ಹೇರಳವಾಗಿದ್ದವು. ಕಾನೂನು, ಪ್ರಭುತ್ವ, ನೈತಿಕತೆ, ಎಲ್ಲವೂ ಪ್ರಜ್ಞೆಯನ್ನು ಬಂಧನದಲ್ಲಿರಿಸುವ ಆಕರಗಳೆಂದು ಸ್ಟರ್ನರ್ ಗುಡುಗಿದ. ಮಾನವನ ಮುಕ್ತಿಗಾಗಿ ಅವನ್ನು ತೊಡೆದುಹಾಕಬೇಕೆಂದು ಅವನು ಘೋಷಿಸಿದ. ಹಾಗೆ ತೊಡೆದುಹಾಕುವುದು ಹೇಗೆಂಬುದು ಒಂದು ಪ್ರಶ್ನೆಯಾದರೆ, ಅವುಗಳ ಜಾಗದಲ್ಲಿ ಮತ್ತೇನು ಎಂಬ ಪ್ರಶ್ನೆಯೂ ಬರುತ್ತದೆ. ವ್ಯಕ್ತಿಯ ಅಹಮಿಕೆಯನ್ನು ಬಿಟ್ಟರೆ ಅವನು ಬೇರಿನ್ನೇನನ್ನೂ ಸೂಚಿಸಲಾರದವನಾಗಿದ್ದ. ಖಾಸಗಿ ಆಸ್ತಿಯನ್ನು ಮಾನ್ಯ ಮಾಡುವ ಅನಿವಾರ್ಯತೆಯನ್ನೂ ಅವನು ಪ್ರಸ್ತಾಪಿಸಿದ್ದ. ಹಾಗಿದ್ದರೆ ಪರಸ್ಪರ ಸಂಬಂಧಗಳು ಬದಲಾಗುವುದು ಹೇಗೆ? ತೀವ್ರಗಾಮಿತನದ ಅವನ ಮಾತುಗಳು ಪ್ರತಿಗಾಮಿ ಸಾಮಾಜಿಕ ಸಂಬಂಧಗಳನ್ನು ಅಲುಗಾಡಿಸುವ ಗೋಜಿಗೆ ಹೋಗಲಿಲ್ಲ. ಸಾಮ್ಯವಾದಿ ವ್ಯವಸ್ಥೆಯಲ್ಲಿ ವ್ಯಕ್ತಿಯು ಸಮಾಜದ ಗುಲಾಮನಾಗಿಬಿಡುತ್ತಾನೆಂಬ ಆತಂಕವನ್ನು ಸ್ಟರ್ನರ್ ವ್ಯಕ್ತಪಡಿಸಿದ್ದ (ಅವನ ಸಂತತಿ ಬಹಳವಾಗಿ ಬೆಳೆಯಿತೆಂಬುದು ಇತಿಹಾಸದ ಪ್ರಹಸನಗಳಲ್ಲಿ ಒಂದು). ಉತ್ಪಾದನಾ ಸಲಕರಣೆಗಳ ರೂಪದಲ್ಲಿರುವ ಖಾಸಗಿ ಆಸ್ತಿಯ ನಿರ್ಮೂಲನವು ಕೇವಲ ಬಂಡವಾಳಶಾಹಿ ಪ್ರವೃತ್ತಿಯ ವ್ಯಕ್ತಿತ್ವವನ್ನು ನಾಶ ಮಾಡಬಹುದೇ ಹೊರತು ಇಡೀ ವ್ಯಕ್ತಿತ್ವವನ್ನೇ ಅಲ್ಲ, ಎಂಬ ಏಂಗೆಲ್ಸರ ಮಾತು ಸ್ಟರ್ನರ್‌ಗೆ ಬೇಡವಾಗಿದ್ದಿತು. ಆಸ್ತಿಯನ್ನೇ ಹೊಂದದ ವ್ಯಕ್ತಿಗಳಿಗೆ ವ್ಯಕ್ತಿತ್ವವೇ ಇಲ್ಲವೆ? ಏಂಗೆಲ್ಸರ ಈ ಪ್ರಶ್ನೆಗೆ ಸ್ಟರ್ನರ್ ಬಳಿ ಉತ್ತರವಿಲ್ಲ.

೧೮೪೬ರ ಆಗಸ್ಟ್‌ನಲ್ಲಿ ಏಂಗೆಲ್ಸ್ ಪ್ಯಾರಿಸ್ಸಿಗೆ ತೆರಳಿ ಅಲ್ಲಿ ಜನವರಿ ೧೮೪೮ರ ಕೊನೆಯವರೆಗೆ ಉಳಿದಿದ್ದರು. ಫ್ರಾನ್ಸಿನಲ್ಲಿ ದುಡಿಯುವ ವರ್ಗದ ಚಳುವಳಿಯಲ್ಲಿ ಕೆಲವು ಅಂಕುಡೊಂಕುಗಳು ನುಸುಳಿದ್ದು ಅವನ್ನು ಸರಿಪಡಿಸುವ ಜವಾಬ್ದಾರಿಯನ್ನು ಏಂಗೆಲ್ಸ್ ಗೆ ವಹಿಸಲಾಗಿದ್ದಿತು. ಅಂದಿನ ಫ್ರಾನ್ಸಿನ ಪಾರ್ಲಿಮೆಂಟಿನಲ್ಲಿ ಬಂಡವಳಿಗರು, ಕಂಟ್ರಾಕ್ಟರುಗಳು, ಬ್ಯಾಂಕರುಗಳು, ಇಂಥವರೇ ತುಂಬಿದ್ದರು. ಜನರ ಅಭಿಪ್ರಾಯಗಳನ್ನು ಧ್ವನಿಸುವವರೇ ಇರಲಿಲ್ಲ ಮತ್ತು ಯಾರಾದರೂ ಧ್ವನಿಸಿದ್ದರೆ ಅದಕ್ಕೆ ಬೆಲೆಯೂ ಇರುತ್ತಿರಲಿಲ್ಲ. ಏಂಗೆಲ್ಸ್ ಇದರ ಬಗ್ಗೆ ಬರೆಯುತ್ತಾ ಹೇಳಿದರು: "ಫ್ರಾನ್ಸಿನ ಭವಿಷ್ಯವನ್ನು ನಿರ್ಧರಿಸುವುದು ಸಚಿವ ಸಂಪುಟವಲ್ಲ, ಬದಲಾಗಿ ಸ್ಟಾಕ್ ಎಕ್ಸ್‌ಚೇಂಜಿನ ದಲ್ಲಾಳಿಗಳು. ನಿಜವಾದ ಸಚಿವರೆಂದರೆ ಪ್ಯಾರಿಸ್ಸಿನ ಬ್ಯಾಂಕರುಗಳೇ ಎನ್ನಬೇಕು." ಇಂತಹ ಸನ್ನಿವೇಶದಲ್ಲಿ ದುಡಿಯವವರನ್ನು ಹೋರಾಟಕ್ಕೆ ಸಜ್ಜುಗೊಳಿಸಬೇಕಾದ ಸಮಾಜವಾದಿ ಬಣವು ಹತ್ತಾರು ವಿಭಾಗಗಳಲ್ಲಿ ಹಂಚಿಹೋಗಿದ್ದಿತು. ಪ್ಯಾರಿಸ್ಸಿನಲ್ಲಿ ಜರ್ಮನಿ ಮೂಲದ ಕೆಲಸಗಾರರು ಹಲವರಿದ್ದರು. ಗ್ರೂನ್ ಎಂಬುವವನ ನೇತೃತ್ವದಲ್ಲಿ ಅವರೆಲ್ಲಾ ಬಹುತೇಕ ಪ್ರೂಧೋನ್‌ನ ಅನುಯಾಯಿಗಳಾಗಿದ್ದರು. ಆತನ ದೃಷ್ಟಿಯಲ್ಲಿ ಬಂಡವಾಳಶಾಹಿಗೆ ಪರ್ಯಾಯದ ಅವಶ್ಯಕತೆ ಇರಲಿಲ್ಲ; ಅದೇ ವ್ಯವಸ್ಥೆಯ ಕೆಲವು ನ್ಯೂನತೆಗಳನ್ನು ಸರಿಪಡಿಸಿದರೆ ಎಲ್ಲವೂ ಸುಸೂತ್ರವಾಗಿರುತ್ತದೆಂಬ ಅಭಿಪ್ರಾಯ ಅವನದಾಗಿತ್ತು. ಉತ್ಪಾದನಾ ಸಾಧನಗಳನ್ನು ಸಾರ್ವಜನಿಕ ಹತೋಟಿಗೆ ತರಬೇಕೆಂಬುದಾಗಲಿ, ದುಡಿಯುವ ವರ್ಗವು ಸಂಘಟಿತವಾಗಿ ಹೋರಾಟಕ್ಕಿಳಿಯುವುದಾಗಲಿ, ರಾಜಕೀಯ ಮಧ್ಯಪ್ರವೇಶ ಮಾಡಬೇಕೆಂದಾಗಲಿ ಪ್ರೂಧೋನ್ ಬಯಸಿರಲಿಲ್ಲ. ಪ್ರೂಧೋನನ ತತ್ತ್ವಗಳನ್ನು ಕಟುವಾಗಿ ಟೀಕಿಸಿ ಅದರ ಅಸಮರ್ಪಕತೆಯನ್ನು ಬಹಿರಂಗಪಡಿಸುವುದು ಪ್ಯಾರಿಸ್ಸಿನಲ್ಲಿ ಏಂಗೆಲ್ಸ್ ಪಾಲಿಗೆ ಬಂದ ಕೆಲಸ. ಕಾರ್ಮಿಕರ ಸಭೆಗಳಲ್ಲಿ ಪ್ರೂಧೋನ್ ಬೆಂಬಲಿಗರೊಡನೆ ವಾದ ಮಾಡುತ್ತಾ ಹಲವು ದಿನಗಳೇ ವ್ಯರ್ಥವಾಗುತ್ತಿದ್ದವು. ಏಂಗೆಲ್ಸ್ ಪ್ರಾರಂಭಿಸಿದ ಸೈದ್ಧಾಂತಿಕ ವಾದವನ್ನು ಮುಂದುವರಿಸಿ ಮಾರ್ಕ್ಸ್ "ತತ್ತ್ವಶಾಸ್ತ್ರದ ಬಡತನ" (ಅಥವಾ ಕೊರತೆ) ಎಂಬ ಪುಸ್ತಕದಲ್ಲಿ ಪ್ರೂಧೋನ್ ಗ್ರಹಿಕೆಗಳನ್ನು ವಿಶ್ಲೇಷಿಸಿ ಖಂಡಿಸಿದ್ದುಂಟು. ಸಮಾಜದಲ್ಲಿ ಬಡತನ ಏಕಿದೆ ಎಂಬುದನ್ನು ವಿವರಿಸುವ ಪ್ರೂಧೋನನ ಕೃತಿಯ ಹೆಸರು "ಬಡತನದ ತತ್ತ್ವ" ಎಂದು. ಅದನ್ನೇ ತಿರುಗಿಸಿ ಮಾರ್ಕ್ಸ್ ತನ್ನ ಗ್ರಂಥಕ್ಕೆ ಶೀರ್ಷಿಕೆ ಕೊಟ್ಟರು. ಅದೇ "ತತ್ತ್ವಶಾಸ್ತ್ರದ ಬಡತನ." ಅದು ಪ್ರಕಟವಾದದ್ದು ೧೮೪೭ರಲ್ಲಿ.

ಫ್ರಾನ್ಸಿನಲ್ಲಿ ಏಂಗೆಲ್ಸರ ಚಲನವಲನಗಳನ್ನು ನಿರೀಕ್ಷಿಸುತ್ತಿದ್ದ ಪೊಲೀಸರು ಕೆಲಕಾಲ ಆತನ ಪ್ರಚಾರಕಾರ್ಯವನ್ನು ಹತ್ತಿಕ್ಕಿದರು. ಜರ್ಮನ್ ಕೆಲಸಗಾರರ ಕೆಲವು ಸಭೆಗಳಲ್ಲಿ ಏಂಗೆಲ್ಸ್ ಒಬ್ಬ ಚಾಣಾಕ್ಷ ಕಮ್ಯುನಿಸ್ಟ್ ಎಂಬ ಟೀಕೆಯನ್ನು ಕೇಳಿದ್ದ ಪೊಲೀಸರು ಬೆಂಬತ್ತಿ ಅವರು ಬೇರೆ ಕೆಲಸಗಳಲ್ಲಿ ನಿರತರಾಗುವಂತೆ ಮಾಡಿದರು. ಉದಾಹರಣೆಗೆ, ಅಂದಿನ 'ಸಮಾಜವಾದಿ' ಕವಿಗಳ ಕೃತಿಗಳ ವಿಮರ್ಶೆ, ಜರ್ಮನಿಯ ಪ್ರಸಿದ್ಧ ಕವಿ ಗಯಟೆಯ ವಿಮರ್ಶೆ ಮುಂತಾದವು ಈ ಕಾಲದಲ್ಲಿ ಬರೆದವು. ಗಯಟೆಯ ಸಂಕೀರ್ಣತೆಯನ್ನು ಕುರಿತು ಏಂಗೆಲ್ಸ್

ಒಂದೆಡೆ ಹೀಗೆ ದಾಖಲಿಸಿದ್ದಾರೆ: "ಆಂತರಿಕವಾಗಿ ಗಯಟೆ ಒಂದು ಗಂಭೀರ ಸಂಘರ್ಷದಲ್ಲಿ ತೊಡಗಿದ್ದಾನೆ. ಒಂದು ಕಡೆ ಪ್ರತಿಭಾವಂತ ಕವಿ; ತನ್ನ ಪರಿಸರದ ಬಗ್ಗೆ ಅವನಿಗೆ ತೀರಾ ಅಸಹ್ಯವೆನಿಸಿದೆ. ಇನ್ನೊಂದು ಕಡೆ ಫ್ರಾಂಕ್‌ಫರ್ಟಿನ ನಗರಸಭಾ ಸದಸ್ಯನ ಮಗ; ತನ್ನ ಪರಿಸರದ ಜೊತೆ ರಾಜಿ ಮಾಡಿಕೊಂಡು ಅದಕ್ಕೆ ಒಗ್ಗಿ ನಡೆಯಬೇಕು. ಆದ್ದರಿಂದ ಗಯಟೆ ಕೆಲವೊಮ್ಮೆ ಅತಿಗಂಭೀರ, ಇನ್ನು ಕೆಲವು ಸಲ ಬಹಳ ಅಲ್ಪಮತಿ. ಕೆಲವು ಸಲ ಬಂಡಾಯಗಾರ, ತನ್ನ ಪ್ರಪಂಚವನ್ನು ಪ್ರಚಂಡವಾಗಿ ಲೇವಡಿ ಮಾಡುತ್ತಾನೆ; ಮತ್ತೆ ಕೆಲವು ಬಾರಿ ಅವನು ನಾಜೂಕುಗಾರನಾಗಿಬಿಡುತ್ತಾನೆ, ಒಬ್ಬ ಅಧೀರ ಅತಿಸಾಮಾನ್ಯ ಬರಡು ಪ್ರಜ್ಞೆಯವನಂತೆ. ಗಯಟೆಗೂ ಸಹ ಜರ್ಮನಿಯ ಹತಾಶೆಯನ್ನು ಗೆಲ್ಲಲಾಗಲಿಲ್ಲ; ಬದಲಾಗಿ ತಾನೇ ಅದರಿಂದ ಸೋಲಿಸಲ್ಪಟ್ಟ. ಜರ್ಮನಿಯ ದೊಡ್ಡ ಪ್ರಜ್ಞಾವಂತನೇ ಹೀಗೆ ಹತಾಶೆಯ ಅಡಿಯಾಳಾದನೆಂದರೆ ಒಂದು ತೀರ್ಮಾನ ಅನಿವಾರ್ಯ: ಅದೇನೆಂದರೆ ಜರ್ಮನಿಯು ಅದನ್ನು (ಅಂದರೆ, ಹತಾಶೆಯನ್ನು) 'ಒಳಗಿನಿಂದಲೇ' ಸೋಲಿಸುವುದು ದುಷ್ಕರ."

೧೮೪೮ ಯೂರೋಪಿನ ಇತಿಹಾಸದಲ್ಲಿ ಒಂದು ಪರ್ವಕಾಲವಿದ್ದಂತೆ. ಆ ವರ್ಷ ಯೂರೋಪಿನ ಅನೇಕ ರಾಷ್ಟ್ರಗಳು ರಾಜಕೀಯ ವಿಪ್ಲವದಿಂದ ನಡುಗಿಹೋದವು. ಫೆಬ್ರವರಿ ಕೊನೆಯ ವೇಳೆಗೆ ಫ್ರಾನ್ಸಿನ ದುಡಿಯುವ ಜನ ದಂಗೆಯೆದ್ದು ಲೂಯಿ ಫಿಲಿಪ್ಪನನ್ನು ಸಿಂಹಾಸನದಿಂದ ಕೆಳಗುರುಳಿಸಿದರು, ದೊರೆತನವನ್ನು ಕೊನೆಗಾಣಿಸಿದರು. ಫ್ರಾನ್ಸನ್ನು ಗಣರಾಜ್ಯವೆಂದು ಘೋಷಿಸಿದರು ಕೂಡ. ಆಗ್ಗೆ ಏಂಗೆಲ್ಸ್ ಬೆಲ್ಜಿಯಂನ ರಾಜಧಾನಿ ಬ್ರಸೆಲ್ಸ್‌ನಲ್ಲಿದ್ದರು. ಪ್ಯಾರಿಸ್ಸಿನಿಂದ ವರ್ತಮಾನ ಬರುತ್ತಿದ್ದಂತೆ ಇಡೀ ನಗರ ಪುಳಕಿತಗೊಂಡು ಸಂಭ್ರಮಪಟ್ಟಿತು. ಫೆಬ್ರವರಿ ೨೭ರಂದು ಬ್ರಸೆಲ್ಸ್‌ನ ಜರ್ಮನ್ ಪತ್ರಿಕೆಯಲ್ಲಿ ಏಂಗೆಲ್ಸ್ ಬರೆದರು: "ಫ್ರಾನ್ಸಿನ ಬಂಡವಾಳಶಾಹಿಯು ತನ್ನ ಕ್ರಾಂತಿಯನ್ನು ಪೂರೈಸಿದೆ. ...ಇನ್ನು ಮುಂದೆ ಯುದ್ಧದ ಎರಡನೆಯ ಅಂಕ ಪ್ರಾರಂಭ. ಅದರಲ್ಲಿ ಬಂಡವಳಿಗರ ಒಂದು ವಿಭಾಗ ಇನ್ನೊಂದು ವಿಭಾಗವನ್ನು ವಿರೋಧಿಸುವ ಸಂದರ್ಭವಿಲ್ಲ. ಈಗಿನ ವಿರೋಧ ಬಂಡವಾಳಶಾಹಿ ಮತ್ತು ದುಡಿಯುವ ವರ್ಗದ ನಡುವೆ. ಈ ಕ್ರಾಂತಿಯಿಂದಾಗಿ ಫ್ರಾನ್ಸಿನ ದುಡಿಯುವ ವರ್ಗ ಯೂರೋಪಿನ ಚಳುವಳಿಯ ಅಗ್ರನಾಯಕನಾಗಿ ಹೊರಹೊಮ್ಮಿದೆ. ಇದರ ಪ್ರಭಾವ ಎಲ್ಲೆಡೆ ಕಾಣಬರಲಿದೆ; ಏಕೆಂದರೆ, ಫ್ರಾನ್ಸಿನಲ್ಲಿ ಗಣರಾಜ್ಯದ ಸ್ಥಾಪನೆಯಾಗಿರುವುದು ಇಡೀ ಯೂರೋಪಿನಲ್ಲಿ ಪ್ರಜಾಪ್ರಭುತ್ವಕ್ಕೆ ದೊರೆತ ವಿಜಯವಾಗಿದೆ."

ಮಾರ್ಚ್ ಅಂತ್ಯದ ವೇಳೆಗೆ ಏಂಗೆಲ್ಸ್ ಪ್ಯಾರಿಸ್ ತಲುಪಿದರು. ಹಣದ ಮುಗ್ಗಟ್ಟಿನಿಂದಾಗಿ ಅದಕ್ಕೆ ಮುಂಚೆ ಹೋಗಲಾಗಲಿಲ್ಲ. ಅಲ್ಲಿಯ ಸನ್ನಿವೇಶ ಕ್ಲಿಷ್ಟಕರವಾಗಿತ್ತು. ಏಂಗೆಲ್ಸ್‌ಗೆ ಪರಿಚಯವಿದ್ದ ಫರ್ಡಿನೆಂಡ್ ಫ್ಲೋಕೋನ್ ಹಂಗಾಮಿ ಸರ್ಕಾರದ ಸಚಿವನಾಗಿದ್ದ. ಅವನೊಡನೆ ವಿಚಾರ ವಿನಿಮಯ ಮಾಡಿಕೊಂಡು ಮತ್ತು ಸ್ವತಃ ರಾಜಕೀಯ ವಿದ್ಯಮಾನಗಳನ್ನು ವೀಕ್ಷಿಸುತ್ತಾ ಅಲ್ಲಿಯ ಪರಿಸ್ಥಿತಿಯನ್ನು ಪರಿಶೀಲಿಸಿದರು. ದೊಡ್ಡ ಬಂಡವಳಿಗರು ಮತ್ತು ದುಡಿಯುವ ಜನ ಪರಸ್ಪರ ವೈರಿಗಳಂತೆ ಎದುರುಬದುರು ನಿಂತಿದ್ದರು;

ಮಧ್ಯಮ ಸ್ತರದ ಬಂಡವಳಿಗರು ಅತ್ತಲೂ ಇಲ್ಲ, ಇತ್ತಲೂ ಇಲ್ಲ ಎಂಬಂತೆ ಮಂಡಿಯೂರಿ ಎರಡು ಕಡೆಯೂ ನೋಡಹತ್ತಿದ್ದರು. ಸರ್ಕಾರವು ಭಾರಿ ಬಂಡವಳಿಗರನ್ನು ಎದುರು ಹಾಕಿಕೊಳ್ಳದೆ ಮತ್ತು ದುಡಿಯುವವರಿಗೆ ಏನೇನೋ ಆಶ್ವಾಸನೆಗಳನ್ನು ನೀಡುತ್ತಾ ಕಾಲ ಕಳೆಯುತ್ತಿತ್ತು. ಜರ್ಮನಿ ಮೂಲದ ಕೆಲಸಗಾರರ ಪೈಕಿ ನಾಲ್ಕುನೂರಕ್ಕೂ ಹೆಚ್ಚು ಮಂದಿ ಕಮ್ಯುನಿಸ್ಟ್ ಲೀಗಿನ ಸದಸ್ಯರಾಗಿದ್ದರು. ಅವರ ಮುಂದಾಳುಗಳು ಕೆಲವರು ಕ್ರಾಂತಿಯನ್ನು ಕೂಡಲೆ ಜರ್ಮನಿಗೆ ವಿಸ್ತರಿಸಬೇಕೆಂಬ ಆಕಾಂಕ್ಷೆ ಹೊಂದಿದ್ದರು. ಜರ್ಮನಿ ಮೂಲದ ಹಲವರನ್ನು ಸೇರಿಸಿ ಒಂದು ಸೈನ್ಯದ ತುಕಡಿ ರಚಿಸಬೇಕು, ಅದನ್ನು ಜರ್ಮನಿಗೆ ರವಾನಿಸ ಬೇಕು, ಎಂಬುದು ಹರ್ವೆಗ್, ಬಾರ್ನ್‌ಸ್ಟೆಟ್, ಮುಂತಾದವರ ಅಭಿಪ್ರಾಯವಾಗಿತ್ತು. ಅದು ಅರ್ಥರಹಿತವಾದ ಹುಡುಗಾಟ, ಕ್ರಾಂತಿಯ ಜೊತೆ ಹೀಗೆ ಆಟವಾಡುವುದು ಸಲ್ಲ ಎಂದು ಏಂಗೆಲ್ಸ್ ಅದನ್ನು ತೀವ್ರವಾಗಿ ವಿರೋಧಿಸಿದರು. "ಕ್ರಾಂತಿಯನ್ನೊಲ್ಲದ ಹೇಡಿಗಳು" ಎಂಬ ಅಪವಾದವನ್ನು ಹೊತ್ತ ಏಂಗೆಲ್ಸ್ ಮತ್ತು ಮಾರ್ಕ್ಸ್ ಅದರಿಂದ ಕಂಗೆಡಲಿಲ್ಲ. ಅತ್ತ ಜರ್ಮನಿಯಲ್ಲೂ ಅಸಮಾಧಾನದ ಹೊಗೆ ದಟ್ಟವಾಗಿ ಹರಡುತ್ತಿತ್ತು. ದೇಶದ ರಾಜಕೀಯ ಮತ್ತು ಆರ್ಥಿಕ ವಿಭಜನೆಯನ್ನು ಕೊನೆಮಾಡಿ ಇಡೀ ದೇಶವನ್ನು ಒಂದು ಐಕ್ಯ ಗಣರಾಜ್ಯವನ್ನಾಗಿ ಮಾರ್ಪಡಿಸಬೇಕೆಂಬ ಘೋಷಣೆಯನ್ನು ಮಾರ್ಕ್ಸ್ ಮತ್ತು ಏಂಗೆಲ್ಸ್ ಹೊರಡಿಸಿದರು. ಜನರು ಶಸ್ತ್ರಸಜ್ಜಿತರಾಗಬೇಕು, ರಾಜ್ಯ ಪ್ರಭುತ್ವದಿಂದ ಚರ್ಚನ್ನು ಬೇರ್ಪಡಿಸಬೇಕು, ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವು ಉಚಿತವಾಗಿ ದೊರೆಯಬೇಕು ಮತ್ತು ಭೂಮಾಲಿಕರ ಉಪಟಳವನ್ನು ಅಂತ್ಯಗೊಳಿಸಲು ರೈತಾಪಿ ಜನರಿಗೆ ಊಳಿಗಮಾನ್ಯ ಪದ್ಧತಿಯಿಂದ ಮುಕ್ತಿ ದೊರಕಬೇಕು, ಇವು ಅಂದಿನ ಪ್ರಮುಖ ಘೋಷಣೆಗಳು. ಈ ಘೋಷಣೆಗಳೊಂದಿಗೆ ಏಂಗೆಲ್ಸ್, ಮಾರ್ಕ್ಸ್ ಹಾಗೂ ಇನ್ನು ಕೆಲವರು ಏಪ್ರಿಲ್ ೧೮೪೮ರಲ್ಲಿ ಜರ್ಮನಿಗೆ ಹಿಂದಿರುಗಿದರು.

ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಜರ್ಮನಿ ಹಿಂದುಳಿದಿದ್ದ ದೇಶ. ದುಡಿಯುವ ವರ್ಗವು ಸಂಘಟಿತವಾಗಿರಲಿಲ್ಲ. ಕನಿಷ್ಠ ಮಟ್ಟದ ಪ್ರಜಾಪ್ರಭುತ್ವದ ಕ್ರಮಗಳು ಕೂಡ ಇನ್ನೂ ಜಾರಿಗೆ ಬಂದಿರಲಿಲ್ಲ. ಕಮ್ಯುನಿಸ್ಟ್ ಲೀಗ್ ಪ್ರಬಲವಾಗೇನೂ ಬೆಳೆದಿರಲಿಲ್ಲ. ಸಹಜವಾಗಿಯೇ ಏಂಗೆಲ್ಸ್ ಪ್ರಜಾಪ್ರಭುತ್ವಕ್ಕಾಗಿ ಒತ್ತಾಯ ಮಾಡುತ್ತಿದ್ದ ಗುಂಪಿನೊಡನೆ ಸೇರಿಕೊಳ್ಳುವ ತೀರ್ಮಾನ ಮಾಡಿ ಕೊಲೋನ್‌ನಲ್ಲಿನ "ಪ್ರಜಾಪ್ರಭುತ್ವ ಸಂಘಟನೆ"ಯಲ್ಲಿ ಕಾರ್ಯಕರ್ತರಾದರು. ಕಮ್ಯುನಿಸ್ಟ್ ಲೀಗಿನ ಎಲ್ಲ ಸದಸ್ಯರೂ ಬೇರೆಬೇರೆ ಪಟ್ಟಣಗಳಲ್ಲಿದ್ದ ಇಂತಹ ಸಂಘಟನೆಗಳೊಡನೆ ಬೆರೆತರು. ಹಿಂದೊಮ್ಮೆ ಹೊರಬರುತ್ತಿದ್ದು ಆಮೇಲೆ ನಿಂತುಹೋಗಿದ್ದ "ರೈನಿಶ್ ಝೈಟುಂಗ್" ಪತ್ರಿಕೆಯನ್ನು ಮತ್ತೆ ಆರಂಭಿಸಲು ಮಾರ್ಕ್ಸ್ ಮತ್ತು ಏಂಗೆಲ್ಸ್ ಸಜ್ಜಾದರು. ಪತ್ರಿಕೆಗೆ ಷೇರುದಾರರನ್ನು ಪಡೆಯಲು ಜರ್ಮನಿಯಲ್ಲಿ ಸಂಚಾರ ಕೈಗೊಂಡು ಏಂಗೆಲ್ಸ್ ತಮ್ಮ ಹಳೆಯ ಊರು ಬಾರ್ಮೆನ್‌ಗೆ ಬಂದಾಗ ಅಲ್ಲಿಯ ಬಂಡವಳಿಗರು ಆತಂಕಗೊಂಡರು. ಅನೇಕ ಹಿರಿಯ ಸ್ನೇಹಿತರನ್ನು ಭೇಟಿಯಾದರೂ

ಪ್ರಯೋಜನವಾಗಲಿಲ್ಲ. ಅವರೆಲ್ಲಾ ಈಗ ಉದ್ಯಮಿಗಳಾಗಿದ್ದರು; ಪ್ರಜಾಪ್ರಭುತ್ವ, ಸಮಾಜವಾದ, ಇವನ್ನೆಲ್ಲಾ ಅನುಮಾನದಿಂದ ನೋಡಲಾರಂಭಿಸಿದ್ದರು. ಬೇರೆಯವರಿಗಿಂತ ಉನ್ನತ ಮಟ್ಟದ ಪ್ರಜ್ಞೆ ಅವರಲ್ಲಿತ್ತು; ಆದರೆ ಭವಿಷ್ಯದ ಶತ್ರುಗಳೆಂದೇ ಏಂಗೆಲ್ಸ್ ಮತ್ತು ಅವರ ಸಂಘದವರನ್ನು ಪರಿಗಣಿಸಿದ್ದರಿಂದ ಅವರಿಗೆ ಅನುಕೂಲವಾಗುವ ಆಯುಧದ ಬೆಳವಣಿಗೆಗೆ ಬೆಂಬಲ ನೀಡಲು ಅವರಾರೂ ಸಿದ್ಧರಿರಲಿಲ್ಲ. ಸ್ವತಃ ಅವರ ತಂದೆಯೂ ಪತ್ರಿಕೆಯ ಷೇರುಗಳನ್ನು ಕೊಳ್ಳಲು ನಿರಾಕರಿಸಿದ್ದರು. "ನೂರು ಟೇಲರುಗಳನ್ನು (ಅಂದಿನ ಹಣ) ನಮಗೆ ಕೊಡುವ ಬದಲು ನೂರು ಗುಂಡುಗಳನ್ನು ನಮ್ಮತ್ತ ಹಾರಿಸಲು ನಮ್ಮಪ್ಪ ತಯಾರಿದ್ದಾನೆ" ಎಂದು ಏಂಗೆಲ್ಸ್ ಬರೆದರು. ೧೮೪೮ರ ಜೂನ್ ೧ರಂದು ಹೇಗೋ ಮಾಡಿ "ಪ್ರಜಾಪ್ರಭುತ್ವದ ಮುಖಪತ್ರ: ನೋವಾ ರೈನಿಶ್ ಝ್ಯುಟುಂಗ್" ಎಂಬ ಪತ್ರಿಕೆಯ ಮೊದಲ ಸಂಚಿಕೆಯನ್ನು ಹೊರತಂದರು. ಹಲವು ಭಾಷೆಗಳನ್ನು ಕಲಿತಿದ್ದ ಏಂಗೆಲ್ಸ್ ಯೂರೋಪಿನ ಎಲ್ಲ ದೇಶಗಳ ವಿದ್ಯಮಾನಗಳ ಬಗೆಗೂ ಅಧಿಕೃತವಾಗಿ ಬರೆಯಲು ಸಮರ್ಥರಾಗಿದ್ದರು ಮತ್ತು ಅದನ್ನು ಮಾಡಲು ಈಗೊಂದು ಪತ್ರಿಕೆಯ ಮಾಧ್ಯಮವೂ ಲಭಿಸಿತ್ತು. ಅಂದಿನ ವಾತಾವರಣದಲ್ಲಿ ಪತ್ರಿಕೆಯು ಒಂದು ವರ್ಷ ನಡೆದದ್ದೇ ಹೆಚ್ಚು! ಅಷ್ಟರಲ್ಲಿ ಏಂಗೆಲ್ಸ್ ಸುಮಾರು ನೂರು ಲೇಖನಗಳನ್ನು ಪ್ರಕಟಿಸಿದ್ದರು.

ಫ್ರಾನ್ಸಿನಲ್ಲಿ ದುಡಿಯುವ ವರ್ಗದ ವಿಜಯವು ಜರ್ಮನಿಯ ಬಂಡವಳಿಗರಿಗೆ ಎಚ್ಚರಿಕೆಯ ಗಂಟೆಯಾಗಿತ್ತು. ಆದ್ದರಿಂದ ಏಂಗೆಲ್ಸರ ಪತ್ರಿಕೆಯನ್ನೂ ಅವರ ಚಳುವಳಿಯನ್ನೂ ಕೂಡಲೆ ಹತ್ತಿಕ್ಕುವುದು ಅಗತ್ಯವೆಂದು ಅವರು ಭಾವಿಸಿದ್ದರು. ಸರ್ಕಾರವು ಬಿಗಿ ಭದ್ರತೆ ಕಲ್ಪಿಸಲು ಯಾವುದೇ ಸಭೆ, ಸಂಘಟನೆ, ನಡೆಯದಂತೆ ಆಜ್ಞೆ ಹೊರಡಿಸಿತು. ಬಂಡವಳಿಗರಿಗೆ ಸಂಘರ್ಷ ಬೇಕಿರಲಿಲ್ಲವಾದ್ದರಿಂದ ಅವರು ದೊಡ್ಡ ಭೂಮಾಲಿಕರು ಮತ್ತು ರಾಜಮನೆತನದ ಜೊತೆ ಒಪ್ಪಂದಕ್ಕೆ ಬಂದರು. ಎಲ್ಲ ಪ್ರಜಾಪ್ರಭುತ್ವ ಸಂಘಗಳನ್ನು ವಿಸರ್ಜಿಸಬೇಕೆಂಬ ಆಜ್ಞೆಯನ್ನು ಪತ್ರಿಕೆ ತೀವ್ರವಾಗಿ ಪ್ರತಿಭಟಿಸಿತು. ಕೊಲೋನ್‌ನಲ್ಲಂತೂ ಪೊಲೀಸರ ದಬ್ಬಾಳಿಕೆ ಮಿತಿಮೀರಿತ್ತು. ಶಾಪರ್ ಎಂಬ ಕಾರ್ಮಿಕ ನಾಯಕನನ್ನು ನಗರದಿಂದ ಹೊರಹಾಕುವ ಬೆದರಿಕೆ ಹಾಕಲಾಯಿತು. ಆದರೆ ಕೊಲೋನಿನ ಪ್ರಜಾಪ್ರಭುತ್ವ ಸಂಘವು ಏಂಗೆಲ್ಸ್ ನಾಯಕತ್ವದಲ್ಲಿ ಇದನ್ನು ಹಿಮ್ಮೆಟ್ಟಿಸಿತು. ೧೮೪೮ರ ಸೆಪ್ಟೆಂಬರ್ ೧೭ರಂದು ಫ್ರಾಂಕೆನ್ ಪ್ಲಾಟ್ಸ್ ಎಂಬಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಆರುಸಾವಿರ ಮಂದಿ ಪಾಲ್ಗೊಂಡಿದ್ದರು. ತಮ್ಮ ಸಂಘಗಳನ್ನು ವಿಸರ್ಜಿಸಬೇಕೆಂಬ ಆಜ್ಞೆಯನ್ನು ರದ್ದುಮಾಡುವಂತೆ ಒತ್ತಾಯಿಸಿ ಸಭೆಯ ಪ್ರಜಾಪ್ರಭುತ್ವವಾದಿಗಳು ಒಂದು ನಿರ್ಣಯ ಕೈಗೊಂಡು ಅದನ್ನು ಬರ್ಲಿನ್ ಶಾಸನಸಭೆಗೆ ಕಳಿಸಿದರು. ಆ ವೇಳೆಗೆ ಫ್ರಾಂಕ್‌ಫರ್ಟ್‌ನಲ್ಲಿ ಒಂದು ಚಿಕ್ಕ ದಂಗೆ ಎದ್ದಿತ್ತು. ಪತ್ರಿಕೆಯು ಅದಕ್ಕೆ ಬೆಂಬಲ ಸೂಚಿಸಿತ್ತು. ಕೊಲೋನ್‌ನ "ಕಾನೂನು ಪಾಲಕರು" ಪತ್ರಿಕೆಯನ್ನು ಬಲವಂತವಾಗಿ ಮುಚ್ಚಿಸಿ ಏಂಗೆಲ್ಸ್‌ನ ದಸ್ತಗಿರಿಗೆ ಕ್ರಮ ಕೈಗೊಂಡಾಗ ಏಂಗೆಲ್ಸ್ ಭೂಗತರಾಗಿ ಕೆಲಕಾಲ ಬಾರ್ಮೆನ್‌ನಲ್ಲಿ ಉಳಿದರು, ಗುಟ್ಟಾಗಿ ತಂದೆ-ತಾಯಿಯರನ್ನು

ಭೇಟಿಯಾದರು. ಪೊಲೀಸರ ವಿರುದ್ಧ ಮಗನು ಕಾರ್ಯಾಚರಣೆಯಲ್ಲಿ ತೊಡಗಿದ್ದುದು ತಂದೆಗೆ ವಿಪರೀತ ಸಿಟ್ಟು ತರಿಸಿತ್ತು. ಗಂಡನ ಕೋಪ ಶಮನ ಮಾಡಲು ಏಂಗೆಲ್ಸರ ತಾಯಿ ಯತ್ನಿಸಿದರಾದರೂ ಅದು ಫಲಕಾರಿಯಾಗುವ ಸಂಭವವೇ ಇರಲಿಲ್ಲ. ಅಕ್ಟೋಬರ್ ಮೊದಲ ವಾರದಲ್ಲಿ ಏಂಗೆಲ್ಸ್ ಬೆಲ್ಜಿಯಂ ಪ್ರವೇಶಿಸಬೇಕಾಯಿತು.

ಅಲ್ಲಿಯೂ ಕ್ಷೇಮ ಸಾಧ್ಯವಿರಲಿಲ್ಲ; ಏಕೆಂದರೆ ಏಂಗೆಲ್ಸ್ ಬಗ್ಗೆ ಪ್ರಷ್ಯದ ಪೊಲೀಸರು ಬೆಲ್ಜಿಯಂ ಪೊಲೀಸರಿಗೆ ಎಚ್ಚರ ನೀಡಿದ್ದರು. ಅವರು ತಂಗಿದ್ದ ಹೊಟೇಲಿಗೆ ಬಂದು ಪೊಲೀಸರು ಅವರನ್ನು ಬಂಧಿಸಿ "ಯಾರೋ ಅನಾಮಧೇಯರು ದೇಶದೊಳಕ್ಕೆ ನುಸುಳಿದ್ದಾರೆಂದು" ಅವರ ಮೇಲೆ ಅಪಾದನೆ ಹೊರಿಸಿ ಕಾರಾಗೃಹಕ್ಕೆ ತಳ್ಳಿದರು. ಹಲವು ಸ್ನೇಹಿತರು ಇವರನ್ನು ಗುರುತಿಸಲು ಸಿದ್ಧರಿದ್ದರು. ಆದರೆ ಪೊಲೀಸರು ಅದಕ್ಕೆ ಓಗೊಡಲಿಲ್ಲ. ಒಂದೇ ದಿನದಲ್ಲಿ ಇಷ್ಟೆಲ್ಲಾ ನಡೆದುಹೋಯಿತು. ಫ್ರಾನ್ಸಿನ ಗಡಿಯವರೆಗೆ ಹೋಗಲಿದ್ದ ರೈಲಿಗೆ ತುರುಕಿ ಏಂಗೆಲ್ಸರನ್ನು ಸಾಗಿಹಾಕಲಾಯಿತು! ಇದರ ವಿರುದ್ಧ ಪತ್ರಿಕೆಗಳು ಸಿಡಿದೆದ್ದವು. ಒಂದು ಪತ್ರಿಕೆ ಬರೆಯಿತು: "ಎಲ್ಲ ದೇಶಗಳಲ್ಲೂ ಇರುವ ಸ್ವಾತಂತ್ರ್ಯದ ನೇಹಿಗರು ಒಂದಂಶವನ್ನು ಮರೆಯಬಾರದು; ಯೂರೋಪಿನಲ್ಲಿ ಮುಕ್ತವಾಗಿ ಪ್ರಯಾಣಿಸುವಾಗ ನಮ್ಮ ದೇಶವನ್ನು ಪ್ರವೇಶಿಸಿದಿರೋ ಮುಗಿಯಿತು. ನಮ್ಮ ಪೊಲೀಸರು ನಿಮ್ಮನ್ನು ಕಾರಾಗೃಹದೊಳಕ್ಕೆ ತಳ್ಳುತ್ತಾರೆ."

ಅಕ್ಟೋಬರ್ ೫ರಂದು ಪ್ಯಾರಿಸ್ ತಲುಪಿದಾಗ ಏಂಗೆಲ್ಸ್ ಬಳಿ ಒಂದು ಚಿಕ್ಕಾಸೂ ಇರಲಿಲ್ಲ. ಜೂನ್ ತಿಂಗಳಲ್ಲಿ ಪ್ಯಾರಿಸ್ ಕ್ರಾಂತಿಯನ್ನು ಸದೆಬಡಿಯಲಾಗಿತ್ತು. ಫೆಬ್ರವರಿಯ ಹುಮ್ಮಸ್ಸನ್ನು ಕಳೆದುಕೊಂಡು ಪ್ಯಾರಿಸ್ ಕಾಂತಿಹೀನವಾಗಿತ್ತು. ಮೇ ೧೫ ಮತ್ತು ಜೂನ್ ೨೫, ಈ ಎರಡು ದಿನಗಳಲ್ಲಿ ಹದಿನೈದು ಸಾವಿರ ಹೆಣಗಳು ಪ್ಯಾರಿಸ್ಸಿನ ರಸ್ತೆಗಳಲ್ಲಿ ಬಿದ್ದಿದ್ದವು. ಪ್ರಜಾಪ್ರಭುತ್ವದ ಹಕ್ಕಿಗಾಗಿ ಹೋರಾಡಿದ್ದವರ ಮಾರಣಹೋಮ ನಡೆದುಹೋಗಿತ್ತು. ಎಲ್ಲೆಲ್ಲೂ ಬಂಡವಳಿಗರು ಮತ್ತು ಪೊಲೀಸ್ ಗುಪ್ತಚಾರರು. ಯಾವ ಸಂಗೀತ ಮತ್ತು ನಾಟಕ ಮಂದಿರಗಳೂ ಬಾಗಿಲು ತೆಗೆಯುವಂತಿಲ್ಲ. ಪ್ಯಾರಿಸ್‌ನಲ್ಲಿ ಬೆಳಕು ಹೊತ್ತಿಸಿದ್ದ ದುಡಿಯುವ ಜನ ಹತರಾಗಿದ್ದರು ಇಲ್ಲವೆ ಕತ್ತಲೆ ಕೋಣೆಗಳಲ್ಲಿ ಕಂಗಾಲಾಗಿ ಬಿದ್ದಿದ್ದರು. ಇಂತಹ ನಿರ್ಜೀವ ಪ್ಯಾರಿಸ್ಸಿನಲ್ಲಿರಲು ಏಂಗೆಲ್ಸ್‌ಗೆ ಸಾಧ್ಯವಿರಲಿಲ್ಲ. ಇರಲೂ ಹಣವಿಲ್ಲ, ಹೋಗಲೂ ಹಣವಿಲ್ಲ. ಹಾಗಾಗಿ ಸ್ವಿಟ್ಸರ್ಲೆಂಡ್‌ಗೆ ನಡೆದೇ ಹೋಗುವುದೆಂದು ಹೊರಟುಬಿಟ್ಟರು. ದಾರಿಯುದ್ದಕ್ಕೂ ಸತ್ತು ಸುಣ್ಣವಾಗಿದ್ದ ರೈತರು. ಕ್ರಾಂತಿ ಏಕೆ ವಿಫಲವಾಯಿತೆಂದು ಯೋಚಿಸುತ್ತಾ ಏಂಗೆಲ್ಸ್ ಹಾದಿ ಸವೆಸುತ್ತಿದ್ದುದು ಜಿನೀವಾ ಮುಖಾಂತರ ಬರ್ನ್ ತಲುಪಲು. "ಪ್ಯಾರಿಸ್ಸಿನಿಂದ ಬರ್ನ್‌ಗೆ" ಎಂಬ ಪ್ರವಾಸ ಕಥನದಲ್ಲಿ ಏಂಗೆಲ್ಸ್ ದಾರಿಯುದ್ದಕ್ಕೂ ಕಂಡ ದುರಂತ ದೃಶ್ಯಗಳು, ಬಂಡವಳಿಗರ ಮತ್ತು ಭೂಮಾಲೀಕರ ಕ್ರೌರ್ಯ, ಕಾರ್ಮಿಕರ ಮತ್ತು ರೈತರ ನಡುವಣ ಅಂತರ, ಲೂಯಿ ಬೋನಪಾರ್ಟೆಯನ್ನು ರೈತರು ಬೆಂಬಲಿಸಲು ಕಾರಣ, ಮುಂತಾದುವನ್ನೆಲ್ಲಾ ಪರಿಚಯಿಸಿಕೊಳ್ಳಬಹುದು.

ಜರ್ಮನಿಗೆ ಆದಷ್ಟು ಬೇಗ ಹಿಂದಿರುಗಬೇಕೆಂದು ಏಂಗೆಲ್ಸ್‌ಗೆ ತವಕ, ಆದರೆ ವಾಪಸ್ಸಾದರೆ ದಸ್ತಗಿರಿಯಾಗಬಹುದೆಂಬ ಎಚ್ಚರಿಕೆ ಮಾರ್ಕ್ಸ್‌ರಿಂದ. ಏನೂ ಮಾಡದೆ ಸ್ವಿಟ್ಸರ್ಲೆಂಡಿನಲ್ಲಿ ಸ್ವತಂತ್ರವಾಗಿರುವುದಕ್ಕಿಂತ ಚಳುವಳಿಗೆ ಧುಮಿಕಿ ಕೊಲೋನ್‌ನಲ್ಲಿ ದಸ್ತಗಿರಿಯಾಗುವುದು ಮೇಲೆಂದು ಚಡಪಡಿಕೆ ಏಂಗೆಲ್ಸರಿಗೆ. ೧೮೪೯ರ ಜನವರಿಯಲ್ಲಿ ಏಂಗೆಲ್ಸ್ ಕೊಲೋನ್‌ಗೆ ಹಿಂದಿರುಗಿದರು. ಆಸ್ಟ್ರಿಯ, ಹಂಗೆರಿ, ಪೋಲೆಂಡ್ ಮತ್ತು ಇಟಲಿಗಳಲ್ಲಿ ದುಡಿಯುವ ವರ್ಗ ಪ್ರತಿಭಟನೆಯ ಹಾದಿ ಹಿಡಿದಿತ್ತು. ಆ ಸಂದರ್ಭಗಳಲ್ಲೆಲ್ಲಾ ಮಾರ್ಕ್ಸ್-ಏಂಗೆಲ್ಸ್‌ರ ಪತ್ರಿಕೆ ಹೋರಾಟಗಾರರ ಪರ ನಿಂತು ತನ್ನ ಧೈರ್ಯವನ್ನು ಸಾಬೀತುಪಡಿಸಿತ್ತು. ವಿದೇಶಗಳ ಬಂಡುಕೋರರೊಂದಿಗೆ ಗುಟ್ಟಾಗಿ ಸಂಪರ್ಕವಿಟ್ಟುಕೊಂಡ ಪತ್ರಿಕೆ ಎಂದು ಒಂದು ಸರ್ಕಾರಿ ಪತ್ರಿಕೆ ಇದನ್ನು ಟೀಕಿಸಿದ್ದಾಗ ಸಂಪಾದಕರು ಬರೆದಿದ್ದರು: "ನಾವೆಂದೂ ನಮ್ಮ ಸಂಪರ್ಕವನ್ನು ಗುಟ್ಟಾಗಿ ಇಟ್ಟಿಲ್ಲ. ಫ್ರಾನ್ಸ್, ಇಂಗ್ಲೆಂಡ್, ಇಟಲಿ, ಬೆಲ್ಜಿಯಂ, ಪೋಲೆಂಡ್ ಮುಂತಾದೆಡೆಗಳಲ್ಲಿ ಎಲ್ಲ ಪ್ರಜಾಪ್ರಭುತ್ವವಾದಿಗಳ ಜೊತೆ ನಮಗೆ ಸಂಪರ್ಕವಿರುವುದು ಹೆಮ್ಮೆಯ ಸಂಗತಿ."

೧೮೪೮ರ ಜುಲೈ ೫ರ ಸಂಚಿಕೆಯಲ್ಲಿ ಪೊಲೀಸ್ ಅಧಿಕಾರಿಯೊಬ್ಬನನ್ನು ಅಪಮಾನ ಗೈದಿತ್ತೆಂದು ಮಾರ್ಕ್ಸ್ ಮತ್ತು ಏಂಗೆಲ್ಸ್ ೧೮೪೯ರ ಫೆಬ್ರವರಿ ೭ರಂದು ನ್ಯಾಯಾಲಯದ ಮುಂದೆ ಆಪಾದನೆ ಎದುರಿಸಬೇಕಾಯಿತು. ಇಂತಹ ಆಪಾದನೆ ಹೊರಿಸಲು ಪೊಲೀಸರು ಏಳು ತಿಂಗಳು ಕಾದಿದ್ದರೇನೋ! ನ್ಯಾಯಾಲಯದಲ್ಲಿ ಏಂಗೆಲ್ಸ್ ಪತ್ರಿಕಾ ಸ್ವಾತಂತ್ರ್ಯವನ್ನು ಕುರಿತು ದೀರ್ಘವಾದ ಹೇಳಿಕೆ ನೀಡಿ ಅಧಿಕಾರಶಾಹಿಯು ತನ್ನ ಎಲ್ಲೆಯನ್ನು ಮೀರಿ ವರ್ತಿಸಿದೆಯೆಂದು ನುಡಿದು, ಪತ್ರಿಕೆಯು ತಾಳಿದ್ದ ನಿಲುವು ಸರ್ವಥಾ ಸಮರ್ಥನೀಯವಾಗಿತ್ತೆಂದು ವಾದಿಸಿದರು. ಆಪಾದನೆ ಹುರುಳಿಲ್ಲದ್ದೆಂದು ನ್ಯಾಯಾಲಯವು ಪೊಲೀಸರ ಕೇಸನ್ನು ತಳ್ಳಿಹಾಕಿತು. ಇಡೀ ಜರ್ಮನಿಯ ದುಡಿಯುವ ಜನರನ್ನು ಒಂದು ಪಕ್ಷದಡಿ ಐಕ್ಯಗೊಳಿಸಬೇಕೆಂಬ ಉದ್ದೇಶದಿಂದ ೧೮೪೯ರ ಮೇ ೬ರಂದು ಒಂದು ಸಭೆ ನಡೆಸಬೇಕೆಂದು ಏಂಗೆಲ್ಸ್ ಉದ್ದೇಶಿಸಿದ್ದರು. ನಂತರ ಜೂನ್‌ನಲ್ಲಿ ಮಹಾಧಿವೇಶನವನ್ನು ಲೈಪ್‌ಜಿಗ್‌ನಲ್ಲಿ ನಡೆಸಬೇಕೆಂದೂ ಉದ್ದೇಶಿಸಲಾಗಿತ್ತು. ಆದರೆ ಮೇ ತಿಂಗಳಲ್ಲಿ ನಾಡಿನುದ್ದಗಲಕ್ಕೂ ಕೋಲಾಹಲಗಳುಂಟಾದವು. ರೈನ್ ಪ್ರಾಂತ್ಯದಲ್ಲಿ ದಂಗೆ, ಬ್ಯಾಡೆನ್‌ನಲ್ಲಿ ಸಂಘರ್ಷಗಳು, ಪ್ರಷ್ಯದ ಸೇನೆಯ ಮಧ್ಯಪ್ರವೇಶ, ಪೊಲೀಸರ ದೌರ್ಜನ್ಯಗಳು, ಹೀಗೆ ಒಂದರಮೇಲೊಂದು ಘಟನೆಗಳು ತುಂಬಿಬಂದು ಅಧಿವೇಶನ ನಡೆಯಲಿಲ್ಲ. ಆಗಲೇ ಪೆಟ್ಟು ತಿಂದಿದ್ದ ಪ್ರಜಾಪ್ರಭುತ್ವ ಇನ್ನೂ ಛಿದ್ರವಾಯಿತು. ಚಳುವಳಿಗಳ ಬೆನ್ನು ಮುರಿಯುವ ಹುನ್ನಾರ ತೀವ್ರವಾಯಿತು, ಪ್ರತಿಕ್ರಾಂತಿಯ ಹೊಡೆತ ದುರ್ಭರವಾಯಿತು.

ಆಗ್ಗೆ ಫ್ರಾಂಕ್‌ಫರ್ಟ್‌ನಲ್ಲಿ "ರಾಷ್ಟ್ರೀಯ ಶಾಸನಸಭೆ" ಎಂಬ ಹೆಸರಿನಲ್ಲಿ ಒಂದು ಪ್ರತಿನಿಧಿ ಸಭೆ ಇರುತ್ತಿತ್ತು. ಜರ್ಮನಿಯು ಐಕ್ಯಗೊಂಡು ಒಂದು ರಾಜ್ಯಪ್ರಭುತ್ವವಾಗಬೇಕೆಂದು ಅದರ ಅಭಿಲಾಷೆ. ಆ ನಿಟ್ಟಿನಲ್ಲಿ ಅದೊಂದು ಸಂವಿಧಾನವನ್ನು ರೂಪಿಸಿತು.

ಪ್ರಷ್ಯ ಮತ್ತು ಇತರ ಭಾಗಗಳ ಸರ್ಕಾರಗಳು ಅದನ್ನು ತಿರಸ್ಕರಿಸಿದವು. ಪ್ರಜಾಪ್ರಭುತ್ವವಾದಿಗಳು ಈ ಸಂವಿಧಾನದ ಪರವಾಗಿ ಎಲ್ಲೆಡೆ ಹೋರಾಟಕ್ಕಿಳಿದರು. ೧೮೪೯ರ ಮೇ ೩ರಂದು ಸ್ಯಾಕ್ಸೋನಿಯ ರಾಜಧಾನಿಯಾದ ಡ್ರೆಸ್ಡೆನ್‌ನಲ್ಲಿ ಸಶಸ್ತ್ರ ಹೋರಾಟಗಳು ನಡೆದು ರಾಜನನ್ನು ಹೊರದೂಡುವ ಪ್ರಸಂಗ ಜರುಗಿತು. ನಗರವು ಪ್ರಜಾಪ್ರಭುತ್ವವಾದಿಗಳ ವಶಕ್ಕೆ ಬಂದಿತು. ಇದರ ಪ್ರಭಾವದಿಂದಾಗಿ ಜರ್ಮನಿಯ ಹಲವು ನಗರಗಳಲ್ಲಿ ಘರ್ಷಣೆಗಳು ತಾರಕಕ್ಕೇರಿದವು. ಅವನ್ನು ಕ್ರೋಢೀಕರಿಸಲು ಏಂಗೆಲ್ಸ್ ಮೂರು ಅಂಶಗಳ ಸೂತ್ರವೊಂದನ್ನು ಮುಂದಿಟ್ಟರು: (ಅ) ಸರ್ಕಾರದ ಮಿಲಿಟರಿ ಶಕ್ತಿ ಕೇಂದ್ರೀಕೃತವಾಗಿರುವ ಭಾಗಗಳಲ್ಲಿ ಘರ್ಷಣೆಗಳಿಗೆ ಮುನ್ನುಗ್ಗದಿರುವುದು; (ಆ) ಚಿಕ್ಕ ಪಟ್ಟಣಗಳಲ್ಲಿ ನೇರ ಘರ್ಷಣೆಯ ಬದಲು ಬೇರೆ ಚಟುವಟಿಕೆಗಳನ್ನು ಹೆಚ್ಚಿಸಿ ಮಿಲಿಟರಿಯನ್ನು ತುದಿಗಾಲಲ್ಲಿ ನಿಂತಿರುವಂತೆ ಮಾಡುವುದು; ಮತ್ತು (ಇ) ವಿವಿಧ ಭಾಗಗಳ ಸಶಸ್ತ್ರ ತುಕಡಿಗಳನ್ನು ಘರ್ಷಣೆ ತೀವ್ರವಾಗಿರುವ ಕಡೆಗೆ ಸಾಗಿಸಿ ಅಲ್ಲಿ ಕ್ರಾಂತಿಕಾರಿ ಸೈನ್ಯದ ಬೆಳವಣಿಗೆಗೆ ಆದ್ಯತೆ ನೀಡುವುದು.

ಎಲ್ಲ ನಗರಗಳಲ್ಲೂ ಏಂಗೆಲ್ಸ್ ಮುಂದಾಳತ್ವ ಸ್ಪಷ್ಟವಾಗಿತ್ತು. ಒಂದು ರೀತಿಯ ದಂಡನಾಯಕನಾಗಿ ಹೋರಾಟದ ತುಕಡಿಗಳನ್ನು ಸೂಕ್ತವಾಗಿ ನಿರ್ದೇಶಿಸುವುದು ಅವರ ಕೆಲಸವಾಯಿತು. ತಾನೂ ಒಬ್ಬ ಸೈನಿಕನಾಗಿ ತುಕಡಿಗಳನ್ನು ಮುನ್ನಡೆಸುವ ಜವಾಬ್ದಾರಿ ಹೊತ್ತ ಏಂಗೆಲ್ಸ್ ಬಹಳ ಸಂಕೀರ್ಣ ಭಾವನೆಗಳ ಹೋರಾಟಗಾರರನ್ನು ಒಗ್ಗೂಡಿಸುವ ಯತ್ನ ಮಾಡಬೇಕಾಗಿಬಂತು. ಅವರಲ್ಲಿ ಕೆಲವರಿಗೆ ಮುಂದೇನು ಎಂಬ ಕಲ್ಪನೆ ಇರಲಿಲ್ಲ, ಇನ್ನು ಕೆಲವರಿಗೆ ಚಿಕ್ಕ ಒಂದು ಸಂಘರ್ಷದಿಂದ ಎಲ್ಲವೂ ಸಿದ್ಧಿಸಬೇಕೆಂಬ ಭ್ರಾಂತಿ, ಮತ್ತೆ ಕೆಲವರಿಗೆ ಪ್ರಜಾಪ್ರಭುತ್ವದ ಬಗ್ಗೆ ನಿಖರವಾದ ಒಲವಿಲ್ಲ. ಸಂಘಟಿತ ಸೈನ್ಯದ ವಿರುದ್ಧ ಇಂತಹವರ ತುಕಡಿಗಳನ್ನು ನಿಲ್ಲಿಸಿ ಸಶಸ್ತ್ರ ಹೋರಾಟ ನಡೆಸುವುದು ದುಷ್ಕರವಾಗಿತ್ತು. ರಾಜಕೀಯವನ್ನು ಕೆಲಕಾಲ ಬದಿಗಿಟ್ಟು ಕೇವಲ ಸಶಸ್ತ್ರ ಹೋರಾಟದ ಯಶಸ್ಸಿಗೆ ಶ್ರಮಿಸಬೇಕೆಂದು ಕರೆಕೊಟ್ಟ ಏಂಗೆಲ್ಸ್‌ಗೆ ನಗರಗಳ ತುಕಡಿಗಳ ಸಂಯೋಜನೆಯ ಕೆಲಸ ವಹಿಸಲಾಯಿತು. ಹಿಂದೊಮ್ಮೆ ಸೈನ್ಯದಲ್ಲಿ ಭರ್ತಿಯಾಗಿ ಮದ್ದು-ಗುಂಡುಗಳ ನೇರ ಪರಿಚಯ ಹೊಂದಿದ್ದ ಏಂಗೆಲ್ಸ್ ಈಗ ತನ್ನ ಹಳೆಯ ಊರಾದ ಎಲ್ಬರ್‌ಫೆಲ್ಡ್‌ನಲ್ಲಿ ವ್ಯೂಹ ರಚಿಸಿ ತುಕಡಿಗಳನ್ನು ನಿಯಂತ್ರಿಸುವ ಹೊಣೆ ಹೊತ್ತಿದ್ದರು. ಹೋರಾಟದ ನೇತೃತ್ವವನ್ನು "ಕ್ಷೇಮ ಸಮಿತಿ" ವಹಿಸಿತ್ತು. ಆ ಸಮಿತಿಯಲ್ಲಿದ್ದವರಿಗೆ ಮಿಲಿಟರಿ ಅನುಭವವಿರಲಿಲ್ಲ ಮತ್ತು ಸೈನ್ಯದ ವಿರುದ್ಧ ಪ್ರಬಲವಾದ ಮುಖಾಮುಖಿಗೆ ಅವರು ಹಿಂಜರಿಯುತ್ತಿದ್ದರು. ಆದರೆ ಏಂಗೆಲ್ಸ್ ನೇತೃತ್ವದಲ್ಲಿ ಒಂದು ತುಕಡಿಯು ಪಟ್ಟಣದ ಶಸ್ತ್ರಾಗಾರಕ್ಕೆ ಮುತ್ತಿಗೆ ಹಾಕಿ ಶಸ್ತ್ರಗಳನ್ನು ವಶಪಡಿಸಿಕೊಂಡಿತು. ಕೆಂಪು ಶಾಲೊಂದನ್ನು ಭುಜದ ಮೇಲೆ ಹಾಕಿಕೊಂಡು ತುಕಡಿಗಳನ್ನು ಸಜ್ಜುಗೊಳಿಸಲು ಅತ್ತಿಂದಿತ್ತ ಸುಳಿಯುತ್ತಿದ್ದ ಏಂಗೆಲ್ಸ್‌ಗೆ ಅನಿರೀಕ್ಷಿತವಾಗಿ ಅವರ ತಂದೆ ಎದುರಾದರು. ಬಾರ್ಮೆನ್ ಮತ್ತು ಎಲ್ಬರ್‌ಫೆಲ್ಡ್‌ನ ಬಂಡವಳಿಗರು ಫ್ರೆಡರಿಕ್ ಏಂಗೆಲ್ಸ್ ಬಂಡುಕೋರನಾಗಿದ್ದುದನ್ನು ಕಂಡು ದಿಗ್ಭ್ರಮೆಗೊಂಡರು ಹಾಗೂ ಅದನ್ನು ಸಹಿಸದಾದರು. "ಕ್ಷೇಮ

ಸಮಿತಿ"ಯು ಏಂಗೆಲ್ಸ್ ರನ್ನು ಕೈಬಿಡುವ ತೀರ್ಮಾನ ತೆಗೆದುಕೊಳ್ಳಬೇಕೆಂದು ಆಗ್ರಹಿಸಿ ಯಶಸ್ವಿಯಾದರು ಕೂಡ. "ನಿನ್ನ ಇರುವಿಕೆಯಿಂದ ಚಳುವಳಿಯ ಉದ್ದೇಶವನ್ನು ನಗರದ ಜನ ಅಪಾರ್ಥ ಮಾಡಿಕೊಳ್ಳುವ ಸಂಭವವಿರುವುದರಿಂದ" ಏಂಗೆಲ್ಸ್ ಬಾರ್ಮೆನ್ ಬಿಟ್ಟು ತೆರಳಬೇಕೆಂದು ಸಮಿತಿಯು ಲಿಖಿತ ಆದೇಶ ನೀಡಿತು. ತುಕಡಿಗಳು ಏಂಗೆಲ್ಸ್ ಪರ, ಆದರೆ ನಿರ್ಣಾಯಕ ಅಧಿಕಾರವು ಸಮಿತಿಯದು. ತನ್ನಿಂದಾಗಿ ತುಕಡಿಗಳಿಗೂ ಸಮಿತಿಗೂ ವಿರಸವುಂಟಾದರೆ ಪ್ರಷ್ಯದ ಸೈನ್ಯವು ತುಕಡಿಗಳನ್ನು ಧ್ವಂಸಮಾಡಲು ಸುಲಭವಾಗುತ್ತದೆಂದು ಎಣಿಸಿ ಏಂಗೆಲ್ಸ್ ಮೇ ೧೫ರಂದು ಕೊಲೋನ್‌ಗೆ ತೆರಳಿದರು. ಸಮಿತಿಯ ನಾಯಕರ ಹಿಂದೇಟನ್ನು ಸಹಿಸದ ಹೋರಾಟಗಾರರು ತುಕಡಿಗಳನ್ನು ವಿಸರ್ಜಿಸಿ ತಮ್ಮ ತಮ್ಮ ಪಟ್ಟಣಗಳಿಗೆ ಹಿಂದಿರುಗಿದರು. ಯಾವುದೇ ಹೋರಾಟಕ್ಕೆ ನಾಯಕತ್ವ ಹೇಗಿರಬೇಕು ಮತ್ತು ನಾಯಕರ ಪ್ರಜ್ಞೆ-ವ್ಯಕ್ತಿತ್ವಗಳು ಹೇಗಿರಬೇಕೆಂಬ ಪಾಠವನ್ನು ಹೋರಾಟಗಾರರು ಕಲಿತಂತಾದುದಷ್ಟೇ ಇದರ ಲಾಭ. ಆದರೆ ಬಂಡವಾಳಶಾಹಿಯು ಬೆದರಿತು ಮತ್ತು ಹೊಸ ಸನ್ನಾಹಗಳತ್ತ ಮುಖ ಮಾಡಿತು.

ಪ್ರಷ್ಯ ಸೈನ್ಯದ ಅಧಿಕಾರಿಯಾಗಿದ್ದು ನಂತರ ಏಂಗೆಲ್ಸರೊಡನೆ ಚಳುವಳಿಗಳಲ್ಲಿ ಪಾಲ್ಗೊಂಡಿದ್ದ ವೇಡಮೇಯರ್ ಮಿಲಿಟರಿ ವಿಜ್ಞಾನದಲ್ಲಿ ಏಂಗೆಲ್ಸರ ಅಸಾಧಾರಣ ತಿಳುವಳಿಕೆ ಯನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು. ಅನೇಕ ಗ್ರಂಥಗಳನ್ನು ಅಭ್ಯಾಸ ಮಾಡಲು ಮತ್ತು ಪ್ರಾಯೋಗಿಕವಾಗಿ ಮಿಲಿಟರಿ ಜ್ಞಾನವನ್ನು ಅಳವಡಿಸಿಕೊಳ್ಳಲು ಯಾವಾಗಲೂ ಏಂಗೆಲ್ಸ್ ಆಸಕ್ತರೇ. ಆಸ್ಟ್ರಿಯ, ಫ್ರಾನ್ಸ್, ಸ್ಪೆಯಿನ್, ಮುಂತಾದ ದೇಶಗಳ ಖ್ಯಾತ ಮಿಲಿಟರಿ ತಜ್ಞರ ಎಲ್ಲ ಕೃತಿಗಳನ್ನು ಪರಿಚಯಿಸಿಕೊಂಡಿದ್ದ ಏಂಗೆಲ್ಸ್ ಕ್ರೀಮಿಯಾ ಯುದ್ಧದ ಬಗ್ಗೆ ಬರೆದಿರುವ ಲೇಖನಗಳು ತಾಂತ್ರಿಕ ದೃಷ್ಟಿಯಿಂದ ಪ್ರಖ್ಯಾತವಾದುವೆಂದು ಹೇಳುತ್ತಾರೆ. "ದಿ ನ್ಯೂ ಅಮೆರಿಕನ್ ಎನ್‌ಸೈಕ್ಲೋಪೀಡಿಯಾ"ದ ೧೮೫೭ರ ಆವೃತ್ತಿಗೆ ಮಿಲಿಟರಿ ವಿಜ್ಞಾನಕ್ಕೆ ಸಂಬಂಧಿಸಿದ ಸುಮಾರು ೫೦ ಲೇಖನಗಳನ್ನು ಬರೆದವರು ಏಂಗೆಲ್ಸ್. ರೋಮನ್ ಚಕ್ರಾಧಿಪತ್ಯದ ಕಾಲದಿಂದ ಕ್ರೀಮಿಯಾ ಯುದ್ಧದವರೆಗಿನ ಮಿಲಿಟರಿ ಇತಿಹಾಸವನ್ನು ಸಹ ಈ ವಿಶ್ವಕೋಶಕ್ಕೆ ಏಂಗೆಲ್ಸ್ ಬರೆದಿದ್ದಾರೆ. ಎಷ್ಟೋ ಮಿಲಿಟರಿ ತಜ್ಞರು ಇವರ ಪರಿಣತಿಯನ್ನು ಪ್ರಶಂಸಿಸಿದ್ದರೆಂದು ವಿಲಿಯಂ ಲೀಬ್‌ನೆಖ್ಟ್ ದಾಖಲಿಸಿದ್ದಾರೆ. ದುಡಿಯುವ ಜನತೆಯ ಪ್ರಭುತ್ವದಲ್ಲಿ ಮಿಲಿಟರಿ ಸರಂಜಾಮುಗಳಿಗಾಗಿ ಮಾಡುವ ವೆಚ್ಚವನ್ನು ತಗ್ಗಿಸಬೇಕೆಂದೂ, ದೊಡ್ಡ ಸೇನಾಬಲ ಕ್ರಮೇಣ ಕಡಿಮೆಯಾಗುತ್ತಾ ಹೋಗಬೇಕೆಂದೂ ಏಂಗೆಲ್ಸ್ ಆಶಿಸುತ್ತಿದ್ದರೆಂದು ಅವರ ಹಲವು ಲೇಖನಗಳಿಂದ ತಿಳಿದುಬರುತ್ತದೆ.

ಏಂಗೆಲ್ಸರ ದೈತ್ಯಶಕ್ತಿ ವಿಸ್ಮಯ ಉಂಟುಮಾಡುವಂಥದು. ಮ್ಯಾಂಚೆಸ್ಟರಿನಲ್ಲಿ ತಂದೆಯ ಗಿರಣಿಯ ವ್ಯವಸ್ಥಾಪಕ ಅಧಿಕಾರಿಯಾಗಿ ಗಿರಣಿಯಲ್ಲಿ ಕೆಲಸ, ಸ್ವಂತದ ಅವಿರತ ಅಧ್ಯಯನ, ಪತ್ರಿಕೆಗಳಿಗೆ ವಿಧವಿಧವಾದ ಬರಹಗಳು, ಸಂಘಟನೆಯ ಜವಾಬ್ದಾರಿ, ಚಳುವಳಿಯ ಕಾರ್ಯಕರ್ತ, ಹೀಗೆ ಅವರ ಸಮಯವನ್ನು ಹಂಚಿಕೊಳ್ಳಲು ಇಷ್ಟೆಲ್ಲಾ ಕ್ಷೇತ್ರಗಳಿದ್ದಾಗ

ಜೀವನವನ್ನು ಹೇಗೆ ಸಂಯೋಜಿಸಿಕೊಂಡರೆಂಬುದು ಆಶ್ಚರ್ಯ ಉಂಟುಮಾಡುತ್ತದೆ. ಜೊತೆಗೆ ಆಟಪಾಟಗಳು ಬೇರೆ: ವಿಶೇಷವಾಗಿ ಕುದುರೆ ಸವಾರಿ ಮತ್ತು ದೀರ್ಘ ಚಾರಣಗಳು. ಮಾರ್ಚ್ ೧೮೬೦ರಲ್ಲಿ ತಂದೆ ಮರಣಾವಸ್ಥೆಯಲ್ಲಿದ್ದಾಗ ಬಾರ್ಮೆನ್‌ಗೆ ಹೋಗಿ ನೋಡಬೇಕೆಂದಿದ್ದ ಏಂಗೆಲ್ಸ್‌ಗೆ ಅದು ಸುಲಭವಾಗಿರಲಿಲ್ಲ. ಏಕೆಂದರೆ ೧೮೪೮ರ ಕ್ರಾಂತಿಕಾರಿ ಚಟುವಟಿಕೆಗಳ ಕಾರಣದಿಂದಾಗಿ ಅವರ ಮೇಲೆ ಮೊಕದ್ದಮೆಗಳಿದ್ದವು. ಎರಡು ವಾರಗಳ ಭೇಟಿಯನ್ನು ಅನುಮೋದಿಸಬೇಕೆಂದು ಕುಟುಂಬದವರು ಸರ್ಕಾರವನ್ನು ಕೋರಿದ್ದರು. ಅದು ಮಂಜೂರಾಗುವ ಮೊದಲೇ ತಂದೆ ತೀರಿಕೊಂಡಿದ್ದ. ಆದರೂ ಬಾರ್ಮೆನ್‌ಗೆ ಹೋಗಿ ಏಪ್ರಿಲ್ ೬ರವರೆಗೆ ಅಲ್ಲಿದ್ದರು. ತಂದೆಯ "ಏಂಗೆಲ್ಸ್ ಕಿರ್ಶೆನ್" ಎಂಬ ಬಾರ್ಮೆನ್ ಉದ್ಯಮದಲ್ಲಿ ತನ್ನ ಭಾಗವನ್ನು ಬಿಟ್ಟುಕೊಡಬೇಕೆಂದು ಸೋದರರು ಕೇಳಿದ್ದರಿಂದ ಏಂಗೆಲ್ಸ್ ಅದಕ್ಕೆ ಒಪ್ಪಿಗೆ ನೀಡಿ ಮ್ಯಾಂಚೆಸ್ಟರಿನ "ಎರ್ಮೆನ್ ಅಂಡ್ ಏಂಗೆಲ್ಸ್" ಉದ್ಯಮದ ಭಾಗವನ್ನು ಮಾತ್ರ ಇರಿಸಿಕೊಂಡರು. ತಾನು ಮ್ಯಾಂಚೆಸ್ಟರಿನಲ್ಲಿ ಉದ್ಯೋಗಿಯೇ ವಿನಾ ಪಾಲುದಾರನಲ್ಲ ಎಂಬುದನ್ನು ಅಂಗೀಕರಿಸಿ ಸದ್ಯದಲ್ಲೇ ಆ ಉದ್ಯೋಗವನ್ನು ಬಿಟ್ಟುಬಿಡಲು ಸಾಧ್ಯವಾಗಬಹುದೆಂಬ ಆಸೆಯನ್ನು ಹೊತ್ತು ಇಂಗ್ಲೆಂಡಿಗೆ ಹಿಂದಿರುಗಿದರು. ತಾಯಿಯ ಇಚ್ಛೆಯಂತೆ ನಡೆಯಲು ತಾನು ಸದಾ ಸಿದ್ಧನೆಂದು ತಿಳಿಸಿ ಆಕೆಗೆ ಒಂದು ಪತ್ರ ಬರೆದು ಏಂಗೆಲ್ಸ್ ಹೇಳಿದರು: "ನಿನ್ನ ಈ ವಯಸ್ಸಿನಲ್ಲಿ ನಾನು ವ್ಯಥೆಯನ್ನುಂಟುಮಾಡುವವನೆ? ಕುಟುಂಬದ ಆಸ್ತಿಯ ಪಾಲಿಗಾಗಿ ನಿನ್ನ ಮನೆಯಲ್ಲಿ ಹುಳಿ ಹಿಂಡುವ ಆಸೆ ನನಗೆ ಖಂಡಿತ ಇಲ್ಲ. ...ನನಗೆ ನೂರು ಬೇರೆ ಉದ್ಯಮಗಳು ದಕ್ಕಬಹುದೇನೋ, ಆದರೆ ಇನ್ನೊಬ್ಬ ತಾಯಿ ಎಲ್ಲಿ ಸಿಗಬೇಕು!"

ಮ್ಯಾಂಚೆಸ್ಟರಿನಲ್ಲಿ ಏಂಗೆಲ್ಸ್‌ಗೆ ಅತಿ ನಿಷ್ಠಾವಂತ ಸ್ನೇಹಿತೆಯೆಂದರೆ ಮೇರಿ ಬರ್ನ್ಸ್. ಅವರು ಚರ್ಚಿಗೆ ಹೋಗಿ ಮದುವೆಯಾದವರಲ್ಲ, ಆದರೆ ದಂಪತಿಗಳು. ಆಕೆ ಐರ್ಲೆಂಡಿನ ಕನ್ಯೆ. ಅಷ್ಟಾಗಿ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗವಹಿಸದ ಮೇರಿ ಸಾಹಿತ್ಯಾಸಕ್ತಳು. ಏಂಗೆಲ್ಸ್‌ಗೆ ಹೆಜ್ಜೆಹೆಜ್ಜೆಗೂ ಸಹಧರ್ಮಿಣಿ ಆಕೆ. ೧೮೬೩ರ ಜನವರಿಯಲ್ಲಿ ಹಠಾತ್ತನೆ ಆಕೆ ತೀರಿಕೊಂಡಾಗ ಏಂಗೆಲ್ಸ್ ಸ್ವಲ್ಪ ಅಧೀರರಾದರು, ವಿಷಣ್ಣತೆ ಅವರನ್ನು ಕಾಡಿತು. ಮೊದಲಿಗೆ ವಿಷಯ ತಿಳಿಸಲು ಮಾರ್ಕ್ಸ್‌ಗೆ ಪತ್ರ ಬರೆದಾಗ ಏಂಗೆಲ್ಸ್ ಬರೆದದ್ದು ಐದೇ ವಾಕ್ಯಗಳು. ಮೂರು ವಾರಗಳ ನಂತರ ಇನ್ನೊಂದು ಪತ್ರದಲ್ಲಿ ಹೇಳಿದರು: "ಮೇರಿಯೊಡನೆ ನನ್ನ ಯೌವನದ ಕಟ್ಟಕಡೆಯ ತುಣುಕನ್ನು ಹೂತುಬಿಟ್ಟಿದ್ದೇನೆ ಎನಿಸುತ್ತಿದೆ."

ಮ್ಯಾಂಚೆಸ್ಟರ್ ಉದ್ಯಮದ ಮಾಲಿಕ ಗಾಟ್‌ಫ್ರೀಡ್ ಎರ್ಮೆನ್. ಅದರಲ್ಲಿ ಏಂಗೆಲ್ಸ್ ತಂದೆಯದೂ ಒಂದು ಪಾಲಿತ್ತು. ಹಳೆಯ ಒಂದು ಒಪ್ಪಂದದಂತೆ ಏಂಗೆಲ್ಸ್ ಅಲ್ಲಿ ನೌಕರ. ೧೮೬೯ರ ಜೂನ್ ೩೦ರಂದು ಆ ಒಪ್ಪಂದದ ಅವಧಿ ಮುಕ್ತಾಯವಾಗುವುದಿತ್ತು. ಏಂಗೆಲ್ಸ್ ಸ್ವಭಾವ ತಿಳಿದಿದ್ದ ಎರ್ಮೆನ್ ಒಪ್ಪಂದವನ್ನು ಒಂದು ವರ್ಷ ಮುಂಚೆಯೇ ಕೊನೆಗೊಳಿಸಲು ತಯಾರಿದ್ದ. ತನಗೆ ಮತ್ತು ಮಾರ್ಕ್ಸ್ ಕುಟುಂಬಕ್ಕೆ ಸಾಕಾಗುವಷ್ಟು ಹಣ ದೊರೆಯುವುದು

ದೃಢವಾದಾಗ ಏಂಗೆಲ್ಸ್ ನಿಟ್ಟುಸಿರೆಳೆದ. ಕಡೆಯ ದಿನ ಕಾರ್ಖಾನೆಯಿಂದ ಹಿಂದಿರುಗುವಾಗ ಹಾಡುತ್ತಾ, ಕೋಲು ತಿರುಗಿಸುತ್ತಾ, ಸಂತೋಷದ ಚಿಲುಮೆಯಾಗಿ ನಲಿನಲಿದು ಬಂದನೆಂದು ಅಂದು ಅವನೊಂದಿಗಿದ್ದ ಎಲಿಯನಾರ್ (ಮಾರ್ಕ್ಸ್‌ರ ಮಗಳು) ಬರೆದಿದ್ದಾಳೆ.

ಏಂಗೆಲ್ಸ್ ತನ್ನ ೨೨ನೆಯ ವಯಸ್ಸಿನಲ್ಲಿ ಮ್ಯಾಂಚೆಸ್ಟರ್‌ಗೆ ತೆರಳಿದ್ದು. ೨೭ವರ್ಷ ನೌಕರನಾಗಿ ದುಡಿಯುತ್ತಲೇ, ಬೇರೆ ನೂರು ಕೆಲಸಗಳಲ್ಲಿ ಭಾಗಿಯಾಗಿದ್ದ ಖ್ಯಾತಿ ಏಂಗೆಲ್ಸರದು. ಮೇರಿಯ ಭೇಟಿಯಾದದ್ದು ಕಾರ್ಖಾನೆಯಲ್ಲಿ. ಆಕೆಯೂ ಅಲ್ಲೇ ಕೆಲಸ ಮಾಡುತ್ತಿದ್ದವಳು. ಐರ್ಲೆಂಡಿನವರೇ ಹೆಚ್ಚು ವಾಸವಾಗಿದ್ದ ಮ್ಯಾಂಚೆಸ್ಟರಿನ ಒಂದು ಭಾಗದಲ್ಲಿ ಆಕೆಯ ಕೋಣೆ. ಆಕೆಯನ್ನು ವರಿಸುವ ಮುನ್ನ ಏಂಗೆಲ್ಸ್ ಬೇರಾರನ್ನೋ ಪ್ರೀತಿಸಿದ್ದುದು ಮತ್ತು ಅದು ಭಗ್ನವಾದುದು ೧೮೪೫ರ ಜನವರಿ ೨೦ರಂದು ಅವರು ಮಾರ್ಕ್ಸ್‌ಗೆ ಬರೆದ ಪತ್ರದಿಂದ ತಿಳಿದುಬರುತ್ತದೆ. ಅದು ಬಾರ್ಮೆನ್‌ನ ಪ್ರಸಂಗ. ಸುದೀರ್ಘವಾದ ಆ ಪತ್ರದ ಒಂದು ಭಾಗ ಹೀಗಿದೆ: "ನನ್ನ ಪ್ರೇಮ ಪ್ರಕರಣ ನಿರಾಸೆಯಲ್ಲಿ ಮುಗಿದುಹೋಯಿತು. ಅದರ ವಿವರಗಳನ್ನು ಹೇಳಹೋಗುವುದಿಲ್ಲ. ಇಷ್ಟು ಮಾತ್ರ ಹೇಳಬಹುದು: ಪ್ರಕರಣ ಮುಗಿದಿದೆ. ನನಗೂ ಸಾಕಾಗಿಹೋಗಿದೆ. ಇನ್ನಾದರೂ ನನ್ನ ದಿನನಿತ್ಯದ ಕೆಲಸಗಳಲ್ಲಿ ತೊಡಗಬಹುದೆಂದು ನನಗೆ ಸಂತೋಷ. ವಿವರಗಳನ್ನೆಲ್ಲಾ ನಿನಗೆ ಹೇಳಹೊರಟರೆ ನನ್ನ ಇಡೀ ದಿನ ಮಸುಕು-ಮಸುಕಾಗಿಬಿಡುತ್ತದೆ."

ಆಗಸ್ಟ್ ೧೮೪೪ರಲ್ಲಿ ಮೊದಲ ಬಾರಿಗೆ ಮಾರ್ಕ್ಸ್‌ರನ್ನು ಪ್ಯಾರಿಸ್‌ನಲ್ಲಿ ಭೇಟಿಯಾದಾಗ ಏಂಗೆಲ್ಸ್ ಮ್ಯಾಂಚೆಸ್ಟರ್‌ನಿಂದ ಹಿಂದಿರುಗುತ್ತಿದ್ದರು. ಚಳುವಳಿಯ ಅಲೆ ಕಡಿಮೆಯಾದಾಗ ಮತ್ತೆ ನವೆಂಬರ್ ೧೮೫೦ರಲ್ಲಿ ಮ್ಯಾಂಚೆಸ್ಟರ್‌ಗೆ ತೆರಳಿ ಎರ್ಮೆನ್ ಅಂಡ್ ಏಂಗೆಲ್ಸ್ ಕಂಪೆನಿಯಲ್ಲಿ ನೌಕರರಾದರು. ಲಂಡನ್ನಿನಲ್ಲಿದ್ದ ಸೋದರನಿಗೆ ಮಾರೀ ಪತ್ರ ಬರೆದು ತಂದೆ-ತಾಯಿಯರ ಇಂಗಿತವನ್ನು ತಿಳಿಸಿದ್ದು ಹೀಗೆ: "ನಿನ್ನ ರಾಜಕೀಯ ಪಕ್ಷವು ಮತ್ತೆ ಪ್ರಬುದ್ಧಮಾನಕ್ಕೆ ಬರುವವರೆಗೆ ನೀನು ಉದ್ಯಮಿಯಾಗಿ ಜೀವನ ಹೊರೆಯಬಹುದೆಂದು ಕುಟುಂಬದಲ್ಲಿ ಎಲ್ಲರದೂ ಭಾವನೆಯಾಗಿದೆ. ನಿನಗೆ ಅಷ್ಟು ಪ್ರಿಯವಲ್ಲದಿದ್ದರೂ ಸರಿಯೆ, ಸದ್ಯಕ್ಕೆ ಇದನ್ನು ಒಪ್ಪಿಕೊ; ಜೀವನಪರ್ಯಂತ ಅದರಲ್ಲೇ ಉಳಿಯಬೇಕೆಂಬ ನಿರ್ಬಂಧವೇನೂ ಇಲ್ಲವಲ್ಲ!" ಮ್ಯಾಂಚೆಸ್ಟರಿನ ಜೀವನ ಅವರ ಸ್ನೇಹಿತನಿಗೆ ರುಚಿಸದೆಂದು ಮಾರ್ಕ್ಸ್‌ಗೆ ತಿಳಿದಿತ್ತು. ಆ ದಿನಗಳನ್ನು "ಈಜಿಪ್ಟಿನ ಕಾರಾಗೃಹ ವಾಸ" ಎಂದು ಏಂಗೆಲ್ಸ್‌ಗೆ ಹೇಳುತ್ತಿದ್ದುದುಂಟು. ಆದರೆ ತನ್ನ ಮತ್ತು ಮಾರ್ಕ್ಸ್‌ರ ಕುಟುಂಬಗಳ ಜೀವನ ನಿರ್ವಹಣೆಗೆ ಇದು ಅನಿವಾರ್ಯವಾಗಿತ್ತೆಂದು ಏಂಗೆಲ್ಸ್ ಅರಿತಿದ್ದರು. ಬೆಳಿಗ್ಗೆ ೯ರಿಂದ ಸಂಜೆ ೮ರ ವರೆಗೆ ಕಾರ್ಖಾನೆಯ ಕಚೇರಿಯಲ್ಲಿ ಕೆಲಸ. ಓದು-ಬರಹಕ್ಕೆ ಸಮಯ ಸಿಗುವುದೇ ಕಷ್ಟವಾಗಿತ್ತು. ಮಾರ್ಕ್ಸ್‌ರ ಮಗಳು ಎಲಿಯನಾರ್ ಒಂದೆಡೆ ಹೀಗೆ ದಾಖಲಿಸಿದ್ದಾಳೆ: "ಏಂಗೆಲ್ಸ್‌ನಂತಹ ಒಬ್ಬ ಕ್ರಿಯಾಶೀಲ ವ್ಯಕ್ತಿ ಇಪ್ಪತ್ತು ವರ್ಷ ಹೀಗೆ ಕಳೆದನೆಂದರೆ ಎಷ್ಟು ಭೀಕರ ಎನಿಸುತ್ತದೆ. ಆದರೆ ಅವನೆಂದೂ ಗೊಣಗಿದವನಲ್ಲ. ಕಾರ್ಖಾನೆಯಲ್ಲಿ ಕೆಲಸ ಮಾಡುವುದಕ್ಕಿಂತ

ಉತ್ತಮವಾದದ್ದು ಪ್ರಪಂಚದಲ್ಲಿ ಬೇರೇನೂ ಇಲ್ಲವೇನೋ ಎಂಬಷ್ಟು ಹುರುಪಿನಿಂದ ಆತ ಕೆಲಸಕ್ಕೆ ಹೋಗುತ್ತಿದ್ದ."

ಮಾರ್ಕ್ಸ್‌ರ ಇನ್ನೊಬ್ಬ ಮಗಳು ಲಾರಾ. ಅವಳನ್ನು ವರಿಸಲಿದ್ದ ಪಾಲ್ ಲಫಾರ್ಗ್‌ನನ್ನು ಕರೆದುಕೊಂಡು ಏಂಗೆಲ್ಸ್ ಭೇಟಿಗಾಗಿ ಮಾರ್ಕ್ಸ್ ೧೮೬೭ರಲ್ಲಿ ಮ್ಯಾಂಚೆಸ್ಟರ್‌ಗೆ ಹೋಗಿದ್ದರು. ಫ್ರಾನ್ಸಿನಲ್ಲಿ ದುಡಿಯುವ ವರ್ಗದ ನೇತಾರನಾಗಿ ಪಾಲ್ ಹೆಸರುವಾಸಿಯಾಗಿದ್ದ. ಏಂಗೆಲ್ಸ್‌ರ ಜೀವನಶೈಲಿಯನ್ನು ಕಂಡು ಪಾಲ್ ಸ್ತಂಭೀಭೂತನಾದ. ಕಾರ್ಖಾನೆಯ ಕೆಲಸದ ಜೊತೆಗೆ ಈತನ ಆಸಕ್ತಿಗಳು ಅದ್ಭುತವೆನಿಸಿತು. ಬಿಡುವಿಲ್ಲದಿದ್ದರೂ ಉದ್ಗ್ರಂಥಗಳ ಅಧ್ಯಯನವನ್ನು ಏಂಗೆಲ್ಸ್ ಬಿಟ್ಟಿರಲಿಲ್ಲ. ಅದರ ವ್ಯಾಪ್ತಿಯೂ ಅಗಾಧ: ಸಾಹಿತ್ಯ, ಪ್ರಾಚೀನ ಜಾನಪದ, ಪ್ರಾಚೀನ ಕಾನೂನು, ಪ್ರಾಚೀನ ಇಂಗ್ಲಿಷ್ ಭಾಷೆ, ಪ್ರಾಚೀನ ಜರ್ಮನರ ಇತಿಹಾಸ, ಪ್ರಾಚೀನ ಜರ್ಮನ್ ಭಾಷೆಗಳು ಮತ್ತು ಉಪಭಾಷೆಗಳು, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಶರೀರಶಾಸ್ತ್ರ, ಭೂಗರ್ಭಶಾಸ್ತ್ರ, ಅರ್ಥಶಾಸ್ತ್ರದ ಇತಿಹಾಸ, ಇತ್ಯಾದಿ. ಮೊದಲಿಗೆ ಮ್ಯಾಂಚೆಸ್ಟರ್‌ನ ಮಧ್ಯಭಾಗದಲ್ಲಿದ್ದ ಏಂಗೆಲ್ಸ್ ನಂತರ ವಸತಿಯನ್ನು ಊರಾಚೆಯ ಒಂದು ಸಣ್ಣಮನೆಗೆ ವರ್ಗಾಯಿಸಿದ್ದು ಅಲ್ಲಿ ಮೇರಿ ಬರ್ನ್ಸ್ ಮತ್ತು ಅವಳ ತಂಗಿ ಲಿಡಿಯಾ ಇದ್ದುದರಿಂದ. ಅವರಿಬ್ಬರೂ ಐರ್ಲೆಂಡಿನ ವಿಮುಕ್ತಿ ಸಮರದಲ್ಲಿ ಭಾಗಿಗಳಾಗಿದ್ದವರು. ೧೮೫೬ರ ಮೇ ತಿಂಗಳಲ್ಲಿ ಮೇರಿಯೊಡನೆ ಐರ್ಲೆಂಡಿಗೆ ಹೋದಾಗ ವಸಾಹತುಶಾಹಿ ದೌರ್ಜನ್ಯದ ನೇರ ಪರಿಚಯ ಏಂಗೆಲ್ಸರಿಗಾಯಿತು: "ಗ್ರಾಮಾಂತರ ಪ್ರದೇಶಗಳು ಪೂರ್ತಿ ನಾಶವಾಗಿ ಹೋಗಿವೆ. ಮಧ್ಯೆ ಅಲ್ಲೊಂದು, ಇಲ್ಲೊಂದು ಶ್ರೀಮಂತ ಭೂಮಾಲೀಕರ ಭಾರಿ ಸ್ವತ್ತುಗಳು. ಅಲ್ಲಿಯ ಜನರನ್ನು ಬಿಟ್ಟರೆ ಇಡೀ ಪ್ರದೇಶ ಬಿಕೋ ಎನಿಸುತ್ತದೆ. ಭೂಮಿಯನ್ನು ಮರುಭೂಮಿಯನ್ನಾಗಿಸಿಬಿಟ್ಟಿದ್ದಾರೇನೋ ಎಂಬ ಆತಂಕ ಹುಟ್ಟುತ್ತದೆ. ಅವರ ಸ್ವಂತ ದೇಶದಲ್ಲಿ ಐರ್ಲೆಂಡಿನ ಜನ ಪರಕೀಯರಾಗಿದ್ದಾರೆ. ಅವರನ್ನು ಭಿಕಾರಿಗಳನ್ನಾಗಿ ಮಾಡಲಾಗಿದೆ." ಅಷ್ಟು ಕಾಲ ತನ್ನ ಅಧೀನದಲ್ಲಿದ್ದ ದೇಶದಲ್ಲಿ ಬ್ರಿಟನ್ ಒಂದೇ ಒಂದು ಉದ್ಯಮವನ್ನು ಸ್ಥಾಪಿಸಿರಲಿಲ್ಲ. ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಬಗ್ಗೆ ಪುಂಖಾನುಪುಂಖವಾಗಿ ಮಾತನಾಡುವ ಬ್ರಿಟನ್ ತನ್ನ ಸ್ವಾತಂತ್ರ್ಯದ ಸೌಧವನ್ನು ಕಟ್ಟಿಕೊಂಡಿದ್ದದ್ದು ಐರ್ಲೆಂಡಿನಂತಹ ವಸಾಹತುಗಳ ಭಗ್ನಾವಶೇಷಗಳ ಮೇಲೆ ಎಂದು ಏಂಗೆಲ್ಸ್ ಕಂಡುಕೊಂಡು ಮನನೊಂದರು.

೧೮೬೯ರಲ್ಲಿ ಏಂಗೆಲ್ಸ್ ಐರ್ಲೆಂಡಿನ ಚರಿತ್ರೆಯನ್ನು ಆಳವಾಗಿ ಅಭ್ಯಾಸ ಮಾಡಲಾರಂಭಿಸಿದರು. ಐರ್ಲೆಂಡಿನಿಂದ ಬ್ರಿಟನ್ ಕಾಲ್ತೆಗೆಯಬೇಕೆಂಬ ಒತ್ತಾಯ ಆಗಿನ್ನೂ ಬಲವತ್ತರವಾಗಿ ಮೂಡಿರಲಿಲ್ಲ. ಬ್ರಿಟನ್ನಿನ ಕಾರ್ಮಿಕ ಸಂಘಗಳ ಮುಂದಾಳುಗಳು ಐರ್ಲೆಂಡ್ ಬಗ್ಗೆ ತಾಳುತ್ತಿದ್ದ ನಿಲುವುಗಳು ಮಾರ್ಕ್ಸ್ ಮತ್ತು ಏಂಗೆಲ್ಸರಿಗೆ ಆಘಾತ ಉಂಟುಮಾಡಿದವು. ಐರ್ಲೆಂಡಿನ ಬಂಡುಕೋರರನ್ನು ಈ ನಾಯಕರು ಬಂಡವಳಿಗರ ಜೊತೆ ಸೇರಿ ಖಂಡಿಸುತ್ತಿದ್ದುದುಂಟು. ದುಡಿಯುವ ಜನರ ವಿಮೋಚನೆ ಮತ್ತು ರಾಷ್ಟ್ರೀಯ

ವಿಮೋಚನೆಯ ನಡುವಣ ಸಂಬಂಧ ಹೇಗಿರಬೇಕೆಂದು ವ್ಯಾಖ್ಯಾನಿಸಲು ಐರ್ಲೆಂಡ್ ಒಂದು ನಿದರ್ಶನವನ್ನೊದಗಿಸಿತು. ಐರ್ಲೆಂಡಿನ ವಿಮೋಚನೆಯನ್ನು ವಿರೋಧಿಸುವ ಬ್ರಿಟನ್ನಿನ ಕಾರ್ಮಿಕ ವರ್ಗದ ಧೋರಣೆಯು ಆಭಾಸವೆಂದು ಏಂಗೆಲ್ಸ್ ಪ್ರತಿಪಾದಿಸಿದ್ದಲ್ಲದೆ ಐರ್ಲೆಂಡ್ ಅನಭಿವೃದ್ಧ ದೇಶವಾಗಿ ಉಳಿಯಲು ಬ್ರಿಟನ್ನಿನ ಪಾತಕಗಳು ಕಾರಣವೇ ವಿನಾ ಬ್ರಿಟನ್ನಿನ ಕೆಲವು ರಾಜಕಾರಣಿಗಳು ಮತ್ತು ಅರ್ಥಶಾಸ್ತ್ರಜ್ಞರು ಹೇಳುವಂತೆ ಆ ದೇಶದ ಭೌಗೋಳಿಕ ಲಕ್ಷಣ ಮತ್ತು ವಾಯುಗುಣ ಸರ್ವಥಾ ಕಾರಣವಲ್ಲವೆಂದು ವಾದಿಸಿದರು: "ಬ್ರಿಟನ್ನಿನ ಆಳುವ ವರ್ಗದ ಹಿತವನ್ನು ರಕ್ಷಿಸುವುದಕ್ಕಾಗಿ ಐರ್ಲೆಂಡ್ ಬಗೆಗಿನ ಮಾಹಿತಿಯನ್ನು ತಪ್ಪಾಗಿ ಪ್ರತಿಫಲಿಸಲಾಗುತ್ತಿದೆ. ಐರ್ಲೆಂಡಿನ ವಾಯುಗುಣವು ಬ್ರಿಟನ್ನಿಗೆ ಮಾಂಸ ಮತ್ತು ಬೆಣ್ಣೆಯನ್ನು ಉತ್ಪಾದಿಸಿಕೊಡಬಲ್ಲದು, ಆದರೆ ಅದೇ ಐರ್ಲೆಂಡಿನ ಜನಕ್ಕೆ ರೊಟ್ಟಿ ಉತ್ಪಾದಿಸಿಕೊಡಲಾರದೆಂಬ ಮಿಥ್ಯೆಯನ್ನು ನಾವು ನಂಬಬೇಕೆ?" ಲೆಡ್ವಿಕ್ ಎಂಬ ಬ್ರಿಟನ್ನಿನ ಚರಿತ್ರಕಾರ ಐರ್ಲೆಂಡಿನ ಜನರನ್ನು ಅನಾಗರಿಕರೆಂದು ತೆಗಳಿ ಅವರು ಮುಂದುವರಿಯಲು ಬ್ರಿಟನ್ ಮಾತ್ರವೇ ಸಹಾಯ ಮಾಡಬಹುದೆಂದು ಬರೆದಿದ್ದ. ಅವನೊಬ್ಬ "ಅತಿನೀಚ ಸುಳ್ಳುಗಾರ"ನೆಂದು ಏಂಗೆಲ್ಸ್ ಅವನಿಗೆ ಛೀಮಾರಿ ಹಾಕಿದರು. ಇದನ್ನೆಲ್ಲಾ ವಿಮರ್ಶಿಸಿಕೊಂಡರೆ ಬಹುಶಃ ಭಾರತದ ವಸಾಹತುಶಾಹಿ ಸ್ಥಿತಿಯ ಸಂಗತಿಗಳನ್ನು ನೆನೆಸಿಕೊಂಡಂತೆಯೇ ಆಗುತ್ತದೆ. ನಮ್ಮನ್ನೂ ನಾಗರಿಕರನ್ನಾಗಿಸಲು ಬಂದವರು ಬ್ರಿಟಿಷರೇ ಅಲ್ಲವೆ!

೧೮೬೪ರ ಜೂನ್ ನಂತರ ಏಂಗೆಲ್ಸ್ ಕಾರ್ಖಾನೆಯ ನೌಕರನ ಸ್ಥಾನದಿಂದ ಒಬ್ಬ ಪಾಲುದಾರನಾಗಿ ಪರಿವರ್ತನೆಗೊಂಡರು. ಆಗ್ಗೆ ಮೇರಿ ತೀರಿಕೊಂಡು ಆಕೆಯ ಸೋದರಿ ಲಿಡಿಯಾ ಅದೇ ಹಳೆಯ ಮನೆಯಲ್ಲಿ ವಾಸವಾಗಿದ್ದಳು. ಏಂಗೆಲ್ಸ್ ಅವಳನ್ನು ಮದುವೆಯಾಗಿದ್ದರು; ಯಥಾಪ್ರಕಾರ ಯಾವ ಮತಧಾರ್ಮಿಕ ಆಚರಣೆಗಳೂ ಇಲ್ಲದೆಯೇ. ೧೮೭೦ರ ಸೆಪ್ಟೆಂಬರ್ ನಲ್ಲಿ ಏಂಗೆಲ್ಸ್ ಕುಟುಂಬ ಮ್ಯಾಂಚೆಸ್ಟರ್ ಬಿಟ್ಟು ಲಂಡನ್ನಿನಲ್ಲಿ ನೆಲೆಸಿತು. ಆಗಿನಿಂದ ಮಾರ್ಕ್ಸ್ ಮತ್ತು ಏಂಗೆಲ್ಸರ ಭೇಟಿ ಪ್ರತಿದಿನವೂ ತಪ್ಪದೆ ನಡೆಯುತ್ತಿದ್ದಿತೆನ್ನಬಹುದು. ೧೮೭೬-೭೭ರಲ್ಲಿ ಲಿಡಿಯಾ ಅನಾರೋಗ್ಯಕ್ಕೆ ತುತ್ತಾಗಿ ಸೆಪ್ಟೆಂಬರ್ ೧೮೭೮ರಲ್ಲಿ ತೀರಿಕೊಂಡಳು.

❑❑

೮

ಜರ್ಮನಿಯಲ್ಲಿ ರೈತಾಪಿಗಳ ಸಮರ

೧೮೪೬ರಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸ್ ಬ್ರುಸೆಲ್ಸ್‌ನಲ್ಲಿ ಒಂದು ಸಮಿತಿಯನ್ನು ರಚಿಸಿದ್ದರು. "ಸಾಮ್ಯವಾದಿ ವ್ಯವಹಾರ ಸಮಿತಿ" ಎಂದು ಅದನ್ನು ಕರೆಯಲಾಗಿತ್ತು. ಮುಂದೆ ಜರ್ಮನಿ, ಫ್ರಾನ್ಸ್, ಮುಂತಾದ ದೇಶಗಳಲ್ಲಿ ಸಮಾಜವಾದಿ ಗುಂಪುಗಳು ಅಸ್ತಿತ್ವಕ್ಕೆ ಬಂದಾಗ ಬ್ರುಸೆಲ್ಸ್ ಸಮಿತಿಯು ಅವಕ್ಕೆ ಒಂದು ಮಾದರಿಯನ್ನೊದಗಿಸಿದ್ದಿತು. ಈ ಸಮಿತಿಯ ಉದ್ದೇಶ ಬೇರೆಬೇರೆ ದೇಶಗಳ ಹೋರಾಟಗಳಿಗೆ ಸೈದ್ಧಾಂತಿಕ ಬುನಾದಿಯನ್ನು ರಚಿಸಿಕೊಡುವುದು ಮತ್ತು ಸಂಘಟನಾತ್ಮಕ ಸಲಹೆ ನೀಡುವುದು. ದುಡಿಯುವ ವರ್ಗದಲ್ಲೇ ಆಗಾಗ್ಗೆ ಕಾಣಬರುತ್ತಿದ್ದ ಸ್ವ-ವರ್ಗ ವಿರೋಧಿ ಭಾವನೆಗಳನ್ನು ಹೇಗೆ ಪರಿಹರಿಸಬೇಕೆಂಬುದನ್ನೂ ಸಮಿತಿ ಆಗಾಗ್ಗೆ ಚರ್ಚಿಸುತ್ತಿತ್ತು. ಈ ಸಮಿತಿಯು ಏಂಗೆಲ್ಸರನ್ನು ಪ್ಯಾರಿಸ್ಸಿಗೆ ಕಳಿಸಿತ್ತು. ೧೮೪೬ರ ಆಗಸ್ಟ್‌ನಲ್ಲಿ ಅಲ್ಲಿಗೆ ಹೋದ ಏಂಗೆಲ್ಸ್ ತಮ್ಮ ಚಟುವಟಿಕೆಗಳ ಬಗ್ಗೆ ಬ್ರುಸೆಲ್ಸ್ ಸಮಿತಿಗೆ ಪತ್ರಗಳನ್ನು ಬರೆಯುತ್ತಿದ್ದರು. ಪ್ಯಾರಿಸ್‌ನಲ್ಲಿ ಆಗ್ಗೆ ಗ್ರೂನ್ ಎಂಬಾತ ದುಡಿಯುವ ಜನರ ನಡುವೆ ಸಂಘಟಕನಾಗಿ ಕೆಲಸ ಮಾಡುತ್ತಿದ್ದ. ಅವನೊಟ್ಟಿಗೆ ಐಸರ್ಮನ್ ಇರುತ್ತಿದ್ದ. ಇಬ್ಬರೂ ಮೂಲತಃ ಜರ್ಮನರೇ. ಏಂಗೆಲ್ಸ್‌ಗೆ ಸವಾಲು

ಗಳನ್ನೆಸೆಯುವುದರಲ್ಲಿ ಇಬ್ಬರೂ ಪಟಿಂಗರು. ಮಾನವ ಜನಾಂಗದ ಒಳಿತಿಗಾಗಿ ದುಡಿಯುವವರು, ಸ್ವಂತದ ಜ್ಞಾನಸಂಗ್ರಹಕ್ಕಾಗಿ ಶ್ರಮಿಸುವವರು, ಪುರೋಗಾಮಿ ಜೀವಿಗಳು, ಏಕಪಕ್ಷೀಯ ದೃಷ್ಟಿಗೆ ಹೊರತಾದವರು, ಹೀಗೆ ತಮ್ಮನ್ನು ತಾವು ಅವರು ಬಣ್ಣಿಸಿಕೊಳ್ಳು ತ್ತಿದ್ದರು. ದುಡಿಯುವ ಜನರ ಸಂಘಟನೆಗೆ ಏಂಗೆಲ್ಸ್ ಸಿದ್ಧಾಂತದ ಮೂಲ ಆಶಯಗಳೇನೆಂದು ಅನೇಕ ಸಭೆಗಳಲ್ಲಿ ಅವರಿಬ್ಬರೂ ಏಂಗೆಲ್ಸರನ್ನು ಪ್ರಶ್ನಿಸುತ್ತಿದ್ದುದುಂಟು. ಸಂಕ್ಷಿಪ್ತವಾಗಿ ಉತ್ತರ ನೀಡಬೇಕೆಂಬ ಆಗ್ರಹ ಬೇರೆ. ಏನು ವಿವರಣೆ ನೀಡಿದರೂ ಅದರಲ್ಲಿ ನ್ಯೂನತೆಗಳನ್ನು ಹುಡುಕಿ ಏಂಗೆಲ್ಸರನ್ನು ವಾದದಲ್ಲಿ ಸೋಲಿಸಿದರೆ ದುಡಿಯುವ ಜನ ಅವರ ಪರ ನಿಲ್ಲಲಾರರೆಂಬುದು ಅವರ ಎಣಿಕೆ. ಅಂತಹ ಒಂದು ಸಭೆಯಲ್ಲಿ ಏಂಗೆಲ್ಸ್ ನೀಡಿದ ವಿವರಣೆಯನ್ನು ೧೮೪೬ರ ಅಕ್ಟೋಬರ್ ೨೩ರಂದು ಬ್ರಸೆಲ್ಸ್ ಸಮಿತಿಗೆ ಬರೆಯಲಾದ ಪತ್ರದಲ್ಲಿ ನಮೂದಿಸಲಾಗಿದೆ. ಕಮ್ಯುನಿಸ್ಟರ ಆಶಯಗಳನ್ನು ಮೂರು ವಾಕ್ಯಗಳಲ್ಲಿ ಏಂಗೆಲ್ಸ್ ಹೇಳಿದ್ದಾರೆ: (೧) ಬಂಡವಾಳಶಾಹಿಯ ವಿರುದ್ಧ ದುಡಿಯುವ ವರ್ಗದ ಹಿತಾಸಕ್ತಿ ಗಳನ್ನು ರಕ್ಷಿಸಿಕೊಳ್ಳುವುದು; (೨) ಇದನ್ನು ಮಾಡುವುದಕ್ಕಾಗಿ ಉತ್ಪಾದನಾ ಸಾಧನಗಳ ರೂಪದಲ್ಲಿರುವ ಖಾಸಗಿ ಆಸ್ತಿಯನ್ನು ರದ್ದುಗೊಳಿಸುವುದು ಮತ್ತು ಅದರ ಜಾಗದಲ್ಲಿ ಉಪಭೋಗ ಸಾಮಗ್ರಿಯ ರೂಪದ ಪದಾರ್ಥಗಳನ್ನು ಇರಿಸುವುದು; (೩) ಈ ಉದ್ದೇಶ ಗಳನ್ನು ಪೂರೈಸಲು ಪ್ರಜಾಪ್ರಭುತ್ವವಾದಿ ಕ್ರಾಂತಿಯನ್ನಲ್ಲದೆ ಬೇರಾವ ಸಾಧನವನ್ನೂ ಅಂಗೀಕರಿಸದಿರುವುದು ಮತ್ತು ಅಗತ್ಯಬಿದ್ದರೆ ಕ್ರಾಂತಿಯನ್ನು ಬಲಪ್ರಯೋಗದಿಂದಲೂ ಸಾಧಿಸುವುದು.

ಈ ಆಶಯಗಳನ್ನು ಮಂಡಿಸಿದಾಗ ಸಭೆಯು ಅದನ್ನು ಸತತವಾಗಿ ಎರಡು ದಿನ ಚರ್ಚಿಸಿತು. ಗ್ರೂನ್ ಅನುಯಾಯಿಗಳು ಕ್ರಮೇಣ ಏಂಗೆಲ್ಸ್ ಪರವಾಗಿ ನಿಂತರು. ಸಭೆಗಳಲ್ಲಿ ಎಂದೂ ಮಾತನಾಡದಿದ್ದ ಕೆಲವರಿಗೆ ಏಂಗೆಲ್ಸ್ ವಾದವು ದನಿಕೊಟ್ಟಿತು ಮತ್ತು ಅವರು ಏಂಗೆಲ್ಸ್ ಪರವಾದರು. ಅವರಾರೂ ದೊಡ್ಡ ವಿದ್ಯಾವಂತರಾಗಿರಲಿಲ್ಲ. ಆದರೆ ಗ್ರೂನ್ ವಾದಕ್ಕೂ ಏಂಗೆಲ್ಸ್ ಪ್ರತಿಪಾದನೆಗೂ ಇರುವ ಅಂತರವನ್ನು ಸ್ಪಷ್ಟವಾಗಿ ಗುರುತಿಸಲು ಅವರು ಸಮರ್ಥರಾಗಿದ್ದರು. ಕಾರ್ಮಿಕ ವರ್ಗದ ಸಹಜ ಅಂತರಾಳವನ್ನು ಗ್ರಹಿಸಲು ಏಂಗೆಲ್ಸ್ ಈ ಅನುಭವವನ್ನು ನಮ್ಮ ಮುಂದಿಟ್ಟಿದ್ದಾರೆ. ೧೮೯೩ರ ಜುಲೈ ೧೪ರಂದು ಏಂಗೆಲ್ಸ್ ಒಂದು ಪತ್ರ ಬರೆದು ಫ್ರಾಂತ್ಸ್ ಮೇರಿಂಗ್‌ಗೆ ಇದನ್ನೇ ಇನ್ನೂ ಸಮಗ್ರವಾಗಿ ವಿವರಿಸಿದ್ದಾರೆ: "ನಾವು ಸಾಮಾನ್ಯವಾಗಿ ತಿಳಿಯುವ ಅಂಶವೇನೆಂದರೆ ಚಿಂತಕನೊಬ್ಬನು ಪ್ರಜ್ಞಾಪೂರ್ವಕವಾಗಿ ಸೈದ್ಧಾಂತಿಕ ಪ್ರಕ್ರಿಯೆಯ ಮೂಲಕ ಒಂದು ನಿಲುವನ್ನು ತಾಳುತ್ತಾನೆ, ಎಂದು; ಆದರೆ ಹಾಗೆ ಮೂಡಿಬರುವ ಪ್ರಜ್ಞೆಯು ತಪ್ಪು ಮಾದರಿಯದು. ಆ ಚಿಂತಕನಿಗೆ ನಿಜಕ್ಕೂ ಇರುವ ಒತ್ತಡಗಳ ಬಗ್ಗೆ ಪರಿವೆ ಇರುವುದಿಲ್ಲ; ಹಾಗಿಲ್ಲದಿದ್ದರೆ ಅದೊಂದು ಸೈದ್ಧಾಂತಿಕ ಪ್ರಕ್ರಿಯೆ ಎನಿಸಿಕೊಳ್ಳುವುದಿಲ್ಲ. ಯಾವುವೋ ಪ್ರೇರಕ ಶಕ್ತಿಗಳು ತನ್ನನ್ನು ಮುನ್ನಡೆಸುತ್ತಿವೆಯೆಂದು ಅವನು ಭ್ರಮಿಸುತ್ತಾನೆ. ಅದೊಂದು ತರ್ಕಬದ್ಧವಾದ ಪ್ರಕ್ರಿಯೆ

ಯಾದ್ದರಿಂದ ಅವನ ಪ್ರಜ್ಞೆಯ ಸ್ವರೂಪ ಮತ್ತು ತಿರುಳನ್ನು ತರ್ಕಪದ್ಧತಿಯಿಂದ ತನಗೆ ತಾನು ನಿರೂಪಿಸಿಕೊಳ್ಳುತ್ತಾನೆ. ಆ ತರ್ಕಪದ್ಧತಿಯು ಅವನದೇ ಇರಬಹುದು ಅಥವಾ ಅವನ ಹಿಂದಿನವರದಿರಬಹುದು. ಅವನ ಸಾಮಗ್ರಿಯೆಲ್ಲಾ ಬೌದ್ಧಿಕವಾದ್ದು ಮಾತ್ರ; ಅದು ತರ್ಕಪದ್ಧತಿಯ ಪರಿಣಾಮವಾಗಿ ಲಬ್ಧವಾದದ್ದೆಂಬ ಕಾರಣದಿಂದ ಅದನ್ನು ಪ್ರಶ್ನಿಸದೆ ಸ್ವೀಕರಿಸುತ್ತಾನೆ. ಅಂತಹ ಪ್ರಜ್ಞೆಗೆ ಬೇರೇನಾದರೂ ಕಾರಣಗಳು ಇರಬಹುದೇ ಎಂಬುದನ್ನು ಪರೀಕ್ಷಿಸಲು ಸಹ ಅವನು ಹೋಗುವುದಿಲ್ಲ. ಎಲ್ಲ ಕ್ರಿಯೆಯೂ ಬೌದ್ಧಿಕ ಮಾಧ್ಯಮದಿಂದ ನೆರವೇರುತ್ತದಾದ್ದರಿಂದ ಕ್ರಿಯೆಯು ಬುದ್ಧಿಯನ್ನು ಆಧರಿಸಿದೆ ಎಂದು ಅವನಿಗೆ ತೋರುತ್ತದೆ.''

ಸ್ವಲ್ಪ ಕ್ಲಿಷ್ಟವೆನಿಸುವ ಈ ವಿವರಣೆಯಲ್ಲಿ ಒಬ್ಬ ವರ್ಗಜೀವಿಯಲ್ಲಿ ಸ್ವಾನುಭವದಿಂದ ಅಂತರ್ಗತವಾಗುವ ಪ್ರಜ್ಞೆಯು ಬೌದ್ಧಿಕ ಕಸರತ್ತಿನ ಫಲವಾಗಿರಬೇಕಿಲ್ಲವೆಂಬುದನ್ನು ಏಂಗೆಲ್ಸ್ ಪ್ರತಿಪಾದಿಸಿದ್ದಾರೆ. ಒಬ್ಬ ವ್ಯಕ್ತಿಯು ತನ್ನಲ್ಲಿ (ಅಗೋಚರವಾಗಿಯಾದರೂ) ನೆಲೆಸಿರುವ ವರ್ಗಪ್ರಜ್ಞೆಯನ್ನು ಮೀರಿ ನಿಲ್ಲಲು ಪ್ರಜ್ಞಾಪೂರ್ವಕವಾದ ಪ್ರಯತ್ನ ನಡೆಸಬೇಕು; ಆದರೆ ನಿಜವಾದ ವರ್ಗಪ್ರಜ್ಞೆಯನ್ನು ಗುರುತಿಸಿಕೊಳ್ಳುವ ದೃಷ್ಟಿ ಬೆಳೆದರೆ ಸಾಕು, ತನ್ನ ವರ್ಗಧೋರಣೆ ಸುಲಭವಾಗಿ ಅಭಿವ್ಯಕ್ತವಾಗುತ್ತದೆ. "ಹುಟ್ಟಿನಿಂದ ಬಂದಿರುವ ಲಕ್ಷಣವನ್ನು ಮೀರಲು ಸಾಧ್ಯವಿಲ್ಲ'' ಎಂಬ ಅಪಕ್ವ ಗ್ರಹಿಕೆ ಈ ಸೈದ್ಧಾಂತಿಕ ತಿಳುವಳಿಕೆಗೆ ಹೊರತಾದ್ದು; ಅಂತೆಯೇ, ಹುಟ್ಟಿನಿಂದ ಬಂದಿರದ ಪ್ರಜ್ಞೆಯನ್ನು ಮೇಳೈಸಿಕೊಳ್ಳಲು ಸಾಧ್ಯವಿಲ್ಲವೆಂಬ ದೃಷ್ಟಿಯನ್ನು ಇದು ತಳ್ಳಿಹಾಕುತ್ತದೆ. ಯಾವ ಸಂಸ್ಕಾರವೂ ಬದಲಾವಣೆಗೆ ನಿಲುಕದಂತಹ ವಸ್ತುವಲ್ಲವೆಂಬುದು ಇದರ ಅತಿಸಾಮಾನ್ಯ ನಿರೂಪಣೆ. ಯಾವುದೇ ವರ್ಗದ ಸಹಜ ಧೋರಣೆಯನ್ನು ಪ್ರತಿಫಲಿಸುವುದು ಎಷ್ಟರಮಟ್ಟಿಗೆ ಸಾಧ್ಯವೋ, ಅದನ್ನು ಮೀರಿ ಬೆಳೆಯುವುದು ಕೂಡ ಅಷ್ಟೇ ಸಾಧ್ಯತೆಯನ್ನು ಹೊಂದಿದೆಯೆಂಬುದು ಇದರ ಸಾರ. ನಮ್ಮಲ್ಲಿ ಅನೇಕರು ಜಾತಿ, ಲಿಂಗ, ಮತ ಇತ್ಯಾದಿಗಳ ಸ್ವಾಭಾವಿಕ ಪ್ರಭಾವವು ಅಭೇದ್ಯವಾದುದು ಎಂಬಂತೆ ಮಾತನಾಡುವುದನ್ನು ಈ ಮೂಲದಿಂದ ವಿಮರ್ಶಿಸಿಕೊಂಡರೆ ವಸ್ತುಸ್ಥಿತಿಯ ಅರಿವಾಗುತ್ತದೆ, ಪ್ರಜ್ಞೆಯೆಂಬುದು ಹೇಗೆ ಅಂಕುರಿಸುತ್ತದೆಯೆಂಬುದು ತಿಳಿಯುತ್ತದೆ.

ಈ ಸಂಬಂಧದಲ್ಲಿ ೧೮೭೯ರಲ್ಲಿ ನಡೆದ ಒಂದು ಸುದೀರ್ಘ ಚರ್ಚೆಯನ್ನು ನೆನಪಿಸಿಕೊಳ್ಳಬಹುದು. ಆ ವರ್ಷದ ಸೆಪ್ಟೆಂಬರ್‌ನಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸ್ ಒಂದು ಪತ್ರ ಬರೆದು ಆಗಸ್ಟ್ ಬೆಬೆಲ್, ವಿಲ್ಹೆಲ್ಮ್ ಲೀಬ್‌ನೆಖ್ಟ್ ಮತ್ತು ವಿಲ್ಹೆಲ್ಮ್ ಬ್ರಾಕ್ ಅವರಿಗೆ ಜರ್ಮನಿಯ ಸೋಷಿಯಲ್ ಡೆಮಾಕ್ರಟಿಕ್ ಪಕ್ಷಕ್ಕೆ ಯಾರು ನಾಯಕತ್ವ ನೀಡಬಲ್ಲರೆಂಬುದನ್ನು ವಿವರಿಸಿ ಹೇಳಿದ್ದರು. ಆಗ್ಗೆ ಲಸಾಲ್ ಆ ಪಕ್ಷಕ್ಕೆ ಬುದ್ಧಿಜೀವಿಗಳನ್ನು ಹಾಗೂ "ಮಾನವ ಜನಾಂಗದ ಬಗ್ಗೆ ನೈಜ ಪ್ರೀತಿ'' ಇರುವ ಎಲ್ಲರನ್ನೂ ಆಹ್ವಾನಿಸಿ ದುಡಿಯುವ ವರ್ಗವು ಅವರ ನೇತೃತ್ವದಲ್ಲಿ ಹೋರಾಡಬೇಕೆಂದು ಸಲಹೆ ನೀಡಿದ್ದನು. ನಂತರ ಜಾನ್ ಬ್ಯಾಪ್ಟಿಸ್ಟ್ ಫಾನ್ ಶ್ವಾಯಿಟ್ಸರ್ ಅಧ್ಯಕ್ಷನಾಗಿ ಈ ಕರೆಯನ್ನು ತಿರಸ್ಕರಿಸಿದನು

ಮತ್ತು ಔದ್ಯಮಿಕ ಕೆಲಸಗಾರರು ತಮ್ಮ ಹಿತವನ್ನು ಕಾಪಾಡಿಕೊಳ್ಳಲು ತಮ್ಮದೇ ಪ್ರತ್ಯೇಕ ಹೋರಾಟ ನಡೆಸಬೇಕೆಂಬ ನಿಲುವು ತಾಳಿದನು. ಬಂಡವಾಳಶಾಹಿಯ ವಿರುದ್ಧ ಕಾರ್ಮಿಕ ವರ್ಗದ ಹೋರಾಟವು ವರ್ಗಸಮರವೆನಿಸಿಕೊಳ್ಳಲು ಇದು ಸರಿಯಾದ ಮಾರ್ಗವೆಂದು ಆತನ ಅಭಿಪ್ರಾಯವಾಗಿತ್ತು. ಆದರೆ ಅದರಿಂದ 'ಬಂಡವಾಳಶಾಹಿ ಪ್ರಜಾಪ್ರಭುತ್ವ' ನಿರಾಕರಣೆಗೆ ಗುರಿಯಾಗುತ್ತದೆಂದು ಲಸಾಲ್ ಅಭಿಮಾನಿಗಳು ದೂರಿದರು. ಸಮಾಜವಾದಿ ಪ್ರಜಾಪ್ರಭುತ್ವ ತಮ್ಮ ಗುರಿಯೆಂದು ನಂಬಿದವರು ಇಂತಹ ನಿರಾಕರಣೆಯಿಂದ ಕಳೆದುಕೊಳ್ಳುವುದೇನಿದೆ ಎಂಬುದು ಮಾರ್ಕ್ಸ್ ಮತ್ತು ಏಂಗೆಲ್ಸ್ ಹೂಡಿದ ವಾದವಾಗಿತ್ತು. ದುಡಿಯುವ ವರ್ಗದ ಪ್ರಜ್ಞೆಯನ್ನು ಬದಿಗೆ ಸರಿಸಿ ಕಾರ್ಮಿಕರು "ವಿದ್ಯಾವಂತ ಧರ್ಮರತ್ನಾಕರರಿಂದ" ಮೂಡಿದ ಒಳಿತು-ಕೆಡಕುಗಳ ಜಿಜ್ಞಾಸೆಗೆ ಜೋತುಬೀಳಬೇಕೆ, ಎಂದವರು ಪ್ರಶ್ನಿಸಿದರು. ತನ್ನ ವಿಮೋಚನೆಯನ್ನು ತಾನೇ ಸಾಧಿಸಿಕೊಳ್ಳಲಾಗದೆ ದುಡಿಯುವ ವರ್ಗವು "ವಿದ್ಯಾವಂತ ಆಸ್ತಿವಂತರ" ನಾಯಕತ್ವ ಪಡೆಯಬೇಕೆಂಬುದಾದರೆ ಎರಡು ತೊಡಕುಗಳನ್ನೆದುರಿಸಬೇಕಾಗುತ್ತದೆ: (ಅ) ದುಡಿಯುವ ವರ್ಗದ ಆಶಯವನ್ನು ಇವರು ಪ್ರತಿಫಲಿಸಿಯಾರೆ? ಮತ್ತು (ಆ) ಬಂಡವಾಳಶಾಹಿಯನ್ನು ಹಿಮ್ಮೆಟ್ಟಿಸಲು ಒಲ್ಲೆಸುವ ಮಾರ್ಗ ಹಿಡಿಯಬೇಕಾದಾಗ ಹೋರಾಟಕ್ಕೆ ಸ್ಥಾನವೇನಾಗುತ್ತದೆ?

ವಿವಿಧ ವರ್ಗಗಳ ಪ್ರಜ್ಞೆಯ ಸ್ತರವು ಬೇರೆಬೇರೆ ಇದ್ದಾಗ ದುಡಿಯುವ ವರ್ಗವು ತನ್ನ ಪ್ರಜ್ಞೆಯ ವಿಸ್ತರಣೆಗೆ ಕೈಗೊಳ್ಳಬೇಕಾದ ಕ್ರಮವೇನು? ಅದಕ್ಕೆ ಉತ್ತರ, ಹೋರಾಟದಲ್ಲಿ ಪಾಲ್ಗೊಳ್ಳುವುದು ಮತ್ತು ತನ್ಮೂಲಕ ಹಂತಹಂತವಾಗಿ ಪ್ರಜ್ಞೆಯನ್ನು ಹದಮಾಡಿಕೊಳ್ಳುವುದು. ಇದಕ್ಕೆ ಪೂರಕವಾದ ಸೈದ್ಧಾಂತಿಕ ಚಿಂತನೆಯ ತಳಹದಿಯನ್ನು ಯಾರೋ ಬುದ್ಧಿಜೀವಿ ಹಾಕಿಕೊಡುವುದಿಲ್ಲ. ಅಂತಹ ಚಿಂತನೆಯನ್ನು ತನ್ನ ವರ್ಗದಿಂದಲೇ ಬೆಳೆಸಿಕೊಳ್ಳಬೇಕು. ಆ ವರ್ಗದಿಂದ ಬಂದ ಚಿಂತಕನನ್ನು "ಸಾವಯವ ಬುದ್ಧಿಜೀವಿ" ಎಂದು ಕರೆಯುವ ವಾಡಿಕೆ ಆಂಟೋನಿಯೋ ಗ್ರಾಂಶಿಯಿಂದ ಬಂದಿದೆ.

೧೮೫೧ರಲ್ಲಿ "ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್"ನ ಸಂಪಾದಕರಲ್ಲಿ ಒಬ್ಬನಾದ ಚಾರ್ಲ್ಸ್ ದಾನ ಮಾರ್ಕ್ಸ್‌ರನ್ನು ಲಂಡನ್ನಿನಲ್ಲಿ ಭೇಟಿಯಾಗಿ ತಮ್ಮ ಪತ್ರಿಕೆಗೆ ಲಂಡನ್ನಿನ ಪ್ರತಿನಿಧಿಯಾಗಿದ್ದುಕೊಂಡು ಲೇಖನಗಳನ್ನು ಬರೆಯುವಂತೆ ವಿನಂತಿಸಿಕೊಂಡ. ಅದಕ್ಕೆ ಒಪ್ಪಿಗೆ ನೀಡಿದ ಮಾರ್ಕ್ಸ್ ಆಗಾಗ್ಗೆ ಏಂಗೆಲ್ಸರಿಂದ ಲೇಖನಗಳನ್ನು ಬರೆಸುತ್ತಿದ್ದುದುಂಟು. "ಜರ್ಮನಿಯಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ" ಎಂಬ ಶೀರ್ಷಿಕೆಯಲ್ಲಿ ಏಂಗೆಲ್ಸ್ ಬರೆದ ಲೇಖನಗಳನ್ನು ಮಾರ್ಕ್ಸ್ ಹೆಸರಿನಲ್ಲಿ ಪತ್ರಿಕೆಯು ೧೮೫೧ರ ಆಗಸ್ಟ್‌ನಿಂದ ಸೆಪ್ಟೆಂಬರ್ ೧೮೫೨ರ ವರೆಗೆ ಪ್ರಕಟಿಸಿತ್ತು. ೧೮೪೮-೪೯ರ ಜರ್ಮನಿಯ ಕ್ರಾಂತಿಯ ವಿಶ್ಲೇಷಣೆಯನ್ನು ೧೯ ಲೇಖನಗಳಲ್ಲಿ ಮಾಡಲಾಗಿದೆ. ಆರ್ಥಿಕತೆಯನ್ನಾಧರಿಸಿ ಸಮಾಜವು ರಚನೆಗೊಳ್ಳುವುದು, ವರ್ಗಹೋರಾಟದ ರಾಜಕೀಯ ಸ್ವರೂಪಗಳು, ಆಯಾ ವರ್ಗಗಳ ಭೌತಿಕ ಹಿತಾಸಕ್ತಿಗಳು ಕ್ರಾಂತಿಯಲ್ಲಿ ಅವುಗಳ ಭಾಗವಹಿಸುವಿಕೆಯನ್ನು ನಿರ್ದೇಶಿಸುವುದು, ಮುಂತಾದ

ವಿಷಯಗಳನ್ನು ಈ ಲೇಖನಗಳು ಚರ್ಚಿಸುತ್ತವೆ. "ಫ್ರಾನ್ಸಿನಲ್ಲಿ ವರ್ಗಹೋರಾಟಗಳು" ಎಂಬ ಮಾರ್ಕ್ಸ್‌ರ ಗ್ರಂಥಕ್ಕೆ ಸಂವಾದಿಯಾಗುವ ಈ ಗ್ರಂಥದಲ್ಲಿ ಏಂಗೆಲ್ಸ್ ಕ್ರಾಂತಿಯು ಇತಿಹಾಸದ ಚಾಲಕಶಕ್ತಿ ಎಂಬುದನ್ನು ನಿದರ್ಶನಗಳ ಸಹಿತ ನಿರೂಪಿಸಿದ್ದಾರೆ. ೧೮೪೮-೪೯ರಲ್ಲಿ ಜರ್ಮನಿಯ ಬಂಡವಳಿಗರ ಪೈಕಿ ಉದಾರವಾದಿಗಳು ಕ್ರಾಂತಿಗೆ ನಾಯಕತ್ವ ನೀಡಬಹುದೆಂಬ ನಿರೀಕ್ಷೆಯು ಸುಳ್ಳಾಗಿದ್ದಿತು ಎಂಬುದನ್ನು ಏಂಗೆಲ್ಸ್ ಆಗ್ಗೆ ಪತ್ರಿಕೆಗಳಿಗೆ ಬರೆದ ಲೇಖನಗಳಲ್ಲಿ ಪ್ರತಿಪಾದಿಸಿದ್ದರು. ಹೋರಾಟವು ತೀವ್ರಗೊಳ್ಳುತ್ತಿದ್ದಂತೆ ಈ ಉದಾರವಾದಿಗಳು ಹೇಳಹೆಸರಿಲ್ಲದೆ ಪಲಾಯನ ಮಾಡಿದ್ದರು ಮತ್ತು ಪ್ರತಿಕ್ರಾಂತಿಯ ಅಧ್ವರ್ಯುಗಳಾಗಿಬಿಟ್ಟಿದ್ದರು. ಇದಕ್ಕೆ ಸಾಮಾಜಿಕ ಮತ್ತು ರಾಜಕೀಯ ಕಾರಣಗಳಿದ್ದುವೆಂದು ಏಂಗೆಲ್ಸ್ ವಿವರಿಸಿದ್ದಾರೆ. ಇಂದಿನ ಚಳುವಳಿಗಳ ಸಂದರ್ಭದಲ್ಲಿ ಸಹ ಈ ಲಕ್ಷಣಗಳನ್ನು ಅರ್ಥಮಾಡಿಕೊಳ್ಳಲು ಸಿಗುತ್ತದೆ. ಉದಾರವಾದಿಗಳಿಗೆ ಚಳುವಳಿ ಬೇಕು, ಆದರೆ ಅದರ ಪರಿಣಾಮವು ಗುಣಾತ್ಮಕ ಬದಲಾವಣೆಗಳನ್ನು ಉಂಟುಮಾಡಬಾರದು! ಪ್ರಜಾಪ್ರಭುತ್ವವಾದಿ ಚಳುವಳಿಗೆ ನಿಶ್ಚಿತವಾಗಿ ದುಡಿಯುವ ವರ್ಗದ ನಾಯಕತ್ವ ಅಗತ್ಯವಾಗುವುದು ಈ ಕಾರಣದಿಂದಲೇ ಎಂಬುದನ್ನು ಮುಂದೆ ಲೆನಿನ್ ಸಹ ವಿಶ್ಲೇಷಿಸಿದ್ದಾರೆ. ಕ್ರಾಂತಿಗೆ ಸಂಬಂಧಿಸಿದಂತೆ ಏಂಗೆಲ್ಸರ ತಂತ್ರನಿರೂಪಣೆಯೂ "ಜರ್ಮನಿಯಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ" ಎಂಬ ಗ್ರಂಥದಲ್ಲಿ ದೊರೆಯುತ್ತದೆ: "ಯುದ್ಧದಲ್ಲಿದ್ದಂತೆ ಕ್ರಾಂತಿಯಲ್ಲಿ ಕೂಡ ಪ್ರಬಲವಾದ ಹೋರಾಟದ ಸೇನೆಯನ್ನು ಮುಂಚೂಣಿಯಲ್ಲಿ ತೊಡಗಿಸಬೇಕು; ಯಾರು ಆಕ್ರಮಣವನ್ನು ಆರಂಭಿಸುತ್ತಾರೋ ಅವರಿಗೆ ಹೆಚ್ಚಿನ ಅನುಕೂಲ ಇರುತ್ತದೆ. ಯುದ್ಧದಲ್ಲಿದ್ದಂತೆ ಕ್ರಾಂತಿಯಲ್ಲಿ ಕೂಡ ನಿರ್ಣಾಯಕ ವೇಳೆ ಬಂದಾಗ ಸರ್ವಸ್ವವನ್ನೂ ಅದಕ್ಕಾಗಿ ತೊಡಗಿಸುವುದು ಅತ್ಯವಶ್ಯಕ. ಏನೇ ಮುಗ್ಗಟ್ಟಿದ್ದರೂ ಇದನ್ನು ಆಗುಮಾಡುವುದು ಮುಖ್ಯ. ಇತಿಹಾಸದಲ್ಲಿ ಯಾವ ಯಶಸ್ವೀ ಕ್ರಾಂತಿಯನ್ನು ನೋಡಿದರೂ ಈ ಅಂಶಗಳ ಪ್ರಾಧಾನ್ಯತೆ ಎದ್ದುಕಾಣುತ್ತದೆ." ಹಾಗಿದ್ದರೆ ಸಶಸ್ತ್ರಕ್ರಾಂತಿಗೆ ಸೂಚನೆಗಳನ್ನೇನಾದರೂ ಕೊಡಲು ಸಾಧ್ಯವೆ? ಸಾಧ್ಯವಿದೆ ಎನ್ನುತ್ತಾರೆ ಏಂಗೆಲ್ಸ್ : "ನಿಮ್ಮ ಪ್ರಯತ್ನದಿಂದ ಉಂಟಾಗಬಹುದಾದ ಪರಿಣಾಮಗಳನ್ನೆದುರಿಸಲು ಸಜ್ಜಾಗಿಲ್ಲದಿದ್ದರೆ ಎಂದಿಗೂ ಸಶಸ್ತ್ರಕ್ರಾಂತಿಯೆಂಬ ಆಟಿಕೆಯಲ್ಲಿ ತೊಡಗಬೇಡಿ. ಒಮ್ಮೆ ಅದನ್ನು ಆರಂಭಿಸಿದರೆ ಅತ್ಯಂತ ದೃಢವಾಗಿ, ಆಕ್ರಮಣಕಾರಿಯಾಗಿ ಅದನ್ನು ಮುಂದುವರಿಸಬೇಕು. ರಕ್ಷಣಾತ್ಮಕ ತಂತ್ರಕ್ಕೆ ಕಟ್ಟುಬಿದ್ದಿರೋ, ಸಶಸ್ತ್ರಕ್ರಾಂತಿಯು ನೆಲ ಕಚ್ಚುತ್ತದೆ."

೧೮೪೮-೪೯ರ ಜರ್ಮನಿಯ ಕ್ರಾಂತಿಯನ್ನು ಅರ್ಥೈಸಿಕೊಳ್ಳಲು ಇತಿಹಾಸದ ಪುಟಗಳನ್ನು ತಿರುವಿಹಾಕಿ ೧೫೨೫ರಲ್ಲಿ ಘಟಿಸಿದ್ದ ಒಂದು ಮಹತ್ವದ ಕ್ರಾಂತಿಯನ್ನು ಏಂಗೆಲ್ಸ್ ವಿಶ್ಲೇಷಿಸಿದರು. ೧೮೫೦ರಲ್ಲಿ ಮೊದಲು ಪ್ರಕಾಶಗೊಂಡ "ಜರ್ಮನಿಯಲ್ಲಿ ರೈತಾಪಿಗಳ ಸಮರ" ಎಂಬ ಗ್ರಂಥದಲ್ಲಿ ಈ ವಿಶ್ಲೇಷಣೆ ದೊರೆಯುತ್ತದೆ. ೧೮೭೦ರಲ್ಲಿ ಒಂದು ಮುನ್ನುಡಿಯೊಡನೆ ಅದರ ಎರಡನೆಯ ಆವೃತ್ತಿಯು ಪ್ರಕಟವಾಯಿತು. ಆ ಸಮರದ ಬಗ್ಗೆ

ವಿಲ್ಹೆಲ್ಮ್ ಜಿಮ್ಮರ್ಮನ್ ಮೊದಲೇ ಬರೆದಿದ್ದನಾದರೂ ಏಂಗೆಲ್ಸರ ವಿಶ್ಲೇಷಣೆಗೆ ಸಮನಾದ ದೃಷ್ಟಿ ಆತನಲ್ಲಿರಲಿಲ್ಲ. ಆವರೆಗಿನ ಇತಿಹಾಸಕಾರರು ೧೫೨೫ರ ಜರ್ಮನಿಯ ಘಟನೆಯನ್ನು "ದೈವತಾಶಾಸ್ತ್ರಜ್ಞರ ಹಿಂಸಾತ್ಮಕ ಅಂತಃಕಲಹಗಳು" ಎಂದು ಬಣ್ಣಿಸಿ ತೃಪ್ತಿಪಟ್ಟಿದ್ದರು. ಮಾರ್ಟಿನ್ ಲೂಥರ್‌ನಿಂದ ಆರಂಭಗೊಂಡ ಸುಧಾರಣಾಯುಗದಲ್ಲಿ ಸಾಮಾಜಿಕ-ಆರ್ಥಿಕ ವರ್ಗ ಭಿನ್ನತೆಯನ್ನು ಆಳವಾಗಿ ಪರಿಚಯಿಸಿಕೊಳ್ಳುವ ಗೋಜಿಗೆ ಅವರಾರೂ ಹೋಗಿರಲಿಲ್ಲ. ದೈವತಾಶಾಸ್ತ್ರದ ನೆಲೆಯಲ್ಲಿ ನಡೆದ ಚರ್ಚೆಗಳಿಗೆ ಸಾಮಾಜಿಕ ಸಂಬಂಧಗಳು ಹೂರಣ ಒದಗಿಸಿದ್ದುವೆಂದು ವಿವರಿಸಿದ ಏಂಗೆಲ್ಸ್ ಆ ಶತಮಾನದ ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟಗಳನ್ನು ನೇರವಾಗಿ ನಿದರ್ಶನಗಳನ್ನಾಗಿ ತೆಗೆದುಕೊಂಡರು.

ಯೂರೋಪಿನ ಮಧ್ಯಕಾಲೀನ ಯುಗವು ಅಂತ್ಯವಾಗುತ್ತಿದ್ದ ವೇಳೆಗೆ ಊಳಿಗಮಾನ್ಯ ಪದ್ಧತಿಯು ನಶಿಸಿ ಬಂಡವಾಳಶಾಹಿಯು ಆಗಿನ್ನೂ ಅಂಕುರಿಸುತ್ತಿತ್ತು. ಅದರ ಸೂಚನೆಯೋ ಎಂಬಂತೆ ೧೬೨೧ರಲ್ಲಿ ಕೊಲಂಬಸ್ ಬರೆದದ್ದು ಇದು: "ಚಿನ್ನವೆಂಬುದು ಸಂಪತ್ತು. ಅದು ಯಾವನಲ್ಲಿದೆಯೋ ಅವನು ಪ್ರಪಂಚದಲ್ಲಿ ತನಗೆ ಬೇಕಾದ್ದನ್ನೆಲ್ಲಾ ಪಡೆಯಬಹುದು. ಪಾಪಕರ್ಮಗಳನ್ನು ಸವೆಸಲು ಶುದ್ಧೀಕರಣಕ್ಕೆ ಗುರಿಯಾಗಿರುವ ಸತ್ತವನೊಬ್ಬನ ಆತ್ಮವನ್ನು ಸಹ ಖರೀಿಸಿ ಅದನ್ನು ಸ್ವರ್ಗ ಸುಖಕ್ಕೆ ರವಾನಿಸುವ ಶಕ್ತಿ ಚಿನ್ನಕ್ಕಿದೆ." ಸ್ವತಃ ಚರ್ಚಿಗೆ ನಿಷ್ಠನಾಗಿದ್ದ ಕೊಲಂಬಸ್ ಹೀಗೆಂದು ನುಡಿದದ್ದು ವ್ಯಾಪಾರ-ವ್ಯವಹಾರಗಳ ಆದ್ಯತೆ ಹೆಚ್ಚುತ್ತಿದ್ದ ಕಾಲಘಟ್ಟದಲ್ಲಿ. ಇಂತಹ ಅರುಚಿಕರ ಮಾತುಗಳ ವಿರುದ್ಧ ಸೊಲ್ಲೆತ್ತಿ ಸಾಮಾಜಿಕ ನೈತಿಕತೆಗೆ ಒತ್ತುಕೊಡಲು ಯತ್ನಿಸಿದವನು ಲೂಥರ್. ವ್ಯಾಪಾರದ ರಭಸವನ್ನು ಹತೋಟಿಯಲ್ಲಿಡಲು ಅಸಮರ್ಥನಾಗಿದ್ದ ಲೂಥರ್ ಧರ್ಮಸಂಸ್ಥೆಯಲ್ಲಿ ವ್ಯಾಪಾರೀ ಮನೋಭಾವ ಸರ್ವಥಾ ಸಲ್ಲದೆಂದೂ, ಸಮಾಜದ ಪ್ರತಿಯೊಂದು ಕ್ರಿಯೆಯೂ ದೈವನಿಯಮಕ್ಕೆ ಅನುಗುಣವಾಗಿರಬೇಕೆಂದೂ ಬೋಧಿಸಿದ. "ದೈವನಿಯಮ" ಎಂಬುದು ಉಚ್ಚವರ್ಗದ ಹಿತವನ್ನು ಕಾಪಾಡುವಂತಹ ಬುದ್ಧಿವಂತಿಕೆಯ ವ್ಯಾಖ್ಯಾನವೆಂಬುದು ಅವನಿಗೆ ಗೋಚರಿಸಲಿಲ್ಲವೇನೋ! ವ್ಯಾಪಾರದಲ್ಲೂ ದೈವನಿಯಮವು ಅನ್ವಯವಾಗಬೇಕೆಂಬ ಅವನ ಸದಿಚ್ಛೆಯನ್ನು ಮೆಚ್ಚಿದ ರೈತಾಪಿಗಳನೇಕರು ಅವನಿಗೆ ಹಾಕಿದ ಪ್ರಶ್ನೆ ಸರಳವಾಗಿತ್ತು: "ಕ್ರಿಸ್ತನ ಸಂದೇಶವು ಜೀವನ, ಪ್ರೀತಿ, ಶಾಂತಿ, ಸಹನೆ ಮತ್ತು ಸಮನ್ವಯಗಳನ್ನು ಬೋಧಿಸುತ್ತದೆ. ಕ್ರಿಸ್ತ ಒಬ್ಬ ಅಮೋಘ ಪ್ರವಾದಿ. ಆದರೆ ಅವನ ಸಂದೇಶದಡಿಯಲ್ಲಿ ಹಲವು ಅಸಂಗತ ಪದ್ಧತಿಗಳು ಬೇರೂರಿವೆ. ದಾಸ್ಯಪದ್ಧತಿ ಕ್ರಿಸ್ತನ ದಯಾಪ್ರಪಂಚದಲ್ಲಿ ಹೇಗೆ ಸಮರ್ಥನೀಯ? ನಮ್ಮ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಪದ್ಧತಿ ಹೇಗೆ ಸಮಂಜಸ?"

ಮಾರ್ಟಿನ್ ಲೂಥರ್ (೧೪೮೩-೧೫೪೬) ಚರ್ಚ್ ಮತ್ತು ಪಾದ್ರಿಗಳು ಮನುಷ್ಯ ಮತ್ತು ದೇವರ ನಡುವೆ ಅಗತ್ಯವಾದ ಸೇತುವೆಯೆಂಬುದನ್ನು ನಿರಾಕರಿಸಿದರೂ ಅಂದಿನ ವ್ಯವಸ್ಥೆಯ ಅಡಿಪಾಯವನ್ನು ಅಲುಗಾಡಿಸಲು ಬೌದ್ಧಿಕವಾಗಿ ಸಿದ್ಧನಿರಲಿಲ್ಲ. ರೈತಾಪಿಗಳು ಎತ್ತಿದ ಪ್ರಶ್ನೆಯನ್ನು ಮೂಲಾಧಾರವನ್ನಾಗಿ ಮಾಡಿ ಧಾರ್ಮಿಕ ನಂಬಿಕೆಗೆ ಭಿನ್ನವಾದ ಆಯಾಮ

ಕಲ್ಪಿಸಿದ್ದವನು ಥಾಮಸ್ ಮುನ್ಸರ್ (೧೪೯೦-೧೫೨೫). ಆತನೂ ಒಬ್ಬ ಪಾದ್ರಿಯೇ, ಆದರೆ ಅವನು ಕ್ರೈಸ್ತಧರ್ಮವನ್ನು ರೈತಾಪಿಗಳ ಸಂಕಷ್ಟಗಳನ್ನು ನಿವಾರಿಸುವ ಸಾಧನವೆಂದು ಬಗೆದವನು. ವ್ಯಾಪಾರಿಗಳನ್ನು ತರಾಟೆಗೆ ತೆಗೆದುಕೊಳ್ಳುವ ತಾತ್ವಿಕ ಶಕ್ತಿಯನ್ನು ಧರ್ಮಸಂಸ್ಥೆ ಪಡೆದಿರಲಿಲ್ಲವಾಗಿ ಲೂಥರ್ ಪೇಚಿಗೆ ಸಿಕ್ಕಿದ. ಜೀತಪದ್ಧತಿಯನ್ನು ನಿರ್ಮೂಲನಗೊಳಿಸಬೇಕೆಂದು ಕ್ರುದ್ಧ ರೈತಾಪಿ ಜನ ಆವೇಶದಿಂದ ನುಡಿದಾಗ ಲೂಥರ್‌ನ ಪ್ರತಿಕ್ರಿಯೆ ಹೀಗಿತ್ತು: "ಇದು ಸಾಧ್ಯವೇ ಇಲ್ಲ. ಹಾಗೇನಾದರೂ ಮಾಡಿದರೆ ಎಲ್ಲ ಜನರೂ ಸಮಾನರಾಗಿಬಿಡುತ್ತಾರೆ. ಕ್ರಿಸ್ತನ ಆಧ್ಯಾತ್ಮಿಕ ಸಾಮ್ರಾಜ್ಯವನ್ನು ಹೀಗೆ ಕೇವಲ ಬಾಹ್ಯ ಪ್ರಪಂಚದ ಮಟ್ಟಕ್ಕಿಳಿಸುವುದು ಸಾಧುವಲ್ಲ. ಪ್ರಾಪಂಚಿಕ ಸಾಮ್ರಾಜ್ಯದಲ್ಲಿ ಅಸಮಾನತೆ ಇದ್ದೇ ತೀರುತ್ತದೆ. ಅಲ್ಲಿ ಕೆಲವು ಸ್ವತಂತ್ರರು, ಕೆಲವರು ಜೀತದಾಳುಗಳು, ಕೆಲವರು ಆಳುವವರು, ಕೆಲವರು ಪ್ರಜೆಗಳು. ಸಂತ ಪಾಲ್ ಹೇಳುವಂತೆ, ಕ್ರಿಸ್ತನೆದುರು ಯಜಮಾನ ಮತ್ತು ಗುಲಾಮ ಎಲ್ಲರೂ ಒಂದೇ."

ಅಂತೂ ಯಜಮಾನ ಮತ್ತು ಗುಲಾಮರಿರಬೇಕು! ಇಲ್ಲದಿದ್ದರೆ ಪಾಪ, ಪಾಲ್ ಯಾರಿಗೆ ಧರ್ಮಬೋಧೆ ನೀಡಬೇಕು! ಇದಕ್ಕೆ ಪ್ರತಿಯಾಗಿ ಮುನ್ಸರ್ ರೈತಾಪಿ ಜನರನ್ನು ಸಂಘಟಿಸಿ ನೈಜ ಕ್ರೈಸ್ತಧರ್ಮದ ಅನುಷ್ಠಾನಕ್ಕೆ ಕರೆಯಿತ್ತ, ಭೂಮಾಲಿಕರಿಗೆ ಛೀಮಾರಿ ಹಾಕಿದ, ಚರ್ಚನ್ನು ಕ್ರಿಸ್ತನಿಂದ ದೂರ ಸರಿದು ನಿಂತ ಸಂಸ್ಥೆಯೆಂದು ಜರಿದ. ಕ್ರೈಸ್ತನ ಸಾಮ್ರಾಜ್ಯ ಅಸ್ತಿತ್ವಕ್ಕೆ ಬರಬೇಕಾದರೆ ಭೂಮಾಲಿಕರ ಪಿಡುಗಿನ ಹುಟ್ಟಡಗಿಸಬೇಕೆಂದು ಚರ್ಚಿನಲ್ಲೇ ಬೋಧನೆ ನೀಡಿದ ಕೀರ್ತಿ ಮುನ್ಸರನದು. ಅವನು ರೈತಾಪಿ ಜನರನ್ನು ಸಂಘಟಿಸಿದ್ದು ಜರ್ಮನಿಯ ಇತಿಹಾಸದ ಒಂದು ಪರ್ವಕಾಲವೆಂದು ಏಂಗೆಲ್ಸ್ ಪರಿಗಣಿಸಿದರು ಮತ್ತು ಜರ್ಮನಿಗೆ ಅದೇ ಕ್ರಾಂತಿ ಪರಂಪರೆಯೆಂದು ಸಾರಿದರು. ಭೂಮಾಲಿಕರು ಮತ್ತು ಚರ್ಚ್ ಎರಡೂ ಸೇರಿ ದುಡಿಯುವ ರೈತರ ರಕ್ತವನ್ನು ಹೇಗೆ ಹೀರುತ್ತಿದ್ದರೆಂಬುದನ್ನು ಏಂಗೆಲ್ಸ್ ಅನೇಕ ನಿದರ್ಶನಗಳನ್ನು ಕೊಟ್ಟು ವಿಶದಪಡಿಸಿದ್ದಾರೆ. ಭೌತಿಕವಾಗಿ ಸೊಕ್ಕು ಮತ್ತು ನೈತಿಕವಾಗಿ ಅಧಃಪತನ, ಇವು ೧೬ನೇ ಶತಮಾನದಲ್ಲಿ ಚರ್ಚಿನ ಪ್ರಮುಖ ಲಕ್ಷಣಗಳಾಗಿದ್ದವು. ಇಂತಹ ಸಂದರ್ಭದಲ್ಲಿ ಧಾರ್ಮಿಕ ಸಂಘರ್ಷಗಳು ಧರ್ಮಜಿಜ್ಞಾಸೆಗೆ ಸಂಬಂಧಿಸಿದ ಹೋರಾಟಗಳಾಗಿರಲಿಲ್ಲ; ಬದಲಾಗಿ, ಅವು ನಿಜಕ್ಕೂ ಸಂಪತ್ತನ್ನು ಕುರಿತ ವರ್ಗ ಹಿತಾಸಕ್ತಿಗಳ ಜಟಾಪಟಿಗಳಾಗಿದ್ದವು. ಈ ಆಸಕ್ತಿಗಳಿಗೆ ಧಾರ್ಮಿಕ ಮುಸುಕನ್ನು ಹಾಕಿ ಮೆರೆಸಲಾಗುತ್ತಿತ್ತು, ಅಷ್ಟೆ. ಆದ್ದರಿಂದಲೇ ಮಧ್ಯಯುಗದಲ್ಲಿ ಊಳಿಗಮಾನ್ಯ ವ್ಯವಸ್ಥೆಗೆ ವಿರೋಧವು ಹಲವು ಮುಖಗಳನ್ನು ಧರಿಸಿತು: ಕೆಲವೊಮ್ಮೆ ಅದು ರಹಸ್ಯವಾದವಾಯಿತು, ಕೆಲವೊಮ್ಮೆ ಪಾಷಂಡಮಾರ್ಗವಾಯಿತು, ಇನ್ನು ಕೆಲವೊಮ್ಮೆ ಸಶಸ್ತ್ರ ಹೋರಾಟದ ಸ್ವರೂಪ ಪಡೆಯಿತು.

ಈ ಸಂಬಂಧದಲ್ಲಿ ಉತ್ತರ ಬಂಗಾಳದಿಂದ ರೈತಾಪಿಗಳನ್ನು ಉದ್ದಕ್ಕೂ ಸಂಘಟಿಸುತ್ತಾ ಪುರಿಯ ಜಗನ್ನಾಥನ ದರ್ಶನಕ್ಕೆಂದು ಬಂದ ಚೈತನ್ಯ ಮಹಾಪ್ರಭುಗಳ ವ್ಯಕ್ತಿತ್ವವನ್ನು ಸ್ಮರಿಸಬಹುದು. ಭಗವಾನ್ ಶ್ರೀಕೃಷ್ಣನ ಸಾಮ್ರಾಜ್ಯದಲ್ಲಿ ಅಧರ್ಮದಿಂದ ಪ್ರೇರಿತವಾದ

ಏರು-ಪೇರುಗಳ ಸಮಾಜ ಸಾಧುವೇ, ಎಂಬುದು ಚೈತನ್ಯರ ಪ್ರಶ್ನೆಯಾಗಿತ್ತು. ನವದ್ವೀಪದಿಂದ ಹೊರಟಾಗ ಅವರೊಟ್ಟಿಗಿದ್ದವರು ಬೆರಳೆಣಿಕೆಯಷ್ಟು ಮಂದಿ. ದಾರಿಯುದ್ದಕ್ಕೂ ಮರ್ದಿತ ರೈತಾಪಿಗಳು ಅವರನ್ನು ಕೂಡಿಕೊಂಡರು. ಪುರಿ ಸೇರುವ ವೇಳೆಗೆ ಅವರು ಸಹಸ್ರಾರು ಸಂಖ್ಯೆಯಲ್ಲಿದ್ದರು. ಶ್ರೀಕೃಷ್ಣನ ಅಥವಾ ಜಗನ್ನಾಥನ ಪರವಾದ ಭಾವೋದ್ವೇಗದ ಭಕ್ತಿಯು ಭೂಮಾಲಿಕರ ಅಸಹ್ಯ ಕ್ರೌರ್ಯದ ವಿರುದ್ಧದ ಪ್ರಬಲ ಖಂಡನೆಯೂ ಆಗಿದ್ದಿತು. ಕಡೆಗೆ ಚೈತನ್ಯಪ್ರಭುಗಳು ಪುರಿಯ ಜಗನ್ನಾಥನಲ್ಲಿ ಲೀನರಾಗಿಹೋದರಂತೆ! ಗುಡಿಯೊಳಕ್ಕೆ ಹೋದ ಚೈತನ್ಯರು ಹೊರಕ್ಕೆ ಬರಲಿಲ್ಲ, ಅವರು ಜಗನ್ನಾಥನಲ್ಲಿ ಐಕ್ಯರಾಗಿ ಹೋದರು!! ಅಯೋಧ್ಯೆಯಲ್ಲಿ ಉತ್ಖನನ ಮಾಡಿದಂತೆ ಮುಂದೊಂದು ದಿನ ಜಗನ್ನಾಥ ಮಂದಿರದ ಗರ್ಭಗುಡಿಯಲ್ಲಿ ಯಾರಾದರೂ ಉತ್ಖನನ ನಡೆಸಿದರೆ ಚೈತನ್ಯಪ್ರಭುಗಳು ಜಗನ್ನಾಥನಲ್ಲಿ ಐಕ್ಯರಾದ ಐತಿಹ್ಯದ ಅಂತರಾರ್ಥ ತಿಳಿಯಬಹುದು. ಜರ್ಮನಿಯ ಚೈತನ್ಯ, ರೈತಾಪಿ ಜನರ ಸಂಘಟಕ, ಥಾಮಸ್ ಮುನ್ಸರ್ ನೇರವಾಗಿ ದಿಟ್ಟ ಹೋರಾಟ ಕೈಗೊಂಡ, ಕ್ರಾಂತಿಯ ಹಾದಿ ಹಿಡಿದ, ಭೂಮಾಲಿಕರನ್ನೂ ಚರ್ಚನ್ನೂ ಒಟ್ಟಿಗೆ ಎದುರಿಸಿದ. ಲೂಥರ್ ಮತ್ತು ಮುನ್ಸರ್ ಒಂದೇ ಚರ್ಚಿನ ಎರಡು ಪ್ರತ್ಯೇಕ ಧ್ವನಿಗಳಾಗಿದ್ದರು. ೧೫೧೭ರಲ್ಲಿ ಮೊದಲಿಗೆ ರೋಮನ್ ಕ್ಯಾಥೋಲಿಕ್ ಚರ್ಚಿನ ಅವಗುಣಗಳನ್ನು ವಿರೋಧಿಸಿದಾಗ ಲೂಥರ್ ರೈತಾಪಿ ಜನರ ಆಕಾಂಕ್ಷೆಗಳನ್ನು ಸಾಂದ್ರವಾಗಿ ಪ್ರತಿಫಲಿಸಿದ್ದ: "ಈ ರೋಮನ್ ಕ್ಯಾಥೊಲಿಕ್ ಚರ್ಚಿನ ಎಗ್ಗಿಲ್ಲದ ಹುಚ್ಚುತನ ಹೀಗೇ ಮುಂದುವರಿದರೆ ಅದಕ್ಕೆ ಬೇರಿನ್ನಾವ ಉಪಾಯವೂ ಇಲ್ಲದೆ ರಾಜರು ಮತ್ತು ರಾಜಕುಮಾರರು ಶಸ್ತ್ರ ಪ್ರಯೋಗದಿಂದ ಅದನ್ನು ಅದುಮಿಡಬೇಕಾಗುತ್ತದೆ. ಚರ್ಚಿನ ದುಷ್ಟಮಂದಿ ಇಡೀ ಪ್ರಪಂಚಕ್ಕೆ ವಿಷ ಉಣಿಸುತ್ತಿದ್ದಾರೆ. ಅವರಿಗೆ ಬಾಯಿಮಾತಿನಿಂದ ಬುದ್ಧಿ ಕಲಿಸಲಾಗುವುದಿಲ್ಲ; ಅದಕ್ಕೆ ಬಲಪ್ರಯೋಗವೇ ಬೇಕು. ನಾವು ಕಳ್ಳರನ್ನು, ಕೊಲೆಗಾರರನ್ನು, ಪಾಷಂಡಿಗಳನ್ನು ಹಿಡಿದು ದಂಡಿಸುತ್ತೇವೆ, ಮರಣಕ್ಕೆ ಗುರಿಮಾಡುತ್ತೇವೆ. ಆದರೆ ನರಕದ ಬಾಗಿಲು ತೆರೆಯುತ್ತಿರುವ ಪೋಪ್ ಕಾರ್ಡಿನಲ್ ಮತ್ತು ಬಿಷಪ್‌ಗಳ ಮೇಲೇಕೆ ತಿರುಗಿಬೀಳುವುದಿಲ್ಲ? ಶಸ್ತ್ರಗಳನ್ನು ಹಿಡಿದು ಅವರನ್ನು ಚೆಂಡಾಡಬೇಕು, ಅವರ ರಕ್ತದಿಂದ ನಮ್ಮ ಕೈ ತೊಳೆಯಬೇಕು."

ಚರ್ಚಿನ ಒಬ್ಬ ಕಾರ್ಯಕರ್ತ ಇಷ್ಟು ತೀವ್ರವಾಗಿ ಮಾತನಾಡಬಹುದೆ ಎಂಬ ಶಂಕೆ ಮೂಡುತ್ತದೆ. ಇಷ್ಟು ಕೋಪಾವಿಷ್ಟನಾಗಿದ್ದ ಲೂಥರ್ ಜಮೀನ್ದಾರರ ಆಸ್ತಿಗೆ ಅಡ್ಡಿಯಾಗಲು ಬಯಸಲಿಲ್ಲ; ಹಾಗೆ ಮಾಡದೆ ರೈತಾಪಿಗಳ ಸಂಕಷ್ಟವನ್ನು ಹೇಗೆ ನಿವಾರಿಸಬೇಕೆಂಬುದರ ಕಲ್ಪನೆಯೂ ಅವನಿಗಿರಲಿಲ್ಲ. ಆಗ ತಾನೆ ಪ್ರವರ್ಧಮಾನಕ್ಕೆ ಬರುತ್ತಿದ್ದ ಬಂಡವಳಿಗರಿಗೆ ಅವನ ಬಗ್ಗೆ ಆದರವಿತ್ತು; ಏಕೆಂದರೆ, ಆಸ್ತಿಯನ್ನು ಮುಟ್ಟದೆ ರೈತಾಪಿಗಳಿಗೆ ಸಾಂತ್ವನ ಹೇಳುತ್ತಿದ್ದ ಈ ದಯಾಮಯಿ. ಅವನ ರೋಷ ಪೋಪ್ ಪರಿವಾರದ ಮೇಲೆ, ಭೂಸಂಪತ್ತಿನ ಚೋರರ ಮೇಲಲ್ಲ. ಈ ರೋಷ ಸಹ ಬಹಳ ಕಾಲ ಉಳಿಯಲಿಲ್ಲ. ಈತನ ಗುಡುಗಿನ ಆರ್ಭಟವನ್ನು ಕೇಳಿದ ರೈತಾಪಿ ಜನ ಬಂಡೇಳಲು ಸಿದ್ಧರಾದರು, ಕ್ರೈಸ್ತಮತವು ವೈಭವಿಸಿದ್ದ

ಸ್ವಾತಂತ್ರ್ಯದ ಕನಸು ಕಂಡರು. ಆದರೆ ಲೂಥರ್‌ಗೆ ಆಗತಾನೆ ಉದಿಸುತ್ತಿದ್ದ ಬಂಡವಳಿಗ-ವ್ಯಾಪಾರಿ ವರ್ಗ ಉಘೇ, ಉಘೇ, ಎಂದು ಬೆಂಬಲ ಘೋಷಿಸಿತು. ಚರ್ಚಿನ ಆಸ್ತಿಯನ್ನು ತಮ್ಮದಾಗಿಸಿಕೊಳ್ಳಬಹುದೆಂಬ ಆಕಾಂಕ್ಷೆ ಅವರದು. ಲೂಥರ್ ರೈತಾಪಿಗಳೊಡನೆ ನಿಲ್ಲುತ್ತಾನೋ, ಬಂಡವಳಿಗರೊಡನೆ ಸೇರಿಕೊಳ್ಳುತ್ತಾನೋ ಎಂಬ ಕಾತುರದ ನಿರೀಕ್ಷೆ ಎರಡು ಕಡೆಯೂ ಇತ್ತು. ಲೂಥರ್ ವ್ಯಾಪಾರಿ-ಬಂಡವಳಿಗರೊಡನೆ ಸೇರಿಕೊಂಡ. ರೋಮಿನ ಆಧಿಪತ್ಯದ ಮೇಲೆ ಕಿಡಿ ಕಾರುವುದೂ ನಿಂತುಹೋಯಿತು. ಶಾಂತಿಯುತ ಪ್ರಗತಿ ಮತ್ತು ಸಹನಶೀಲ ಪ್ರತಿಭಟನೆ ಎಂಬುವು ಅವನ ಹೊಸ ಮಂತ್ರಗಳಾದವು. ಏಬೆರ್ನ್ ಕೋಟೆಯಲ್ಲಿ ರೈತಾಪಿಗಳ ನಾಯಕ ಹಟೆನ್ ಇದ್ದ. ಇನ್ನೊಬ್ಬ ನಾಯಕ ಸಿಕ್ಕಿಂಗೆನ್ ಸಹ ಇದ್ದ. ಅಲ್ಲಿಗೆ ಬರುವಂತೆ ಲೂಥರ್‌ಗೆ ಆಹ್ವಾನ ನೀಡಲಾಯಿತು. "ಬಲಪ್ರಯೋಗ ಮತ್ತು ರಕ್ತಪಾತಗಳಿಂದ ಕ್ರಿಸ್ತನ ಸುವಾರ್ತೆಯನ್ನು ರಕ್ಷಿಸಬೇಕೆಂಬ ದೃಷ್ಟಿ ನನ್ನದಲ್ಲ" ಎಂದುಬಿಟ್ಟ. "ಕ್ರಿಸ್ತನ ನುಡಿ ಪ್ರಪಂಚವನ್ನು ಜಯಿಸುತ್ತದೆ, ಅದೇ ಚರ್ಚಿನ ಆಸರೆ; ಮತ್ತು ಚರ್ಚನ್ನು ಶುದ್ಧಗೊಳಿಸುವ ಸಾಮರ್ಥ್ಯ ಅದಕ್ಕಿದೆ. ಕ್ರಿಸ್ತನ ವಿರೋಧಿಗಳು ಉಚ್ಛ್ರಾಯಕ್ಕೆ ಬಂದಿದ್ದು ಹಿಂಸೆ ಇಲ್ಲದೆ ಮತ್ತು ಹಿಂಸೆ ಇಲ್ಲದೆಯೇ ಅವರ ಪತನವೂ ಆಗುತ್ತದೆ" ಎಂಬ ಉಪದೇಶಾಮೃತ ಸುರಿಸಿದ ಲೂಥರ್ ಬಗ್ಗೆ ರೈತಾಪಿಗಳು ನಿರಾಶೆಯ ಭಾವನೆ ಪ್ರಕಟಿಸಿದರು. ಓರ್ಲಮ್ಯುಂಡೆ ಎಂಬಲ್ಲಿ ಕೆಲವರು ಅವನತ್ತ ಕಲ್ಲು ತೂರಿದರು ಕೂಡ.

ಇದನ್ನೆಲ್ಲಾ ಹತ್ತಿರದಿಂದ ನೋಡುತ್ತಿದ್ದ ಥಾಮಸ್ ಮುನ್ಸರ್ ಹತಾಶನಾಗದೆ ಹೋರಾಟವನ್ನು ಮುಂದುವರಿಸಿದ. ಲೂಥರ್ ಹೇಳಿದ: "ಶ್ರೀಮಂತರ ವಿರುದ್ಧ ದಂಗೆ ಎದ್ದಿರುವುದು ರೈತರಲ್ಲ; ಸ್ವತಃ ದೇವರೇ ಹಾಗೆ ಮಾಡಿದ್ದಾನೆ." ಹೀಗೆಂದ ಲೂಥರ್ ದಂಗೆಯನ್ನು ದೈವವಿರೋಧಿಯೆಂದು ಬಣ್ಣಿಸಿದ. ಮುನ್ಸರ್‌ರ ಸಂಘಟನೆ ಥುರಿಂಗಿಯಾದಲ್ಲಿ ನೆಲೆನಿಂತು ಜರ್ಮನಿಯನ್ನೆಲ್ಲಾ ಆವರಿಸಿತು. ಅದು ಲೂಥರ್ ಒಬ್ಬನ ಸಂಕಟವಲ್ಲವೆಂದು ಅರಿತ ಪೋಪ್, ಭೂಮಾಲಿಕರು, ರಾಜರು ಮತ್ತು ಬಂಡವಳಿಗರು ಕೂಡಲೆ ಒಂದಾದರು, ಮುನ್ಸರ್‌ನನ್ನು ಸದೆಬಡಿದರು, ರೈತಾಪಿಗಳನ್ನು ಕಂಗಾಲಾಗಿಸಿದರು. "ಈ ಲೂಟಿಗೋರ ರೈತಾಪಿಗಳನ್ನು ಚಚ್ಚಿ ತುಂಡುತುಂಡು ಮಾಡಬೇಕು, ಹಿಚುಕಿಹಾಕಬೇಕು, ತಿವಿದು ಕೊಲ್ಲಬೇಕು. ಯಾರಾರಿಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಇವರನ್ನು ಹುಚ್ಚುನಾಯಿಗಳನ್ನು ಹೊಡೆದು ಸಾಯಿಸುವಂತೆ ಕೊಚ್ಚಿಹಾಕಬೇಕು" ಎಂದು ಆರ್ಭಟಿಸಿದ ಲೂಥರ್. ಎಂತಹ ಪರಿವರ್ತನೆ ಎಂದು ರೈತಾಪಿಗಳು ಅಚ್ಚರಿಗೊಂಡರು.

ಥಾಮಸ್ ಮುನ್ಸರ್ ಸುಮಾರು ೧೪೯೦ರಲ್ಲಿ ಸ್ಟೋಲ್‌ಬರ್ಗ್ ಎಂಬಲ್ಲಿ ಜನಿಸಿದವನು. ಹದಿನೈದನೆಯ ವಯಸ್ಸಿನಲ್ಲಿ ಮ್ಯಾಗ್ಡೆರ್‌ಬರ್ಗ್‌ನ ಆರ್ಚ್‌ಬಿಷಪ್ ವಿರುದ್ಧ ಹಾಲ್ ಶಾಲೆಯಲ್ಲಿ ಪ್ರತಿಭಟನೆ ಆಯೋಜಿಸಿದ್ದ. ದೈವತಾಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ಪಡೆದು ೧೫೨೦ರಲ್ಲಿ ಜ್ವಿಕೌ ಎಂಬಲ್ಲಿಗೆ ಕ್ರೈಸ್ತಪಾದ್ರಿಯಾಗಿ ಹೋದ. ಅಲ್ಲಿಯ ದೀನ-ದಲಿತರ ಪರವಾಗಿ ನಿಂತಿದ್ದಕ್ಕಾಗಿ ಊರನ್ನೇ ಬಿಡಬೇಕಾಯಿತು; ಅದೂ ಒಂದೇ ವರ್ಷದಲ್ಲಿ. ಪ್ರಾಗ್‌ಗೆ

ಹೋಗಿ ಅಲ್ಲಿಂದ ಥುರಿಂಗಿಯಾಗೆ ಬಂದ. ಬೈಬಲ್ಲಿನಿಂದ ಅನೇಕ ಸಂದೇಶಗಳನ್ನು ಉದ್ಧರಿಸುತ್ತಾ ರೈತಾಪಿ ಜನರನ್ನು ತೀವ್ರ ಹೋರಾಟಕ್ಕೆ ಸಜ್ಜುಗೊಳಿಸುವುದರಲ್ಲಿ ನಿರತನಾದ ಮುನ್ಸರ್ ಹೇಳಿದ: "ನಿಜವಾದ ಶ್ರುತಿವಾಕ್ಯವೆಂದರೆ ಅದು ತಾರ್ಕಿಕ ಪದ್ಧತಿ; ಅದೇ ಜನರ ಸದಾಕಾಲದ ಆಯುಧ." ಬೈಬಲ್ಲಿನಲ್ಲಿ ಶ್ರದ್ಧೆ ಇರಿಸುವುದೆಂದರೆ ತರ್ಕವನ್ನು ತ್ಯಜಿಸುವುದಲ್ಲ; ಅಂತೆಯೇ ನಂಬಿಕೆ ಎಂಬುದು ಮನುಷ್ಯನಲ್ಲಿ ತರ್ಕವು ಜೀವ ಪಡೆದಾಗ ಹೊರಹೊಮ್ಮುವ ಭಾವ. ಸ್ವರ್ಗವೆಂದರೆ ಬೇರಾವುದೋ ವಿಶ್ವವಲ್ಲ; ಅದನ್ನು ಪಡೆಯಬೇಕಾದ್ದು ಇಲ್ಲೇ. ಕ್ರಿಸ್ತನು ನಮ್ಮಂತೆ ಒಬ್ಬ ಮನುಷ್ಯನಾಗಿದ್ದವನು. - ಇಂತಹ ಬೋಧನೆಯ ಹಿನ್ನೆಲೆಯಲ್ಲಿ ರೈತಾಪಿಗಳ ಸಂಘಟನೆ ಮಾಡಿದ ಮುನ್ಸರ್ ತನ್ನ ಉದ್ದೇಶವನ್ನು ಹೀಗೆ ಸಾರಿದ: "ಚರ್ಚ್ ಎಂಬುದು ಕ್ರೈಸ್ತಧರ್ಮದ ಆರಂಭದ ಕಾಲದ ಆಶಯಗಳನ್ನು ಈಡೇರಿಸುವ ಸಂಸ್ಥೆಯಾಗಬೇಕು. ದೇವರ ಸಾಮ್ರಾಜ್ಯವೆಂದರೆ ವರ್ಗಭೇದವಿಲ್ಲದ ಸಮಾಜದ ರಚನೆಯೆಂದರ್ಥ." ಮುಂದುವರಿದು ಅವನು ಹೇಳಿದ: "ಸಾಲ-ಸೋಲಗಳು, ದರೋಡೆ, ಕಳ್ಳತನ ಇವಕ್ಕೆಲ್ಲಾ ಮೂಲ ಕಾರಣಕರ್ತರು ರಾಜಮನೆತನದವರು ಮತ್ತು ಭೂಮಾಲಿಕರು. ಜೀವಂತ ಜನರನ್ನು ಸಹ ಅವರು ತಮ್ಮ ಸೊತ್ತುಗಳನ್ನಾಗಿಸಿಕೊಳ್ಳುತ್ತಾರೆ. ನೀರಿನಲ್ಲಿರುವ ಮೀನು, ಗಾಳಿಯಲ್ಲಿ ತೇಲಾಡುವ ಪಕ್ಷಿ, ಭೂಮಿಯ ಮೇಲಿನ ಗಿಡ-ಮರಗಳು, ಎಲ್ಲಾ ಇವರ ಸ್ವತ್ತು. ಆದರೆ ಬಡವರಿಗೆ ಇವರು ನೀಡುವ ಉಪದೇಶ ಏನನ್ನೂ ಕದಿಯಬಾರದೆಂದು. ಸಿಕ್ಕಿದ್ದನ್ನೆಲ್ಲಾ ಬಾಚಿಕೊಳ್ಳುವ ಇವರು ರೈತರ ಮತ್ತು ಕುಶಲಕರ್ಮಿಗಳ ಚರ್ಮ ಸುಲಿಯುತ್ತಾರೆ."

ಮುನ್ಸರನನ್ನು ಲೂಥರ್ ತೀವ್ರವಾಗಿ ಖಂಡಿಸಿದ, ಸೈತಾನನ ಪ್ರತಿನಿಧಿಯೆಂದು ಬಣ್ಣಿಸಿದ. ಆಲ್‌ಸ್ಟೆಟ್‌ನಿಂದ ಅವನನ್ನು ಹೊರದೂಡಬೇಕೆಂಬ ನಿಶ್ಚಯವಾಗಿತ್ತು. ರೈತರ ಹೋರಾಟವೂ ತೀವ್ರವಾಗಿ ಬೆಳೆದಿತ್ತು. ಎಲ್ಲೆಡೆ ಸಂಚರಿಸುತ್ತಾ ಮತ್ತು ಅಧಿಕಾರಿಗಳ ಕೈಗೆ ಸಿಕ್ಕಿಬೀಳದೆ ಮುನ್ಸರ್ ತನ್ನ ಪ್ರಚಾರ ಮತ್ತು ಸಂಘಟನೆ ಮುಂದುವರಿಸಿದ. ನ್ಯೂರೆಂಬರ್ಗ್, ಸ್ವಾಬಿಯಾ, ಅಲ್ಸೇಸ್, ಸ್ವಿಟ್ಸರ್ಲೆಂಡ್, ಸ್ಯಾಕ್ಸೋನಿ, ಎಲ್ಲೆಲ್ಲೂ ಈತನದೇ ಪ್ರಭಾವ.

ರೋಮಿನ ಚಕ್ರಾಧಿಪತ್ಯದ ಕಾಲದಲ್ಲಿ ಗುಲಾಮರನ್ನು ಹೇಗೆ ಹಿಂಸಿಸಿ ಸದೆಬಡಿದಿದ್ದರೋ ಹಾಗೆ ೧೬ನೆಯ ಶತಮಾನದ ಜರ್ಮನಿಯಲ್ಲಿ ರೈತಾಪಿ ಜನರನ್ನು ಕ್ರೂರವಾಗಿ ಮರ್ದಿಸಿ ಬಗ್ಗುಬಡಿಯಲಾಯಿತು. ನೂರಾರು ಜನರ ಕೈಕಾಲುಗಳನ್ನು ಕತ್ತರಿಸಿಹಾಕಿದರು, ಹ್ಯಾನ್ಸ್ ಎಂಬುವವನನ್ನು ಜೀವಂತ ಸುಟ್ಟರು, ಡೋಸಾ ಎಂಬುವವನನ್ನು ಜೀವಂತ ಹುರಿದು ಸಾಯಿಸಿದರು, ರಸ್ತೆಗಳ ಬದಿಗಳಲ್ಲಿ - ಹಳ್ಳಿಗಳ ನಡುವಿನಲ್ಲಿ ಸಾವಿರಾರು ರೈತರನ್ನು ಕೊಂದು ನೇತುಹಾಕಲಾಯಿತು. ತನ್ನ ಸವಲತ್ತುಗಳನ್ನು ಬಿಟ್ಟುಕೊಡಲು ತಯಾರಿಲ್ಲದ ಶ್ರೀಮಂತ ವರ್ಗಕ್ಕೆ ಯಾವ ದೌರ್ಜನ್ಯವೂ ಹೇಸಿಗೆಯಾಗಿ ಕಾಣಲಿಲ್ಲ, ಈಗಲೂ ಕಾಣುವುದಿಲ್ಲ. ಏಂಗೆಲ್ಸರು ಕೊಟ್ಟಿರುವ ಎಲ್ಲ ವಿವರಗಳನ್ನೂ ಇಲ್ಲಿ ನಮೂದಿಸಲು ಸಾಧ್ಯವಿಲ್ಲ; ಅಂತೆಯೇ ಹೋರಾಟದ ಬೆಳವಣಿಗೆಗಳನ್ನೆಲ್ಲಾ ದೀರ್ಘವಾಗಿ ಪ್ರಸ್ತಾಪಿಸುವ ಅಗತ್ಯವಿಲ್ಲ. ಮುಖ್ಯವಾಗಿ ಗಮನಿಸಬೇಕಾದ ವಿಷಯ ಇಷ್ಟೆ: ಧರ್ಮದ ಅಲುಗನ್ನು ಎರಡು ರೀತಿಯಲ್ಲೂ ಬಳಸ

ಬಹುದು; ದುಡಿಯುವ ಜನರನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳಲು ಅಥವಾ ದುಡಿಯುವ ಜನರ ಸಂಕಷ್ಟ ನಿವಾರಣೆಗೆ. ಲೂಥರ್ ಮತ್ತು ಮುನ್ಸರ್ ಎರಡು ಧ್ರುವಗಳಿದ್ದಂತೆ. ಚೈತನ್ಯ ಮಹಾಪ್ರಭುಗಳು ಸರಿಸುಮಾರು ಮುನ್ಸರ್‌ನ ಸಮಕಾಲೀನರೇ. ಚೈತನ್ಯರು ಜಗನ್ನಾಥನಲ್ಲಿ ಲೀನರಾದರೆಂಬ ಐತಿಹ್ಯವಿದೆ; ಆದರೆ ಮುನ್ಸರ್ ಎಲ್ಲೂ ಲೀನನಾಗಲಿಲ್ಲ. ಶ್ಲಾಕ್ಟ್‌ಬರ್ಗ್ ಎಂಬ ಗುಡ್ಡದ ಮೇಲೆ ತನ್ನ ಸಹ ಹೋರಾಟಗಾರರೊಡನೆ ಇದ್ದಾಗ ವಿರೋಧಿ ಬಣಕ್ಕೆ ಸಿಕ್ಕಿಬಿದ್ದ. ಕೆಲವು ರಾಜಕುಮಾರರ ಸಾನ್ನಿಧ್ಯದಲ್ಲಿ ಅವನನ್ನು ಕೊಲ್ಲಲಾಯಿತು. ಆಗಿನ್ನೂ ಅವನಿಗೆ ೩೫ ವರ್ಷ ವಯಸ್ಸು. ಅವನೊಡನೆ ನೂರಾರು ಜನ ಬೇರೆ ಹೋರಾಟಗಾರರೂ ಕೊಲ್ಲಲ್ಪಟ್ಟರು.

ಅತ್ಯಂತ ಕ್ರಾಂತಿಕಾರಿ ಘಟ್ಟದಲ್ಲಿ ಜರ್ಮನಿಯ ರೈತಾಪಿ ಜನ ಸೋತುಹೋದರು, ಎಂದಿನಂತೆ ದುರ್ಭರ ದಾಸ್ಯದಲ್ಲಿ ತೊಳಲಿದರು. ಈ ಪರಂಪರೆಯನ್ನು ಏಂಗೆಲ್ಸ್ ಸ್ಮರಿಸುವುದು ದುಡಿಯುವ ಜನರ ಹೋರಾಟವು ಅವಿರತವಾಗಿ ಸಾಗುತ್ತಲೇ ಇರುತ್ತದೆ ಎಂಬುದನ್ನು ಗಟ್ಟಿಯಾಗಿ ಸಾರಿಹೇಳಲು. ದುಡಿಯುವವರನ್ನು ಶೋಷಣೆಗೆ ಗುರಿಮಾಡಬಹುದು; ಆದರೆ ಅವರನ್ನು ನಿರ್ಮೂಲನಗೊಳಿಸುವುದಿಲ್ಲ. ಏಕೆಂದರೆ, ಅವರ ಶ್ರಮದ ಲಾಭ ಪಡೆಯಬೇಕಾದರೆ ಅವರಿರಬೇಕು ತಾನೆ! ಮುನ್ಸರ್ ಕಾಲದ ರೈತಾಪಿ ಜನರಿಗೂ ಏಂಗೆಲ್ಸ್ ಕಾಲದ ಜರ್ಮನಿಯ ಕಾರ್ಮಿಕರಿಗೂ ಈ ಒಂದಂಶದಲ್ಲಿ ಸಮಾನತೆಯಿದ್ದಿತು. ರೈತಾಪಿಗಳು ಹೀನಾಯವಾಗಿ ಮರ್ದಿಸಲ್ಪಟ್ಟರು, ಆದರೆ ಚರ್ಚಿನ ಅಧಿಕಾರವರ್ಗ ತನ್ನೆಲ್ಲ ಭೋಗೈಶ್ವರ್ಯಗಳನ್ನೂ ಕಳೆದುಕೊಂಡಿದ್ದೂ ಅಷ್ಟೇ ನಿಜ. ವಿಜಯ ದೊರೆತದ್ದು ಭೂಮಾಲಿಕರಿಗೆ, ರಾಜಮನೆತನದವರಿಗೆ ಮತ್ತು ಹೊಸದಾಗಿ ತಲೆಯೆತ್ತುತ್ತಿದ್ದ ಬಂಡವಳಿಗರಿಗೆ-ವ್ಯಾಪಾರಿಗಳಿಗೆ. ೧೫೨೫ರ ಫಲಿತಾಂಶ ಮತ್ತೆ ೧೮೪೮ರಲ್ಲಿ ಮರುಕಳಿಸಿತ್ತು. ಹಿಂದೆ ರಾಜಮನೆತನದವರು ಗೆದ್ದಿದ್ದರು; ಈಗ ಹೊಸ ಮತ್ತು ಪ್ರಬಲ ಬಂಡವಾಳಶಾಹಿ ಮನೆತನ ಗೆದ್ದಿತ್ತು. ೧೫೨೫ರ ಕ್ರಾಂತಿ ಸ್ಥಳೀಯ, ಅಂದರೆ ಜರ್ಮನಿಗೆ ಸೀಮಿತವಾಗಿತ್ತು; ೧೮೪೮ರಲ್ಲಿ ಅದು ಇಡೀ ಯೂರೋಪನ್ನು ಆವರಿಸಿತ್ತು.

೧೫೨೫ ಮತ್ತು ೧೮೪೮ರ ಎರಡು ದಿಟ್ಟ ಹೋರಾಟಗಳೂ ಇತಿಹಾಸದಲ್ಲಿ ಉಜ್ವಲವಾಗಿ ಉಳಿದಿವೆ. ಭಾರತದ ದುಡಿಯುವ ವರ್ಗವು ೨೧ನೇ ಶತಮಾನದಲ್ಲಿ ಅವುಗಳಿಂದ ಏನು ಪಾಠ ಕಲಿಯಬಹುದೆಂಬುದು ಹೆಚ್ಚು ಪ್ರಸ್ತುತವಾದ್ದು. ಆ ಅರ್ಥದಲ್ಲಿ ಏಂಗೆಲ್ಸ್ ಚಿಂತನೆ ಚಿರಂತನವಾಗಿರುವಂತಹದ್ದು. ಪ್ರಸ್ತುತ ಗ್ರಂಥದಿಂದ ಒಂದು ಉದಾಹರಣೆ ನೋಡುವುದಾದರೆ, ಏಂಗೆಲ್ಸ್ ರೈತಾಪಿ ಜನಗಳ ವಿವಿಧ ಸ್ತರಗಳನ್ನು ಗುರುತಿಸಿ ಅವುಗಳಲ್ಲಿ ಯಾವುವು ಮತ್ತು ಏತಕ್ಕಾಗಿ ಕಾರ್ಮಿಕ ವರ್ಗದೊಡನೆ ಕೈಜೋಡಿಸಬೇಕೆಂಬುದನ್ನು ತರ್ಕಿಸಿದ್ದಾರೆ. ದೊಡ್ಡ ಭೂಮಾಲಿಕರು ಬೇರೆಯವರ ದುಡಿಮೆಯ ಆಧಾರದ ಮೇಲೆ ಶ್ರೀಮಂತರಾಗುವವರು; ಆದ್ದರಿಂದ ಅವರು ಸಹಜವಾಗಿಯೇ ಬಂಡವಳಿಗರೊಡನೆ ಸೇರಿಕೊಳ್ಳುತ್ತಾರೆ. ಸಣ್ಣ ರೈತರು ಮೂರು ಪಂಗಡಗಳಿಗೆ ಸೇರುತ್ತಾರೆ: ಊಳಿಗಮಾನ್ಯಕ್ಕೆ

ಸಿಲುಕಿರುವವರು, ಕೋರ ಮಾಡುವವರು, ಮತ್ತು ಸ್ವಂತದ ಚಿಕ್ಕ ಹಿಡುವಳಿಗಳನ್ನುಳ್ಳವರು. ಈ ಮೂರು ಪಂಗಡದವರು ಕಾರ್ಮಿಕರ ಜೊತೆ ಸೇರಿ ವಿಮೋಚನೆಗೆ ಸೆಣಸಬೇಕಾಗುತ್ತದೆ.

ನಮ್ಮಲ್ಲಿ "ರೈತ" ಎಂದರೆ ಸಾಮಾನ್ಯ ಲಕ್ಷಣಗಳುಳ್ಳ ಒಂದು ಐಕ್ಯಗೊಂಡ ಸಮುದಾಯ ಎಂಬ ರೀತಿಯಲ್ಲಿ ವ್ಯಾಖ್ಯಾನಿಸುವವರಿದ್ದಾರೆ. ಆದ್ದರಿಂದಲೇ "ರೈತರಿಗೆ ಸೌಲಭ್ಯ ಸಿಗಲಿ" ಎಂದಾಗ ಆ ಸೌಲಭ್ಯಗಳೆಲ್ಲಾ ಬಹುತೇಕ ದೊಡ್ಡ ಹಿಡುವಳಿದಾರರ ಪಾಲೇ ಆಗುತ್ತದೆ. ಅವರು ಯಾರೊಡನೆಯೂ ಸೇರಿ ವಿಮೋಚನೆಗೆ ಹೋರಾಡುವ ಪ್ರಮೇಯವಿಲ್ಲ. ಆದರೆ ಬೇರೆಯವರಲ್ಲಿ ಜೀತ ಮಾಡುವ ಕೃಷಿಕಾರ್ಮಿಕರು ಹಾಗೆ ಭಾವಿಸಿಕೊಳ್ಳಲಾಗುವುದಿಲ್ಲ. ಭಾರಿ ಭೂಮಾಲಿಕರಿಂದ ಭೂಮಿಯನ್ನು ವಶಪಡಿಸಿಕೊಂಡು ಇವರಿಗೆ ಕೊಡದಿದ್ದ ಪಕ್ಷದಲ್ಲಿ ಇವರ ಸಂಕಷ್ಟಕ್ಕೆ ಕೊನೆಯಿಲ್ಲ. ಅದು ಇವರ ಸ್ವಂತದ ಹಿಡುವಳಿಯಾಗಬೇಕಾಗಿಲ್ಲ. ಸಹಕಾರಿ ಸಂಘಗಳ ಮಾದರಿಯಲ್ಲಿ ಭೂಮಿಯನ್ನು ಸಾಮೂಹಿಕ ಒಡೆತನದಲ್ಲಿಟ್ಟುಕೊಂಡು ಕೃಷಿ ಮಾಡುವುದು ಇವರಿಗಿರುವ ದಾರಿ. ಏಂಗೆಲ್ಸ್ ಹೇಳುತ್ತಾರೆ: "ಕೃಷಿ ಕಾರ್ಮಿಕರು ತಮ್ಮ ಹಿತದ ಬಗ್ಗೆ ಕ್ಲುಪ್ತವಾದ ತಿಳುವಳಿಕೆ ಪಡೆದ ದಿನವೇ ಜರ್ಮನಿಯಲ್ಲಿ ಪ್ರತಿಗಾಮಿ, ಊಳಿಗಮಾನ್ಯ ಪದ್ಧತಿಯ ಅಂತ್ಯವಾಗುತ್ತದೆ."

ನಮ್ಮ ಸಂದರ್ಭದಲ್ಲಿ ಇದನ್ನು ಸರಿಯಾಗಿ ವಿವೇಚಿಸಿಕೊಳ್ಳುವುದು ಅಗತ್ಯ. ಹಾಗಾದಾಗ ಕ್ರಿಯೆ ಮತ್ತು ಪರಿಹಾರ ಕೈಗೆಟಕುತ್ತವೆ. ಒಟ್ಟಿನಲ್ಲಿ ಹೇಳುವುದಾದರೆ, ರೈತ ಹೋರಾಟಗಳಲ್ಲಿ ಸಹ ವರ್ಗ ಪ್ರಜ್ಞೆ ಕೆಲಸ ಮಾಡುತ್ತದೆ. ಅದು ಗೌಣವೆಂದು ಭಾವಿಸುವುದು ಯಥಾಸ್ಥಿತಿ ವಾದಕ್ಕೆ ಸಮಾನವಾದುದು, ಅದಕ್ಕೆ ಪುಷ್ಟಿ ನೀಡುವಂಥದು.

❑❑

೯

ಆ್ಯಂಟಿ - ಡ್ಯೂರಿಂಗ್

ಬೋನಪಾರ್ಟೆಯ ಫ್ರಾನ್ಸ್ ಮತ್ತು ಬಿಸ್ಮಾರ್ಕನ ಜರ್ಮನಿ ನಡುವೆ ಜುಲೈ ೧೮೭೦ರಲ್ಲಿ ಯುದ್ಧ ಆರಂಭವಾಯಿತು. ಮಾರ್ಕ್ಸ್ ಮತ್ತು ಏಂಗೆಲ್ಸ್ ನೇತೃತ್ವದ ಅಂತರರಾಷ್ಟ್ರೀಯ ಸಂಘಟನೆಯು ಮೂಲತಃ ಯುದ್ಧವಿರೋಧಿಯಾಗಿದ್ದುದರಿಂದ ಎಲ್ಲ ದೇಶಗಳಲ್ಲೂ ಅದರ ಘಟಕಗಳು ಯುದ್ಧದ ವಿರೋಧವಾಗಿ ನಿಂತವು. ಯುದ್ಧದ ಸಂದರ್ಭದಲ್ಲಿ "ರಾಷ್ಟ್ರೀಯ ಹಿತ" ಎಂಬುದನ್ನು ಮುಂದುಮಾಡುವುದು ತೀರಾ ಸಾಮಾನ್ಯ. ಜರ್ಮನಿಯ ರಾಷ್ಟ್ರೀಯ ಹಿತಕ್ಕೂ ಆಳುವ ಮನೆತನಗಳ ಪ್ರಭುತ್ವ ಬಲಗೊಳ್ಳುವುದಕ್ಕೂ ವ್ಯತ್ಯಾಸವಿದೆಯೆಂದು ಏಂಗೆಲ್ಸ್ ತಿಳಿಯಹೇಳಿದರು. "ಎಲ್ಲ ದೇಶಗಳ ದುಡಿಯುವ ವರ್ಗಗಳೂ ಒಟ್ಟಾದಾಗ ಯುದ್ಧವೂ ಕೊನೆಗಾಣುತ್ತದೆ" ಎಂದು ಮಾರ್ಕ್ಸ್ ಘೋಷಿಸಿದ್ದರು. ಜರ್ಮನಿಯ ಶಾಸನಸಭೆಯಲ್ಲಿ ಬೆಬೆಲ್ ಮತ್ತು ಲೀಬ್‌ನೆಖ್ಟ್ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಜರ್ಮನಿಯಲ್ಲಿ "ಬ್ರುನ್ಸ್‌ವಿಕ್ ಸಮಿತಿ" ಎಂಬ ಇನ್ನೊಂದು ಸಂಘಟನೆ ಇತ್ತು. ಅದೂ ದುಡಿಯುವ ಜನರ ಸಂಘಟನೆಯೇ. ಆದರೆ ಅದು ಯುದ್ಧವನ್ನು ಬೆಂಬಲಿಸಿ ಫ್ರಾನ್ಸನ್ನು ಸದೆಬಡಿಯಬೇಕು ಮತ್ತು ಇಡೀ ಜರ್ಮನಿಯನ್ನು

ಒಗ್ಗೂಡಿಸಬೇಕು ಎಂಬ ಪ್ರಣಾಲಿಕೆಗೆ ಬದ್ಧವಾಗಿತ್ತು. ಆ ಸಮಿತಿಗೆ ದೀರ್ಘ ಪತ್ರವೊಂದನ್ನು ಬರೆದು ಅದರ ನಿಲುವನ್ನು ಬದಲಾಯಿಸಲು ಏಂಗೆಲ್ಸ್ ಯತ್ನಿಸಿದರು.

ಯುದ್ಧದಲ್ಲಿ ಸೋತ ಫ್ರಾನ್ಸಿನಲ್ಲಿ ಸೆಪ್ಟೆಂಬರ್ ೧೮೭೦ರಲ್ಲಿ ಗಣರಾಜ್ಯದ ಘೋಷಣೆಯಾಗಿತ್ತು, ಮೂರನೆಯ ನೆಪೋಲಿಯನ್ ಜರ್ಮನರ ಸೆರೆಗೆ ಸಿಕ್ಕಿದ್ದ. ಜರ್ಮನಿಯಲ್ಲಿ ಯುದ್ಧ ವಿರೋಧಿಸಿದ್ದವರ ವಿರುದ್ಧ ತೀವ್ರವಾದ ಕ್ರಮಗಳು ಜಾರಿಗೆ ಬಂದಿದ್ದವು. ಬ್ರುನ್ಸ್‌ವಿಕ್ ಸಮಿತಿಯ ಅನೇಕ ಸದಸ್ಯರು ಹಾಗೂ ಬೆಬೆಲ್, ಲೀಬ್ ನೆಖ್ಟ್ ಮತ್ತು ಹೆಪ್ನರ್ ದಸ್ತಗಿರಿಯಾಗಿದ್ದರು. ೧೮೭೧ರ ಮಾರ್ಚ್ ೧೮ ಇತಿಹಾಸದ ಪುಟಗಳಲ್ಲಿ ವೈಭವದ ದಿನ. ಪ್ಯಾರಿಸಿನಲ್ಲಿ ದುಡಿಯುವ ಜನ ಸಶಸ್ತ್ರ ಹೋರಾಟ ನಡೆಸಿ ಅಂದು ನಗರವನ್ನು ಸ್ವಾಧೀನ ಪಡಿಸಿಕೊಂಡರು ಮತ್ತು ಹೆಸರಾಂತ "ಪ್ಯಾರಿಸ್ ಕಮ್ಯೂನ್" ಅನ್ನು ಕೆಲಕಾಲಾನಂತರ ಘೋಷಿಸಿದರು. ಥಿಯೆರ್ಸ್ ಆಗ್ಗೆ ಫ್ರಾನ್ಸಿನ ಆಡಳಿತದ ನೇತಾರ. ಅವನು ಪ್ಯಾರಿಸ್ಸಿನಿಂದ ವಾರ್ಸೈಗೆ ಓಡಿಹೋದ, ಸರ್ಕಾರಕ್ಕೆ ಅದನ್ನೇ ಕೇಂದ್ರವನ್ನಾಗಿಸಿದ. ಕೌತುಕದ ಸಂಗತಿಯೆಂದರೆ ಆವರೆಗೆ ಫ್ರಾನ್ಸಿನ ವಿರುದ್ಧ ಯುದ್ಧದಲ್ಲಿ ತೊಡಗಿದ್ದ ಜರ್ಮನಿಯ ಬಿಸ್ಮಾರ್ಕ್ ಕೂಡಲೆ ಥಿಯೆರ್ಸನ ಬೆಂಬಲಕ್ಕೆ ನಿಂತ, ದುಡಿಯುವ ಜನರ ಪ್ಯಾರಿಸ್ ಕಮ್ಯೂನಿನ ಕಟ್ಟಾ ದ್ವೇಷಿಯಾದ ಮತ್ತು ತನ್ನ ಸೈನ್ಯವನ್ನು ಪ್ಯಾರಿಸ್ಸಿನ ಕಮ್ಯೂನಿನ ಧ್ವಂಸಕ್ಕೆ ಅಣಿಗೊಳಿಸಿದ. ದುಡಿಯುವ ವರ್ಗ ಒಂದಾಗಲು ಹಿಂದು-ಮುಂದು ನೋಡುತ್ತದೆ, ತನ್ನ ಬಂಧನದಿಂದ ಹೊರಬರಲು ತವಕಿಸುವುದಿಲ್ಲ; ಆದರೆ ಆಳುವ ಭೂಮಾಲಿಕ-ಬಂಡವಾಳಶಾಹಿ ವರ್ಗ ಹಾಗೆ ತಬ್ಬಿಬ್ಬಾಗಿ ಕೂಡುವುದಿಲ್ಲ. ನಿನ್ನೆಯ ಶತ್ರು ಇಂದಿನ ಮಿತ್ರನಾಗಿಬಿಡುತ್ತಾನೆ. (ಇರಾಕ್ ಮೇಲೆ ಅಮೆರಿಕಾ ಯುದ್ಧ ಹೂಡಿದರೆ ಜಪಾನ್ ಕೂಡಲೆ ಬೆಂಬಲಕ್ಕೆ ನಿಲ್ಲುವುದನ್ನಿಲ್ಲಿ ಸ್ಮರಿಸಬಹುದು). ಥಿಯೆರ್ಸ್ ಮತ್ತು ಬಿಸ್ಮಾರ್ಕ್ ಒಗ್ಗೂಡಿ ಪ್ಯಾರಿಸ್ಸಿನ ಕಮ್ಯೂನನ್ನು ಸದೆಬಡಿದರು, ನೂರಾರು ಜನರನ್ನು ಕೊಂದರು.

ಅಕಾಲಿಕವಾಗಿ ಸಶಸ್ತ್ರ ಹೋರಾಟದಲ್ಲಿ ತೊಡಗಿ ದುಡುಕಬಾರದೆಂದು ಮಾರ್ಕ್ಸ್ ಮತ್ತು ಏಂಗೆಲ್ಸ್ ಸೆಪ್ಟೆಂಬರ್ ೧೮೭೦ರಲ್ಲಿ ಸೆರೆಯ್ಯೆ ಎಂಬುವನ ಮುಖಾಂತರ ಪ್ಯಾರಿಸ್ಸಿನ ದುಡಿಯುವ ಜನರಿಗೆ ಸಂದೇಶ ಕಳಿಸಿದ್ದರು. ಆದರೆ ಅವರು ಕಮ್ಯೂನ್ ಘೋಷಿಸಿದಾಗ ಅಪ್ರತಿಮ ಬೆಂಬಲಿಗರಾಗಿ ಮಾರ್ಕ್ಸ್ ಮತ್ತು ಏಂಗೆಲ್ಸ್ ಯೂರೋಪಿನಲ್ಲೆಲ್ಲಾ ಕಮ್ಯೂನಿನ ಪರವಾದ ಅಭಿಪ್ರಾಯ ಮೂಡಿಸಲು ಶ್ರಮಿಸಿದರು. ಮಾರ್ಚ್ ೧೮೭೧ರಲ್ಲಿ ಸಹ ಮತ್ತೆ ಅದೇ ಸೆರೆಯ್ಯೆ ಮುಖಾಂತರ ಇನ್ನೊಂದು ಸಂದೇಶ ರವಾನಿಸಿದ್ದರೂ ದುಡಿಯುವ ಜನ ಪ್ಯಾರಿಸ್ಸಿನಲ್ಲಿ ತಮ್ಮದೇ ತೀರ್ಮಾನ ಕೈಗೊಂಡಿದ್ದರು. ವಾರ್ಸೈನಿಂದ ಥಿಯೆರ್ಸ್‌ನ ಸೈನ್ಯ ಮೇ ೨೧ರಂದು ಪ್ಯಾರಿಸ್ ಪ್ರವೇಶಿಸಿತು. ವಿಶ್ವದ ಮೊಟ್ಟಮೊದಲ ದುಡಿಯುವ ವರ್ಗದ ಸರ್ಕಾರವಾಗಿದ್ದ ಪ್ಯಾರಿಸ್ ಕಮ್ಯೂನ್ ನುಚ್ಚುನೂರಾಯಿತು. ನಂತರದ ದಿನಗಳಲ್ಲಿ ಏಂಗೆಲ್ಸ್ ಬರೆದರು: "ದುಡಿಯುವ ವರ್ಗವು ಅಧಿಕಾರಕ್ಕೆ ಬಂದ ಮೊದಲ ದಿನಗಳಿಂದಲೂ ಕಮ್ಯೂನಿಗೆ ತಿಳಿದಿತ್ತು, ಹಳೆಯ ಸರ್ಕಾರಿ ಯಂತ್ರವನ್ನು ಹಾಗೇ ಮುಂದುವರಿಸುತ್ತಾ ಆಳಲು ಸಾಧ್ಯವಿಲ್ಲ,

ಎಂದು. ಆಗ ತಾನೆ ಗೆದ್ದುಕೊಂಡಿದ್ದ ಸ್ಥಾನವನ್ನು ಕಳೆದುಕೊಳ್ಳದಿರಬೇಕಾದರೆ ದುಡಿಯುವ ವರ್ಗವು ಮೊದಲು ಆ ಹಳೆಯ ದಬ್ಬಾಳಿಕೆಯ ಯಂತ್ರವನ್ನು ಭಗ್ನಗೊಳಿಸಬೇಕಿತ್ತು. ಅದೇ ಯಂತ್ರವೇ ತಾನೆ ಅವರ ಮೇಲೆ ದೌರ್ಜನ್ಯಗಳನ್ನೆಸಗುತ್ತಿದ್ದುದು! ಎರಡನೆಯದಾಗಿ, ತನ್ನ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಹಾದಿ ತಪ್ಪದಿರಲು ಅವರನ್ನೆಲ್ಲಾ ಅಗತ್ಯಬಿದ್ದಾಗ ಅಧಿಕಾರದಿಂದ ಹಿಂದಕ್ಕೆ ಕರೆಸಿಕೊಳ್ಳುವ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕಾಗಿತ್ತು." ಜರ್ಮನಿಯ ಪಾರ್ಲಿಮೆಂಟಿನಲ್ಲಿ ಬೆಬೆಲ್ ಹೇಳಿದ: "ಕಮ್ಯೂನಿನ ಆಶಯಗಳು ನಿಮಗೆ ಎಷ್ಟೇ ಆಕ್ಷೇಪಾರ್ಹವೆನಿಸಿದರೂ ಸರಿಯೆ, ಯೂರೋಪಿನ ದುಡಿಯುವ ವರ್ಗ ಅವರ ಬೆಂಬಲಕ್ಕಿದೆಯೆಂಬ ಆಶ್ವಾಸನೆ ನೀಡುತ್ತೇನೆ. ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯ ಆಕಾಂಕ್ಷೆ ಇರುವವರೆಲ್ಲಾ ಈಗ ಪ್ಯಾರಿಸ್ಸಿನತ್ತ ನೋಡುತ್ತಿದ್ದಾರೆ. ನೀವು ಪ್ಯಾರಿಸ್ಸನ್ನು ಸದ್ಯಕ್ಕೆ ಬಗ್ಗುಬಡಿದಿದ್ದೀರಿ, ನಿಜ; ಆದರೆ ಪ್ಯಾರಿಸ್ಸಿನ ಹೋರಾಟ ಆರಂಭಿಕ ಹೋರಾಟ, ಕಡೆಯ ಹೋರಾಟವಲ್ಲ. ಯೂರೋಪಿನ ಭವಿಷ್ಯದ ಆದ್ಯತೆಗಳು ಬೇರೆಯೇ ಇವೆ. ಪ್ಯಾರಿಸ್ಸಿನ ದುಡಿಯುವ ವರ್ಗದ ಘೋಷಣೆ ಇಡೀ ಯೂರೋಪಿನ ದುಡಿಯುವ ವರ್ಗದ ಘೋಷಣೆಯಾಗುತ್ತದೆ: ಅರಮನೆಗಳಿಗೆ ಯುದ್ಧದ ಕಿಚ್ಚು, ಗುಡಿಸಲುಗಳಿಗೆ ಶಾಂತಿಯ ಲೇಪ. ಬಡತನ ಮತ್ತು ನಿರುದ್ಯೋಗಗಳಿಗೆ ಧಿಕ್ಕಾರ." ಕಮ್ಯೂನನ್ನು ಬೆಂಬಲಿಸಿದ್ದಕ್ಕೆ ರೋಷ ವ್ಯಕ್ತಪಡಿಸಿದ್ದ ತನ್ನ ತಾಯಿಗೆ ಏಂಗೆಲ್ಸ್ ಪತ್ರ ಬರೆದದ್ದು ಹೀಗೆ: "ಪ್ರಷ್ಯದ ಮಾದರಿಯಲ್ಲಿ ಕಮ್ಯೂನ್ ಕೆಲವು ಸೆರೆಯಾಳುಗಳನ್ನು ಸಾಯಿಸಿದ್ದಕ್ಕೆ ಎಲ್ಲಿಲ್ಲದ ಅಬ್ಬರ. ಅದೇ ಪ್ರಷ್ಯದ ಮಾದರಿಯಲ್ಲಿ ಕೆಲವು ಅರಮನೆಗಳು ನಾಶಗೊಂಡಿದ್ದೂ ನಿಜ. ಅದಷ್ಟು ಬಿಟ್ಟು ಉಳಿದ ಆರೋಪಗಳೆಲ್ಲಾ ಶುದ್ಧ ಸುಳ್ಳಿನ ಕಂತೆ. ವಾರ್ಸೈಯಿಂದ ಬಂದ ಸೈನ್ಯ ೪೦,೦೦೦ ಮಂದಿಯನ್ನು ಕೊಂದಿತಲ್ಲಾ, ಅದನ್ನೇಕೆ ನೀವು ಯಾರೂ ಹೇಳುವುದಿಲ್ಲ? ಹೆಂಗಸರು, ಮಕ್ಕಳೆನ್ನದೆ ಅವರ ಕೊಲೆಯಾಯಿತು, ಗೊತ್ತೆ? ಅದೂ, ಅವರನ್ನೆಲ್ಲಾ ನಿರಾಯುಧಗೊಳಿಸಿದ ನಂತರ! ನಿನಗೆ ಇದೆಲ್ಲಾ ಹೇಗೆ ತಿಳಿಯಲು ಸಾಧ್ಯ, ಬಿಡು. ನಿಮ್ಮ ಪತ್ರಿಕೆಗಳೆಲ್ಲಾ ಸುಳ್ಳುಗಳನ್ನು ನಿಮ್ಮ ಗಂಟಲೊಳಗೆ ತುರುಕಿವೆ."

ದುಡಿಯುವ ಜನತೆಯ ಪರವಾಗಿ ಜರ್ಮನಿಯಲ್ಲಿ "ಫೋಕ್‌ಸ್ಟಾಟ್" ಎಂಬ ಪತ್ರಿಕೆಯಿತ್ತು. ಲೀಬ್‌ನೆಖ್ಟ್ ಅದರ ಮುಖ್ಯ ರೂವಾರಿ. ಸೈದ್ಧಾಂತಿಕ ಸ್ಪಷ್ಟತೆಗೆ ಅದು ಸದಾ ಮುಡುಪಾಗಿರಬೇಕೆಂದು ಏಂಗೆಲ್ಸ್ ಆತನಿಗೆ ಆಗಾಗ್ಗೆ ಹೇಳುತ್ತಿದ್ದರು. ೧೮೭೨-೭೩ ರಲ್ಲಿ ಏಂಗೆಲ್ಸ್ ಆ ಪತ್ರಿಕೆಗೆ ಹಲವು ದೀರ್ಘ ಲೇಖನಗಳನ್ನು ಬರೆದು ನಂತರ ಅವನ್ನು "ವಸತಿಯ ಪ್ರಶ್ನೆ" ಎಂಬ ಶೀರ್ಷಿಕೆಯಡಿ ಪುಸ್ತಕವಾಗಿ ಪ್ರಕಟಿಸಿದರು. ಆಸ್ಟ್ರಿಯಾದಲ್ಲಿ "ಫೋಕ್ಸ್‌ವಿಲ್" ಎಂಬ ಪತ್ರಿಕೆಯಲ್ಲಿ ಬಂದಿದ್ದ ಕೆಲವು ಲೇಖನಗಳ ವಿಮರ್ಶೆಯ ರೂಪದಲ್ಲಿ ಆರಂಭಗೊಂಡ ಏಂಗೆಲ್ಸ್ ಲೇಖನಗಳು ವೈಜ್ಞಾನಿಕ ಸಾಮ್ಯವಾದದ ಎಲ್ಲ ಮಗ್ಗುಲುಗಳನ್ನೂ ತುಂಬಿಕೊಡುವಂತಹ ಸ್ವತಂತ್ರ ಹೊತ್ತಿಗೆಯಾಯಿತು. ಆಸ್ಟ್ರಿಯಾ ಪತ್ರಿಕೆಯಲ್ಲಿ ಅನಾಮಧೇಯನಾಗಿ ಬರೆದಿದ್ದವನು ಜರ್ಮನಿಯ ಒಬ್ಬ ವೈದ್ಯ, ಆರ್ಥರ್ ಮ್ಯೂಲ್

ಬರ್ಗರ್. ಅವನೂ ಒಬ್ಬ ಸಮಾಜವಾದಿಯೇ; ಆದರೆ ಯಾವ ನಿಷ್ಪಕ್ಷಪಾತೆಯೂ ಇಲ್ಲದ ಅಪಸಿದ್ಧಾಂತಿ, ಸುಲಭದಲ್ಲಿ ಎಲ್ಲಾ ಸುಧಾರಣೆಯಾಗಬೇಕೆಂಬ ಬಾಲಿಶ ಕನಸುಗಾರ. ಬಡವರ ಬಗ್ಗೆ ಅವನಿಗೆ ಅಪಾರ ಕನಿಕರ; ಅವರಿಗೆ ತಲೆಯ ಮೇಲೊಂದು ಸೂರಿಲ್ಲವಲ್ಲಾ ಎಂದು ಪಶ್ಚಾತ್ತಾಪ. ಎಲ್ಲರಿಗೂ ತಮ್ಮದೇ ಆದ ಸ್ವತಂತ್ರ ಮನೆಗಳಿರುವಂತೆ ಮಾಡಬೇಕು, ಅಗಾಧ ಅನ್ಯಾಯವನ್ನು ತೊಡೆದುಹಾಕಬೇಕು, ಎಂಬುದು ಅವನ ಘೋಷಣೆ. ಆದರೆ ಹೇಗೆ? ಅವನಿಗೊಂದು ಉಪಾಯ ಹೊಳೆಯಿತು: ಹೇಗೂ ಎಲ್ಲರೂ ಯಾರಾರದೋ ಮನೆಗಳಲ್ಲಿದ್ದಾರಲ್ಲವೆ? ಆ ಮನೆಗಳ ಮೂಲಬೆಲೆಯನ್ನು ಕಂತುಗಳಲ್ಲಿ ಮಾಲಿಕರಿಗೆ ಕೊಡುವಂತಾದರೆ ಆಯಿತು, ಅವನೇ ಮನೆಯ ಒಡೆಯನಾಗುತ್ತಾನೆ. ಇದರಲ್ಲಿ ಬಂಡವಾಳಶಾಹಿ, ಇತ್ಯಾದಿ ಅಡಚಣೆಗಳೇನೂ ಅವನಿಗೆ ಕಾಣಲಿಲ್ಲ. ಇದು ಹುಂಬತನವೋ, ಮೂರ್ಖತನವೋ ಎಂಬುದು ಏಂಗೆಲ್ಸರ ಪ್ರಶ್ನೆ. ಭಾರಿ ಉದ್ಯಮಗಳು ಸಣ್ಣ ಕೈಗಾರಿಕೆಗಳನ್ನು ನಾಶಮಾಡಿದುವೆಂದು ಪರಿತಪಿಸುತ್ತಿದ್ದ ಮ್ಯೂಲ್‌ಬರ್ಗರ್ ಮೂಲತಃ ಪ್ರೂಧೋನನ ಶಿಷ್ಯ. "ಆದ್ದರಿಂದಲೇ ನಿನಗಿದು ಸರಿಯಾಗಿ ತಿಳಿಯುವುದಿಲ್ಲ" ಎಂದರು ಏಂಗೆಲ್ಸ್. ಪ್ರೂಧೋನನ ಪ್ರಕಾರ ಎಲ್ಲಾ ವ್ಯಕ್ತಿಗಳ ವ್ಯವಹಾರವೇ ವಿನಾ ವ್ಯವಸ್ಥೆ ಎಂಬುದೇನೂ ಇಲ್ಲ. ವೈಯ್ಯಕ್ತಿಕ ನೆಲೆಯಲ್ಲಿ ಉತ್ಪಾದನೆ-ವಿತರಣೆಗಳು ಬಂಡವಾಳಶಾಹಿಯಡಿಯಲ್ಲಿ ಅದೃಶ್ಯವಾಗಿದ್ದಾಗ್ಯೂ ಪ್ರೂಧೋನ್ ಅದನ್ನು ಗಮನಿಸಲು ತಯಾರಿರಲಿಲ್ಲ. ಚಾರಿತ್ರಿಕವಾಗಿ ಒಂದು ಹೊಸ ಘಟ್ಟವನ್ನು ತಲುಪಿದ್ದ ಸಮಾಜವು ಪ್ರೂಧೋನನ ಕಣ್ಣಿನಲ್ಲಿ ಇನ್ನೂ ವ್ಯಕ್ತಿಗತ ನೆಲೆಯಲ್ಲೇ ಸ್ಥಿರವಾಗಿತ್ತು. ಅಂದರೆ, ಅವನ ಪ್ರಕಾರ ಹಿಂದೆಲ್ಲಾ ವೈಭವೋಪೇತ ಸಮೃದ್ಧಿ ಇದ್ದಿತು, ಮತ್ತೆ ಅದಕ್ಕೆ ಜೀವ ತುಂಬಬೇಕಾಗಿತ್ತು, ಅಷ್ಟೆ. ನಮ್ಮ ಪರಿಭಾಷೆಯಲ್ಲಿ ಹೇಳುವುದಾದರೆ, ಹಿಂದಿನ ರಾಮರಾಜ್ಯ ಮರುಹುಟ್ಟು ಪಡೆಯಬೇಕಾಗಿತ್ತು. ಅನೀತಿಗೆ ಜಾರಿದ್ದ ಜನ ಸುಜನರಾದರೆ ಎಲ್ಲಾ ಸರಿಹೋಗುತ್ತದೆ, ಎಂಬುದು ಪ್ರೂಧೋನ್ ನಂಬಿಕೆ. ಬಂಡವಾಳಶಾಹಿ ಎಷ್ಟೇ ಆಘಾತ ತಂದಿದ್ದರೂ ಸಮಾಜದ ವಿಕಾಸದ ಹಾದಿಯಲ್ಲಿ ಮೊದಲಿದ್ದುದಕ್ಕಿಂತಲೂ ಉತ್ತಮವಾದ ವ್ಯವಸ್ಥೆ ಅದಾಗಿತ್ತೆಂಬುದನ್ನು ಮಾನ್ಯ ಮಾಡದ ಕಾಲ್ಪನಿಕ ಸಮಾಜವಾದದ ಆರಾಧಕರನ್ನು ಏಂಗೆಲ್ಸ್ ತರಾಟೆಗೆ ತೆಗೆದುಕೊಂಡರು. ವಸತಿಯ ಪ್ರಶ್ನೆಯೊಂದೇ ಕಾರ್ಮಿಕರ ಪ್ರಶ್ನೆಯಲ್ಲ ಮತ್ತು ಕಾರ್ಮಿಕರಲ್ಲದವರಿಗೂ ಆ ಪ್ರಶ್ನೆ ಪ್ರಸ್ತುತ ಎಂದು ಏಂಗೆಲ್ಸ್ ವಾದಿಸಿದರು. ಬಂಡವಾಳಶಾಹಿಯಲ್ಲಿ ಇಡೀ ಉತ್ಪಾದನಾ ವ್ಯವಸ್ಥೆಯನ್ನು ಅರ್ಥೈಸಿಕೊಳ್ಳದೆ ಸುಮ್ಮನೆ ಒಂದು ವಿಷಯವನ್ನು ಭಾವುಕವಾಗಿ ಕೈಗೆತ್ತಿಕೊಳ್ಳುವುದು ಹಿತಕರವಲ್ಲವೆಂದು ಅವರು ಒತ್ತಿಹೇಳಿದರು. ಬೇರೆಲ್ಲಾ ಸಾಮಾಜಿಕ ಸಮಸ್ಯೆಗಳಂತೆ ವಸತಿಯ ಪ್ರಶ್ನೆಯೂ ಉತ್ಪಾದನಾ ವಿಧಾನ ಮತ್ತು ಕೂಲಿಗೆಲಸದ ಶೋಷಣೆಯ ಬದಲಾವಣೆಯಿಂದ ಮಾತ್ರ ಪರಿಹಾರ ಪಡೆಯಬಹುದು.

ಈ ಅವಧಿಯಲ್ಲಿ ಎಮಿಲ್ ಸ್ಯಾಕ್ಸ್ ಎಂಬ ಅರ್ಥಶಾಸ್ತ್ರಜ್ಞ ಸಾಮಾಜಿಕ ಆರ್ಥಿಕತೆ ಎಂಬ ವಿಜ್ಞಾನವನ್ನು ಕಂಡುಹಿಡಿದಿರುವುದಾಗಿ ಹೇಳಿಕೊಂಡಿದ್ದ. ಅವನೊಂದು ಪವಾಡವನ್ನೇ

ಮಾಡಿಬಿಡುವ ಸಾಮರ್ಥ್ಯ ಹೊಂದಿದವನಂತೆ ಮಾತನಾಡುತ್ತಿದ್ದ. ಯಾವ ರೀತಿಯಲ್ಲೂ ಬಂಡವಾಳಶಾಹಿಗೆ ಕುತ್ತು ಬಾರದಂತೆ ರಕ್ಷಿಸುತ್ತಲೇ ಎಲ್ಲ ಕೂಲಿಗೆಲಸದವರನ್ನೂ ಬಂಡವಳಿಗರನ್ನಾಗಿ ಮಾಡಿಬಿಡಲು ಅವನ ವಿಜ್ಞಾನ ಸಾಧನವಾಗಬಹುದೆಂದು ಅವನು ಪ್ರತಿಪಾದಿಸಿದ್ದ. ಅದು ಹೇಗೆ? ಅವನದು ಬಹಳ ಸರಳ ಉತ್ತರ: ಎಲ್ಲರಿಗೂ ಸ್ವಂತದ ಮನೆ ಆಗಿಬಿಟ್ಟರೆ ಬಂಡವಾಳಶಾಹಿ ನಾಶವಾಗಿಬಿಡುತ್ತದೆ ಎಂದು ಮ್ಯೂಲ್‌ಬರ್ಗರ್ ವಾದಿಸಿದ್ದನ್ನು ಮುಂದುವರಿಸಿದರೆ, ಮನೆ ಇರುವವರೆಲ್ಲಾ ಬಂಡವಳಿಗರೇ ಆಗಿರುತ್ತಾರೆಂಬುದು ಖಚಿತಪಡುತ್ತದೆ. ಬಂಡವಾಳಶಾಹಿಯು ಅನಿಷ್ಟವಾದ್ದು ಎಂಬ ಭಾವನೆಯ ಬದಲಾಗಿ ಅದೊಂದು ಆದರ್ಶ ವ್ಯವಸ್ಥೆ ಎಂಬ ತಿಳುವಳಿಕೆ ಆಗ ಮೂಡುತ್ತದೆ.

ಇದನ್ನು ವಿಜ್ಞಾನವೆನ್ನಬೇಕೋ ಮೂರ್ಖ ಬುದ್ಧಿವಂತಿಕೆ ಎನ್ನಬೇಕೋ ನಾವೇ ತೀರ್ಮಾನಿಸಿಕೊಳ್ಳಬಹುದು. ಒಂದಂತೂ ಸ್ಪಷ್ಟವಿದೆ: ಬಂಡವಾಳಶಾಹಿಯ ಎಲ್ಲ ಸಮರ್ಥಕರಂತೆ ಸ್ಯಾಕ್ಸ್ ಕೂಡ ಒಂದು ತೀರ್ಮಾನಕ್ಕೆ ಬಂದಿದ್ದ. ಅದೇನೆಂದರೆ, ಅಜ್ಞಾನದಿಂದಾಗಿ ಬಂಡವಾಳ ಮತ್ತು ಶ್ರಮಗಳ ಹಿತದ ಸಾಂಗತ್ಯವನ್ನು ಕಾಣುವ ಬದಲು ಅವು ಪರಸ್ಪರ ವಿರೋಧಿಗಳು ಎಂಬ ಭಾವನೆಯನ್ನು ಬಿತ್ತಲಾಗುತ್ತದೆ. ಎರಡೂ ಕಡೆಯವರಿಗೆ ಜ್ಞಾನದ ದೀವಿಗೆ ಕಲ್ಪಿಸಿಕೊಟ್ಟರೆ ನೈತಿಕತೆ ಮತ್ತು ಕಾನೂನು ಅವರಿಗೆ ಹಿಡಿಸುತ್ತದೆ. ಆಗ ಪರಸ್ಪರ ನಂಬಿಕೆ ಮತ್ತು ಗೌರವಗಳು ಸಹಜವಾಗಿ ಅಂಕುರಿಸುತ್ತವೆ. ವರ್ಗಪ್ರಜ್ಞೆಯ ಬಗ್ಗೆ ಮಾತನಾಡುವುದರ ಬದಲು ನಾಗರಿಕ ಶಾಂತಿಯ ಬಗ್ಗೆ ಮಾತನಾಡುವುದು ಶ್ರೇಯಸ್ಕರವೆಂಬುದು ಸ್ಯಾಕ್ಸ್‌ನ ಅಭಿಪ್ರಾಯ.

ಇಂತಹ 'ಸಮಾಜವಾದವು' ಬಂಡವಾಳಶಾಹಿಯ ಅಧಿಕಾರಕ್ಕೆ ಊರುಗೋಲು ಒದಗಿಸಿಕೊಡುವಂತಹ ಪೇಲವ ಸಿದ್ಧಾಂತವೆಂದು ಏಂಗೆಲ್ಸ್ ಅದನ್ನು ಧಿಕ್ಕರಿಸಿದರು. ತನ್ನ ನೆರೆಯ ಕೊಳಚೆ ಪ್ರದೇಶದಲ್ಲಿ ಸಾಂಕ್ರಾಮಿಕ ರೋಗ ಉತ್ಪತ್ತಿಯಾಗಿದ್ದರೆ ಅದನ್ನು ನಿರ್ಮೂಲನಗೊಳಿಸಲು ಧಾವಿಸುವ ವ್ಯಕ್ತಿ ದಯಾಮಯನಾಗಿ ಆ ಕೆಲಸ ಮಾಡುತ್ತಾನೋ, ಅಥವಾ ರೋಗವು ತನಗೆ ತಟ್ಟದಿರಲೆಂದು ಕ್ರಮ ಕೈಗೊಳ್ಳುತ್ತಾನೋ ಹೇಗೆ ಹೇಳುವುದು? ಸ್ಯಾಕ್ಸ್‌ನಂತಹ "ಸಮಾಜವಾದಿ ಧುರೀಣರು" ಕೆಲವು ಸಾಮಾಜಿಕ ರುಜಿನಗಳಿಗೆ ಪರಿಹಾರ ನೀಡುವ ನೆಪದಲ್ಲಿ ಬಂಡವಾಳಶಾಹಿಯನ್ನು ಭದ್ರಗೊಳಿಸುತ್ತಾರೆ, ಅಷ್ಟೆ. "ವಸತಿಯ ಪ್ರಶ್ನೆ" ಎಂಬ ಏಂಗೆಲ್ಸರ ಗ್ರಂಥವು ಮ್ಯೂಲ್‌ಬರ್ಗರ್ ಮತ್ತು ಸ್ಯಾಕ್ಸ್‌ರ ಅಭಿಪ್ರಾಯಗಳನ್ನು ವಿಮರ್ಶೆ ಮಾಡುವುದಲ್ಲದೆ ಪ್ರಭುತ್ವದ ಲಕ್ಷಣ, ರೈತರು ಸಾಮೂಹಿಕತೆಯತ್ತ ದಾಪುಗಾಲು ಹಾಕುವುದು, ದುಡಿಯುವ ಜನರ ಅಧಿಕಾರ, ನಗರ ಮತ್ತು ಗ್ರಾಮಾಂತರ ಪ್ರದೇಶಗಳ ನಡುವಿನ ವಿರೋಧವನ್ನು ಅಂತ್ಯಗೊಳಿಸುವ ಕ್ರಮ, ಸಮಾಜವಾದಿ ಸಾಮಾಜಿಕ ಸಂರಚನೆಗೆ ಮಾರ್ಗ, ಮುಂತಾದ ವಿಷಯಗಳನ್ನೂ ಚರ್ಚಿಸುತ್ತದೆ. ಆ ಪೈಕಿ ಒಂದು ಸಂಗತಿಯನ್ನಿಲ್ಲಿ ಪ್ರಸ್ತಾಪಿಸಬಹುದು. ಮ್ಯೂಲ್‌ಬರ್ಗರ್‌ನ ವಾದದಲ್ಲಿ ಗ್ರಾಮಾಂತರ ಪ್ರದೇಶಗಳ ಸುಧಾರಣೆಗೆ ಕೆಲವು ಸೂಚನೆಗಳಿವೆ: ತೆರಿಗೆಗಳ ನಿಯಂತ್ರಣ, ಸರ್ಕಾರ ಮತ್ತು

ಖಾಸಗಿಯವರಿಂದ ಸಾಲಗಳ ಸೌಲಭ್ಯ, ಕಡಿಮೆ ಬಡ್ಡಿ ದರದ ಸಾಲಗಳ ಯೋಜನೆ, ಇತ್ಯಾದಿ. ಇಂತಹ ಕ್ರಮಗಳ ಸೀಮಿತ ಸಾರ್ಥಕತೆಯನ್ನು ವಿವರಿಸುತ್ತಾ ಏಂಗೆಲ್ಸ್ ವಿಶೇಷವಾಗಿ ಭೂ ಹಿಡುವಳಿಗಳ ಪ್ರಮಾಣದ ಬಗ್ಗೆ ಗಮನ ಸೆಳೆಯುತ್ತಾರೆ. ದೊಡ್ಡ ಹಿಡುವಳಿಗಳನ್ನು ವಿಭಜಿಸಿ ಸಣ್ಣ ಹಿಡುವಳಿಗಳನ್ನು ಮಾಡಿ ಅವನ್ನು ರೈತರ ಸ್ವಂತದ ಆಸ್ತಿಯಾಗಿ ಪರಿವರ್ತಿಸುವುದು ಅರ್ಥಹೀನವೆಂದು ಏಂಗೆಲ್ಸ್ ವಿಶ್ಲೇಷಿಸುತ್ತಾರೆ: "ಫ್ರಾನ್ಸ್ ಮತ್ತು ಜರ್ಮನಿಯಲ್ಲಿ ಭೂಮಿಯನ್ನು ಈಗಿರುವುದಕ್ಕಿಂತ ಚಿಕ್ಕ ಹಿಡುವಳಿಗಳನ್ನಾಗಿ ವಿಭಜಿಸುವುದು ಪ್ರತಿಗಾಮಿತ್ವ ವಾಗುತ್ತದೆ. ದುಡಿಯುವ ವರ್ಗವು ರಾಜಕೀಯ ಅಧಿಕಾರವನ್ನು ಪಡೆದಾಗ ಮಾಡಬೇಕಾದ್ದು ಇದಕ್ಕೆ ಭಿನ್ನವಾದ ಕ್ರಮ. ಅಲ್ಲಿಯ ದೊಡ್ಡ ಭೂ ಹಿಡುವಳಿಗಳನ್ನು ಸಹಕಾರಿ ತತ್ವದ ಆಧಾರದ ಮೇಲೆ ಉತ್ಪಾದನೆಗೆ ತೊಡಗಿಸಬೇಕು. ಭಾರಿ ಪ್ರಮಾಣದ ಹಿಡುವಳಿ ಅದಾದರೂ ಗುಣಾತ್ಮಕವಾಗಿ ಅದು ಬೇರೆ ಸ್ವರೂಪದ್ದು, ಏಕೆಂದರೆ ಅದು ಸಮಾಜವಾದಿ ಕೃಷಿಯಾಗಿರುತ್ತದೆ. ಆದರ ಅನುಕೂಲಗಳೇನೆಂಬುದು ಸಣ್ಣ ರೈತರಿಗೆ ಪ್ರಾಯೋಗಿಕವಾಗಿ ತಿಳಿದುಬರುತ್ತದೆ. ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಬಳಸಿ ಹೀಗೆ ಸಹಕಾರಿ ಉತ್ಪಾದನೆಯಲ್ಲಿ ತೊಡಗಿದರೆ ಗ್ರಾಮಾಂತರ ಪ್ರದೇಶದ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ." ೧೯೧೭ರ ಜನವರಿ ೩೦ರಂದು ಲೆನಿನ್ ಈ ಪುಸ್ತಕವನ್ನು ಮೆಚ್ಚಿ ಇನೆಸ್ಸಾ ಅರ್ಮಾಂಡ್‌ಗೆ ಒಂದು ಪತ್ರ ಬರೆದಿದ್ದಾರೆ. ಭಾಗಶಃ ಅದು ಹೀಗಿದೆ: "೧೮೮೭ರ ಮುನ್ನುಡಿಯೊಂದಿಗೆ ಏಂಗೆಲ್ಸರ 'ವಸತಿಯ ಪ್ರಶ್ನೆ' ಮತ್ತೆ ಓದುತ್ತಿದ್ದೇನೆ. ನಿನಗದು ಪರಿಚಿತ ಗ್ರಂಥವೇ? ಅದ್ಭುತವಾಗಿದೆ! ಮಾರ್ಕ್ಸ್ ಮತ್ತು ಏಂಗೆಲ್ಸರನ್ನು ಅತ್ಯಭಿಮಾನದಿಂದ ನಾನು ಪ್ರೀತಿಸುವುದು ಇಂತಹ ವಿಶ್ಲೇಷಣೆಗಳಿಂದಾಗಿ. ಯಾರಾದರೂ ಅವರನ್ನು ತೆಗಳಿದರೆ ನಾನು ಸಹಿಸದಿರುವುದಕ್ಕೆ ಅದೇ ಕಾರಣ. ಓ, ಅವರಿಬ್ಬರೂ ಎಷ್ಟು ಯೋಗ್ಯರು! ಅವರಿಂದ ನಾವು ಕಲಿಯಬೇಕಾದ್ದು ಬಹಳಷ್ಟಿದೆ. ಆ ಆಧಾರವನ್ನು ನಾವೆಂದೂ ಬಿಟ್ಟುಕೊಡಬಾರದು."

ಏಂಗೆಲ್ಸರ ಕೃತಿಗಳ ಪೈಕಿ ಬಹಳ ಮಹತ್ವವನ್ನುಳ್ಳದ್ದು ಅವರ "ಆ್ಯಂಟಿ-ಡ್ಯೂರಿಂಗ್." ೧೯ನೆಯ ಶತಮಾನದ ಕೊನೆಯ ವೇಳೆಗೆ ಬ್ರಿಟನ್ನಿನಲ್ಲಿ ಒಬ್ಬ ಕಾದಂಬರಿಕಾರನಿದ್ದ. ಅವನ ಹೆಸರು ವಿಲಿಯಂ ಮೇಕ್‌ಪೀಸ್ ಥ್ಯಾಕರೆ. ಲಂಡನ್ನಿನ ಒಂದು ಔತಣಕೂಟದಲ್ಲಿ ಒಂದಷ್ಟು ಪ್ರತಿಷ್ಠಿತರು ಸೇರಿದ್ದಾಗ ಅವನ ಹೆಸರು ಪದೇಪದೇ ಕೇಳಿಬರುತ್ತಿದ್ದಿತಂತೆ. ಒಮ್ಮೆ ಒಬ್ಬಾತ ಕೇಳಿದನಂತೆ: "ಏನು, ಎಲ್ಲರೂ ಥ್ಯಾಕರೆ, ಥ್ಯಾಕರೆ, ಎನ್ನುತ್ತಿದ್ದೀರಿ. ಯಾರವನು ಥ್ಯಾಕರೆ?" ಇಂದು ನಮಗೆ ಥ್ಯಾಕರೆ ಯಾರೆಂದು ತಿಳಿದಿದೆ, ಆದರೆ ಅವನು ಯಾರೆಂದು ಅಂದು ಕೇಳಿದ್ದವನು ಯಾರೆಂದು ತಿಳಿದಿಲ್ಲ! "ಆ್ಯಂಟಿ-ಡ್ಯೂರಿಂಗ್" ಮಾರ್ಕ್ಸ್‌ವಾದಿ ತತ್ತ್ವಶಾಸ್ತ್ರದ ಪರಿಚಯ ಮಾಡಿಕೊಡುವ ಒಂದು ಮೌಲಿಕ ಗ್ರಂಥ. ಅದರ ಶೀರ್ಷಿಕೆಯಿಂದಾಗಿ ಈ ಡ್ಯೂರಿಂಗ್ ಅಮರನಾಗಿದ್ದಾನೆ. ಸ್ವತಃ ಡ್ಯೂರಿಂಗನ ಕೃತಿಗಳನ್ನು ಈಗ ಅದೆಷ್ಟು ಜನ ಓದುತ್ತಾರೋ ತಿಳಿಯದು. ಆದರೆ ಅವನ ಹೆಸರು ಏಂಗೆಲ್ಸ್‌ರಿಂದಾಗಿ ಪ್ರಸಿದ್ಧಿಗೆ ಬಂದಿದೆ. ಅವನ ಕೃತಿಯೊಂದರ ವಿಮರ್ಶೆ ಗೌಣವಾಗಿ ಕಡೆಗೆ ಈ ಗ್ರಂಥವು ಮಾರ್ಕ್ಸ್‌ವಾದಿ

ತತ್ತ್ವಶಾಸ್ತ್ರದ ಪ್ರಮುಖ ಸೈದ್ಧಾಂತಿಕ ಕೃತಿಯಾಗಿ ಉಳಿದಿದೆ. ಅದನ್ನು ಮಾರ್ಕ್ಸ್‌ವಾದದ ವಿಶ್ವಕೋಶವೆನ್ನುವುದೂ ಉಂಟು. ಸಮಾಜವಾದದ ಸೋಗಿನಲ್ಲಿ ಅದರ ಪರಿಧಿಗೆ ಸೇರದಿರುವಂತಹ ಅನೇಕ ಪ್ರಮೇಯಗಳನ್ನು ಪ್ರಚುರಪಡಿಸುವ ಪ್ರವೃತ್ತಿ ಜರ್ಮನಿಯಲ್ಲಿ ಬಹಳ ಹೆಚ್ಚಾಗಿತ್ತು. ಇದರ ಬಗ್ಗೆ ೧೮೭೫ರಲ್ಲಿ ಬೆಬೆಲ್‌ಗೆ ಒಂದು ಪತ್ರ ಬರೆದು ಏಂಗೆಲ್ಸ್ ಎಚ್ಚರ ನೀಡಿದ್ದರು. ಅಂತಹ ಲೇಖಕರಲ್ಲಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿದ್ದ ಯೂಜಿನ್ ಡ್ಯೂರಿಂಗ್ ಒಬ್ಬ.

೧೮೭೬ರ ಮೇ ತಿಂಗಳಲ್ಲಿ ಸ್ವಲ್ಪ ಅನಾರೋಗ್ಯದಿಂದ ಬಳಲಿದ್ದ ಏಂಗೆಲ್ಸ್ ರ್‍ಯಾಮ್ಸ್ ಗೇಟ್ ಎಂಬಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅಲ್ಲಿದ್ದ ಮೂರು ತಿಂಗಳಲ್ಲಿ ಡ್ಯೂರಿಂಗನ ಕೃತಿಗಳನ್ನೆಲ್ಲಾ ಆಮೂಲಾಗ್ರವಾಗಿ ಅಧ್ಯಯನ ಮಾಡಿದರು. ಆ ಕೃತಿಗಳೆಂದರೆ "ತತ್ತ್ವಶಾಸ್ತ್ರ ಪ್ರವೇಶಿಕೆ", "ರಾಜಕೀಯ ಮತ್ತು ಸಾಮಾಜಿಕ ಆರ್ಥಿಕತೆಯ ಪ್ರವೇಶಿಕೆ", "ರಾಜಕೀಯ ಆರ್ಥಿಕತೆ ಹಾಗೂ ಸಮಾಜವಾದದ ವಿಮರ್ಶಾತ್ಮಕ ಇತಿಹಾಸ" ಮುಂತಾದವು. ೧೮೭೭ರ ಆರಂಭಕ್ಕೆ ಡ್ಯೂರಿಂಗನ ಅಭಿಪ್ರಾಯಗಳನ್ನು ತೀಕ್ಷ್ಣವಾಗಿ ವಿಶ್ಲೇಷಣೆಗೆ ಗುರಿಮಾಡುವ ಲೇಖನಗಳು ಸಿದ್ಧವಾಗಿ, ಪಕ್ಷದ ಪತ್ರಿಕೆಯಲ್ಲಿ ಪ್ರಕಟಗೊಳ್ಳತೊಡಗಿದವು. ಪ್ರತಿಕ್ರಿಯೆಗಳು ಎರಡು ವಿಧದಲ್ಲಿ ಬಂದವು. ಲೆಸ್ನರ್ ಮುಂತಾದವರು ಲೇಖನಗಳನ್ನು ಮೆಚ್ಚಿ ಸ್ವಾಗತಿಸಿದರೆ ಜೊಹಾನ್ ಮೋಸ್ಟ್ ಮುಂತಾದವರು ಪ್ರಕಟಣೆಯನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು. ಮೇ ೧೮೭೭ರ ಗೋಥಾ ಸಮಾವೇಶದಲ್ಲಿ ಮೋಸ್ಟ್ ಆ ಬಗ್ಗೆ ನಿರ್ಣಯವನ್ನು ಸಹ ಮಂಡಿಸಿದ್ದ. ಲೀಬ್‌ನೆಖ್ಟ್ ಅದನ್ನು ವಿರೋಧಿಸಿ, ಏಂಗೆಲ್ಸರ ಲೇಖನಗಳು ಮಾರ್ಕ್ಸ್‌ರ "ಬಂಡವಾಳ" ಎಂಬ ಗ್ರಂಥವನ್ನು ಬಿಟ್ಟರೆ ವೈಜ್ಞಾನಿಕ ಸಾಮ್ಯವಾದದ ತಿಳಿವಳಿಕೆಗೆ ಅತ್ಯಂತ ಮಹತ್ವದ ಪೂರಕ ಸಾಹಿತ್ಯವಾಗಿದೆಯೆಂದು ಪ್ರತಿಪಾದಿಸಿದನು. ಈ ಗ್ರಂಥದಲ್ಲಿ ಮೂರು ಭಾಗಗಳಿವೆ: ತತ್ತ್ವಶಾಸ್ತ್ರ, ರಾಜಕೀಯ ಆರ್ಥಿಕತೆ ಮತ್ತು ಸಮಾಜವಾದ. ಮಾರ್ಕ್ಸ್‌ವಾದದ ಮೂಲಭೂತ ಅಂಶಗಳನ್ನು ವೈಜ್ಞಾನಿಕವಾಗಿ ಮತ್ತು ಸರಳವಾಗಿ ವಿವರಿಸುವ ಮೇರುಕೃತಿ ಇದು.

"ವಿಜ್ಞಾನದ ಕ್ಷೇತ್ರದಲ್ಲಿ ಸ್ವಾತಂತ್ರ್ಯವೆಂದರೆ ತಾವು ಆಳವಾಗಿ ಅಭ್ಯಾಸ ಮಾಡದ ವಿಷಯಗಳನ್ನು ಕುರಿತಂತೆ ಸಹ ಬರೆದುಬಿಡಬಹುದು ಮತ್ತು ಅವರು ಹಾಗೆ ಬರೆದದ್ದೇ ವೈಜ್ಞಾನಿಕ ಪದ್ಧತಿ ಎಂಬುದು ಕೆಲವರ ಗ್ರಹಿಕೆ" ಎಂದು ಡ್ಯೂರಿಂಗನ ಬಗ್ಗೆ ಏಂಗೆಲ್ಸ್ ಆಕ್ಷೇಪವೆತ್ತಿದ್ದಾರೆ. ಅದೇನೇ ಇರಲಿ, ಏಂಗೆಲ್ಸ್ ನಿರೂಪಿಸಿದಂತೆ ತತ್ತ್ವಶಾಸ್ತ್ರವು ವಿಶ್ವವನ್ನು ಅರ್ಥೈಸಿಕೊಳ್ಳುವುದಕ್ಕೆ ಹಾಗೂ ಬದಲಾಯಿಸುವುದಕ್ಕೆ ಸಾಧನ. ಸಾಂಪ್ರದಾಯಿಕವಾಗಿ ತತ್ತ್ವಶಾಸ್ತ್ರದ ಪರಿಧಿಯಲ್ಲಿ ಬರುವುದು ವಿಶ್ವದ ವಿವಿಧ ಅಂಶಗಳನ್ನು ಅರ್ಥೈಸುವ ಪ್ರಕ್ರಿಯೆ. ಯಾರನ್ನೂ ಛೇಡಿಸುವ ಉದ್ದೇಶವಿಲ್ಲದೆ ಒಂದು ಚಿಕ್ಕ ಪ್ರಸಂಗವನ್ನು ಗಮನಿಸಬಹುದು: ನಮ್ಮಲ್ಲಿ ಆಗಾಗ್ಗೆ ಪ್ರವಚನಗಳು ನಡೆಯುತ್ತವೆ. ಭಗವದ್ಗೀತೆ, ಬ್ರಹ್ಮಸೂತ್ರ, ಪುರಾಣಗಳು, ಹೀಗೆ ವಿಷಯಗಳ ಆಯ್ಕೆ ಇರುತ್ತದೆ. ಪ್ರವಚನಕಾರರು ಹಾಗೂ ಶ್ರೋತೃಗಳು ಅಖಂಡವಾಗಿ

ವ್ಯಾಖ್ಯಾನಗಳ ಗುಂಗಿನಲ್ಲಿ ಉಳಿಯುತ್ತಾರೆ. ವಿಷಯದ ಬಗೆಗಿನ ಜ್ಞಾನ ಲಭ್ಯವಾದ ಮೇಲೆ ಹೊಸ ಕ್ರಿಯೆ ಯಾವುದೂ ತೋರಿಬರುವುದಿಲ್ಲ. ಅದೇ ಭಗವದ್ಗೀತೆಯ ಎರಡನೆ ಅಧ್ಯಾಯದ ಮೇಲೆ ಅದೇ ಪ್ರವಚನ; ಅದನ್ನು ಅದೆಷ್ಟು ಬಾರಿ ಕೇಳಿದರೂ ಸಾಲದು. ಹತ್ತು ಬಾರಿ ಕೇಳಿದ ನಂತರವೂ ವ್ಯಕ್ತಿಯ ಗುಣಗಳಲ್ಲಿ ಹಾಗೂ ಕ್ರಿಯೆಯಲ್ಲಿ ಬದಲಾವಣೆಯಿಲ್ಲ! ತನ್ನನ್ನು ಹಾಗೂ ತನ್ನ ಸುತ್ತಣ ವಿಶ್ವವನ್ನು ಕಿಂಚಿತ್ತಾದರೂ ಬದಲಾಯಿಸದ ತತ್ತ್ವಜ್ಞಾನ ನಿಜಾರ್ಥದಲ್ಲಿ ಆ ಹೆಸರಿಗೆ ಯೋಗ್ಯವಲ್ಲವೆಂದು ಏಂಗೆಲ್ಸ್ ಖಂಡಿತವಾದಿಯಾಗಿ ನುಡಿಯುತ್ತಾರೆ. ಹೀಗೆ ಬದಲಾವಣೆಗೆ ಸಾಧನವಾಗಬೇಕಾದರೆ ಭಾವನೆಗಳು ವಾಸ್ತವಿಕ ಅವಲೋಕನ-ಪರಾಮರ್ಶೆಗಳಿಂದ ಮಾತ್ರವೇ ಮೂಡಿಬಂದಿರಬೇಕು. ಇಲ್ಲದ ಜಗತ್ತಿನ ಅಥವಾ ಕಾಲ್ಪನಿಕ ಜಗತ್ತಿನ ಪ್ರಮೇಯಗಳನ್ನು ಎಷ್ಟು ಸಾರವತ್ತಾಗಿ ಗ್ರಹಿಸಹೊರಟರೂ ಅದು ಮಾತಿನ ಶಾಸ್ತ್ರವಾಗುತ್ತದೆಯೇ ಹೊರತು ತತ್ತ್ವಶಾಸ್ತ್ರವಾಗುವುದಿಲ್ಲ. ಅನುಭವ ಮತ್ತು ಆಚರಣೆಗಳು ಯಾವುದೇ ತತ್ತ್ವದ ಸತ್ಯಾಸತ್ಯತೆಗೆ ಒರೆಗಲ್ಲಾಗುತ್ತದೆ. ನೀರು ಕುಡಿದರೆ ಬಾಯಾರಿಕೆ ಇಂಗುವುದೇ ಎಂಬ ಪ್ರಶ್ನೆಯನ್ನು ಎಷ್ಟು ವಿಧವಾಗಿ ಚರ್ಚಿಸಿದರೂ ಅದಕ್ಕೆ ನಿಖರವಾದ ಉತ್ತರ ದೊರೆಯುವುದು ಆಚರಣೆಯಲ್ಲಿ. ಅಥವಾ, ಒಂದು ದೇವಮಂದಿರದ ನಿರ್ಮಾಣದಿಂದ ದೇಶವೊಂದರ ಸಾಮಾಜಿಕ-ಸಾಂಸ್ಕೃತಿಕ ಸಮಸ್ಯೆಗಳು ಪರಿಹಾರವಾಗುತ್ತವೆಯೇ, ಇಲ್ಲವೇ, ಎಂಬುದು ತೀರ್ಮಾನವಾಗುವುದು ಆಚರಣೆಯಲ್ಲಿ; ಘೋಷಣೆಯಲ್ಲಲ್ಲ. ವಾಸ್ತವ ಪ್ರಪಂಚದ ಮೂರ್ತ ವಿಶ್ಲೇಷಣೆ ಈ ಕಾರಣದಿಂದ ತತ್ತ್ವಶಾಸ್ತ್ರದಲ್ಲಿ ಆದ್ಯತೆ ಹೊಂದಬೇಕು. ಜೀವನ ಮತ್ತು ಜನದಿಂದ ದೂರ ನಿಂತು ಅಮೂರ್ತವಾದ ಚಿಂತನಾ ಲಹರಿಗಳಲ್ಲಿ ಮುಳುಗುವುದು ಸ್ವಾರಸ್ಯಕರ ಹಾಗೂ ಆನಂದದಾಯಕ ಚಟುವಟಿಕೆ ಇರಬಹುದು, ಆದರೆ ಅದಕ್ಕೆ ತತ್ತ್ವಶಾಸ್ತ್ರವೆಂಬ ಮಾನ್ಯತೆ ದೊರಕದು.

ಈ ತತ್ತ್ವಶಾಸ್ತ್ರವು ಭೌತವಾದವೆಂಬ ಹೆಸರನ್ನು ಪಡೆದಿದೆ. "ಸದೇವ (=ಸತ್ ಏವ) ಸೋಮ್ಯ ಇದಮಗ್ರ (=ಇದಂ ಅಗ್ರೇ) ಆಸೀತ್ " ಎಂಬ ಛಾಂದೋಗ್ಯ ಉಪನಿಷತ್ತಿನ ವಾಕ್ಯವು ಭೌತವಾದದ ಮೂಲಗ್ರಹಿಕೆಯನ್ನು ಪ್ರತಿಫಲಿಸುತ್ತದೆ. ಆರಂಭದಲ್ಲಿ ಇದ್ದುದು ಒಂದೇ, ಅದು 'ಸತ್'. ಆಮೇಲೆ ಅದು ಬಹುವಾಗಿ ಪರಿಣಮಿಸಿತು (ತದೈಕ್ಷತ ಬಹು ಸ್ಯಾಂ ಪ್ರಜಾಯೇಯ). ಹಾಗೆ ಬಹುವಾಗಿ ವರ್ಧಿಸಲು 'ಇಚ್ಛಿಸಿತು' (ಐಕ್ಷತ) ಎಂದು ಇರುವುದರಿಂದ ಆ 'ಸತ್' ಎಂಬುದು ಭೌತದ್ರವ್ಯವಾಗಿರಲಾರದೆಂದು ಉಪನಿಷತ್ತಿನ ವಾಕ್ಯಕ್ಕೆ ಅರ್ಥ ನೀಡಲಾಗುತ್ತದೆ. ಬ್ರಹ್ಮಸೂತ್ರದಲ್ಲಿ ಪ್ರಕರಣ ಭಾಗವಾದನಂತರ ಮೊಟ್ಟಮೊದಲು ಚರ್ಚೆಗೆ ಬಂದಿರುವುದು ಇದೇ. (ಈಕ್ಷತೇಃ ನ ಅಶಬ್ದಮ್). 'ಸತ್' ಎಂಬುದು ಭೌತದ್ರವ್ಯವೇಕಲ್ಲ ಎಂಬುದಕ್ಕೆ ಉತ್ತರ "ಅದು ವೇದಾರ್ಥವಲ್ಲ" ಎಂಬುದು. ಹಾಗೆ ವಾದಿಸುವುದು ತರ್ಕದ ನೆಲೆಯಲ್ಲಿ ನಿಂತು ಅಲ್ಲ; ಬದಲಾಗಿ, ಪ್ರಶ್ನಾರ್ಹವಲ್ಲವೆನ್ನಲಾದ ವೇದಪ್ರಾಮಾಣ್ಯದ ನೆಲೆಯಲ್ಲಿ ನಿಂತು. ಆದಾಗ್ಯೂ ಭಾರತೀಯ ದಾರ್ಶನಿಕ ಪರಂಪರೆಯಲ್ಲಿ ಸಾಂಖ್ಯ, ವೈಶೇಷಿಕ, ಬೌದ್ಧ, ಲೋಕಾಯತ, ನ್ಯಾಯ ಮುಂತಾದ ಪ್ರಣಾಲಿಕೆಗಳು

ಭೌತವಾದದ ಪ್ರಕ್ರಿಯೆಯನ್ನು ಅಂಗೀಕರಿಸಿರುವುದು ಸ್ಪಷ್ಟವಾಗಿದೆ. "ವಸ್ತುನಿಷ್ಠವಾದ ಅಸ್ತಿತ್ವವು ವೈಯ್ಯಕ್ತಿಕ ಪ್ರಜ್ಞೆಯಿಂದ ಸ್ವತಂತ್ರವಾಗಿದೆ" ಎಂಬುದು ಭೌತವಾದದ ಮುಖ್ಯ ಸೂತ್ರ. ಅಂದರೆ, ಯಾವುದೇ ವಸ್ತುವಿನ ಇರುವಿಕೆಯು 'ಅದು ಇದೆ' ಎಂದು ತಿಳಿಯುವ ವ್ಯಕ್ತಿಯ ಪ್ರಜ್ಞೆಯನ್ನು ಆಧರಿಸಿಲ್ಲ; ಅದನ್ನು ನಾವು ತಿಳಿಯಲಿ, ಬಿಡಲಿ, ಅದಂತೂ ಇರುತ್ತದೆ. "ವಿಶ್ವವೆಂಬುದೊಂದು ಇದೆಯೆಂದು ತಿಳಿಯುವಂತಹ ವ್ಯಕ್ತಿ ಅಸ್ತಿತ್ವಕ್ಕೆ ಬರುವ ಮೊದಲೇ ವಿಶ್ವವು ಇದ್ದಿತು" ಎಂಬ ಲೆನಿನ್ನರ ಮಾತು ಇದನ್ನೇ ವಿವರಿಸಿ ಹೇಳುತ್ತದೆ. ಅಂದರೆ, ವಿಶ್ವದ ಅಸ್ತಿತ್ವವು ವ್ಯಕ್ತಿಯ ಪ್ರಜ್ಞೆಯು ಆರೋಪಿಸಿದ ಕಾರಣದಿಂದ ಅಸ್ತಿತ್ವವನ್ನು ಪಡೆಯುವಂತಹ ಘಟಕವಲ್ಲ. ಹೇಗೂ ಅದಕ್ಕೆ ಸ್ವತಂತ್ರ ಅಸ್ತಿತ್ವವಿದೆ; ಪ್ರಜ್ಞೆಯು ಅದನ್ನು ಗ್ರಹಿಸಲು ಅಡ್ಡಿಯಿಲ್ಲ. ನಾನು ಗ್ರಹಿಸಲಿಲ್ಲವೆಂದ ಮಾತ್ರಕ್ಕೆ ಅದಿಲ್ಲವೆಂದು ಭಾವಿಸಲಾಗದು. ಹಾಗೆ ಭಾವಿಸಿದರೆ ಸ್ಥೂಲವಾದ ಅರ್ಥದಲ್ಲಿ ಅದು ತತ್ತ್ವಶಾಸ್ತ್ರದ ದೃಷ್ಟಿಯಿಂದ "ಭಾವನಾವಾದ" ಎನಿಸಿಕೊಳ್ಳುತ್ತದೆ.

ಏಂಗೆಲ್ಸ್ ಮತ್ತು ಮಾರ್ಕ್ಸ್ ಭೌತವಾದದ ಆದ್ಯ ಪ್ರವರ್ತಕರೇನೂ ಅಲ್ಲ. ಪೌರ್ವಾತ್ಯ ಮತ್ತು ಪಾಶ್ಚಾತ್ಯ ದರ್ಶನಗಳೆರಡರಲ್ಲೂ ಈ ತತ್ತ್ವಶಾಸ್ತ್ರ ಪ್ರಣಾಲಿಕೆಯು ಬಹುಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ. ಏಂಗೆಲ್ಸ್‌ಗೆ ಮುನ್ನ ಹೆಗೆಲ್‌ರಂತಹ ಚಿಂತಕರ ಕಾಣಿಕೆ ಏನಿತ್ತೆಂಬುದನ್ನು ಈಗಾಗಲೆ ನೋಡಿದ್ದೇವೆ. ಭೌತವಾದೀ ವಿವರಣೆಗೆ ಹೆಗೆಲ್ ಅನುಸರಿಸಿದ್ದ ಗತಿತಾರ್ಕಿಕ ಪದ್ಧತಿಯನ್ನು ಅಳವಡಿಸಿದ್ದು ಏಂಗೆಲ್ಸ್ ಮತ್ತು ಮಾರ್ಕ್ಸ್. ಅದನ್ನವರು "ಗತಿತಾರ್ಕಿಕ ಭೌತವಾದ" ಎಂದು ಕರೆದರು. "ದ್ವಂದ್ವಮಾನ ಭೌತಿಕವಾದ" ಎಂದು ಕರೆಯುವ ಪದ್ಧತಿಯೂ ಇದೆ. ಈ ಗತಿತಾರ್ಕಿಕತೆಯ ಹೊನಲು ಭಾರತೀಯ ದಾರ್ಶನಿಕ ಪರಂಪರೆಯಲ್ಲಿ ಲಭ್ಯವಿದೆ. ಅದನ್ನು ವಿಶೇಷವಾಗಿ ಮಾನ್ಯಮಾಡಿದ್ದು ಬೌದ್ಧ ದರ್ಶನ. 'ಗತಿತಾರ್ಕಿಕ' ಎಂಬುದನ್ನು ಆಂಗ್ಲಭಾಷೆಯಲ್ಲಿ 'ಡಯಲೆಕ್ಟಿಕಲ್' ಎನ್ನಲಾಗುತ್ತದೆ. ಪ್ರಕೃತಿ ಗೋಚರವನ್ನು ನೋಡುವ ಮತ್ತು ಅಭ್ಯಸಿಸುವ ವಿಧಾನವನ್ನು ಇದು ಸೂಚಿಸುತ್ತದೆ; ಅದೇ ಪ್ರಕೃತಿಗೋಚರದ ಅರ್ಥೈಸುವಿಕೆ ಅಥವಾ ಸಿದ್ಧಾಂತವನ್ನು ಭೌತವಾದವು ಸೂಚಿಸುತ್ತದೆ. ಸಾಮಾಜಿಕ ಜೀವನದ ವಿಕಾಸವನ್ನು ತಿಳಿಯಲು ಅದನ್ನು ಅಳವಡಿಸಿಕೊಂಡಾಗ ಅದು 'ಚಾರಿತ್ರಿಕ ಭೌತವಾದ' ಎನಿಸಿಕೊಳ್ಳುತ್ತದೆ. "ಡಯಲೆಕ್ಟಿಕ್ಸ್" ಎಂದರೆ ತರ್ಕ ಹೂಡುವುದು, ವಾಕ್ಯಾರ್ಥ ನಡೆಸುವುದು ಎಂದರ್ಥ. ಗ್ರೀಕ್ ಭಾಷೆಯಲ್ಲಿ 'ಡಯಲೆಗೋ' ಎಂಬ ಶಬ್ದದ ಅರ್ಥವ್ಯಾಪ್ತಿ ಇದೇ ಆಗಿದೆ. ಅದರಿಂದ ಉತ್ಪನ್ನವಾಗಿರುವ ಪದ "ಡಯಲೆಕ್ಟಿಕ್ಸ್". ತರ್ಕದ ಕ್ರಮ ಎಂಬಂತೆ ಪರಸ್ಪರ ಸಂಬಂಧವನ್ನು ಹೊಂದಿರುವುದಕ್ಕೆ 'ಗತಿತಾರ್ಕಿಕ' ಎನ್ನಬಹುದು. ಅದರಲ್ಲಿ ಸದಾ ಕ್ರಮಿಸುತ್ತಿರುವ ಗತಿ ಅಥವಾ ಬೆಳವಣಿಗೆ ಮೂಲ ಲಕ್ಷಣವಾಗಿರುತ್ತದೆ. ಉದಾಹರಣೆಗೆ, ಪ್ರಕೃತಿಯಲ್ಲಿ ಸದಾ ಚಲನೆ ಇರುತ್ತದೆ. ಆ ಚಲನೆಯು ಹೊರಗಿನ ಯಾವುದೋ ಶಕ್ತಿಯಿಂದ ಪ್ರಚೋದಿತವಾಗಿರುವುದಲ್ಲ. ಅದು ಆಂತರಿಕ ವೈರುಧ್ಯದಿಂದ ಉಂಟಾಗುವ ಪರಿಣಾಮ. ಅದನ್ನೇ ಬೇಕಾದರೆ 'ಸ್ವಭಾವಜನ್ಯ' ಎನ್ನಬಹುದು.

ಪ್ರಕೃತಿಗೋಚರದಲ್ಲಿ ಯಾವೊಂದು ಅಂಶವನ್ನೂ ಸಂಪೂರ್ಣವಾಗಿ ಪ್ರತ್ಯೇಕಿಸಿ ಅರ್ಥೈಸಲಾಗುವುದಿಲ್ಲ. ಅಲ್ಲಿಯ ಅಂಶಗಳು ನಿರಂತರವಾಗಿ ಪರಸ್ಪರ ಸಂಬಂಧ ಉಳ್ಳವು, ಪರಸ್ಪರ ಪ್ರಭಾವ ಉಳ್ಳವು. ಆದ್ದರಿಂದ ಈ ಪಾರಸ್ಪರಿಕತೆಯನ್ನು ನಿರ್ಲಕ್ಷಿಸಿ ಪ್ರಕೃತಿಯನ್ನು ತಿಳಿಯುವ ಸಾಹಸ ನಿರರ್ಥಕವಾಗುತ್ತದೆ. ಅದನ್ನು ತಿಳಿಯಲು ಅದರಲ್ಲಿ ಅವಿನಾಭಾವ ಸಂಬಂಧವಾಗಿ ಕೂಡಿಕೊಂಡಿರುವ ಗತಿ ಅಥವಾ ಚಲನೆಯನ್ನು ಗಮನಿಸಿಯೇ ಮುಂದುವರಿಯಬೇಕು. ಇದನ್ನೇ ಬೇರೊಂದು ರೀತಿಯಲ್ಲಿ ಹೇಳುವುದಾದರೆ, ಸಮಾಜವು ಯಾವೊಂದು ಘಟ್ಟದಲ್ಲೂ ಪೂರ್ತಿಯಾಗಿ ಸ್ಥಗಿತವಾಗಿರುವುದಿಲ್ಲ. ನಾವು ಗಮನಿಸಲಿ, ಬಿಡಲಿ, ಅದರಲ್ಲಿ ಚಲನೆ ಅನಿವಾರ್ಯವಾದ ಒಂದು ಲಕ್ಷಣವಾಗಿರುತ್ತದೆ. ಆದ್ದರಿಂದ ಸಮಾಜವನ್ನು ತಿಳಿಯುವುದೆಂದರೆ ಈ ಚಲನೆಯು ಅಂತರ್ಗತವಾಗಿರುವ ಸಮಾಜವನ್ನು ತಿಳಿಯುವುದು ಎಂದರ್ಥ. ಏಂಗೆಲ್ಸ್ ಹೇಳುವಂತೆ, "ಅತಿಚಿಕ್ಕ ಪದಾರ್ಥದಿಂದ ಹಿಡಿದು ಅತಿದೊಡ್ಡ ಪದಾರ್ಥದವರೆಗೆ, ಒಂದು ಮರಳಿನ ಕಣದಿಂದ ಹಿಡಿದು ಸೂರ್ಯನವರೆಗೆ, ಒಂದು ಮೂಲ ಜೀವಕೋಶದಿಂದ ಹಿಡಿದು ಮನುಷ್ಯನವರೆಗೆ, ಪ್ರಕೃತಿಯಲ್ಲಿ ಸದಾ ಎಲ್ಲವೂ ಹೊಮ್ಮುತ್ತಿರುತ್ತದೆ, ನಷ್ಟವಾಗುತ್ತಿರುತ್ತದೆ. ಇದು ಪ್ರಕೃತಿಯ ಅವಿರತವಾದ ಚಲನೆ ಮತ್ತು ಬದಲಾವಣೆಯ ಲಕ್ಷಣ." ಈ ಕಾರಣದಿಂದಾಗಿ "ಗತಿತಾರ್ಕಿಕತೆಯು ಪದಾರ್ಥಗಳನ್ನು ಮತ್ತು ಅವುಗಳ ಗಮನೀಯ ರೂಪಗಳನ್ನು ಗ್ರಹಿಸುವಾಗ ಆ ಪದಾರ್ಥಗಳ ಅಂತಸ್ಸಬಂಧಗಳನ್ನು, ಚಲನೆಯನ್ನು, ಗಣನೆಗೆ ತೆಗೆದುಕೊಳ್ಳುತ್ತದೆ." ಎಲ್ಲವೂ ಒಂದು ಕ್ಷಣ ಅಥವಾ ಕೆಲವು ಕ್ಷಣಗಳ ಕಾಲ ಸ್ತಬ್ಧವಾಗಿದೆಯೆಂಬಂತೆ ಗ್ರಹಿಸುವುದು ಯಾವುದೇ ಪದಾರ್ಥದ ಅರ್ಥೈಸುವಿಕೆಗೆ ಪೂರಕವಾದ ಸಾಧನವಾಗುವುದಿಲ್ಲ.

ಮಾರಿಸ್ ಕಾರ್ನ್‌ಫೋರ್ತ್ ಕೊಟ್ಟಿರುವ ಒಂದು ಉದಾಹರಣೆಯ ಸಹಾಯದಿಂದ ಇದನ್ನು ಇನ್ನೂ ಚೆನ್ನಾಗಿ ತಿಳಿಯಬಹುದು. ಅವನು ಆಯ್ದುಕೊಂಡ ಒಂದು ಉದಾಹರಣೆ ಸಿಡಿಲು-ಗುಡುಗು ಸಮೇತವಾದ ಮಳೆ. ಅದು ಉಂಟಾಗುವುದು ಹೇಗೆ? ಭಾವನಾವಾದಿಯದು ಸರಳ ಉತ್ತರ: ದೈವದ ಕೋಪದ ಫಲ ಅದು, ಎಂದು. (ದೇವರಿಗೂ ಕೋಪ ಉಂಟೆ, ಈ ಸಂದರ್ಭದಲ್ಲಿ ಏಕೆ ಕೋಪ ಉಂಟಾಯಿತು, ಕೋಪವನ್ನು ಈ ರೀತಿಯಲ್ಲೇ ಪ್ರಕಟಿಸುವುದು ಏಕೆ, ಮುಂತಾದ ಪ್ರಶ್ನೆಗಳು ಹಾಗೆಯೇ ಉಳಿದುಬಿಡುತ್ತವೆಂಬುದು ಬೇರೆ ವಿಷಯ). ಭೌತವಾದಿಯು ಅದನ್ನು ವಿವರಿಸಲು ಪ್ರಕೃತಿಯ ವೈವಿಧ್ಯಮಯವಾದ ಶಕ್ತಿಗಳತ್ತ ಬೊಟ್ಟುಮಾಡಬೇಕಾಗುತ್ತದೆ. ಮೋಡದಲ್ಲಿರುವ ಭೌತ ಕಣಗಳು ಒಂದಕ್ಕೊಂದು ಅಪ್ಪಳಿಸುವುದರಿಂದ ಹಾಗೆ ಆಗುತ್ತದೆಂದು ಹಿಂದಿನ ಭೌತವಾದಿಗಳು ಹೇಳುತ್ತಿದ್ದರು. ಅವರ ಉತ್ತರ ಸರಿಯೇ ಎಂಬುದು ಮುಖ್ಯವಲ್ಲ; ಅವರು ಅನುಸರಿಸಿದ ವಿಧಾನ ಭಾವನಾವಾದಿಗಳ ವಿಧಾನದಿಂದ ಭಿನ್ನವಾದುದು, ಭೌತವಸ್ತುವಿನಲ್ಲೇ ಕಾರಣವನ್ನು ಅರಸುವಂಥದು. ಅಂದಿನ ಅವರ ಜ್ಞಾನಕ್ಕಿಂತಲೂ ಮುಂದೆ ಸಾಗಿರುವ ಇಂದಿನ ಜ್ಞಾನ ಇನ್ನಷ್ಟು ನಿಖರವಾದ ಉತ್ತರ ನೀಡಬಹುದು. ಆದರೆ ಅದೂ ಭೌತವಸ್ತುವಿನಲ್ಲೇ ಉತ್ತರ ಕಾಣುವ ಪ್ರಯತ್ನವಾಗಿರುತ್ತದೆ.

ಹಾಗಿದ್ದರೆ, ಸಂಪೂರ್ಣ ನಿಖರತೆ ಯಾವಾಗ ಪ್ರಾಪ್ತವಾಗುತ್ತದೆ? ಗತಿತಾರ್ಕಿಕ ಪದ್ಧತಿಯಲ್ಲಿ ಇದೊಂದು ಮಹತ್ವದ ವಿಷಯ. ಜ್ಞಾನವೆಂಬುದು ಯಾವೊಂದು ಘಟ್ಟದಲ್ಲೂ ಕೊನೆಯನ್ನು ಮುಟ್ಟುವುದಿಲ್ಲ, ಪರಿಪೂರ್ಣವೆನಿಸಿಕೊಳ್ಳುವುದಿಲ್ಲ. ಒಂದು ಪ್ರಶ್ನೆಗೆ ಉತ್ತರ ದೊರೆತರೆ, ಅದೇ ಉತ್ತರದ ಜೊತೆ ಹತ್ತು ಹೊಸ ಪ್ರಶ್ನೆಗಳು ಹುಟ್ಟಬಹುದು. ಹೀಗೆಯೇ ಮುಂದುವರಿಯುತ್ತಿರುವುದು ಜ್ಞಾನಮೀಮಾಂಸೆಯ ಪ್ರಧಾನ ಗುಣ. "ನಮಗೆ ತಿಳಿದಿಲ್ಲದಿರುವುದು ಸಾವಿರಾರು ಇವೆ; ಆದರೆ ಎಂದಿಗೂ ತಿಳಿಯಲಾಗದ್ದು ಎಂಬ ವಿಭಾಗವಿಲ್ಲ," ಎನ್ನುತ್ತಾರೆ ಲೆನಿನ್.

ಮೇಲೆ ಉದಾಹರಿಸಿದ ಸಿಡಿಲು-ಗುಡುಗು ಸಮೇತವಾದ ಮಳೆಯ ಸಂದರ್ಭದಲ್ಲಿ ನೀಡಲಾಗುವ ಭೌತವಾದಿ ವಿವರಣೆಯನ್ನು ಅಲ್ಲಗಳೆಯುವವರು ಸ್ವಲ್ಪ ವಿರಳ. ಆದರೆ ಸಾಮಾಜಿಕ ಸನ್ನಿವೇಶವೊಂದಕ್ಕೆ ಅಂಥದೇ ವಿವರಣೆ ನೀಡಿದರೆ ಹುಬ್ಬುಗಂಟಿಕ್ಕಿಕೊಳ್ಳುವವರು ವಿರಳವಲ್ಲ. ಉದಾಹರಣೆಗೆ, ಶ್ರೀಮಂತರು-ಬಡವರು ಏಕಿದ್ದಾರೆ? ಇಲ್ಲೂ ಭಾವನಾವಾದಿಗಳ ಉತ್ತರ ಸರಳವೇ: ದೈವೇಚ್ಛೆ ಹಾಗಿದೆ! (ಮತ್ತೆ, ದೇವರು ಹಾಗೇಕೆ ಇಚ್ಛಿಸಿದ ಅಥವಾ ಇಚ್ಛಿಸಿದಳು ಎಂದು ಪ್ರಶ್ನೆ ಹಾಕಿದರೆ ಕಡೆಗೆ ರಾಮಾನುಜಾಚಾರ್ಯರಂತೆ ಅದು ದೇವರ ಲೀಲೆ ಎನ್ನಬೇಕಾಗುತ್ತದೆ. ಅದೆಂತಹ ಆಟದ ಲಾಲಸೆ ಆ ದೇವರದು! 'ಇಚ್ಛೆ' ಎಂಬುದನ್ನು ತೆಗೆದು 'ಲೀಲೆ' ಎಂದು ಸೇರಿಸಿದರೆ ಅಗಾಧವಾದ ವ್ಯತ್ಯಾಸವೇನೂ ಇಲ್ಲವೆಂಬುದಂತೂ ನಿಜ). ದೇವರನ್ನು ಬಿಟ್ಟು ಬೇರೆ ವಿವರಣೆಗಳನ್ನೂ ನೀಡಬಹುದು: ಕೆಲವರು ದೂರದರ್ಶಿಗಳು, ಅವರು ತಮ್ಮ ಸಂಪನ್ಮೂಲಗಳನ್ನು ಅಚ್ಚುಕಟ್ಟಾಗಿ ರೂಢಿಸಿಕೊಳ್ಳುತ್ತಾರೆ; ಅಥವಾ, ಇದೆಲ್ಲಾ 'ಮಾನವ ಸ್ವಭಾವ'; ಆದ್ದರಿಂದ ಬಡವ-ಬಲ್ಲಿದನೆಂಬ ಭೇದ ಇದ್ದೇ ತೀರುತ್ತದೆ, ಇತ್ಯಾದಿ. ಇದಕ್ಕೆ ಪ್ರತಿಯಾಗಿ ಭೌತವಾದಿ ವಿವರಣೆಯು ಸಾಮಾಜಿಕ ಜೀವನದ ಭೌತಿಕ, ಆರ್ಥಿಕ ಸನ್ನಿವೇಶಗಳನ್ನು ಗುರುತಿಸುತ್ತದೆ. (ಈ ಸನ್ನಿವೇಶವು ಸ್ಥಗಿತವಾದುದಲ್ಲ ಎಂಬ ಗ್ರಹಿಕೆಯನ್ನು ಮರೆಯಬಾರದು). ಜೀವನಕ್ಕೆ ಬೇಕಾದ ಭೌತಿಕ ಸಾಧನಗಳ ಉತ್ಪಾದನೆಯು ಒಂದೊಂದು ಹಂತದಲ್ಲಿ ಒಂದೊಂದು ತೆರನಾದುದು. ಅಂತಹ ಉತ್ಪಾದನೆಯ ವ್ಯವಸ್ಥೆಯನ್ನು ಅಲಕ್ಷಿಸಿ ಸಾಮಾಜಿಕ ಭೇದವನ್ನು ಅರ್ಥೈಸಲಾಗುವುದಿಲ್ಲ. ಉದಾಹರಣೆಗೆ, ಭೂಮಿಯ ಒಡೆತನ, ಅದರಿಂದ ಉದ್ಭವಿಸುವ ಸಂಬಂಧಗಳು, ಕೆಲವರಿಗೆ ಲಭಿಸುವ ಸೌಲಭ್ಯ ಮತ್ತು ಅದರಿಂದ ವಂಚಿತರಾಗಬೇಕಾದ ಇತರರು, ಇತ್ಯಾದಿ. ಇವು ಯಾವುವೂ ಬದಲಾಗದಂತಹ 'ಮಾನವ ಸ್ವಭಾವ'ಗಳಲ್ಲ; ಏಕೆಂದರೆ, ಸಮಾಜವು ಸ್ಥಗಿತವಾದ ಘಟಕವಲ್ಲ, ಅದು ಗತಿಲಕ್ಷಣ ಉಳ್ಳದ್ದು.

ಭಾರಿ ಮಳೆಯಿಂದ ರಕ್ಷಣೆ ಪಡೆಯುವ ವಿಧಾನವನ್ನು ಆಯಾಕಾಲದ ಜ್ಞಾನವು ಒದಗಿಸಿಕೊಡುತ್ತದೆ. ಅದು ಅಸಮರ್ಪಕವಿರಬಹುದು, ಆದರೆ ಸಮರ್ಪಕತೆಯತ್ತ ನಮ್ಮನ್ನು ಕೊಂಡೊಯ್ಯುತ್ತದೆ. ಅಂದರೆ, ಸಮರ್ಪಕತೆ ಎಂಬುದು ಕೂಡ ಒಂದು ನಿರ್ದಿಷ್ಟ ಸ್ವರೂಪದ್ದಲ್ಲ; ಅದರಲ್ಲೂ ಮೆಟ್ಟಿಲುಗಳಿವೆ. ನಾವು ಯಾವ ಮೆಟ್ಟಿಲಿನ ಮೇಲಿದ್ದೇವೆಂಬುದನ್ನು

ಆ ಮೆಟ್ಟಿಲಿಗೆ ಸಂವಾದಿಯಾದ ಜ್ಞಾನ ಮತ್ತು ಕ್ರಿಯೆ ನಿರ್ಧರಿಸುತ್ತವೆ. ಜ್ಞಾನವಿಲ್ಲದೆ ಮಧ್ಯಪ್ರವೇಶ ಮಾಡಿ ಬದಲಾವಣೆ ತರಲು ಸಾಧ್ಯವಿಲ್ಲ; ಆದರೆ ಜ್ಞಾನವು ಲಭ್ಯವಾಗಿರುವಾಗಲೆಲ್ಲಾ ಅದರ ಪ್ರಯೋಜನ ಸರ್ವಾಂಗೀಣವಾಗಿ ಹರಡಿಕೊಂಡಿರುತ್ತದೆಂದು ಹೇಳಲಾಗುವುದಿಲ್ಲ. ಉದಾಹರಣೆಗೆ, ಜ್ವರ-ಕೆಮ್ಮು ಮೊದಲಾದ ಕಾಯಿಲೆಗಳಿಗೆ ಔಷಧ ತಿಳಿದಿದೆ; ಆದರೆ ಜ್ವರದಿಂದ ನರಳುವ ಮಕ್ಕಳಿಗೆಲ್ಲಾ ಆ ಔಷಧ ದೊರೆಯುವುದಿಲ್ಲ. ಅಂತಹ ಎಷ್ಟೋ ಮಕ್ಕಳ ಅಜ್ಜಿಯರು ಇನ್ನೂ ಬೇವಿನಸೊಪ್ಪಿನ ಮಂತ್ರಕ್ಕೆ ಜೋತುಬಿದ್ದಿದ್ದಾರೆ. ಏಕೆಂದರೆ, ವೈದ್ಯರ ಬಳಿ ಹೋಗಲು ಅವರಲ್ಲಿ ಕಾಸಿಲ್ಲ ಮತ್ತು ಕಾಸಿಲ್ಲದ ಅಜ್ಜಿಯರನ್ನು ಮಾತನಾಡಿಸುವ ಸೌಜನ್ಯ ಇರುವ ವೈದ್ಯರು ಬಹಳವಿಲ್ಲ. ಇದರ ಸಾರಾಂಶವೇನು? ಜ್ಞಾನದ ಬಲದಿಂದ ಮಧ್ಯಪ್ರವೇಶ ಮಾಡಿ ಯಾವುದಾದರೂ ಸಮಸ್ಯೆಗೆ ಪರಿಹಾರ ಪಡೆಯಲು ಕೇವಲ ವೈಯ್ಯಕ್ತಿಕ ಆಶಯ ಸಾಲದು; ಅದಕ್ಕೆ ಒಂದು ಯೋಜಿತ ವ್ಯವಸ್ಥೆ ಬೇಕು. ಜ್ಞಾನವನ್ನು ಬಾಂಬು ಮಾಡಲು ಬಳಸುವ ವ್ಯವಸ್ಥೆ ಅಷ್ಟೇ ಆಸ್ಥೆಯಿಂದ ರೋಗ ಗುಣಪಡಿಸಲು ಮುಂದಾಗದಿದ್ದರೆ ಅಂತಹ ವ್ಯವಸ್ಥೆಯಲ್ಲಿ ಏನೋ ಕೊಳಕು ತುಂಬಿದೆ ಎನ್ನುವುದು ಖಚಿತ. ಜ್ಞಾನದ ವರ್ಧನೆಗೆ ಸಮನಾಗಿ ಮಾನವ ಸಮುದಾಯದ ಹಿತವನ್ನು ಸರ್ವಾಂಗೀಣವಾಗಿ ಕಾಯ್ದುಕೊಳ್ಳುವಂತಹ ವ್ಯವಸ್ಥೆ ರೂಪಿತವಾಗಿಲ್ಲದಿರುವುದು ಲಾಭಾಕಾಂಕ್ಷೆಯ ಪರಿಣಾಮದ ಒಂದು ಮುಖ.

ಇದನ್ನೇ ಹಿಗ್ಗಿಸಿ ಹೇಳುವುದಾದರೆ ಸ್ವಾತಂತ್ರ್ಯದ ವಿಕಾಸಕ್ಕೆ ವ್ಯವಸ್ಥೆಯು ಕಡಿವಾಣವನ್ನು ಹಾಕುತ್ತದೆ; ಅದಕ್ಕೆ ಪರ್ಯಾಯವಾದ ವ್ಯವಸ್ಥೆಯು ಕಡಿವಾಣವನ್ನು ಸಡಿಲಿಸುವ ಸಾಮರ್ಥ್ಯ ಹೊಂದಿರುತ್ತದೆ. ಇದನ್ನು ಏಂಗೆಲ್ಸ್ ಸ್ವಾತಂತ್ರ್ಯದ ಲಕ್ಷಣವನ್ನು ಪ್ರತಿಪಾದಿಸುವಾಗ ಸೂಚಿಸಿದ್ದಾರೆ: "ಆಯಾ ಸಂದರ್ಭದ ಸಾಧ್ಯತೆಗಳನ್ನು ವಿಮರ್ಶಾತ್ಮಕವಾಗಿ ಗ್ರಹಿಸುವುದೇ ಸ್ವಾತಂತ್ರ್ಯ." ಸಾಧ್ಯತೆಗಳ ವಿಕಾಸವಾಗುವುದು ಉತ್ಪಾದನಾ ಸಾಧನೆಗಳ ವಿಕಾಸದಿಂದ, ವಿಸ್ತರಣೆಯಿಂದ ಮತ್ತು ಅವನ್ನು ಸಾರ್ವಜನಿಕಗೊಳಿಸುವುದರಿಂದ. ಆ ವಿಕಾಸದ ಸ್ವರೂಪ ಮತ್ತು ಹಾದಿಯನ್ನು ನಿರೂಪಿಸಲು ಏಂಗೆಲ್ಸ್ ರಾಜಕೀಯ ಆರ್ಥಿಕತೆಯ ಬಗ್ಗೆ ಚಿಂತನೆ ನಡೆಸಿದ್ದಾರೆ ಮತ್ತು ಈ ವಿಕಾಸವು ಹೇಗೆ ಸಮಾಜವನ್ನು ಸಮಾಜವಾದಿ ವ್ಯವಸ್ಥೆಯತ್ತ ಕೊಂಡೊಯ್ಯುತ್ತದೆ ಎಂಬುದನ್ನು ಚರ್ಚಿಸಿದ್ದಾರೆ.

ತತ್ತ್ವಶಾಸ್ತ್ರದ ದೃಷ್ಟಿಯಿಂದ ಸಾಮಾಜಿಕ ವಿಕಾಸದಲ್ಲಿ ಕೆಲವು ಅಬಾಧಿತ ನಿಯಮಗಳನ್ನು ಕಾಣಬಹುದೆಂದು ಏಂಗೆಲ್ಸ್ ಭಾವಿಸುತ್ತಾರೆ. ಅವುಗಳಲ್ಲಿ ಮೂರನ್ನು ಸ್ಥೂಲವಾಗಿ ಪರಿಚಯಿಸಿಕೊಳ್ಳುವುದು ಅವಶ್ಯಕ. ಅವು ಯಾವುವೆಂದರೆ, (ಅ) ವಿರೋಧ ಧರ್ಮಗಳ (ಧರ್ಮ ಎಂದರೆ ಸ್ವಭಾವ ಎಂಬರ್ಥದಲ್ಲಿ ಬಳಸಲಾಗಿದೆ) ಐಕ್ಯತೆ ಮತ್ತು ಸಂಘರ್ಷ, (ಆ) ಪರಿಮಾಣಾತ್ಮಕ ಬದಲಾವಣೆಯಿಂದ ಗುಣಾತ್ಮಕ ಬದಲಾವಣೆ ಉಂಟಾಗುವುದು, ಮತ್ತು (ಇ) ನಿಷೇಧದ ನಿಷೇಧದಿಂದ ಕ್ರಮೇಣ ಉನ್ನತ ಹಂತಗಳತ್ತ ಸಾಗುವುದು. ಇವನ್ನು ಗತಿತಾರ್ಕಿಕ ಭೌತವಾದದ ಮೂಲಭೂತ ಸೂತ್ರಗಳೆಂದು ಸ್ವೀಕರಿಸುವುದು ಸಾಮಾನ್ಯ ಪದ್ಧತಿಯಾಗಿದೆ ಮತ್ತು ಅದರ ಆದ್ಯನಿರೂಪಕ ಫ್ರೆಡರಿಕ್ ಏಂಗೆಲ್ಸ್.

ಇವನ್ನು ವಿವರಿಸುವಾಗ ಹಿನ್ನೆಲೆಯಾಗಿ ತತ್ತ್ವಶಾಸ್ತ್ರದ ಎರಡು ಮಾರ್ಗಗಳ ಪರಿಚಯ ಅಗತ್ಯವೆನಿಸುತ್ತದೆ. ಒಂದು ಮಾರ್ಗದಲ್ಲಿ ನಿಖರತೆ, ನಿಷ್ಕೃಷ್ಟತೆ ಅಥವಾ ಪೂರ್ಣತೆಗೆ ಪ್ರಾಧಾನ್ಯವಿದೆ. ಸರ್ವವ್ಯಾಪಿ ಸಾಮಾನ್ಯೀಕರಣವು ಇದರ ವಿಧಾನ. 'ಸತ್ಯ' ಎಂಬುದನ್ನು ಸ್ಥಿರವಾದ್ದು ಎಂಬ ರೀತಿಯಲ್ಲಿ ವ್ಯಾಖ್ಯಾನಿಸುವುದು ಇದರ ಪದ್ಧತಿ. ಇದಕ್ಕೆ ಭಿನ್ನವಾದ್ದು ಇನ್ನೊಂದು ಮಾರ್ಗ. ಅದರಲ್ಲಿ ಸಾಪೇಕ್ಷತೆಗೆ ಸ್ಥಾನವಿದೆ; ಆದ್ದರಿಂದ 'ಸತ್ಯ' ಎಂಬುದು ಕೂಡ ತ್ರಿಕಾಲಾಬಾಧಿತ ಎಂಬರ್ಥದಲ್ಲಿ ವ್ಯಾಖ್ಯಾನಿಸಲಾಗುವುದಿಲ್ಲ. ಒಂದು ಸರಳ ಉದಾಹರಣೆಯನ್ನು ನೋಡಬಹುದು: 'ಮಾನವ ಸ್ವಭಾವ' ಎಂದರೇನು? ಅದು ಹೀಗಿರುತ್ತದೆ ಯೆಂದು ಹೇಳುವಾಗ, ಯಾವ ಸಂದರ್ಭದಲ್ಲಿ ಹಾಗಿರುತ್ತದೆ ಮತ್ತು ಬದಲಾದ ಸಂದರ್ಭ ದಲ್ಲಿಯೂ ಹಾಗೆಯೇ ಇರುತ್ತದೆಯೇ, ಎಂಬ ಪ್ರಶ್ನೆಗಳನ್ನು ತಳ್ಳಿಹಾಕುವಂತಿಲ್ಲ. ಆದರೂ ಸಾಮಾನ್ಯೀಕರಿಸುವ ಪ್ರವೃತ್ತಿಯನ್ನು ನಾವು ವ್ಯಾಪಕವಾಗಿ ಕಾಣುತ್ತೇವೆ ಮತ್ತು ಅದು ತತ್ತ್ವಶಾಸ್ತ್ರದ ಪರಿಧಿಯಲ್ಲೂ ಕಾಣಸಿಗುತ್ತದೆ. ಇದು ಸರ್ವಥಾ ಅಮಾನ್ಯವೆಂಬುದು ಮಾನವ ಶಾಸ್ತ್ರದ ಅಧ್ಯಯನ ಮಾಡಿದವರಿಗೆಲ್ಲಾ ತಿಳಿದಿದೆ. ಬುಡಕಟ್ಟು ಜನಾಂಗದ ಜೀವಿಯ ಸ್ವಭಾವವು ಗುಲಾಮಿ ಪದ್ಧತಿಯಲ್ಲಿ ಜೀವಿಸುವವರ ಸ್ವಭಾವದಂತಿರುವುದಿಲ್ಲ. ಅಂತಹ ಹಲವು ಬೇರೆ ಪ್ರಭೇದಗಳನ್ನು ಗುರುತಿಸಲು ಸಾಧ್ಯವಿದೆ. ಅಷ್ಟೇಕೆ, ಒಂದೇ ಕಾಲದಲ್ಲಿ ಕೂಡ ಈ ಸ್ವಭಾವವೆಂಬುದು ಸಾರ್ವತ್ರಿಕವಲ್ಲ. ಸಂಸ್ಕೃತದ ಒಂದು ಶ್ಲೋಕದಲ್ಲಿ ಹೀಗೆ ಹೇಳಲಾಗಿದೆ: "ಆಹಾರ ಕಂಡಾಗ ಒಂದು ಕಾಗೆಯು ಇನ್ನೊಂದು ಕಾಗೆಯನ್ನು ಕೂಗಿ ಕರೆಯುತ್ತದೆ, ಆದರೆ ಒಬ್ಬ ಯಾಚಕನು ಇನ್ನೊಬ್ಬ ಯಾಚಕನನ್ನು ಕರೆಯುವುದಿಲ್ಲ. ಕಾಕ-ಯಾಚಕರ ನಡುವೆ ಕಾಗೆಯೇ ಉತ್ತಮ." ಇದು ಮಾನವರಲ್ಲಿ ಒಂದು ಗುಂಪಾದ ಯಾಚಕರ ಸ್ವಭಾವವನ್ನು ಹೇಳುತ್ತದೆ. ಬೇರೆ ಗುಂಪುಗಳಲ್ಲಿ ಈ ಸ್ವಭಾವವಿಲ್ಲವೆಂದು ಅರ್ಥವೆ? ಹಾಗಿದ್ದರೆ, ಏಕೆ? ಯಾಚಕನಿಗೆ ಎಷ್ಟು ಲಭ್ಯ ಎಂಬುದು ಆ ಸ್ವಭಾವಕ್ಕೆ ಕಾರಣವಿರಬಹು ದಲ್ಲವೆ? ಅವನ ಅಗತ್ಯವನ್ನು ಮೀರುವಷ್ಟು ಲಭ್ಯವಾದಾಗಲೂ ಅವನ ಸ್ವಭಾವ ಹೀಗೆಯೇ ಇರುತ್ತದೆಯೆ? ಬದಲಾವಣೆ ಮತ್ತು ವೃದ್ಧಿ, ಸ್ವಭಾವದ ಲಕ್ಷಣಗಳೆಂದಾಯಿತು. ಅದನ್ನು ಸಾರ್ವತ್ರಿಕ ಮತ್ತು ಸಾರ್ವಕಾಲಿಕ ಎಂದು ಹೇಳುವುದು ಸರಿಹೊಂದುತ್ತದೆಯೆ? ತತ್ತ್ವಶಾಸ್ತ್ರದ ಎರಡು ಮಾರ್ಗಗಳ ನಡುವಣ ವ್ಯತ್ಯಾಸ ಇದರಿಂದ ಸ್ಪಷ್ಟವಾಗುತ್ತದೆ. ಇದನ್ನು ಬೇಕಾದರೆ ಒಂದು ಮಾರ್ಗದ ವೈಶಿಷ್ಟ್ಯವೆಂದು ಗುರುತಿಸುವಾಗ 'ಅಮೂರ್ತೀಕರಣ' ಎಂದು ಹೆಸರಿಸಬಹುದು. ಮೂರ್ತ ಸನ್ನಿವೇಶವನ್ನು ಲಕ್ಷ್ಯವಾಗಿಟ್ಟುಕೊಂಡು ವ್ಯಾಖ್ಯಾನಿಸುವ ಬದಲು, ಅಮೂರ್ತಗೊಳಿಸಿ ಸಾಮಾನ್ಯೀಕರಿಸುವುದು ಇದರ ಪದ್ಧತಿ. "ಪ್ರಾಚೀನ ಗ್ರೀಸ್‌ನಲ್ಲಿ ಪ್ರಜಾಪ್ರಭುತ್ವವಿದ್ದಿತು" ಅಥವಾ "ಪ್ರಾಚೀನ ಗ್ರೀಸ್ ಪ್ರಜಾಪ್ರಭುತ್ವದ ತೊಟ್ಟಿ ಲಾಗಿತ್ತು" ಎಂದು ಹೇಳುವಾಗ ಈ ಪದ್ಧತಿಯ ಕರಾಳತೆ ಎದ್ದುಕಾಣುತ್ತದೆ. ಆದರೆ ನಮ್ಮ ಪಠ್ಯಪುಸ್ತಕಗಳು ಅದನ್ನು ವಿಜೃಂಭಿಸಿ ಹೇಳುತ್ತವೆ! ಸಮಾಜದ ಒಂದು ವಿಭಾಗವನ್ನು ಗುಲಾಮರನ್ನಾಗಿಸಿದ್ದ ಸಂದರ್ಭವು ಪ್ರಜಾಪ್ರಭುತ್ವಕ್ಕೆ ಉದಾಹರಣೆಯಾಗಬಲ್ಲದೆ?

ಅರಿಸ್ಟಾಟಲ್ ಗುಲಾಮರನ್ನು "ಮಾತನಾಡುವ ಉಪಕರಣಗಳು" ಎಂದು ಕರೆದ. ಅಂದರೆ, ನೇಗಿಲಿಗೂ ಗುಲಾಮನಿಗೂ ಇರುವ ಒಂದೇ ವ್ಯತ್ಯಾಸವೆಂದರೆ ಅವನಿಗೆ ನಾಲಿಗೆ ಇದೆಯೆಂಬುದು! ಆದರೂ ಅದು ಪ್ರಜಾಪ್ರಭುತ್ವ, ಸುವರ್ಣಯುಗ, ಕಲಾಸೃಷ್ಟಿಯ ಆಗರ, ಇತ್ಯಾದಿ. ಸಾಮಾನ್ಯೀಕರಿಸುವ ಹುಮ್ಮಸ್ಸಿನಲ್ಲಿ ಸಂದರ್ಭದ ಕೆಲವು ಅಂಶಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿಲ್ಲವೆಂದು ಇದರರ್ಥ. ಗತಿತಾರ್ಕಿಕ ವಿಧಾನದ ತತ್ತ್ವಶಾಸ್ತ್ರದಲ್ಲಿ ಇಂತಹ ಅಜಾಗರೂಕತೆಗೆ ಸ್ಥಾನವಿಲ್ಲದಿರುವುದು ಅದರ ವೈಶಿಷ್ಟ್ಯ.

ವಿಶ್ವವು ಅಸ್ತಿತ್ವಕ್ಕೆ ಬಂದಿರುವುದು ಹೇಗೆ, ಎಂಬ ಪ್ರಶ್ನೆಗೆ ಎರಡೂ ಮಾರ್ಗಗಳ ಉತ್ತರ ಹೇಗಿರುತ್ತದೆಂದು ಇನ್ನೊಂದು ಉದಾಹರಣೆ ನೋಡಬಹುದು: ಭೌತವಾದಿಗಳು ಅದು ಅಣುಗಳ ಸಂಘಾತದಿಂದ ಉಂಟಾಗಿದೆ ಎನ್ನುತ್ತಾರೆ. ಭಾವನಾವಾದಿಗಳು ಅದು 'ಬ್ರಹ್ಮ ವಸ್ತು'ವಿನಿಂದ ರಚಿತವಾಗಿದೆ ಎನ್ನುತ್ತಾರೆ. ಇವೆರಡು ಪ್ರಮೇಯಗಳೂ ಒಂದೇ ಮಾರ್ಗಕ್ಕೆ ಸೇರಿವೆ. ಈ ಬ್ರಹ್ಮಾಂಡವು ಸದಾ ಬದಲಾವಣೆಗೆ ಗುರಿಯಾಗುತ್ತಿರುವಾಗ ಹೀಗೆ ಒಂದು ಸೂತ್ರದಿಂದ ಅಸ್ತಿತ್ವವನ್ನು ವ್ಯಾಖ್ಯಾನಿಸುವುದು ಸರಿಯಾಗಲಾರದು. ಗತಿತಾರ್ಕಿಕ ಭೌತವಾದಿ ಪದ್ಧತಿಯು ಇದನ್ನು ಗಣನೆಗೆ ತೆಗೆದುಕೊಂಡು ಅಂತಸ್ಸಂಬಂಧ ಮತ್ತು ಬದಲಾವಣೆಗಳ ಆಧಾರದಿಂದ ಅಸ್ತಿತ್ವವನ್ನು ಅರ್ಥೈಸುತ್ತದೆ. ವ್ಯಕ್ತಿಗಳನ್ನು ನೋಡುವಾಗ ಸಹ ಇದೇ ವಿಧಾನ ಸಹಾಯ ಮಾಡುತ್ತದೆ. ಉದಾಹರಣೆಗೆ, ದುಡಿಯುವ ವರ್ಗದ ಒಬ್ಬ ವ್ಯಕ್ತಿಯ ಲಕ್ಷಣವೇನು? ಅವನೊಬ್ಬ ವರ್ಗಪ್ರಜ್ಞೆಯುಳ್ಳ ನಿಷ್ಠಾವಂತ ಕ್ರಾಂತಿಕಾರಿ ಎಂದು ಹೇಳಿದರೆ, ಅಥವಾ ಅವನೊಬ್ಬ ಪ್ರತಿಗಾಮಿ ಅವಕಾಶವಾದಿ ಎಂದು ಹೇಳಿದರೆ, ಅದು ಅತಿಸಾಮಾನ್ಯೀಕರಣವಾಗಿಬಿಡುತ್ತದೆ. ಅದು ತತ್ತ್ವಶಾಸ್ತ್ರೀಯ ಕ್ರಮದಲ್ಲಿ ಗತಿತಾರ್ಕಿಕ ಪದ್ಧತಿಗೆ ಸೇರುವುದಿಲ್ಲ. ಆ ವ್ಯಕ್ತಿಯೂ ಬದಲಾವಣೆಯ ಸ್ರೋತದಲ್ಲಿ ಸಾಗುತ್ತಿರುತ್ತಾನೆ, ಇಂದು ಪ್ರತಿಗಾಮಿತ್ವ ಅವನಲ್ಲಿದ್ದರೂ ನಾಳೆ ಅವನು ಹೋರಾಟದಲ್ಲಿ ಸಮಾನಬಣಕ್ಕೆ ಬರಬಹುದು, ಎಂಬ ತಿಳಿವಳಿಕೆ ಗತಿತಾರ್ಕಿಕ ಮತಿಯ ಫಲವಾಗಿರುತ್ತದೆ.

ಇನ್ನೊಂದು ಉದಾಹರಣೆ ನೋಡೋಣ: ಒಬ್ಬ ವ್ಯಕ್ತಿ ಬೋಳುತಲೆಯವನು ಎಂದೆನಿಸಿಕೊಳ್ಳುವುದು ಯಾವಾಗ? ಅದು ಒಂದು ದಿನ ಥಟ್ಟನೆ ಜರುಗುವ ಪ್ರಸಂಗವಲ್ಲ. ಕ್ರಮೇಣ ಫಲಿಸುವ ಸ್ಥಿತಿ ಅದು. ಕೂದಲು ಉದುರುವ ಪ್ರಕ್ರಿಯೆ ಆರಂಭವಾದ ತರುವಾಯದಲ್ಲಿ ಒಂದು ಹಂತವಿರಬಹುದು; ಆಗ ಅದಿನ್ನೂ ಬೋಳುತಲೆಯಾಗಿಲ್ಲ, ಆದರೆ ಹಾಗಾಗುವುದರತ್ತ ಸಾಗಿದೆ! ಆದ್ದರಿಂದ ಗತಿತಾರ್ಕಿಕ ವಿಧಾನವನ್ನು ಬಿಟ್ಟು ಇನ್ನೊಂದು ತತ್ತ್ವಶಾಸ್ತ್ರೀಯ ಮಾರ್ಗದಲ್ಲಿ ಇದಕ್ಕೆ ಲಕ್ಷಣ ಹೇಳಲು ಬರುವುದಿಲ್ಲ. ಹೇಳಿದರೆ ಪರ್ಯಾಪ್ತ ಅಥವಾ ಸಾರ್ವಕಾಲಿಕ ಎನ್ನುವಂತೆ ಹೇಳಬಾರದು, ಅಷ್ಟೆ. ಯಾವುದೇ ಪದಾರ್ಥದ ಗುಣಗಳು, ಸಂಬಂಧಗಳು, ಕ್ರಿಯಾವಿಧಾನ, ಪಾರಸ್ಪರಿಕ ಕ್ರಿಯೆ ಮುಂತಾದುವನ್ನು ವಿವೇಚಿಸಿದರೆ ಪ್ರತಿಯೊಂದು ಅಂಶದಲ್ಲೂ ಎರಡೆರಡು ವಿರೋಧಿ ಲಕ್ಷಣಗಳನ್ನು ಕಾಣ ಬಹುದು. ಉದಾಹರಣೆಗೆ, ಒಂದು ವಸ್ತು ಇನ್ನೊಂದು ವಸ್ತುವಿನೊಡನೆ ಎರಡು ರೀತಿಯ

ಸಂಬಂಧಗಳನ್ನು ಹೊಂದಿರಲು ಸಾಧ್ಯ: ಆಕರ್ಷಣೆ ಅಥವಾ ವಿಕರ್ಷಣೆ. ಇವು ಕೇವಲ ಭಿನ್ನವಾದ ಲಕ್ಷಣಗಳಲ್ಲ, ಅವು ಸಂಪೂರ್ಣ ವಿರೋಧಿ ಲಕ್ಷಣಗಳು; ಗಣಿತಶಾಸ್ತ್ರದಲ್ಲಿ ಕೂಡುವುದು ಮತ್ತು ಕಳೆಯುವುದು ಇದ್ದಂತೆ, ಅಥವಾ ಧನಾತ್ಮಕ ಮತ್ತು ಋಣಾತ್ಮಕ ಸಂಕೇತಗಳಿದ್ದಂತೆ. ಇದನ್ನು ಗತಿತಾರ್ಕಿಕ ದಾರ್ಶನಿಕ ಪದ್ಧತಿಯು ಅಳವಡಿಸಿಕೊಳ್ಳುತ್ತದೆ. ಅದಕ್ಕಿನ್ನೊಂದು ಉದಾಹರಣೆ ನೋಡಬಹುದು: ಒಂದು ವರ್ಗ-ವಿಭಜಿತ ಸಮಾಜವಿದೆ ಎಂದಿಟ್ಟುಕೊಳ್ಳೋಣ. ಅದನ್ನು ಎರಡು ರೀತಿಯಲ್ಲಿ ಅರ್ಥೈಸಬಹುದು: (ಅ) ಸಮಾಜದಲ್ಲಿ ಸಹಸ್ರಾರು ವ್ಯಕ್ತಿಗಳಿದ್ದಾರೆ, ಅವರು ಅನೇಕ ಸಾಮಾಜಿಕ ಸಂಬಂಧಗಳಿಂದ ಒಬ್ಬರಿಗೊಬ್ಬರು ಸಂಪರ್ಕ ಸಾಧಿಸಿರುವಂಥವರು, ಇತ್ಯಾದಿ; (ಆ) ಸಮಾಜದಲ್ಲಿ ಸಹಸ್ರಾರು ವ್ಯಕ್ತಿಗಳಿದ್ದಾರೆ, ಅವರು ಪರಸ್ಪರ ಸಂಬಂಧ ಉಳ್ಳವರು, ಆ ಸಂಬಂಧಗಳಲ್ಲಿ ಶೋಷಕರು-ಶೋಷಿತರು ಎಂಬ ವೈರುಧ್ಯ ಎದ್ದುಕಾಣುತ್ತದೆ. ಈ ಎರಡು ವಿಧಾನಗಳಲ್ಲಿ ಒಂದು ಪಾರಸ್ಪರಿಕ ಸಂಬಂಧಗಳನ್ನು ಗುರುತಿಸುತ್ತದೆ, ಇನ್ನೊಂದು ಕೇವಲ ಭಿನ್ನತೆಯನ್ನು ಗಮನಿಸುತ್ತದೆ. ವಸ್ತುಗಳಲ್ಲಿ ತೋರಿಬರುವ ವೈರುಧ್ಯವನ್ನು ಧ್ರುವೀಕರಣ ಎಂದು ಕರೆಯಬಹುದು. ಒಂದು ಅಯಸ್ಕಾಂತದಲ್ಲಿರುವಂತೆ ಅವು ಪರಸ್ಪರ ವಿರೋಧಿ ಧ್ರುವಗಳು. ಅವು ಸಂಪೂರ್ಣವಾಗಿ ಬೇರ್ಪಟ್ಟು ಪ್ರತ್ಯೇಕವಾಗಿ ಉಳಿಯುವಂಥವಲ್ಲ, ಯಾವಾಗಲೂ ಜೊತೆಜೊತೆಯಾಗಿ ಇರುವಂಥವು. ಒಂದು ಅಯಸ್ಕಾಂತವನ್ನು ಒಡೆದು ಎರಡು ಮಾಡಿದರೆ ಎರಡು ಧ್ರುವಗಳನ್ನು ಬೇರ್ಪಡಿಸಿದಂತಾಗುವುದಿಲ್ಲ. ಬದಲಾಗಿ, ಒಡೆದ ಎರಡು ಭಾಗಗಳಲ್ಲೂ ಮತ್ತೆ ಎರಡು ಧ್ರುವಗಳನ್ನು ಗುರುತಿಸಲು ಸಾಧ್ಯ. ಅವು ಪ್ರತ್ಯೇಕವಲ್ಲ, ಒಂದರಲ್ಲೇ ಇರುವ ಎರಡು ವಿರೋಧಿ ಧ್ರುವಗಳು. ಆದ್ದರಿಂದ ಯಾವುದೇ ವಸ್ತುವನ್ನು ಅರ್ಥಮಾಡಿಕೊಳ್ಳಬೇಕಾದರೆ ಅದರಲ್ಲಿ ಅಂತರ್ಗತವಾಗಿರುವ ಧ್ರುವೀಕೃತ ವಿರೋಧಗಳನ್ನು ಗುರುತಿಸಬೇಕು; ಇಲ್ಲವಾದಲ್ಲಿ ಆ ವಸ್ತುವನ್ನು ಸರಿಯಾಗಿ ತಿಳಿದಂತಾಗುವುದಿಲ್ಲ. ಇದನ್ನು "ವಿರೋಧಗಳ ಐಕ್ಯತೆ" ಎನ್ನಲಾಗುತ್ತದೆ. ಹಾಗೆಂದಮಾತ್ರಕ್ಕೆ ಆ ಸಂಬಂಧವು ಸಮತ್ವ ಎಂದರ್ಥವಲ್ಲ. ಧ್ರುವೀಕೃತ ವೈರುಧ್ಯಗಳು ವಿರುದ್ಧ ಪ್ರವೃತ್ತಿಯವು; ಆದ್ದರಿಂದ ಅವುಗಳ ನಡುವೆ ಸಂಘರ್ಷವಿರುತ್ತದೆ. ತಾತ್ಕಾಲಿಕವಾಗಿ ಸಮತ್ವದಂತೆ ತೋರಿದರೂ ಅಲ್ಲಿ ಘರ್ಷಣೆ ಇದೆ ಮತ್ತು ಆ ಘರ್ಷಣೆಯಿಂದ ಸದಾ ಚಲನೆ ಮತ್ತು ವೃದ್ಧಿ ಉಂಟಾಗುತ್ತಿರುತ್ತವೆ; ಅಸ್ತಿತ್ವಕ್ಕೆ ಬರುವುದು ಮತ್ತು ಬದಲಾಗುತ್ತಿರುವುದು ಮೂಲಭೂತ ಲಕ್ಷಣಗಳಾಗಿರುತ್ತವೆ. ಮಾನವನ ಇತಿಹಾಸದಲ್ಲಿ ಸಾಮಾಜಿಕ ವಿಕಾಸ ಹೇಗುಂಟಾಗುತ್ತದೆ, ಒಂದು ಹಂತದಿಂದ ಇನ್ನೊಂದು ಮೇಲಿನ ಹಂತಕ್ಕೆ ಹೇಗೆ ಚಲನೆ ಸಾಧ್ಯವಾಗುತ್ತದೆ, ಎಂಬುದಕ್ಕೆ ವಿವರಣೆಯು ಗತಿತಾರ್ಕಿಕ ತತ್ತ್ವಶಾಸ್ತ್ರದ ಈ ಪ್ರಮೇಯದಿಂದ ದೊರಕುತ್ತದೆ.

ನಾವು ಮೇಲೆ ಉಲ್ಲೇಖಿಸಿದ ಎರಡನೆಯ ನಿಯಮ ಪರಿಮಾಣಾತ್ಮಕ ಬದಲಾವಣೆಯಿಂದ ಗುಣಾತ್ಮಕ ಬದಲಾವಣೆ ಉಂಟಾಗುವುದು. ಪ್ರಕೃತಿ ಮತ್ತು ಅಂತೆಯೇ ಇತಿಹಾಸದಲ್ಲಿ ನಾವು ಕಾಣುವುದು ನವೀಕರಣ ಮತ್ತು ಅಭಿವೃದ್ಧಿ. ಏನಾದರೊಂದು ಹೊಸ ಆವಿರ್ಭಾವ

ಮತ್ತು ಅದರ ಬೆಳೆವಣಿಗೆ, ಏನಾದರೊಂದು ವಿಘಟನೆಗೊಳ್ಳುವುದು ಮತ್ತು ನಶಿಸಿಹೋಗುವುದು, ಇದು ಪ್ರಕೃತಿ ಮತ್ತು ಇತಿಹಾಸದಲ್ಲಿ ಕಾಣಬರುವ ಒಂದು ಲಕ್ಷಣ. ಈ ಪ್ರಕ್ರಿಯೆಯಲ್ಲಿ ನೂತನವಾದ್ದೊಂದು ಅಸ್ತಿತ್ವಕ್ಕೆ ಬರುತ್ತದೆ. ಆದರೆ ಇದು ಸುಮ್ಮನೆ ವೃತ್ತಾಕಾರದಲ್ಲಿ ಪುನರಾವರ್ತನೆಗೊಳ್ಳುವುದಲ್ಲ. ಒಂದು ಹಂತದಿಂದ ಇನ್ನೊಂದು ಮೇಲಿನ ಹಂತಕ್ಕೇರುವುದು ನೂತನ ಆವಿಷ್ಕಾರದೊಂದಿಗೆ ಉಂಟಾಗುವ ಪರಿಣಾಮ. ನಿಜಾರ್ಥದಲ್ಲಿ ಅಭಿವೃದ್ಧಿಯೆಂದರೆ ಇದೇ. ಬದಲಾವಣೆಗೂ ಅಭಿವೃದ್ಧಿಗೂ ಇರುವ ವ್ಯತ್ಯಾಸ ಇದರಲ್ಲಿದೆ. ತನ್ನದೇ ಆದ ಆಂತರಿಕ ನಿಯಮಗಳ ಪ್ರಕಾರ ಒಂದು ಹಂತದಿಂದ ಇನ್ನೊಂದು ಮೇಲಿನ ಹಂತಕ್ಕೇರುವಂತಹ ಬದಲಾವಣೆಯು ಅಭಿವೃದ್ಧಿ ಎನಿಸಿಕೊಳ್ಳುತ್ತದೆ. ಇಲ್ಲಿ ಇನ್ನೊಂದಂಶ ವನ್ನು ಗಣನೆಗೆ ತೆಗೆದುಕೊಳ್ಳಬಹುದು. ಅದೇನೆಂದರೆ, ವೃದ್ಧಿಗೂ ಅಭಿವೃದ್ಧಿಗೂ ಅಂತರವಿದೆ ಎಂಬುದು. ವೃದ್ಧಿಯೆಂದರೆ ಪರಿಮಾಣಾತ್ಮಕವಾಗಿ ಹಿಗ್ಗುವುದು, ದೊಡ್ಡದಾಗುವುದು; ಆದರೆ ಅಭಿವೃದ್ಧಿಯೆಂಬುದು ಗುಣಾತ್ಮಕವಾಗಿ ಬದಲಾವಣೆ ಹೊಂದುವುದು, ಸುಮ್ಮನೆ ವೃದ್ಧಿಯಾಗುತ್ತಿರುವುದಲ್ಲ. ಒಂದು ರೇಷ್ಮೆ ಹುಳುವಿನ ಉದಾಹರಣೆ ತೆಗೆದುಕೊಳ್ಳುವುದಾದರೆ, ಅದು ಕ್ರಮೇಣ ದೊಡ್ಡದಾಗುತ್ತದೆ, ದಪ್ಪವಾಗುತ್ತದೆ; ಆಮೇಲೆ ಗೂಡಿನಲ್ಲಿ ಸೇರಿಕೊಳ್ಳುತ್ತದೆ; ಕಡೆಗೆ ಹಾರುವ ಚಿಟ್ಟೆಯಾಗಿ ಹೊರಬರುತ್ತದೆ. ದೊಡ್ಡದಾಗು ವುದು ಬೇರೆ, ಗುಣಾತ್ಮಕವಾಗಿ ಬದಲಾಗಿ ಚಿಟ್ಟೆಯ ಸ್ವರೂಪ ಪಡೆಯುವುದು ಬೇರೆ. ಇಂತಹ ಸಂಗತಿಗಳನ್ನು ಪ್ರಕೃತಿ ಮತ್ತು ಇತಿಹಾಸದಲ್ಲಿ ಕಂಡಾಗ ಅಭಿವೃದ್ಧಿಯ ನಿಯಮ ಗಳನ್ನೇನಾದರೂ ನಾವು ತರ್ಕಿಸಬಹುದೆ? ಭೌತವಾದಿ ಗತಿತಾರ್ಕಿಕ ತತ್ತ್ವಶಾಸ್ತ್ರವು ಇದಕ್ಕೆ ಉತ್ತರವನ್ನು ಕೊಡಹೊರಡುತ್ತದೆ. ಅಂತಹ ನಿಯಮವಿದ್ದು ಅದನ್ನು ತಿಳಿದುಕೊಂಡರೆ ಅಭಿವೃದ್ಧಿಗಾಗಿ ಪ್ರಜ್ಞಾಪೂರ್ವಕ ಮಧ್ಯಪ್ರವೇಶವು ಸಾಧ್ಯವಾಗುತ್ತದೆ.

ಎಲ್ಲ ಬದಲಾವಣೆಗಳಲ್ಲೂ ಮೂಲತಃ ಪರಿಮಾಣಾತ್ಮಕ ಬದಲಾವಣೆ ಇರುತ್ತದೆ. ಅದು ಹೆಚ್ಚಬಹುದು, ಇಲ್ಲವೆ ಕಡಿಮೆಯಾಗಬಹುದು. ಯಾವುದರಲ್ಲಿ ಹೀಗೆ ಹೆಚ್ಚು ಅಥವಾ ಕಡಿಮೆ ಮಟ್ಟದಲ್ಲಿ ಬದಲಾವಣೆಯಾಗುತ್ತದೋ ಅದರ ಸಹಜ ಸ್ಥಿತಿಯಲ್ಲಿ ಪರಿವರ್ತನೆಯೇನೂ ಆಗುವುದಿಲ್ಲ. ಉದಾಹರಣೆಗೆ, ನೀರನ್ನು ಕಾಯಿಸಿದಾಗ ಅದು ಬಿಸಿಯಾಗುತ್ತದೆ. ಬಿಸಿಯ ಪ್ರಮಾಣ ಹೆಚ್ಚುತ್ತಾ ಹೋಗಿ ಒಂದು ಹಂತದಲ್ಲಿ ಇನ್ನು ಪರಿಮಾಣಾತ್ಮಕ ಬದಲಾವಣೆ ಸಾಧ್ಯವಿಲ್ಲವೆಂಬ ಸ್ಥಿತಿ ಒದಗುತ್ತದೆ. ಅದು ನೂರು ಡಿಗ್ರಿ ಸೆಂಟಿಗ್ರೇಡ್ ಅಥವಾ ಅದರ ಆಸುಪಾಸಿನಲ್ಲಿ ಇರಬಹುದು. ಆ ಹಂತ ತಲುಪಿದಾಗ ನೀರು ದ್ರವವಾಗಿ ಉಳಿಯದೆ ಗುಣಾತ್ಮಕವಾಗಿ ಬದಲಾವಣೆ ಹೊಂದಿ ಆವಿಯಾಗುತ್ತದೆ. ಕಡೆಯ ಹಂತದಲ್ಲಿ ಒಂದು ರೀತಿಯ ನೆಗೆತ ಉಂಟಾಗಿ ವಸ್ತುವು ಬೇರೆ ರೂಪವನ್ನು ತಾಳುತ್ತದೆ. ಇನ್ನೊಂದು ಉದಾಹರಣೆಯನ್ನು "ಒಂಟೆಯ ಮೇಲಿನ ಭಾರದಲ್ಲಿ ಕಡೆಯ ಹುಲ್ಲುಕಡ್ಡಿ" ಎಂಬುದರಲ್ಲಿ ಕಾಣಬಹುದು. ಒಂದು ಹುಲ್ಲುಕಡ್ಡಿಯ ಭಾರ ಒಂಟೆಗೆ ಭಾರವೇ ಅಲ್ಲ; ಆದರೆ ಭಾರವನ್ನು ಹೇರುತ್ತಾ ಹೋದಾಗ ಒಂದು ಹಂತದಲ್ಲಿ ಇನ್ನೊಂದು ಗುಲಗಂಜಿ

ತೂಕದ ಭಾರವನ್ನು ಸಹ ಸಹಿಸಲಾರದ ಸ್ಥಿತಿ ಬಂದು ಒಂಟೆಯು ಕುಸಿದು ಬೀಳುತ್ತದೆ. ಅದೇ 'ನೆಗೆತ'ದ ಹಂತ. ಈ ರೀತಿಯ ಬದಲಾವಣೆಗಳಿಗೆ ಒಗ್ಗಿಸುತ್ತಾ ಹೋಗಿ ಸಸ್ಯಗಳಲ್ಲಿ ಜೀವತಂತುವಿನ ಸ್ವಭಾವವನ್ನು ಕೂಡ ಬದಲಿಸಬಹುದೆಂದು ಸಸ್ಯಶಾಸ್ತ್ರಜ್ಞರು ತಿಳಿಸುತ್ತಾರೆ. ಇಂದು ಬೇಸಿಗೆಯ ಬೆಳೆ ಆಗಿರುವುದನ್ನು ಕ್ರಮೇಣ ಚಳಿಗಾಲದ ಬೆಳೆಯನ್ನಾಗಿ ಮಾರ್ಪಾಡು ಮಾಡಿರುವ ಉದಾಹರಮೆಗಳಿವೆ. ಪ್ರಕೃತಿಯಲ್ಲಿದ್ದಂತೆ ಸಮಾಜದಲ್ಲೂ ಇಂತಹ ಗುಣಾತ್ಮಕ ಪರಿವರ್ತನೆ ಉಂಟು. ಊಳಿಗಮಾನ್ಯ ಪದ್ಧತಿ ಇರುವ ಸಮಾಜವು ಬಂಡವಾಳಶಾಹಿ ಸಮಾಜವಾಗಿ ಪರಿವರ್ತನೆ ಹೊಂದಬೇಕಾದರೆ ಪರಿಮಾಣಾತ್ಮಕ ಬದಲಾವಣೆಗಳು ಹತ್ತಾರು ಒದಗಿಬಂದು ನಂತರ ಒಂದು ನೆಗೆತದಿಂದ ಬೇರೊಂದು ರೀತಿಯ ಪದ್ಧತಿ ಇರುವ ಸಮಾಜ ಅಸ್ತಿತ್ವಕ್ಕೆ ಬರುತ್ತದೆ. ಅಂತಹ ಪರಿಮಾಣಾತ್ಮಕ ಬದಲಾವಣೆಗಳಿಲ್ಲದೆ ಗುಣಾತ್ಮಕವಾಗಿ ಬೇರೊಂದು ರೀತಿಯ ಸಮಾಜದ ಆವಿರ್ಭಾವವಾಗುವುದಿಲ್ಲ. ಮೊದಲು ಕೆಲವು ಖಾಸಗಿ ಜನಗಳಲ್ಲಿ ಹಣದ ರೂಪದ ಸಂಪತ್ತು ಶೇಖರವಾಗಬೇಕು (ಬೇರೆ ದೇಶಗಳ ಸಂಪತ್ತು ದೋಚುವುದರ ಮುಖಾಂತರವೂ ಆಗಬಹುದು), ಆಸ್ತಿರಹಿತ ದುಡಿಯುವ ಜನರ ವರ್ಗವೊಂದು ರಚನೆಗೊಳ್ಳಬೇಕು (ಜಮೀನು ಕಳೆದುಕೊಳ್ಳುವ ಮುಖಾಂತರ), ಅವರು ದುಡಿಮೆಯನ್ನು ಮಾರಿಕೊಂಡು ಜೀವಿಸುವ ಅನಿವಾರ್ಯತೆಗೆ ಗುರಿಯಾಗಬೇಕು, ಆಗ ಮಾತ್ರವೇ ಬಂಡವಾಳಶಾಹಿಯು ಅಸ್ತಿತ್ವಕ್ಕೆ ಬರಬಲ್ಲದು. ಅದು ಗುಣಾತ್ಮಕವಾಗಿ ಹಿಂದಿನ ಪದ್ಧತಿಗಿಂತಲೂ ಮೇಲ್ಮಟ್ಟದ್ದು, ಆಮೂಲಾಗ್ರವಾಗಿ ಭಿನ್ನವಾದದ್ದು. ಇದನ್ನೇ ಕ್ರಾಂತಿಕಾರಿ ಬದಲಾವಣೆ ಎನ್ನುವುದು. ನೂರು ಗುಲಾಮರಿರುವ ಕಡೆ ಸಾವಿರ ಗುಲಾಮರಾದರೆ ಅದು ಗುಲಾಮಿ ಪದ್ಧತಿಯಿಂದ ಹೊರಬಂದ, ಗುಣಾತ್ಮಕವಾಗಿ ಭಿನ್ನವಾದ, ಸಮಾಜವಾಗುವುದಿಲ್ಲ. ಸಾಮಾಜಿಕ ಸಂಬಂಧಗಳು ಸಂಪೂರ್ಣವಾಗಿ ಹೊಸ ಆಯಾಮದಲ್ಲಿ ನೆಲೆಗೊಳ್ಳುವುದು ಖಚಿತಪಟ್ಟಾಗ ಗುಣಾತ್ಮಕ ಬದಲಾವಣೆ ಉಂಟಾಗಿದೆಯೆಂದು ಹೇಳಬಹುದು. ಹೊಸ ಪದ್ಧತಿಯ ಸಾಧ್ಯತೆಯು ಹಳೆಯ ಪದ್ಧತಿಯಲ್ಲೇ ಅಂಕುರಿಸಿದ್ದು, ಮತ್ತು ಅದರ ಪರಿಮಾಣಾತ್ಮಕ ಬದಲಾವಣೆಯು ಒಂದು ಅಂತಿಮ ಹಂತವನ್ನು ಮುಟ್ಟಿದಾಗಲೇ ನೆಗೆತ ಕಂಡುಬಂದಿದ್ದು. ಆ ನೆಗೆತವೇ ಕ್ರಾಂತಿ, ಅದರಿಂದಲೇ ಹೊಸ ಸಮಾಜದ ಆವಿರ್ಭಾವ.

ಗುಣಾತ್ಮಕ ಪರಿವರ್ತನೆಯ ಆಶಯ ಹೊಂದಿರುವವರು ಮಾಡಬೇಕಾದ ಮೊದಲ ಕೆಲಸವೆಂದರೆ ಪರಿಮಾಣಾತ್ಮಕ ಸಂಗತಿಗಳ ಲೆಕ್ಕ ಮಾಡುವುದು, ಯಾವುದರ ಹೆಚ್ಚಳದಿಂದ ನೆಗೆತದತ್ತ ಮುಂದೆ ಸಾಗಬಹುದು ಎಂಬುದನ್ನು ವಿಶ್ಲೇಷಿಸಿಕೊಳ್ಳುವುದು ಮತ್ತು ಕ್ರಿಯಾತ್ಮಕವಾಗಿ ಆ ದಿಕ್ಕಿನಲ್ಲಿ ಮುನ್ನಡೆಯುವುದು. ಸಾಮಾಜಿಕ ಕ್ರಾಂತಿಯ ಸಂದರ್ಭವನ್ನು ಲೆನಿನ್ ವ್ಯಾಖ್ಯಾನಿಸಿರುವುದರಲ್ಲಿ ಈ ಇಂಗಿತ ಅಡಗಿದೆ: "ಆಳುವ ವರ್ಗಕ್ಕೆ ಹಿಂದಿನಂತೆ ಆಳುತ್ತಾ ಮುಂದುವರಿಯಲು ಸಾಧ್ಯವೇ ಇಲ್ಲದಂತಹ ಮತ್ತು ಆಳ್ವಿಕೆಗೆ ಒಳಪಟ್ಟಿದ್ದ ವರ್ಗ ಇನ್ನು ಮುಂದೆ ತಾನು ಹಾಗೆ ಆಳ್ವಿಕೆಗೆ ಗುರಿಯಾಗುವುದಿಲ್ಲವೆಂಬ ನಿರ್ಧಾರದ ಹಂತ, ಅದೇ ಕ್ರಾಂತಿಯ ಸನ್ನಿವೇಶ." ಪ್ರಾಯೋಗಿಕವಾಗಿ, ದುಡಿಯುವ ಜನರ ಕ್ರಿಯೆಯು

ಸಮಾಜದ ಎಲ್ಲ ಹಂತಗಳಲ್ಲೂ ಇಂತಹ ಉತ್ಕಟ ಕ್ರಿಯೆಯಾಗಿ ಪ್ರಕಟಗೊಂಡಿದೆ. ಆಯಾ ಹಂತದ ಸಮಾಜದಲ್ಲಿನ ಕ್ರಾಂತಿಕಾರಿ ವರ್ಗವಾಗಿ ಇಂತಹ ದುಡಿಯುವ ಜನರನ್ನು ಹೆಸರಿಸಬೇಕು. ಆದರೆ ವರ್ಗಗಳ ನಡುವಣ ಸಂಘರ್ಷವೇ ಆಯಾ ವ್ಯವಸ್ಥೆಗಳ ಮೂಲಭೂತ ವೈರುಧ್ಯಗಳಲ್ಲ. ವೈರುಧ್ಯವಿರುವುದು ಮೂಲತಃ ಸಾಮಾಜಿಕ ವ್ಯವಸ್ಥೆಯಲ್ಲಿ; ಅದರ ಪರಿಣಾಮವಾಗಿ ವರ್ಗ ಸಂಘರ್ಷವು ಅಭಿವ್ಯಕ್ತವಾಗುತ್ತದೆ. ಒಂದು ಉದಾಹರಣೆಯಾಗಿ ಬಂಡವಾಳಶಾಹಿ ವ್ಯವಸ್ಥೆಯನ್ನು ಪರಿಶೀಲಿಸಬಹುದು. ಈ ವ್ಯವಸ್ಥೆಯ ಪ್ರಮುಖ ಸ್ವರೂಪವನ್ನು ಕಾರ್ಲ್ ಮಾರ್ಕ್ಸ್ ಹೀಗೆ ವಿವರಿಸಿದ್ದಾರೆ: "ಉತ್ಪಾದನಾ ಸಾಧನಗಳನ್ನು ದೊಡ್ಡ ಉದ್ಯಮಗಳಲ್ಲಿ ಕೇಂದ್ರೀಕರಿಸಿ, ಸಾಮಾಜಿಕವಾಗಿದ್ದ ಸಾಧನಗಳನ್ನು ಬಂಡವಾಳ ಶಾಹಿಯು ಉತ್ಪಾದನಾ ಸ್ಥಾವರಗಳಿಗೆ ವರ್ಗಾಯಿಸಿತು. ಆದರೆ ಸಾಮಾಜಿಕ ಉತ್ಪಾದನಾ ಸಾಧನಗಳು ಹಾಗೂ ಸಾಮಾಜಿಕ ಉತ್ಪಾದನೆಯು ಹಿಂದಿನಂತೆಯೇ ವ್ಯಕ್ತಿಗತವಾಗಿ ಉಳಿದಿದ್ದಿತೆಂಬ ಭಾವನೆ ಮೂಡುವಂತೆ ವ್ಯವಹರಿಸಿತು. ಈವರೆಗೆ ದುಡಿಮೆಯ ಸಾಧನಗಳ ಮಾಲಿಕನು ಉತ್ಪಾದನೆಯನ್ನು ತನ್ನದಾಗಿಸಿಕೊಂಡಿದ್ದನು, ಏಕೆಂದರೆ ಅದು ಅವನ ಉತ್ಪಾದನೆಯಾಗಿತ್ತು. ಇತರರ ಕೆಲವು ಸಹಕಾರಿ ದುಡಿಮೆಗಳ ಪಾತ್ರವು ಇದ್ದಾಗ್ಯೂ ಮೂಲತಃ ಅದು ಅವನ ದುಡಿಮೆಯ ಫಲವಾಗಿತ್ತು. ಬಂಡವಾಳಶಾಹಿಯಲ್ಲಿ ಈ ಪದ್ಧತಿ ಮುಂದುವರಿಯಿತು. ಉತ್ಪಾದನಾ ಸಾಧನಗಳ ಮಾಲಿಕನು ಉತ್ಪಾದನೆಯನ್ನು ತನ್ನದನ್ನಾಗಿ ಮಾಡಿಕೊಂಡ; ಆದರೆ ಹಿಂದಿನ ವ್ಯವಸ್ಥೆಯಲ್ಲಿದ್ದಂತೆ ಅದು ಅವನ ದುಡಿಮೆಯ ಫಲವಾಗಿರಲಿಲ್ಲ. ಅದು ಸಂಪೂರ್ಣವಾಗಿ ಬೇರೆಯವರ ದುಡಿಮೆಯ ಫಲವಾಗಿತ್ತು. ಉತ್ಪಾದನೆಯು ಸಾಮಾಜಿಕವಾಗಿ (ಅಥವಾ ಸಾಮುದಾಯಿಕವಾಗಿ) ಜರುಗಿದ ಕ್ರಿಯೆಯಾಗಿದ್ದರೂ ಉತ್ಪಾದನಾ ಸಾಧನಗಳಿಗೆ ಚಾಲನೆ ನೀಡಿದ್ದವರಿಗೆ, ತಮ್ಮ ದುಡಿಮೆಯಿಂದ ಉತ್ಪಾದನೆಗೆ ಕಾರಣವಾಗಿದ್ದವರಿಗೆ, ಉತ್ಪಾದಿತ ಪದಾರ್ಥಗಳು ಲಭಿಸಲಿಲ್ಲ. ಆ ಉತ್ಪಾದನೆಯು ಬಂಡವಳಿಗನ ಸ್ವಾಧೀನವಾಯಿತು."

ಇದರರ್ಥ ಸರಳವಿದೆ: ಉತ್ಪಾದನೆಯು ಸಾಮಾಜಿಕ ಕ್ರಿಯೆ; ಆದರೆ ಉತ್ಪಾದಿತ ವಸ್ತುವು ವ್ಯಕ್ತಿಗತವಾಗುತ್ತದೆ. ಇದೇ ಬಂಡವಾಳಶಾಹಿಯಲ್ಲಿನ ಅತ್ಯಂತ ಪ್ರಮುಖವಾದ ಅಸಂಗತಿ ಅಥವಾ ವೈರುಧ್ಯ. ವರ್ಗ ಸಂಘರ್ಷವು ಉಂಟಾಗುವುದು ಈ ವೈರುಧ್ಯದಿಂದಾಗಿಯೇ ಹೊರತು ಕೇವಲ ಎರಡು ವರ್ಗಗಳಿರುವುದರಿಂದಲ್ಲ. ಈ ವೈರುಧ್ಯಕ್ಕೆ ಪರಿಹಾರವಿರುವುದು ದುಡಿಯುವ ವರ್ಗವು ಉತ್ಪಾದನಾ ಸಾಧನಗಳನ್ನು ಸಾಮಾಜಿಕ ಮಾಲಿಕತ್ವಕ್ಕೆ ಒಳಗು ಮಾಡುವುದರಲ್ಲಿ; ಅದಕ್ಕಾಗಿ ತಾನು ರಾಜಕೀಯ ಅಧಿಕಾರವನ್ನು ತನ್ನದಾಗಿಸಿಕೊಳ್ಳಬೇಕಾಗುತ್ತದೆ. ಸಾಮಾಜಿಕ ರಚನೆಗಳಲ್ಲಿ ಗುಣಾತ್ಮಕ ಬದಲಾವಣೆಗಳನ್ನು ತರುವಂತಹ 'ನೆಗೆತ' ಕಂಡುಬರುವುದು ಈ ವೈರುಧ್ಯಗಳಲ್ಲಿ ಸಿಲುಕಿಕೊಂಡ ಶಕ್ತಿಗಳ ಸೆಣಸಾಟದಿಂದ. ಇಲ್ಲಿಯೂ ಗುಣಾತ್ಮಕ ಬದಲಾವಣೆಗೆ ಮುನ್ನ ಹೇರಳವಾಗಿ ಪರಿಮಾಣಾತ್ಮಕ ಬದಲಾವಣೆಗಳು ಉಂಟಾಗುತ್ತವೆ. ಉದಾಹರಣೆಗೆ, ಬಂಡವಾಳಶಾಹಿಯಿಂದ ಸಮಾಜವಾದಿ ವ್ಯವಸ್ಥೆಗೆ

ನೆಗೆತ ಉಂಟಾಗುವುದಕ್ಕೆ ಎರಡು ಪರಿಮಾಣಾತ್ಮಕ ಬದಲಾವಣೆಗಳು ಅವಶ್ಯಕ: (ಅ) ದುಡಿಯುವ ವರ್ಗದ ಸಂಖ್ಯೆಯಲ್ಲಿ ಹೆಚ್ಚಳ, ಮತ್ತು (ಆ) ಬಂಡವಾಳದ ಶೇಖರಣೆಯಲ್ಲಿ ಹೆಚ್ಚಳ. ಕಾರ್ಮಿಕ ವರ್ಗವು ಸಂಘಟಿತವಾಗುತ್ತಾ ಹೋಗುತ್ತದೆ, ಬಂಡವಾಳವು ಕೆಲವೇ ಕೈಗಳಲ್ಲಿ ಕೇಂದ್ರೀಕೃತವಾಗುತ್ತಾ ಹೋಗುತ್ತದೆ. ಈ ಅಸಂಗತಿ ಅಥವಾ ವೈರುಧ್ಯವು ಪರ್ಯವಸಾನವಾಗುವುದು ದುಡಿಯುವ ವರ್ಗದ ಉತ್ಪಾದನೆಯನ್ನು ತನ್ನದಾಗಿಸಿಕೊಂಡಿರುವ ಬಂಡವಾಳಶಾಹಿಯ ಉಚ್ಚಾಟನೆಯಿಂದ ಮಾತ್ರ. ಹಾಗಾದಾಗ ವೈರುಧ್ಯದ ಮೂಲೋತ್ಪಾಟನೆಯಾಗುತ್ತದೆಯೆ? ಇಲ್ಲ, ವೈರುಧ್ಯವು ಇರುತ್ತದೆ; ಆದರೆ ಅದು ವೈರವನ್ನು ಹುಟ್ಟುಹಾಕುವಂತಹದ್ದಲ್ಲ. ಇಬ್ಬರು ವ್ಯಕ್ತಿಗಳಿದ್ದಾಗ ಸಹಜವಾಗಿಯೇ ವೈರುಧ್ಯವಿರುತ್ತದೆ. ಆದರೆ ಅದು ವೈರತ್ವವನ್ನು ಮೂಡಿಸುತ್ತದೆಯೇ ಎಂಬುದು ಪ್ರಶ್ನೆ. ಉತ್ಪಾದನೆ ಮತ್ತು ಅನುಭೋಗದ ಪಾತ್ರಗಳಲ್ಲಿ ವೈರವಿಲ್ಲವಾದಾಗ ಆ ವೈರುಧ್ಯವು ಅಸಂಗತವಾಗಿ ಪರಿಣಮಿಸುವುದಿಲ್ಲ. ಪ್ರಾಚೀನ ಬುಡಕಟ್ಟು ಸಮಾಜಗಳ ವ್ಯವಸ್ಥೆಗೂ ಆಧುನಿಕ ಸಮಾಜವಾದಿ-ಸಾಮ್ಯವಾದಿ ವ್ಯವಸ್ಥೆಗೂ ಇದು ಸಮಾನಾಂಶ. ವ್ಯತ್ಯಾಸವಿರುವುದು ಉತ್ಪಾದನಾ ವಿಧಾನದಲ್ಲಿ ಮತ್ತು ಉತ್ಪಾದನಾ ಬಾಹುಳ್ಯದಲ್ಲಿ. ಹಿಂದಿನ ಉತ್ಪಾದನಾ ತಂತ್ರಜ್ಞಾನದಿಂದ ಲಭಿಸಿದಷ್ಟನ್ನು ವೈರತ್ವದ ಸೋಂಕಿಲ್ಲದೆ ಬುಡಕಟ್ಟು ಸಮಾಜ ಅನುಭೋಗಿಸುತ್ತಿತ್ತು; ಇಂದಿನ ಮೇಲ್ಮಟ್ಟದ ಉತ್ಪಾದನಾ ತಂತ್ರಜ್ಞಾನದಿಂದ ಲಭಿಸುವುದನ್ನು ಅಂಥದೇ ವೈರತ್ವದ ವೈರುಧ್ಯವಿಲ್ಲದಂತಹ ಸಮಾಜವು ಅನುಭೋಗಿಸಲಡ್ಡಿಯಿಲ್ಲ.

ಭೌತವಾದಿ ಗತಿತಾರ್ಕಿಕ ತತ್ತ್ವಶಾಸ್ತ್ರದ ಮೂರನೆಯ ನಿಯಮವು ನಿಷೇಧದಿಂದ ನಿಷೇಧ ಮತ್ತು ಅದರಿಂದಾಗಿ ಉನ್ನತ ಹಂತಗಳತ್ತ ಕ್ರಮಿಸುವುದು. ಇಲ್ಲಿ ನಿಷೇಧವೆಂದರೆ ನೇತ್ಯಾತ್ಮಕ ಪ್ರಕ್ರಿಯೆಯಲ್ಲ. ಅಭಿವೃದ್ಧಿಯ ಹಾದಿಯಲ್ಲಿ ಒಂದು ಹಿಂದಿನ ಹಂತವನ್ನು ನೂತನವಾದ ಇನ್ನೊಂದು ಹಂತವು ನಿಷೇಧಿಸುತ್ತದೆಯೆಂದರೆ ಎರಡು ಅರ್ಥಗಳು ಸಾಧ್ಯ: (ಅ) ಹಿಂದಿನದರ ಗರ್ಭದಲ್ಲಿ ಇಂದಿನದು ಮೂಡಿದೆ, ಮತ್ತು (ಆ) ಅದನ್ನು ವಿರೋಧಿಸುವುದರಲ್ಲಿ ಇದು ಜನ್ಮ ತಾಳಿದೆ. ಹೊಸದು ಆವಿರ್ಭಾವವಾಗಲು ಅದರ ಹಿಂದಿನದು ತನ್ನ ಕಾಣಿಕೆ ನೀಡಿದೆ. ಆ ಅರ್ಥದಲ್ಲಿ ನಿಷೇಧವು ಇತ್ಯಾತ್ಮಕವಾದ ಒಂದು ಬೆಳವಣಿಗೆಯೆಂದೇ ತಿಳಿಯಬೇಕು. ಹಿಂದಿನದನ್ನು ಸುಮ್ಮನೆ ಅಳಿಸಿಹಾಕುವುದಲ್ಲ; ಅದಕ್ಕಿಂತ ಉನ್ನತ ಹಂತವೊಂದು ಅಸ್ತಿತ್ವಕ್ಕೆ ಬರಲು ಸನ್ನಿವೇಶವನ್ನು ರಚಿಸಿಕೊಟ್ಟು ಆಮೇಲೆ ಅದು ಇಲ್ಲವಾಗುತ್ತದೆ. ಸದಾ ಮುಂದುವರಿಯುತ್ತಲೇ ಇರುವ ನಿರಂತರ ಪ್ರಕ್ರಿಯೆಯಲ್ಲಿ ಯಾವುದು ನಿಷೇಧಿಸಲ್ಪಟ್ಟಿತೋ ಅದು ಮುಂದುವರಿಯುವುದರ ಒಂದು ಸ್ತರವಾಗಿ ಕಾಣಬರುತ್ತದೆ. ಹಿಂದಿನ ಹೆಗ್ಗಳಿಕೆಗಳನ್ನೆಲ್ಲಾ ಬಿಟ್ಟುಕೊಟ್ಟು ಮುಂದುವರಿಯುವ ಪ್ರಸಂಗ ಇದಲ್ಲ. ಅದನ್ನೆಲ್ಲಾ ಮೈಗೂಡಿಸಿಕೊಂಡು, ಅದಕ್ಕೆ ಇನ್ನಷ್ಟನ್ನು ಸೇರಿಸಿಕೊಂಡು, ಮುಂದಿನ ಮೇಲಿನ ಹಂತಕ್ಕೇರುವುದು ಇಲ್ಲಿಯ ವಿದ್ಯಮಾನ.

ಒಂದು ಉದಾಹರಣೆಯನ್ನು ನೋಡಬಹುದು: ಬಂಡವಾಳಶಾಹಿಯ ಜಾಗದಲ್ಲಿ ಸಮಾಜವಾದವು ಸ್ಥಾಪನೆಗೊಳ್ಳುತ್ತದೆ. ಅಂದರೆ, ಇಲ್ಲಿ ಒಂದು ನಿಷೇಧವಿದೆ. ಆದರೆ ಈ

ಹೊಸ ಆವಿಷ್ಕಾರದ ಸಾಧ್ಯತೆಯನ್ನು ನಿರ್ಮಿಸಿಕೊಟ್ಟಿದ್ದು ಹಿಂದಿನ ವ್ಯವಸ್ಥೆ. ಸಾಮಾಜಿಕ ಅಭಿವೃದ್ಧಿಯ ಹಾದಿಯಲ್ಲಿ ಇದು ಮೇಲಿನ ಹಂತ. ಬಂಡವಾಳಶಾಹಿಯೊಂದಿಗೆ ಅದರ ಸಾಧನೆಗಳಿಗೆಲ್ಲಾ ಚ್ಯುತಿಯುಂಟಾಗುವುದಿಲ್ಲ. ಉತ್ಪಾದನಾ ತಂತ್ರದಲ್ಲಿ ಅಳವಡಿಸಿಕೊಳ್ಳಲಾದ ಹೊಸ ವಿಧಾನಗಳು, ಸಾಂಸ್ಕೃತಿಕ ಲೋಕದ ದಾಪುಗಾಲುಗಳು, ಇವನ್ನೆಲ್ಲಾ ಉಳಿಸಿಕೊಂಡೇ ಮುಂದಿನ ಹಂತಕ್ಕೆ ಹೆಜ್ಜೆಯಿಡುವುದು. ಅದಕ್ಕೆ ಬೇರೆಷ್ಟೋ ಸೇರ್ಪಡೆಗಳಾಗುತ್ತವೆ, ನಿಜ; ಆದರೆ ಹಿಂದಿನದನ್ನೆಲ್ಲಾ ಕೊಚ್ಚಿಹಾಕುವುದಿಲ್ಲ.

ಇಲ್ಲಿ ಗಮನಿಸಬೇಕಾದ ಇನ್ನೊಂದಂಶ ಇದು: ನಿಷೇಧಕ್ಕೆ ಪ್ರೇರಣೆಯು ಹೊರಗಿನಿಂದೆಲ್ಲೊ ಬರುವುದಿಲ್ಲ. ಅಭಿವೃದ್ಧಿ ಹೊಂದುತ್ತಿರುವಾಗ ತನ್ನ ನಿಷೇಧವನ್ನು ತಾನೇ ನಿರ್ಮಿಸಿಕೊಳ್ಳುವುದು ಇದರ ವೈಶಿಷ್ಟ್ಯ. ಆದ್ದರಿಂದ ಸಾಮಾಜಿಕ ಕ್ರಾಂತಿಯೆಂದರೆ ಏನೋ ವಿಪತ್ಕಾರಿ ಬೆಳವಣಿಗೆಯೆಂಬ ಆತಂಕಕ್ಕೆ ಎಡೆಯಿಲ್ಲ; ಅಂತೆಯೇ, ಯಾರೋ ಆತಂಕಕಾರಿಗಳು ಈ ಕ್ರಾಂತಿಯನ್ನು ಉಂಟುಮಾಡಿದರೆಂಬ ಭಾವನೆಯೂ ಅನಗತ್ಯ. ಹಿಂದಿನ ಹಂತವು ನಿಷೇಧಕ್ಕೆ ಸಜ್ಜಾಗಿಲ್ಲದಿದ್ದರೆ ಯಾವ ಕ್ರಾಂತಿಕಾರಿಯೂ ಬಲವಂತವಾಗಿ ಮುಂದಿನ ಹಂತವನ್ನು ಉದ್ಘಾಟಿಸಲಾರ. ನಿಷೇಧವೆಂದರೆ ಅಪಘಾತಕ್ಕೆ ಸಮಾನವೆಂಬ ಕಲ್ಪನೆಯನ್ನು ದೂರಮಾಡಬೇಕು. ರಸ್ತೆಯಲ್ಲಿ ವಾಹನವೊಂದು ಪಾದಚಾರಿಗೆ ಡಿಕ್ಕಿ ಹೊಡೆದು ಅವನನ್ನು ಬೀಳಿಸಿದರೆ ಅದೂ ನಿಷೇಧವೇ; ಆದರೆ ಅದು ಪೂರ್ತಿಯಾಗಿ ನೇತ್ಯಾತ್ಮಕವಾದ್ದು. ಪ್ರಕೃತಿ ಮತ್ತು ಸಮಾಜಗಳಲ್ಲಿ ಇಂತಹ ಅಪಘಾತಗಳೂ ಉಂಟು. ಆದರೆ ಇತ್ಯಾತ್ಮಕ ಸಾಮಾಜಿಕ ಬೆಳವಣಿಗೆಗಳಲ್ಲಿ ಕಂಡುಬರುವ ನಿಷೇಧವು ಅಪಘಾತದ ಸ್ವರೂಪದ್ದಲ್ಲ.

ನಿಷೇಧವನ್ನು ಈವರೆಗೆ ಪ್ರಸ್ತಾಪಿಸಲಾಯಿತು. ಆದರೆ 'ನಿಷೇಧದ ನಿಷೇಧ' ಎಂಬ ನಿಯಮದ ಅರ್ಥವೇನು? ಗತಿತಾರ್ಕಿಕ ಬೆಳವಣಿಗೆಯ ಒಂದು ವಿಶಿಷ್ಟ ಪ್ರಮೇಯ ಇದು. ಒಂದು ನಿರ್ದಿಷ್ಟ ಸಂದರ್ಭದ ನಿಷೇಧವನ್ನು ಗ್ರಹಿಸುವುದು ಸುಲಭ. ಅದು ನಿರಂತರ ಗತಿಯ ಸ್ವರೂಪದ್ದಾದಾಗ ನಿಷೇಧ ಪ್ರಕ್ರಿಯೆಯೂ ನಿರಂತರವಾಗಿ ಸಾಗುತ್ತದೆ. ಬೀಜದಿಂದ ಮೊಳಕೆ, ನಂತರ ಸಸಿ, ಆಮೇಲೆ ಗಿಡ, ಅದರ ನಂತರ ಮರ, - ಈ ಸ್ರೋತದಲ್ಲಿ ನಿಷೇಧದ ನಿಷೇಧವು ಅನೂಚಾನವಾಗಿ ಕಾಣಬರುತ್ತದೆ. ಸಾಮಾನ್ಯ ತಿಳುವಳಿಕೆಯಲ್ಲಿ ನಿಷೇಧವನ್ನು ನಿಷೇಧಿಸಿದರೆ ಪೂರ್ವಸ್ಥಿತಿಯನ್ನು ತಲುಪುತ್ತೇವೆಂಬ ಗ್ರಹಿಕೆ ಇರುತ್ತದೆ. ನನ್ನ ಗಡಿಯಾರವನ್ನು ಅವನು ಕದ್ದ, ಅವನಿಂದ ಅದನ್ನು ನಾನು ಕಿತ್ತು ತಂದೆ: ಇದರಲ್ಲಿ ಗಡಿಯಾರ ಪೂರ್ವಸ್ಥಿತಿಯನ್ನು ತಲುಪಿದೆ. ಇಂದು ಸುಂದರವಾದ ದಿನ ಇರುತ್ತದೆ; ಇಲ್ಲ, ಇಂದು ಮಳೆ ಸುರಿದು ರಾಡಿಯಾಗುತ್ತದೆ; ಛೆ, ಎಲ್ಲಾದರೂ ಉಂಟೆ, ಇಂದು ಮಳೆ ಆಗುವುದಿಲ್ಲ. - ಇಲ್ಲೂ ನಿಷೇಧದ ನಿಷೇಧದಿಂದ ಪೂರ್ವಸ್ಥಿತಿಯ ಪುನರುಚ್ಚಾರಣೆಯಾಗಿದೆ. ಗತಿತಾರ್ಕಿಕ ತತ್ತ್ವಶಾಸ್ತ್ರೀಯ ಪ್ರಮೇಯದಲ್ಲಿ ನಿಷೇಧದ ನಿಷೇಧವೆಂದರೆ ಅದಲ್ಲ. ಅಭಿವೃದ್ಧಿಯ ಒಂದು ಪ್ರಕ್ರಿಯೆಯನ್ನು ನಿದರ್ಶನವಾಗಿ ನೋಡಬಹುದು: ನಮ್ಮ ಸಮಾಜವು ಹಿಂದೊಮ್ಮೆ ಬುಡಕಟ್ಟು ಜೀವನದ ವ್ಯವಸ್ಥೆಯಲ್ಲಿತ್ತು. ಅದನ್ನು ಆದಿಮ ಸಾಮ್ಯವಾದಿ ಸ್ಥಿತಿ ಎನ್ನುತ್ತಾರೆ.

ಎಷ್ಟೋ ಶತಮಾನಗಳ ನಂತರ ಅದು ದಾಸ್ಯಪದ್ಧತಿಯನ್ನುಳ್ಳ ಸಮಾಜವಾಯಿತು. ಆಮೇಲೆ ಊಳಿಗಮಾನ್ಯತೆಯ ವ್ಯವಸ್ಥೆಗೆ ಕಾಲಿಟ್ಟಿತು. ಇನ್ನೊಂದು ಹೆಜ್ಜೆ ಮುಂದೆ ಹೋದರೆ ಬಂಡವಾಳಶಾಹಿ ಸಮಾಜ. ದುಡಿಯುವ ಜನ ಟೊಂಕ ಕಟ್ಟಿ ನಿಂತರೆ ಅದರ ಮುಂದಿನ ಹಂತ ಸಮಾಜವಾದಿ ವ್ಯವಸ್ಥೆ. ಎಂದೋ ಒಂದು ದಿನ ಸಾಮ್ಯವಾದಿ ವ್ಯವಸ್ಥೆ ಮರುಕಳಿಸುತ್ತದೆ, ಆದರೆ ಹಿಂದಿನ ಬುಡಕಟ್ಟು ಜೀವನದ ಸಾಮ್ಯವಾದಿ ಅವಸ್ಥೆ ಅದಾಗಿರುವುದಿಲ್ಲ. ಈ ಸರಣಿಯಲ್ಲಿ ಉದ್ದಕ್ಕೂ ನಿಷೇಧದ ನಿಷೇಧವನ್ನು ನೋಡಬಹುದು. ವರ್ಗರಹಿತ ಸಮಾಜದಿಂದ ವರ್ಗ ಸಮಾಜವಾಗಿ ಮಾರ್ಪಟ್ಟಾಗ ಒಂದು ನಿಷೇಧ; ಅದರ ನಿಷೇಧದಿಂದ ಮತ್ತೆ ನೇರವಾಗಿ ಹಿಂದಿನ ವರ್ಗರಹಿತ ಸಮಾಜಕ್ಕೆ ಹಿಂದಿರುಗಲಿಲ್ಲ. ಬದಲಾಗಿ, ಮುಂದಕ್ಕೆ ಕೊಂಡುಹೋಗಿ ಇನ್ನೊಂದು ಹೊಸಘಟ್ಟಕ್ಕೆ ಕಾಲಿರಿಸುವಂತೆ ಮಾಡಿತು. ಹಿಂದಿನದಕ್ಕಿಂತಲೂ ಉನ್ನತ ಮಟ್ಟ, ಅಭಿವೃದ್ಧಿಯ ದೃಷ್ಟಿಯಿಂದ ಮತ್ತೆ ಸಾಧ್ಯತೆಗಳು ಪಕ್ವವಾಗಬಹುದಾದ ಹಂತ. ಇದೊಂದು ಸುರುಳಿ ಮೆಟ್ಟಿಲುಗಳ ಸಹಾಯದಿಂದ ಮೇಲೇರುವ ಮಾದರಿ. ಸುರುಳಿ ಸುತ್ತಿ ಬಂದಾಗ ಹೊರಟ ನೆಲೆಗೆ ಹಿಂದಿರುಗಿದಂತೆ ಭಾಸವಾಗುತ್ತದೆ, ಆದರೆ ಆ ಹಿಂದಿರುವಿಕೆಯಲ್ಲಿ ಮೇಲೇರಿರುವ ಪ್ರಸಂಗವಿರುತ್ತದೆ.

ನಮ್ಮ ಸಾಂಸ್ಕೃತಿಕ ಮತ್ತು ನಾಗರಿಕ ಜೀವನ ಉತ್ಕೃಷ್ಟವಾಗಿದ್ದುದು ಕ್ರಮೇಣ ಕ್ಷೀಣವಾಗುತ್ತಿದೆಯೆಂದು ಕೊರಗುವವರಿಗೆ ಗತಿತಾರ್ಕಿಕ ತತ್ತ್ವಶಾಸ್ತ್ರವು ಸ್ವಲ್ಪ ಸಮಾಧಾನ ತರಬಹುದು. ಆದರೆ ಕೆಲವು ಭಾವುಕ ಮತ್ತು ಭ್ರಾಮಕ ಜೀವಿಗಳಿಗೆ ಪರಿಪೂರ್ಣತೆಯು ಹಿಂದೆಂದೋ ಸಾಧಿಸಲ್ಪಟ್ಟಿತ್ತು; ಅಲ್ಲಿಂದ ಗಿರ್ರನೆ ನಾವು ಕೆಳಗಿಳಿಯುತ್ತಾ ಹೋಗುತ್ತೇವೆ, ಹೋಗುತ್ತಿದ್ದೇವೆ. ಆ ಹಿಂದಿನ ಶ್ರೇಷ್ಠ ಕಾಲವು ಕೇವಲ ನೆನಪು; ನಾವದನ್ನು ಪುನಃ ಸೃಷ್ಟಿಸಿಕೊಳ್ಳುವಂತಿಲ್ಲ. ಗತಿತಾರ್ಕಿಕ ಸಿದ್ಧಾಂತವು ಇಂತಹ ಚಿಂತನೆಗೆ ಸೊಪ್ಪುಹಾಕುವುದಿಲ್ಲ. ಇನ್ನು ಕೆಲವರ ಪ್ರಕಾರ ಅಭಿವೃದ್ಧಿಯು ಸಾಮರಸ್ಯದಿಂದ ಸರಳರೇಖೆಯೋಪಾದಿಯಲ್ಲಿ ಕೂಡಿಬರಬೇಕಾದ ಸಂಗತಿ. 'ವಿರೋಧ' ಎಂಬ ಕಲ್ಪನೆಗೆ ಅವರ ವಿರೋಧವಿರುವುದರಿಂದ ಈ ರೀತಿಯ ಬೆಳವಣಿಗೆಯನ್ನವರು ಆಶಿಸುತ್ತಾರೆ. ಆದರೆ ನಾವೀಗಾಗಲೆ ನೋಡಿರುವಂತೆ ಅಭಿವೃದ್ಧಿಯು ಸರಳರೇಖೆಯ ರೀತಿಯಲ್ಲಿ ನಡೆಯದು; ಆಂತರಿಕ ವೈರುಧ್ಯಗಳು ಅಭಿವೃದ್ಧಿಗೆ ಪುಷ್ಟಿ ನೀಡುತ್ತವೆ. ಅದು ಗತಿತಾರ್ಕಿಕ ಕ್ರಮದಲ್ಲಿ ಸಾಗುತ್ತಿರುತ್ತದೆ. ಇದು ಯಾರೋ ಆರೋಪಿಸಿದ ಅಥವಾ ವಿಧಿಸಿದ ನಿಯಮವಲ್ಲ. ವಾಸ್ತವಿಕತೆಯನ್ನು ವಿಶ್ಲೇಷಿಸುವುದರಿಂದ ಕಂಡುಕೊಂಡ ನಿಯಮ ಇದು, ಅಷ್ಟೆ.

ಈ ಚರ್ಚೆಯನ್ನು ಮುಕ್ತಾಯ ಮಾಡುವ ಮುನ್ನ ಏಂಗೆಲ್ಸರ ಇನ್ನೊಂದು ಪ್ರಬುದ್ಧ ಕೃತಿಯಾದ "ಪ್ರಕೃತಿಯಲ್ಲಿ ಗತಿತಾರ್ಕಿಕತೆ" ಎಂಬ ಗ್ರಂಥದ ಪ್ರಸ್ತಾಪವು ಅನುಚಿತವಾಗಲಾರದು. ಮೇ ೧೮೭೩ರಲ್ಲಿ ಈ ಗ್ರಂಥಕ್ಕಾಗಿ ವಿಷಯ ಸಂಗ್ರಹವನ್ನು ಆರಂಭಿಸಲಾಗಿತ್ತಾದರೂ ಕೆಲಸಗಳ ಒತ್ತಡದಿಂದಾಗಿ ಅದನ್ನು ಬರೆಯಲು ಸಾಧ್ಯವಾಗಿರಲಿಲ್ಲ. ೧೮೭೬ರ ವೇಳೆಗೆ ಬರವಣಿಗೆ ಆರಂಭವಾಗಿತ್ತು, ಆದರೆ ಮಧ್ಯದಲ್ಲೇ ನಿಂತುಹೋಯಿತು. ೧೮೮೩ರಲ್ಲಿ

ಪುಸ್ತಕದ ವಿಭಾಗಗಳನ್ನು ಯೋಜಿಸಲಾಗಿತ್ತು, ಕೆಲವು ಲೇಖನಗಳೂ ಸಿದ್ಧವಾಗಿದ್ದವು. "ವಾನರನಿಂದ ಮಾನವನವರೆಗೆ" (ಇದರ ಕನ್ನಡ ಅನುವಾದವನ್ನು ಪ್ರಸ್ತುತ ಲೇಖಕ ಮಾಡಿದ್ದಾನೆ) ಎಂಬುದು ೧೮೭೬ರಲ್ಲಿ ಮತ್ತು "ಚೈತನ್ಯದ ವಿಶ್ವದಲ್ಲಿ ಪ್ರಕೃತಿ ವಿಜ್ಞಾನ" ಎಂಬುದು ೧೮೭೮ರಲ್ಲಿ ಸ್ವತಂತ್ರವಾಗಿ ಪ್ರಕಟವಾಗಿದ್ದು, ೧೯೨೫ರಲ್ಲಿ ಗ್ರಂಥವು ಪೂರ್ಣ ರೂಪದಲ್ಲಿ ಹೊರತರಲಾದಾಗ ಅವನ್ನು ಅದರಲ್ಲಿ ಅಡಕಗೊಳಿಸಲಾಗಿತ್ತು. "ವಾನರನಿಂದ ಮಾನವನವರೆಗೆ" ಎಂಬ ಭಾಗವು ಅಪೂರ್ಣವಾಗಿ ಉಳಿದುಹೋಗಿದೆ. ತತ್ತ್ವಶಾಸ್ತ್ರ ಮತ್ತು ಪ್ರಕೃತಿ ವಿಜ್ಞಾನದ ನಡುವಣ ಸಂಬಂಧ, ಭೌತದ್ರವ್ಯದಲ್ಲಿರುವ ಚಲನೆಯ ವೈವಿಧ್ಯತೆಯ ಅಧ್ಯಯನ, ವಿಜ್ಞಾನದ ಪ್ರಭೇದಗಳು, ಗತಿತಾರ್ಕಿಕ ನಿಯಮಗಳು ಪ್ರಕೃತಿಯಲ್ಲಿ ಪ್ರಾಯೋಗಿಕ ವಾಗಿ ಕಾಣಬರುವ ಸ್ವರೂಪ, ಮುಂತಾದ ವಿಷಯಗಳು ಈ ಗ್ರಂಥದಲ್ಲಿ ಚರ್ಚೆಗೆ ಬಂದಿವೆ.

ಎಡ್ವರ್ಡ್ ಟೆಲರ್ ಎಂಬ ಅಮೆರಿಕಾದ ಭೌತವಿಜ್ಞಾನಿ ತನ್ನ ಆತ್ಮಕಥೆಯಲ್ಲಿ ಜಿಯೋ (ಜಾರ್ಜ್) ಗಾಮೋ ಎಂಬುವನ ಬಗ್ಗೆ ಪ್ರಸ್ತಾಪಿಸಿದ್ದಾನೆ. ಟೆಲರ್ ಜಲಜನಕ ಬಾಂಬಿನ ಜನಕ; ನ್ಯೂಟ್ರಾನ್ ಬಾಂಬಿನ ಜನಕನೂ ಹೌದೆನ್ನುತ್ತಾರೆ. ಮಿಲಿಟರಿ ಶಕ್ತಿಯಿಂದ ಅಮೆರಿಕಾ ತನ್ನ "ಸ್ವತಂತ್ರ ವಿಶ್ವ"ದ ಕಲ್ಪನೆಯನ್ನು ಎಲ್ಲೆಡೆ ಬಿತ್ತಬಹುದೆಂಬ ನಂಬಿಕೆ ಈತನದು. ಅಮೆರಿಕಾದ ಎಲ್ಲ ಮಿಲಿಟರಿ ಕಾರ್ಯಾಚರಣೆಗಳನ್ನೂ ಸಮರ್ಥಿಸಿರುವ ಟೆಲರ್ ಒಂದೆಡೆ ಏಂಗೆಲ್ಸ್ ಹರಡಿದ್ದನೆನ್ನಲಾದ ಮಿಥ್ಯೆಗಳನ್ನು ಲೇವಡಿ ಮಾಡಿದ್ದಾನೆ. ಗಾಮೊ ವ್ಯಂಗ್ಯಚಿತ್ರಗಳನ್ನು ರಚಿಸುವುದರಲ್ಲಿ ನಿಪುಣನಾಗಿದ್ದನಂತೆ; ಅಂತೆಯೇ ಸೋವಿಯೆತ್ ಒಕ್ಕೂಟದ ಕಟು ಟೀಕೆಯನ್ನೂ ಮಾಡುತ್ತಿದ್ದನಂತೆ. ಅವನ ಪ್ರಕಾರ ಐನ್‌ಸ್ಟೈನರ ಸಾಪೇಕ್ಷತಾ ಸಿದ್ಧಾಂತವನ್ನು ಸೋವಿಯೆತ್ ವಿಜ್ಞಾನಿಗಳು ನಂಬಲು ಆಗುತ್ತಿರಲಿಲ್ಲ; ಏಕೆಂದರೆ ಏಂಗೆಲ್ಸ್ ಆಕಾಶದಲ್ಲಿ 'ಈತರ್' ಎಂಬ ಮಾಧ್ಯಮದ ಮೂಲಕ ಬೆಳಕಿನ ಅಲೆಗಳು ಪ್ರಸಾರವಾಗುತ್ತವೆಂದು ಹೇಳಿದ್ದು, ಅದನ್ನು ತಿರಸ್ಕರಿಸಲು ಸೋವಿಯೆತ್ ವಿಜ್ಞಾನಿಗಳಿಗೆ ಆಗುತ್ತಿರಲಿಲ್ಲ; ಹಾಗೇನಾದರೂ ಅವರು ಏಂಗೆಲ್ಸ್ ವಿರುದ್ಧದ ಅಭಿಪ್ರಾಯವನ್ನು ಮಾನ್ಯ ಮಾಡಿದ್ದರೆ ಅವರಿಗೆ ಸರ್ಕಾರವು ಶಿಕ್ಷೆ ವಿಧಿಸುತ್ತಿತ್ತು! ಒಮ್ಮೆ ಗಾಮೋ ವ್ಯಂಗ್ಯಚಿತ್ರವೊಂದನ್ನು ರಚಿಸಿದನಂತೆ: ಒಂದು ಬೆಕ್ಕು ಆಕಾಶದ 'ಈತರ್ 'ಅನ್ನು ಗಾಡಿಯಲ್ಲಿ ಎಳೆದು ತರುತ್ತಿದ್ದಿತು. ಹತ್ತೊಂಬತ್ತನೆಯ ಶತಮಾನದ ನಂಬಿಕೆಯಾಗಿದ್ದ 'ಈತರ್ ' ಸೋವಿಯೆತ್ ಒಕ್ಕೂಟದಲ್ಲಿ ಇಪ್ಪತ್ತನೆಯ ಶತಮಾನದ ವಿಜ್ಞಾನಿಗಳ ಮನಸ್ಸಿನಲ್ಲಿ ಇನ್ನೂ ನೆಲೆಸಿದ್ದಿತೆಂದು ಗಾಮೋ ಮತ್ತು ಟೆಲರ್ ಹಂಚಿಕೊಂಡಿರುವ ಹಾಸ್ಯದ ಸಾರಾಂಶ. ಟೆಲರ್ ಹೇಳುತ್ತಾನೆ, ಗಾಮೋ ಮಿತ್ರರು ಸಹ ಇದರಿಂದಾಗಿ ಶಿಕ್ಷೆಗೆ ಗುರಿಯಾದರಂತೆ. ಇಂತಹ ಹತ್ತಾರು ಕುಚೋದ್ಯಗಳನ್ನು ಟೆಲರ್ ತನ್ನ ಆತ್ಮಕಥೆಯಲ್ಲಿ ತುಂಬಿದ್ದಾನೆಂಬುದು ಬೇರೆ ವಿಷಯ. ಟೆಲರ್‌ಗೆ ನಿಕಟ ಸಂಪರ್ಕವಿದ್ದ ಲೆವ್ ಲ್ಯಾಂಡೋ ಪ್ರಖ್ಯಾತ ಸೋವಿಯೆತ್ ವಿಜ್ಞಾನಿ. ಆತ ಬರೆದಿರುವ ಒಂದು ಜನಪ್ರಿಯ ವಿಜ್ಞಾನದ ಕಿರುಹೊತ್ತಿಗೆ ಸಾಪೇಕ್ಷತಾ ಸಿದ್ಧಾಂತವನ್ನು ಕುರಿತಾದದ್ದು ಮತ್ತು ಸೋವಿಯೆತ್ ಒಕ್ಕೂಟದಲ್ಲಿ ಅದು ಲಕ್ಷಗಟ್ಟಲೆ ಪ್ರತಿಗಳಲ್ಲಿ ಮಾರಾಟವಾಗಿತ್ತು.

ಆದರೂ ಟೆಲರ್ ಹೇಳುತ್ತಾನೆ, ಸೋವಿಯೆತ್ ಒಕ್ಕೂಟದಲ್ಲಿ ಸಾಪೇಕ್ಷತಾ ಸಿದ್ಧಾಂತವನ್ನು ನಂಬಲು ಏಂಗೆಲ್ಸ್ ಅಡ್ಡಿಬಂದಿದ್ದ, ಎಂದು! ಅದೇನೇ ಇರಲಿ, ಅತಿದೊಡ್ಡ ವಿಜ್ಞಾನಿಗಳು ಕೂಡ ಏಂಗೆಲ್ಸ್‌ರ ವೈಜ್ಞಾನಿಕ ನಿರೂಪಣೆಗಳನ್ನು ಅಸಡ್ಡೆಯಿಂದ ತಳ್ಳಿಹಾಕಲಿಲ್ಲವೆಂಬುದು ಪ್ರಸ್ತುತ ನಾವು ಗಮನಿಸಬೇಕಾದ ಒಂದು ಸಂಗತಿ. ಹತ್ತೊಂಬತ್ತನೆಯ ಶತಮಾನದ ವೈಜ್ಞಾನಿಕ ತಿಳುವಳಿಕೆಯೇ ಅಂತಿಮವಾದ ಜ್ಞಾನವೆಂದು ಏಂಗೆಲ್ಸ್ ಭಾವಿಸಿದ್ದರೆಂದು ಗಾಮೋ ಮತ್ತು ಟೆಲರ್ ಹಂಗಿಸಿದರೆ ಅವರ ಅಜ್ಞಾನಕ್ಕೆ ನಾವು ಮರುಗಬೇಕಷ್ಟೆ! ವಿಜ್ಞಾನದ ಪ್ರಕ್ರಿಯೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿರುವ ಏಂಗೆಲ್ಸ್‌ರ ಗ್ರಂಥವು ಉಪಲಬ್ಧವಿರುವಾಗ ಅದನ್ನು ನೋಡದೆ ವ್ಯಂಗ್ಯವಾಡುವ ಗಾಮೋ-ಟೆಲರ್‌ಗಳಿಗೆ ವಿಜ್ಞಾನದ ಆಸಕ್ತಿಗಿಂತಲೂ ರಾಜಕೀಯ ಪೂರ್ವಗ್ರಹ ಗಾಢವಾಗಿರಬೇಕೆನಿಸುತ್ತದೆ.

ತನ್ನ ಹಾಗೂ ತನ್ನ ಶತಮಾನದ ಮಿತಿಯ ಬಗ್ಗೆ ಏಂಗೆಲ್ಸ್‌ಗೆ ಪೂರ್ಣ ಪರಿಜ್ಞಾನವಿದೆ. ತಾನು ನಿರೂಪಿಸಿರುವ ಅಂಶಗಳು ಚಾರಿತ್ರಿಕವಾಗಿ ಸಮಕಾಲೀನ ಜ್ಞಾನದ ಎಲ್ಲೆಯಿಂದ ಬದ್ಧವಾಗಿವೆಯೆಂದು ಸ್ವತಃ ಏಂಗೆಲ್ಸ್ ಗ್ರಂಥದ ಆದಿಯಲ್ಲಿ ಮನವರಿಕೆ ಮಾಡಿಕೊಡುತ್ತಾರೆ. ಭೌತದ್ರವ್ಯದಲ್ಲಿ ಚಲನೆಯ ಸ್ವರೂಪಗಳನ್ನು ಅರ್ಥೈಸುವಾಗ ಯಾಂತ್ರಿಕ ಚಲನೆಯನ್ನು ಅತ್ಯಂತ ಕನಿಷ್ಠ ರೂಪದ ಚಲನೆಯೆಂದೂ, ಚಿಂತನೆಯನ್ನು ಅತ್ಯಂತ ಗರಿಷ್ಠ ರೂಪದ ಚಲನೆಯೆಂದೂ ಅವರು ಗುರುತಿಸಿದ್ದಾರೆ. ಆ ಸಂದರ್ಭದಲ್ಲೇ ತಮ್ಮ ನಿರೂಪಣೆಯ ಮಿತಿಯನ್ನು ಸಮಕಾಲೀನ ಜ್ಞಾನವು ನಿರ್ಧರಿಸುತ್ತದೆ ಎಂದಿದ್ದಾರೆ. ವೈಜ್ಞಾನಿಕ ಸತ್ಯವು ವಿಕಾಸವಾಗುತ್ತಾ ಹೋಗುತ್ತದೆ, ಆದರೆ ಎಲ್ಲ ಹಂತಗಳಲ್ಲೂ ಸತ್ಯದ ಆವಿಷ್ಕಾರವು ವೈಜ್ಞಾನಿಕ ವಿಧಾನದಿಂದ ಮಾತ್ರವೇ ಆಗಬೇಕೆಂಬುದು ಏಂಗೆಲ್ಸರ ಗ್ರಹಿಕೆ. ಅಣುಗಳ ಚಲನೆಯು ಭೌತಶಾಸ್ತ್ರ, ಪರಮಾಣುಗಳ ಚಲನೆಯು ರಸಾಯನಶಾಸ್ತ್ರ ಮತ್ತು ಆಕಾಶಕಾಯಗಳ ಚಲನೆಯು ಯಾಂತ್ರಿಕ ವಿಜ್ಞಾನ ಎಂಬ ಕ್ಷೇತ್ರಗಳಿಗೆ ಸೇರಿದ್ದೆಂದು ಏಂಗೆಲ್ಸ್ ಹೇಳುವಾಗ ಈ ಮಿತಿಯನ್ನು ನಾವು ಗುರುತಿಸಿಕೊಳ್ಳಬೇಕು. ಮುಖ್ಯವಾಗಿ ಅವರು ಪ್ರಕೃತಿ ವಿಜ್ಞಾನದ ವಿಧಾನವನ್ನು ತಿಳಿಸಿಕೊಡುವ ಸಿದ್ಧಾಂತಿ. ಪ್ರತಿಯೊಂದು ವೈಜ್ಞಾನಿಕ ಘಟಕದ ಬೆಳವಣಿಗೆಯಲ್ಲೂ ಗತಿತಾರ್ಕಿಕತೆಯು ಹೇಗೆ ಪ್ರಾಯೋಗಿಕ ಮತ್ತು ಗಣಿತಶಾಸ್ತ್ರೀಯ ಲೆಕ್ಕಾಚಾರಗಳೊಂದಿಗೆ ಸಮ್ಮಿಳಿತವಾಗಿದೆ ಎಂಬುದನ್ನವರು ತೋರಿಸಿಕೊಡಲು ಯತ್ನಿಸಿದ್ದಾರೆ.

ವಿಜ್ಞಾನದ ತಾತ್ವಿಕತೆಯನ್ನು ಏಂಗೆಲ್ಸ್ ಯಾವ ಮಟ್ಟದಲ್ಲಿ ಗ್ರಹಿಸಿದ್ದರೆಂಬುದನ್ನು ಸಮಕಾಲೀನ ವಿಜ್ಞಾನಿಯೊಬ್ಬರು ಹೇಗೆ ಮಾಪನ ಮಾಡಿದ್ದಾರೆಂದು ನೋಡಿದರೆ ಬಹುಶಃ ಏಂಗೆಲ್ಸರ ಕೊಡುಗೆಯ ಮೌಲ್ಯವನ್ನು ಗುರುತಿಸಲು ಸಾಧ್ಯವಾದೀತು. ಆತನು ವಿಶೇಷವಾಗಿ ಭೌತಶಾಸ್ತ್ರೀಯ ಸಿದ್ಧಾಂತದ ಬೆಳವಣಿಗೆಯಲ್ಲಿ ಏಂಗೆಲ್ಸರ ಪಾತ್ರವನ್ನು ಸ್ಮರಿಸಿದ್ದಾನೆ. ಆತ ಜಪಾನಿನವನು, ಶೋಯಿಚಿ ಸಕಾತ ಎಂದು ಆತನ ಹೆಸರು. ೨೦ನೆಯ ಶತಮಾನದ ಭೌತಶಾಸ್ತ್ರದ ಕ್ಷೇತ್ರದಲ್ಲಿ ಈತನಿಗೆ ಮಹತ್ವದ ಸ್ಥಾನವಿದೆ. ಆತ ಕೆಲಸಮಾಡಿದ್ದು ಮೂಲಭೂತ ಅಥವಾ ಪ್ರಾಥಮಿಕ ದ್ರವ್ಯಗಳು (ಫಂಡಮೆಂಟಲ್ ಅಥವಾ ಎಲಿಮೆಂಟರಿ

ಪಾರ್ಟಿಕಲ್ಸ್) ಎಂಬ ಕ್ಷೇತ್ರದಲ್ಲಿ. ಇನ್ನೊಬ್ಬ ಭೌತಶಾಸ್ತ್ರಜ್ಞ ಎಚ್.ಯುಕಾವ ಎಂಬುವನೊಡನೆ 'ಮೇಸಾನ್' ದ್ರವ್ಯದ ಬಗ್ಗೆ ಈತ ಪ್ರೌಢವಾದ ಅಧ್ಯಯನ ನಡೆಸಿದ್ದು ೧೯೩೫ರ ಸುಮಾರಿನಲ್ಲಿ. (ಟೆಲರ್ ಸಹ ಈ ಯುಕಾವನನ್ನು ಮೆಸಟ್ರಾನ್ ಸಂಬಂಧದಲ್ಲಿ ಸ್ಮರಿಸಿದ್ದಾನೆಂಬುದು ಗಮನಾರ್ಹ). "ಪ್ರಾಥಮಿಕ ದ್ರವ್ಯಗಳ ಸಕಾತ ಮಾದರಿ" ಎಂದು ಸಕಾತನ ಸಂಶೋಧನೆಯನ್ನು ಹೆಸರಿಸುತ್ತಾರೆ. ಇಂತಹ ಪ್ರಸಿದ್ಧ ಪ್ರೌಢ ವಿಜ್ಞಾನಿ ಏಂಗೆಲ್ಸರನ್ನು ಸ್ಮರಿಸಿಕೊಳ್ಳಬೇಕೇಕೆ? ತನ್ನ ಸಂಶೋಧನಾ ಸೂಕ್ಷ್ಮಗಳತ್ತ ಹಿನ್ನೋಟ ಬೀರುತ್ತಾ ೧೯೭೯ರಲ್ಲಿ ಆತ ಬರೆದದ್ದು ಹೀಗೆ: "ಏಂಗೆಲ್ಸ್ ತನ್ನ 'ಪ್ರಕೃತಿಯಲ್ಲಿ ಗತಿತಾರ್ಕಿಕತೆ'ಯಲ್ಲಿ ಮುಖ್ಯವಾಗಿ ಪ್ರತಿಪಾದಿಸುವುದು ಪ್ರಕೃತಿಯು ಅನೇಕ ಗುಣಗಳನ್ನು ಹೊಂದಿದೆ ಮತ್ತು ಆ ಗುಣಗಳು ವಿಭಿನ್ನ ಸ್ತರಗಳಲ್ಲಿರುತ್ತವೆ ಎಂಬುದನ್ನು. ಭೌತ ನಿಯಮಗಳು ಆ ಪ್ರತಿಯೊಂದು ಸ್ತರದ ಗುಣಗಳ ಮೇಲೂ ಪ್ರಭಾವವನ್ನು ಬೀರುತ್ತವೆ. ಈ ಸ್ತರಗಳು ಒಂದರಿಂದ ಇನ್ನೊಂದು ಸ್ವತಂತ್ರವಲ್ಲ; ಅಂತೆಯೇ ಒಂದರಿಂದ ಇನ್ನೊಂದು ಪೃಥಕ್ ಸಹ ಅಲ್ಲ. ಅವು ಪರಸ್ಪರ ಆಶ್ರಯವಿರುವಂಥವು ಮತ್ತು ಅಂತಸ್ಸಂಬಂಧ ಇರುವಂಥವು. ಅವು ಸತತವಾಗಿ ಹುಟ್ಟುವುದು, ವಿನಾಶವಾಗುವುದು ಮತ್ತು ಪರಸ್ಪರ ಬದಲಾವಣೆ ಹೊಂದುತ್ತಿರುವುದು ಇವಕ್ಕೆ ಪಕ್ಕಾಗಿರುತ್ತವೆ. ಈ ರೀತಿಯಲ್ಲಿ ಅವು ಪ್ರಕೃತಿಯ ಪೂರ್ಣತೆ, ಐಕ್ಯತೆಗಳಿಗೆ ಕಾರಣವಾಗಿವೆ. ...ಒಂದೆಡೆ ಲೆನಿನ್ ಹೇಳಿರುವ ಮಾತನ್ನು ನಾನೆಂದೂ ಮರೆಯಲಾರೆ: ಒಂದು ಪರಮಾಣು ಹೇಗೆ ಅನಂತವೋ, ಹಾಗೆ ಒಂದು ಇಲೆಕ್ಟ್ರಾನ್ ಸಹ ಅನಂತ. ಭೌತದ್ರವ್ಯದ ಆತ್ಯಂತಿಕ ಮೂಲವೆಂದರೆ ಪ್ರಾಥಮಿಕ ದ್ರವ್ಯಗಳೆಂದು ವಾದ ಹೂಡಿದಾಗ ಅದನ್ನೆದುರಿಸಲು ನನಗೆ ಈ ಮಾತುಗಳು ಪ್ರೇರಣೆ ನೀಡಿವೆ. ಆದ್ದರಿಂದಲೇ ಭೌತದ್ರವ್ಯವನ್ನು ಒಂದು ಸಂಯುಕ್ತ ಮಾದರಿಯನ್ನಾಗಿ ನೋಡಲು ನಾನು ಯತ್ನಿಸುವುದು."

ಹಾಗೆ ನೋಡಿದರೆ, ಸಕಾತ ಹೇಳುವಂತೆ ಭೌತಶಾಸ್ತ್ರದ ಬೆಳೆವಣಿಗೆಯಲ್ಲಿ ದಾರಿದೀಪವಾಗಿ ಕೆಲಸಮಾಡಿದ್ದು ಜೇಮ್ಸ್ ಚಾಡ್ವಿಕ್ ೧೯೩೨ರಲ್ಲಿ ನ್ಯೂಟ್ರಾನ್ ಅನ್ನು ಕಂಡುಹಿಡಿದ ಪ್ರಸಂಗ. ಪರಮಾಣುವಿನ ಅಂತರ್ಗತ ಬೀಜಗಳ ಬಗ್ಗೆ ಆಸಕ್ತಿ ಮೂಡಿಸಿದ್ದು ಈ ಸಂಶೋಧನೆ. ಹೀಗಿರುವಾಗ ಸಕಾತ ಏಂಗೆಲ್ಸರನ್ನೇಕೆ ಸ್ಮರಿಸಬೇಕಿತ್ತು? ಎಕ್ಸ್-ರೇ, ವಿಕಿರಣ, ಇಲೆಕ್ಟ್ರಾನ್ ಮುಂತಾದುವೆಲ್ಲಾ ೧೯ನೆಯ ಶತಮಾನದ ಅಂತ್ಯದ ವೇಳೆಗೆ ಬೆಳಕಿಗೆ ಬಂದಿದ್ದವು. ಇವುಗಳೆಲ್ಲದರ ಪೂರ್ಣಾರ್ಥ ಇನ್ನೂ ತಿಳಿಯಬೇಕಿತ್ತು. ಆದರೆ ಒಂದು ಭಾವನೆ ಬಲವಾಗಿ ಹಬ್ಬಿತ್ತು: ಅದೇನೆಂದರೆ, ಪ್ರಕೃತಿಯ ಕಲ್ಪನೆ ಅಥವಾ ಪ್ರಕೃತಿಯ ನಿಯಮಗಳು ಎಂಬುದು ಮುರಿದುಬಿದ್ದಿದೆ ಎಂದು. ವಿಜ್ಞಾನಕ್ಕೆ ಈ ನಿಯಮಗಳೇ ಬುನಾದಿಯೆಂದು ಆವರೆಗೆ ನಂಬಲಾಗಿತ್ತು. ಹೊಸ ಸಂದಿಗ್ಧತೆಯಿಂದಾಗಿ ವಿಜ್ಞಾನದ ತತ್ತ್ವಶಾಸ್ತ್ರವು ಕಕ್ಕಾಬಿಕ್ಕಿಯಾದಂತೆ ತೋರುತ್ತಿತ್ತು. ಆ ಹಿನ್ನೆಲೆಯಲ್ಲಿ ಲೆನಿನ್ ಪ್ರತಿಕ್ರಿಯಿಸಿದ್ದು ಹೀಗೆ: "ಭೌತದ್ರವ್ಯದ ಸ್ವರೂಪ ಮತ್ತು ಅದರ ಗುಣಗಳ ವೈಜ್ಞಾನಿಕ ಸಿದ್ಧಾಂತವನ್ನು ಕುರಿತಂತೆ ಗತಿತಾರ್ಕಿಕ ಭೌತವಾದವು ಆಗ್ರಹಿಸುವುದೇನೆಂದರೆ ಪ್ರತಿಯೊಂದು ವೈಜ್ಞಾನಿಕ ಸಿದ್ಧಾಂತವೂ ಸಾಪೇಕ್ಷವಾದ್ದು. ಇದು

ಸತ್ಯಕ್ಕೆ ಹತ್ತಿರವಾದ್ದು ಎನ್ನಲಾಗುತ್ತದೆಯೇ ಹೊರತು ಇದಿಷ್ಟೇ ಸತ್ಯ ಎನ್ನಲಾಗದು. ಪ್ರಕೃತಿಯಲ್ಲಿ ನಿರಪೇಕ್ಷ ಎಲ್ಲೆಗಳು ಎಂಬುದೇನೂ ಇಲ್ಲ. ಅಂತೆಯೇ ಸದಾ ಚಲನೆಯಲ್ಲಿರುವ ಭೌತದ್ರವ್ಯವು ಒಂದು ರೂಪದಿಂದ ಇನ್ನೊಂದಕ್ಕೆ ಕ್ರಮಿಸುವುದರಲ್ಲಿ ಉಂಟಾಗುವ ಬದಲಾವಣೆಯನ್ನು ನಿರಪೇಕ್ಷವಾಗಿ ನಿರೂಪಿಸಲು ಬರುವುದಿಲ್ಲ. ...ಎಲ್ಲದನ್ನೂ 'ಸಾಮಾನ್ಯ ತಿಳುವಳಿಕೆ'ಯ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸುವ ಮತ್ತು ತೀರ್ಮಾನಿಸುವ ಪರಿ ಒಂದಿದೆ. ಈ ತಿಳುವಳಿಕೆಯಂತೆ ಅಚಿಂತ್ಯವಾದ ಆಕಾಶದ್ರವ್ಯವು (ಈತರ್) ಚಿಂತ್ಯವಾದ ಭೌತದ್ರವ್ಯವಾಗುವುದು ಅಥವಾ ಅದರ ತಿರುಗುಮುರುಗು ಸಾಧ್ಯವಾಗುವುದು ಸರ್ವಥಾ ವಿಲಕ್ಷಣವಾದುದು; ಇಲೆಕ್ಟ್ರಾನ್‌ನಲ್ಲಿ ಇಲೆಕ್ಟ್ರೋಮ್ಯಾಗ್ನೆಟಿಕ್ ಸಂಘಾತವಲ್ಲದೆ ಬೇರೇನೂ ಘನದ್ರವ್ಯವಿಲ್ಲದಿರುವುದು ಸಾಮಾನ್ಯ ತಿಳುವಳಿಕೆಗೆ ವಿಚಿತ್ರವೆನಿಸಬಹುದು; (ಹೀಗೆ ಬೇರೆ 'ವಿಚಿತ್ರ'ಗಳನ್ನು ಪಟ್ಟಿ ಮಾಡಬಹುದು). ಆದರೆ ಲಕ್ಷ್ಯ ಕೊಟ್ಟು ನೋಡಿದರೆ ಇದೆಲ್ಲಾ ಗತಿತಾರ್ಕಿಕ ಭೌತವಾದದ ಸಮರ್ಥನೆಯಾಗಿ ಕಾಣುತ್ತದೆ. ...ಯಾವುದೇ ಪದಾರ್ಥದ 'ಮೂಲ' (ಅಥವಾ ರಸ) ಎಂಬುದು ಕೂಡ ಸಾಪೇಕ್ಷವಾದ್ದು. ವಸ್ತುಗಳ ಬಗೆಗಿನ ಮಾನವನ ಜ್ಞಾನದ ಆಳವನ್ನದು ಸೂಚಿಸುತ್ತದೆ. ನಿನ್ನೆ ಈ ಆಳವು ಪರಮಾಣುವನ್ನು ಮೀರಿ ಹೋಗಿರಲಿಲ್ಲ; ಇಂದು ಅದು ಇಲೆಕ್ಟ್ರಾನ್ ಅನ್ನು ಮೀರಿ ಹೋಗುತ್ತಿಲ್ಲ. (ಲೆನಿನ್ ಇದನ್ನು ಬರೆದದ್ದು ಮೇ ೧೯೦೮ರಲ್ಲಿ). ಜ್ಞಾನದ ಈ ಮೈಲಿಗಲ್ಲುಗಳು ಮಾನವನು ಪ್ರಕೃತಿಯ ಬಗ್ಗೆ ಕ್ರಮೇಣ ತಿಳಿಯುತ್ತಾ ಹೋಗಿರುವ ಅದ್ಭುತ ಸಾಧನೆಯ ಪ್ರತೀಕಗಳು. ಗತಿತಾರ್ಕಿಕ ಭೌತವಾದವು ಇಂತಹ ಜ್ಞಾನವನ್ನು ಹಂಗಾಮಿ ಮತ್ತು ಸತ್ಯಕ್ಕೆ ಸನಿಹದಲ್ಲಿರುವ ಅಂಶಗಳೆಂದು ಭಾವಿಸುತ್ತದೆ. (ಅಂದರೆ, ಅದೇ ಸಾರ್ವಕಾಲಿಕ ಪೂರ್ಣಸತ್ಯವಲ್ಲ). ಆದ್ದರಿಂದಲೇ ನಾವು ಹೀಗೆ ಹೇಳುತ್ತೇವೆ: ಒಂದು ಪರಮಾಣು ಹೇಗೆ ಅನಂತವೋ, ಹಾಗೆ ಒಂದು ಇಲೆಕ್ಟ್ರಾನ್ ಸಹ ಅನಂತ. ಪ್ರಕೃತಿ ಅಪರಿಮಿತವಾದುದು; ಅಂತೆಯೇ ಅದು ಅಪರಿಮಿತವಾಗಿ ಅಸ್ತಿತ್ವದಲ್ಲಿದೆ."

ಗತಿತಾರ್ಕಿಕತೆಯು ಎತ್ತಿಹಿಡಿಯುವ ಜ್ಞಾನದ ಬೆಳೆವಣಿಗೆಯ ಬಗೆಗಿನ ಸಿದ್ಧಾಂತದ ಛಾಯೆಯನ್ನು ನಾವು ಲೆನಿನ್ನರ ಈ ಮಾತುಗಳಲ್ಲಿ ಕಾಣಬಹುದಾಗಿದೆ. ಏಂಗೆಲ್ಸ್ ಪರಾಮರ್ಶೆ ಮಾಡಿದ್ದು ೧೮೮೦ರ ದಶಕದ ವರೆಗಿನ ವೈಜ್ಞಾನಿಕ ಬೆಳೆವಣಿಗೆಗಳನ್ನು; ಅದೂ ವಿಶೇಷತಃ ಜೀವವಿಜ್ಞಾನದ ಕ್ಷೇತ್ರದಲ್ಲಿ. ಏಂಗೆಲ್ಸ್ ಗತಿಸಿದ ವರ್ಷದಲ್ಲೇ (೧೮೯೫) ಎಕ್ಸ್-ರೇ ಕಂಡುಹಿಡಿಯಲಾಯಿತು. ಅದರ ಮುಂದಿನ ವರ್ಷ ವಿಕಿರಣದ ಜ್ಞಾನ ಲಭಿಸಿತು. ೧೮೯೭ರಲ್ಲಿ ಇಲೆಕ್ಟ್ರಾನ್ ತಿಳಿದುಬಂತು. ಅಂದರೆ, ಏಂಗೆಲ್ಸ್‌ಗೆ ಅದಾವುದರ ಪರಿಚಯವೂ ಇರಲಿಲ್ಲ. ಇಂತಹ ಹೊಸ ಆವಿಷ್ಕಾರಗಳು ಮತ್ತು ಆಗ್ಗೆ ಭೌತಶಾಸ್ತ್ರದಲ್ಲಿ ಉಂಟಾಗಿದ್ದ ಬೆಳೆವಣಿಗೆಗಳು ಪ್ರಕೃತಿ ನಿಯಮಗಳ ಆವರೆಗಿನ ಜ್ಞಾನಕ್ಕೆ ಸವಾಲನ್ನೊಡ್ಡಿದವು. ಭೌತವಾದಿ ವಿವರಣೆಗಳು ಅಸಮರ್ಪಕ, ಅವು ಹೊಸ ಸವಾಲುಗಳಿಗೆ ಉತ್ತರ ನೀಡಲಾರವು, ಆದ್ದರಿಂದ ಭಾವನಾವಾದಿ ನೆಲೆಯೇ ಶ್ರೇಯಸ್ಕರವೆಂಬ ಮಾತುಗಳು ಕೇಳಿಬಂದವು. ಈ ಹಿನ್ನೆಲೆಯಲ್ಲಿ ಏಂಗೆಲ್ಸರ ಗತಿತಾರ್ಕಿಕ ನಿರೂಪಣೆಗಳನ್ನು ಗಮನಿಸಬೇಕು. ಆಧುನಿಕ ಪ್ರಕೃತಿ ವಿಜ್ಞಾನದ ಆರಂಭಿಕ

ಹಂತಗಳಲ್ಲಿ ಅಬಾಧಿತ ಸಾರ್ವಕಾಲಿಕ ನಿಯಮಗಳನ್ನು ಪ್ರತಿಪಾದಿಸುವ ಪ್ರವೃತ್ತಿ ಇತ್ತು. ಹಾಗೆ ಮಾಡುವುದು ಅಸಮಂಜಸವೆಂಬ ಕಾರಣದಿಂದ ಕ್ರಮೇಣ ಗತಿತಾರ್ಕಿಕ ದೃಷ್ಟಿಕೋನವು ಅಂಗೀಕೃತವಾಯಿತು. ಅದರ ಗೋಜಿಗೆ ಹೋಗದೆ ಹಿಂದಿನ ಪದ್ಧತಿಯಲ್ಲೇ ನೆಲೆನಿಂತವರಿಗೆ ಹೊಸ ಬೆಳವಣಿಗೆಗಳು ಸಂದಿಗ್ಧತೆ ಉಂಟುಮಾಡಿದವು ಮತ್ತು ಪ್ರಕೃತಿಯಲ್ಲಿ ವಸ್ತುನಿಷ್ಠವಾದ ನಿಯಮಗಳೇ ಇಲ್ಲವೇನೋ ಎಂಬಂತೆ ಅವರು ವ್ಯವಹರಿಸತೊಡಗಿದರು. ಏಂಗೆಲ್ಸ್ ತಮ್ಮ ಅಚಲವಾದ ನಿಲುವನ್ನು ಆಗಲೇ ಸ್ಪಷ್ಟಪಡಿಸಿದ್ದರು: "ಗುಹ್ಯವಾದದ್ದೇನೋ ಇದೆಯೆಂಬ ಕಲ್ಪನೆಯನ್ನು ಆರೋಪಿಸದೆ, ಗತಿತಾರ್ಕಿಕತೆಯನ್ನು ಅನುಸರಿಸುವುದು ಪ್ರಕೃತಿ ವಿಜ್ಞಾನದ ಕ್ಷೇತ್ರದಲ್ಲಿ ಅತ್ಯಗತ್ಯ." ಹೊಸ ಆವಿಷ್ಕಾರಗಳಿಂದ ಗಲಿಬಿಲಿಗೊಳ್ಳುವುದರ ಬದಲು, ಪ್ರಕೃತಿಯ ಮಡಿಲಲ್ಲಿ ಏನೆಲ್ಲಾ ನಿಗೂಢತೆಗಳು ಅಡಗಿವೆಯೆಂಬ ನಮ್ರಭಾವದಿಂದ ಅದರ ಅಚಿಂತ್ಯ ಸಾಧ್ಯತೆಗಳತ್ತ ಕಣ್ಣುಹಾಯಿಸಿ, ಭೌತ ನಿಯಮಗಳನ್ನು ಹಿಗ್ಗಿಸಿಕೊಳ್ಳುತ್ತಾ ಹೋಗಬೇಕು, ಎಂದು ಏಂಗೆಲ್ಸ್ ಹೇಳಿದರು. ಜಪಾನಿನ ಭೌತವಿಜ್ಞಾನಿ ಸಕಾತ ಸ್ಫೂರ್ತಿ ಪಡೆದದ್ದು ಇಂತಹ ನಿಲುವಿನಿಂದ. ಏಂಗೆಲ್ಸ್ ತಮ್ಮ "ಪ್ರಕೃತಿಯಲ್ಲಿ ಗತಿತಾರ್ಕಿಕತೆ" ಎಂಬ ಗ್ರಂಥದಲ್ಲಿ ಒಂದೆಡೆ ಹೀಗೆಂದಿದ್ದಾರೆ: "ಪ್ರಕೃತಿ ವಿಜ್ಞಾನಿಗಳು ತತ್ತ್ವಶಾಸ್ತ್ರದಿಂದ ತಾವು ಮುಕ್ತರೆಂದು ಭಾವಿಸುತ್ತಾ ಅದನ್ನು ಮೂದಲಿಸುತ್ತಾರೆ. ಆದರೆ ತಾತ್ವಿಕ ದೃಷ್ಟಿಯ ಆಧಾರವಿಲ್ಲದೆ ಅವರು ಮುನ್ನಡೆಯಲಾರರು. ಆ ದೃಷ್ಟಿಯನ್ನು ಮೈಗೂಡಿಸಿಕೊಳ್ಳುವ ವಿಧಾನವನ್ನವರು ಕಂಡುಕೊಳ್ಳಬೇಕಿದೆ. ವಿದ್ಯಾವಂತರೆನಿಸಿಕೊಂಡವರ ಸಾಮಾನ್ಯ ಪ್ರಜ್ಞೆಯಿಂದ ಈ ವಿಧಾನವನ್ನು ಅವರು ಎರವಲು ಪಡೆದುಕೊಂಡುಬಿಡುತ್ತಾರೆ. ಆದರೆ ಆ ಪ್ರಜ್ಞೆಯಲ್ಲಿ ಎಷ್ಟೋ ವೇಳೆ ಸವಕಲು ತತ್ತ್ವಶಾಸ್ತ್ರ ತುಂಬಿಕೊಂಡಿರುತ್ತದೆ. ಅದರಿಂದಾಗಿ ಎಂಥದೋ ಗೊತ್ತುಗುರಿಯಿಲ್ಲದ ತತ್ತ್ವಶಾಸ್ತ್ರಕ್ಕೆ ಇವರು ಕಟ್ಟುಬೀಳುತ್ತಾರೆ. ಫಲಿತಾಂಶ ಅಷ್ಟೇನೂ ಆಪ್ಯಾಯಮಾನವಲ್ಲ: ತತ್ತ್ವಶಾಸ್ತ್ರವನ್ನು ಮೂದಲಿಸುತ್ತಾ ಇವರು ಖೋಟಾ ತತ್ತ್ವಶಾಸ್ತ್ರವೊಂದಕ್ಕೆ ಶರಣಾಗಿಬಿಡುತ್ತಾರೆ. ಪ್ರಕೃತಿ ವಿಜ್ಞಾನಿಗಳು ಎಂಥದೇ ದೃಷ್ಟಿಕೋನವನ್ನವಲಂಬಿಸಲಿ, ಅವರಂತೂ ತತ್ತ್ವಶಾಸ್ತ್ರದ ಹಿಡಿತದಿಂದ ಪಾರಾಗಲಾರರು. ಪ್ರಶ್ನೆ ಇರುವುದಿಷ್ಟೆ: ಅಪ್ರಸ್ತುತವಾದ, ಅಸಂಬದ್ಧವಾದ, ತತ್ತ್ವಶಾಸ್ತ್ರಕ್ಕೆ ಮಣಿಯುತ್ತೀರಾ, ಇಲ್ಲವೆ ಒಂದು ಸೈದ್ಧಾಂತಿಕ ಅಡಿಪಾಯವಿರುವ ತತ್ತ್ವಶಾಸ್ತ್ರವನ್ನು ಮಾನ್ಯಮಾಡುತ್ತೀರಾ? ಎರಡನೆಯ ಮಾದರಿಯ ತತ್ತ್ವಶಾಸ್ತ್ರವಾದರೆ ಅದು ಜ್ಞಾನ ಮತ್ತು ಅದರ ಸಾಧನೆಗಳ ಇತಿಹಾಸವನ್ನು ಆಧಾರವಾಗಿ ಹೊಂದಿರುತ್ತದೆ."

ಈ ಇತಿಹಾಸದ ಗತಿಯನ್ನು ಗುರುತಿಸುವ ಏಂಗೆಲ್ಸರ ಪ್ರತಿಪಾದನೆ ಸ್ಥೂಲವಾಗಿ ಹೀಗಿದೆ: "ಪ್ರಾಚೀನ ಗ್ರೀಸ್‌ನ ತತ್ತ್ವಶಾಸ್ತ್ರಜ್ಞರು ಸಹಜವಾಗಿಯೇ ಗತಿತಾರ್ಕಿಕತೆಯಲ್ಲಿ ಶ್ರದ್ಧೆ ಇರಿಸಿದ್ದವರು. ಪ್ರಕೃತಿ ಅಥವಾ ಮನುಕುಲದ ಇತಿಹಾಸ, ಇವನ್ನು ಗಮನಿಸಿದಾಗ ನಮಗೆ ಗೋಚರಿಸುವುದು ಅಸಂಖ್ಯ ಸಂಬಂಧಗಳು, ಪ್ರತಿಕ್ರಿಯೆಗಳು. ಅವು ಯಾವುವೂ ಸ್ಥಗಿತವಲ್ಲ; ಎಲ್ಲದರಲ್ಲೂ ಚಲನೆಯುಂಟು. ಬದಲಾವಣೆ ಹೊಂದುವುದು, ನಶಿಸುವುದು, ಅವುಗಳ ಲಕ್ಷಣ. ಇದನ್ನು ಹೆರಾಕ್ಲಿಟಸ್ ಅರ್ಥೈಸಿದ್ದು 'ನಿರಂತರ ಪ್ರವಾಹ' ಎಂದು. ಪ್ರತಿಯೊಂದೂ

ಇದೆ, ಆದರೆ ಇಲ್ಲ; ಅದು ಸದಾ ಬದಲಾವಣೆ ಹೊಂದುತ್ತಿದೆ. ಈ ಕಲ್ಪನೆಯು ಸಾಮಾನ್ಯ ತಿಳುವಳಿಕೆಯ ದೃಷ್ಟಿಯಲ್ಲಿ ಸರಿಯಾಗಿದೆ; ಆದರೆ ವಿಷಯವನ್ನು ಸಮಗ್ರವಾಗಿ ವಿವರಿಸುವುದರಲ್ಲಿ ಅದು ಸೋಲುತ್ತದೆ. ಪೂರ್ಣ ಗ್ರಹಿಕೆಗೆ ಒಂದೊಂದೇ ಅಂಶವನ್ನು ಬಿಡಿಸಿ ನೋಡಬೇಕು, ಅದರ ಪೂರ್ವಾಪರಗಳನ್ನು ತಿಳಿಯಬೇಕು, ಅದರ ಚಾರಿತ್ರಿಕ ಸಂಬಂಧಗಳನ್ನು ಥಳುಕುಹಾಕಿ ನೋಡಬೇಕು. ಪ್ರಕೃತಿ ವಿಜ್ಞಾನ ಮತ್ತು ಚಾರಿತ್ರಿಕ ಸಂಶೋಧನೆಗಳು ಮಾಡುವುದು ಇದನ್ನೇ. ...ವಾಸ್ತವವಾಗಿ ಪ್ರಕೃತಿ ವಿಜ್ಞಾನವು ಹದಿನೈದನೆಯ ಶತಮಾನದ ಕೊಡುಗೆ. ('ಪಾಶ್ಚಾತ್ಯರಲ್ಲಿ', ಎಂದು ಸೇರಿಸಬೇಕು; ಏಕೆಂದರೆ ಭಾರತೀಯ ವೈಜ್ಞಾನಿಕ ಹಾದಿಯಲ್ಲಿ ಇದರ ಜಿಜ್ಞಾಸೆಯು ಬಹಳ ಪ್ರಾಚೀನವಾದ್ದು. ಏಂಗೆಲ್ಸರಿಗೆ ಅದರ ಪರಿಚಯವಿರಲಿಲ್ಲವೆಂಬುದು ಸ್ಪಷ್ಟವಾಗಿದೆ.) ಕಳೆದ ನಾಲ್ಕೂನೂರು ವರ್ಷಗಳಲ್ಲಿ ಪ್ರಾಕೃತಿಕ ವಸ್ತುಗಳ ವೈವಿಧ್ಯಮಯ ಸ್ವರೂಪಗಳ ಅಧ್ಯಯನಗಳು ಬೃಹತ್ತಾಗಿ ಬೆಳೆದಿವೆ. ಆದರೆ ಆ ವಿಶ್ಲೇಷಣಾ ಪದ್ಧತಿಯ ಒಂದು ನ್ಯೂನತೆ ಗಟ್ಟಿಯಾಗಿ ಅಂಟಿಕೊಂಡಿದೆ. ಅದೇನೆಂದರೆ, ಪ್ರತಿಯೊಂದು ವಸ್ತುವನ್ನೂ ಪ್ರತ್ಯೇಕವಾಗಿ ನೋಡುವುದು, ವಿಶ್ಲೇಷಿಸುವುದು. ಅಂತಸ್ಸಂಬಂಧಗಳ ಪರಿಚಯ, ಚಲನೆಯ ಪ್ರಕ್ರಿಯೆಯ ಬಗೆಗಿನ ತಿಳುವಳಿಕೆ, ಇವುಗಳತ್ತ ಗಮನ ಹರಿಸಲಾಗಲಿಲ್ಲ. ಅವು ಬದಲಾಗುತ್ತಿವೆಯೆಂಬ ನಿಟ್ಟಿನಲ್ಲಿ ನೋಡುವುದರ ಬದಲು, ಅವು ಸ್ಥಗಿತವಾಗಿವೆಯೆಂಬ ನಿಟ್ಟಿನಲ್ಲಿ ನೋಡಲಾಯಿತು. ಬೇಕನ್, ಲಾಕ್ ಮುಂತಾದವರು ಪ್ರಕೃತಿ ವಿಜ್ಞಾನದ ಈ ಪದ್ಧತಿಯನ್ನು ತತ್ತ್ವಶಾಸ್ತ್ರದ ಮೇಲೆ ಹೇರಲುಪಕ್ರಮಿಸಿದರು. ಅದರ ಪರಿಣಾಮವೇ ಅಂತಿಮ ಸತ್ಯಗಳ ನಿರೂಪಣಾ ಕ್ರಮ, ದೂರದೃಷ್ಟಿಯ ಅಭಾವ. ...ಗತಿತಾರ್ಕಿಕತೆಯ ವಿಧಾನವೇ ಬೇರೆ. ವಸ್ತುಗಳ ಅಂತಸ್ಸಂಬಂಧ, ಚಲನೆ, ಬದಲಾವಣೆ, ಇವುಗಳ ಸಮೇತವಾಗಿ ವಸ್ತುಗಳನ್ನು ವಿಶ್ಲೇಷಿಸುವುದು ಇಲ್ಲಿನ ಕ್ರಮ. ಪ್ರಕೃತಿಯೇ ಇದಕ್ಕೆ ಸಮರ್ಥನೆ ಒದಗಿಸುತ್ತದೆ. ಆಧುನಿಕ ಪ್ರಕೃತಿ ವಿಜ್ಞಾನವು ಮತ್ತೆ ಈ ವಿಧಾನವನ್ನು ಅಳವಡಿಸಿಕೊಳ್ಳುತ್ತಿರುವುದು ಗಮನಾರ್ಹವಾಗಿದೆ. ಆದರೆ ಗತಿತಾರ್ಕಿಕ ವಿಧಾನದಲ್ಲಿ ಅವಳಡಿಸಿಕೊಳ್ಳುತ್ತಿರುವುದು ಗಮನಾರ್ಹವಾಗಿದೆ. ಆದರೆ ಗತಿತಾರ್ಕಿಕ ವಿಧಾನದಲ್ಲಿ ಜಿಜ್ಞಾಸೆ ಮಾಡುವ ಪ್ರಕೃತಿ ವಿಜ್ಞಾನಿಗಳು ಇನ್ನೂ ವಿರಳವೇ ಆಗಿದ್ದಾರೆ. ಆದ್ದರಿಂದಲೇ ಸಾಂಪ್ರದಾಯಿಕ ವಿಧಾನದಲ್ಲಿ ವಿಶ್ಲೇಷಣೆ ಮಾಡುವವರು ವಿಜ್ಞಾನದ ನೂತನ ಆವಿಷ್ಕಾರಗಳಿಂದ ಬೆರಗುಗೊಂಡಿದ್ದಾರೆ, ವೈಜ್ಞಾನಿಕ ನಿಯಮಗಳ ಬಗ್ಗೆ ಶಂಕೆ ಮೂಡಿಸಿಕೊಂಡಿದ್ದಾರೆ."

"ವಿಜ್ಞಾನದ ತತ್ತ್ವಶಾಸ್ತ್ರ" ಎಂಬ ಅಧ್ಯಯನ ವಿಭಾಗವು ಈಚಿನ ದಶಕಗಳಲ್ಲಿ ಬಹುವಾಗಿ ಬೆಳೆದಿದೆ. ವಿಜ್ಞಾನವು ತನ್ನ ಎಲ್ಲೆಗಳನ್ನು ಚೆನ್ನಾಗಿ ಗುರುತಿಸಿಕೊಳ್ಳಬೇಕಾದ ಅವಶ್ಯಕತೆ ಇದೆಯೆಂಬುದು ಈ ಅಧ್ಯಯನಗಳ ಒಂದು ಮಥಿತಾರ್ಥ. ಗತಿತಾರ್ಕಿಕ ಭೌತವಾದವು ಈ ಅಂಶವನ್ನು ತನ್ನ ಮೂಲ ಲಕ್ಷಣಗಳ ಒಂದು ಅವಿಭಾಜ್ಯ ಭಾಗವನ್ನಾಗಿಸಿಕೊಂಡಿದೆ. ಏಂಗೆಲ್ಸರ ವಿಶಿಷ್ಟ ಕೊಡುಗೆಗಳಲ್ಲಿ ಇದನ್ನು ವಿಶೇಷವಾಗಿ ಉಲ್ಲೇಖಿಸಬೇಕಾದ್ದು ಅಗತ್ಯವೆನಿಸುತ್ತದೆ.

❑❑

೧೦

ರಾಜಕೀಯ ಚಿಂತನೆಗೊಂದು ಮಾದರಿ

ಯೂರೋಪಿನ ಪ್ರತಿಯೊಂದು ದೇಶದ ದುಡಿಯುವ ವರ್ಗದ ಸಂಘಟನೆಯೊಂದಿಗೆ ನಿಕಟ ಸಂಪರ್ಕವಿರಿಸಿಕೊಂಡಿದ್ದ ಏಂಗೆಲ್ಸ್ ಬಹುಮಟ್ಟಿಗೆ ಆ ಸಂಘಟನೆಗಳಿಗೆ ಕೇವಲ ಸಲಹೆಗಾರರಾಗಿರಲಿಲ್ಲ; ಅವುಗಳ ದೈನದಿಂನ ಚಟುವಟಿಕೆಗಳಲ್ಲಿ ಭಾಗವಹಿಸಲು ಸಮಯವನ್ನು ಹೊಂದಿಸಿಕೊಳ್ಳುತ್ತಿದ್ದರು. ಸುಮಾರು ಅರ್ಧ ಶತಮಾನದ ಕಾಲ ಹೀಗೆ ಹೋರಾಟಗಾರನಾಗಿ ಮತ್ತು ಹೋರಾಟಗಳ ನಿರ್ದೇಶಕನಾಗಿ ಸಕ್ರಿಯರಾಗಿದ್ದ ಏಂಗೆಲ್ಸ್ ಯೂರೋಪಿನ ಅಂದಿನ ಪ್ರತಿಯೊಬ್ಬ ಸಂಘಟಕನನ್ನೂ ಬಲ್ಲವರಾಗಿದ್ದರು. ಆ ಎಲ್ಲಾ ದೇಶಗಳ ದುಡಿಯುವ ವರ್ಗದ ಪತ್ರಿಕೆಗಳಿಗೆ ತಪ್ಪದೆ ಏಂಗೆಲ್ಸ್ ಲೇಖನಗಳನ್ನು ಬರೆಯುತ್ತಿದ್ದುದುಂಟು. ಆದ್ದರಿಂದ ರಾಜಕೀಯ ಮುತ್ಸದ್ದಿಯಾಗಿ ಅವರಿಗೆ ವಿಶಿಷ್ಟ ಸ್ಥಾನವಿದ್ದಿತು. ಎಲ್ಲೆಡೆ ಸಾಂದ್ರವಾಗಿ ಬೆಳೆಯುತ್ತಿದ್ದ ದುಡಿಯುವವರ ಚಳುವಳಿಗಳು ಅದ್ಭುತಗಳನ್ನು ಸಾಧಿಸದಿದ್ದರೂ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದುದು ಸಮಾಧಾನ ತಂದಿತ್ತು. ೧೮೭೮ರ ಮಾರ್ಚ್‌ನಲ್ಲಿ ಏಂಗೆಲ್ಸ್ ಹೀಗೆ ಬರೆದರು: "ಎಲ್ಲ ಸಂಘಟನೆಗಳ ಚಳುವಳಿಗಳನ್ನು ಮೇಳೈಸಲು ಅಂತರರಾಷ್ಟ್ರೀಯ ಕೇಂದ್ರವೊಂದು ಇಲ್ಲದಿರುವುದು ನಮ್ಮ ಕೊರತೆ. ಆದರೆ ಅಂತಹ

ಕೇಂದ್ರದ ಕೆಲಸಗಳೇನೂ ಹಿಂದೆಬಿದ್ದಿಲ್ಲ. ಕೇಂದ್ರವೆಂಬುದು ಔಪಚಾರಿಕವಾಗಿ ಇಲ್ಲದಿದ್ದರೂ ಅದು ಜೀವಂತವಾಗಿದೆ, ಸೌಹಾರ್ದತೆಯನ್ನು ಬೆಳೆಸಿದೆ. ನೀತಿ ಮತ್ತು ಕ್ರಿಯೆಗಳಿಗೆ ಇಡೀ ಯೂರೋಪಿನ ದುಡಿಯುವ ವರ್ಗಕ್ಕೆ ಇದೇ ಆಕರವಾಗಿದೆಯೆಂದರೆ ತಪ್ಪಲ್ಲ."

ಕೆಲವು ಅರಾಜಕವಾದಿಗಳು ೧೮೭೭ರಲ್ಲಿ ಸಮಾವೇಶವೊಂದನ್ನು ನಡೆಸಿ ಅಂತರರಾಷ್ಟ್ರೀಯ ಕೇಂದ್ರವೊಂದನ್ನು ಸ್ಥಾಪಿಸಲು ಯತ್ನಿಸಿದ್ದರು. ದುಡಿಯುವ ವರ್ಗಕ್ಕೆ ಅರಾಜಕತೆಯ ಹಾದಿಯು ಎಂದಿಗೂ ಕ್ರಾಂತಿಕಾರಿ ಮಾರ್ಗವಾಗಲಾರದೆಂದು ಖಚಿತವಾಗಿ ನಂಬಿದ್ದ ಏಂಗೆಲ್ಸ್ ತಮಗೆ ಸಂಪರ್ಕವಿದ್ದ ಸಂಘಟನೆಗಳಿಗೆ ಅಂತಹ ಸಮಾವೇಶಕ್ಕೆ ಹೋಗಬಾರದೆಂದು ಅರಿಕೆ ಮಾಡಿಕೊಂಡರು. ಅವರ ರಾಜಕೀಯ ಪರಿಪ್ರೇಕ್ಷ್ಯಗಳನ್ನು ಸರಿಯಾಗಿ ವ್ಯಾಖ್ಯಾನಿಸಿಕೊಳ್ಳಲು ಸಾಧ್ಯವಾಗುವಂತೆ ಒಂದು ಪ್ರಸಂಗವನ್ನು ಮಾದರಿಯಾಗಿ ವಿಮರ್ಶಿಸುವುದು ಪ್ರಸ್ತುತ ಅಧ್ಯಾಯದ ಉದ್ದೇಶ.

ಜರ್ಮನಿಯಲ್ಲಿ ಬಿಸ್ಮಾರ್ಕನ ಆಡಳಿತ ಅಸ್ತಿತ್ವಕ್ಕೆ ಬಂದಿದ್ದುದನ್ನು ಹಿಂದೆಯೇ ಪ್ರಸ್ತಾಪಿಸಲಾಗಿದೆ. ಸಮಕಾಲೀನ ಭಾರತದಲ್ಲಿ ಬಿಸ್ಮಾರ್ಕನ ಪೋಷಾಕು ಧರಿಸಲು ಕೆಲವರು ಉತ್ಸುಕರಾಗಿದ್ದಾರೆಂದು ಆಗಾಗ್ಗೆ ಕೇಳಿಬರುತ್ತಿರುತ್ತದೆ. ಅವನಷ್ಟು ಗಟ್ಟಿಗರಾಗಲು ಇವರೂ ಸಮರ್ಥರು ಎಂಬ ಸೂಚನೆ ಈ ರೀತಿಯ ಆಶಯದ ಹಿಂದಿರುತ್ತದೆ. ನಿಜಕ್ಕೂ ನಮಗೊಬ್ಬ ಬಿಸ್ಮಾರ್ಕ್ ಬೇಕೆ ಎಂಬುದನ್ನು ಅವನು ನಡೆಸಿದ ತಂತ್ರಗಳು, ಜಾರಿಗೊಳಿಸಿದ ನೀತಿಗಳು, ಕಾರ್ಮಿಕರನ್ನು ನಡೆಸಿಕೊಂಡ ರೀತಿ, ಮುಂತಾದುವನ್ನು ನೋಡಿ ತೀರ್ಮಾನಿಸಬೇಕು. ಜರ್ಮನಿಯನ್ನು ಐಕ್ಯಗೊಳಿಸಿದ ಸಾಧನೆ ಅವನದೆಂದು ಹೇಳುವಾಗ ಕೂಡ ಪೂರ್ಣವಾದ ಐತಿಹಾಸಿಕ ಸತ್ಯವನ್ನು ಹೇಳಿದಂತಾಗುವುದಿಲ್ಲ. ಆದ್ದರಿಂದ "ಭಾರತದ ಬಿಸ್ಮಾರ್ಕ್" ಎಂಬ ಪದವಿ ಯಾರಿಗಾದರೂ ಅನ್ವರ್ಥಕವಾಗಿ ಅನ್ವಯವಾದರೆ ಅದು ಖ್ಯಾತಿ ಅಥವಾ ಹೆಗ್ಗಳಿಕೆ ಆಗುವುದಿಲ್ಲ; ಬದಲಾಗಿ, ಕುತಂತ್ರದಲ್ಲಿ ಪರಿಣತ, ದುಡಿಯುವ ಜನರನ್ನು ಬಗ್ಗುಬಡಿದ ಅಪಖ್ಯಾತಿಯವನು, ಎಂದು ಸೂಚಿಸುತ್ತದೆ. ಅದಿರಲಿ, ಏಂಗೆಲ್ಸ್ ಈ ಬಿಸ್ಮಾರ್ಕನನ್ನು ಹೇಗೆ ಎದುರಿಸಿದರೆಂಬುದನ್ನು ನೋಡೋಣ.

೧೮೭೦ರ ಕೊನೆಯ ವೇಳೆಗಾಗಲೆ ಜರ್ಮನಿಯ ಪಾರ್ಲಿಮೆಂಟ್ ಸಾಕಷ್ಟು ಪ್ರತಿಗಾಮಿತ್ವಕ್ಕೆ ಸರಿದಿತ್ತು. ಬಿಸ್ಮಾರ್ಕ್ ಪ್ರತಿನಿಧಿಸುತ್ತಿದ್ದುದು ಅಂದಿನ ಭೂಮಾಲಿಕರನ್ನು, ಉದ್ಯಮಗಳನ್ನು. ಅವರಿಗಾದರೋ ಇನ್ನೂ ಹೆಚ್ಚಿನ ವಿದೇಶಿ ಮಾರುಕಟ್ಟೆಗಳು ದಕ್ಕಬೇಕೆಂಬ ಆಸೆ. ಅದಕ್ಕೆ ಆಮದು ಸುಂಕದ ಹೆಚ್ಚಳ, ಹೊಸ ವಸಾಹತುಗಳ ಆಕ್ರಮಣ, ಇವೆಲ್ಲಾ ಅಗತ್ಯವಿತ್ತು. ಸಾಮಾನ್ಯ ಜನರ ಜೀವನ ಅದರಿಂದ ದುಸ್ತರವಾದರೆ ಬಿಸ್ಮಾರ್ಕನಿಗೇನೂ ಅದರಿಂದ ಆಘಾತವುಂಟಾಗುವಂತಿರಲಿಲ್ಲ. ಮೊದಲಿಗೆ ರಾಷ್ಟ್ರೀಯ ಉದಾರವಾದಿಗಳ ಬೆಂಬಲ ಪಡೆದಿದ್ದ ಬಿಸ್ಮಾರ್ಕ್ ಕ್ರಮೇಣ ತೀವ್ರ ಪ್ರತಿಗಾಮಿಗಳ ಬಣವನ್ನು ಓಲೈಸಿದ. (ನಮ್ಮ ಸಮಕಾಲೀನ ರಾಜಕೀಯ ಸಂದರ್ಭಗಳಲ್ಲಿ ಈ ಪ್ರಸಂಗಗಳ ಪುನರಾವರ್ತನೆ ಹೇಗಾಗುತ್ತಿದೆಯೆಂಬುದನ್ನು ಸಂಯಮದಿಂದ ನಮಗೆ ನಾವೇ ವಿಮರ್ಶೆ ಮಾಡಿಕೊಳ್ಳಬೇಕೆಂಬ

ಉದ್ದೇಶದಿಂದ ಇದನ್ನು ಪ್ರಸ್ತಾಪಿಸಬೇಕಾಗಿದೆ). ತನ್ನ ಮಿಲಿಟರಿ ಆಡಳಿತಕ್ಕೆ ಉದಾರವಾದಿಗಳಿಗಿಂತ ತೀವ್ರ ಪ್ರತಿಗಾಮಿಗಳ ಬೆಂಬಲ ಹೆಚ್ಚು ಅರ್ಥವತ್ತಾದ್ದೆಂದು ಬಿಸ್ಮಾರ್ಕ್ ಕಂಡುಕೊಂಡ. ಇದರ ನೇರ ಪರಿಣಾಮ ಸಮಾಜವಾದಿ ಚಳುವಳಿಯನ್ನು ಹತ್ತಿಕ್ಕುವುದು ಮತ್ತು ಕಾರ್ಮಿಕ ವರ್ಗವನ್ನು ಸದೆಬಡಿಯುವುದು! ಸಮಾಜವಾದಿ ಕಾರ್ಮಿಕ ಪಕ್ಷದ ಮೇಲೆ ಅವನ ಮೊದಲ ಪೆಟ್ಟು ಅನಿವಾರ್ಯವಾಗಿತ್ತು. ಆ ಪಕ್ಷದ ಸತತ ಬೆಳೆವಣಿಗೆಯು ಆಳುವ ವರ್ಗಕ್ಕೆ ಆತಂಕ ಉಂಟುಮಾಡಿತ್ತಾದ್ದರಿಂದ ಪೆಟ್ಟು ಕೊಡುವುದು ಅಗತ್ಯವೆಂದು ಬಿಸ್ಮಾರ್ಕನ ತೀರ್ಮಾನ. ೧೮೭೭ರಲ್ಲಿ ಈ ಪಕ್ಷದಲ್ಲಿ ೩೨,೦೦೦ ಸಕ್ರಿಯ ಸದಸ್ಯರಿದ್ದರು, ಪಕ್ಷವು ೪೦ ಪತ್ರಿಕೆಗಳನ್ನು ಪ್ರಕಟಿಸುತ್ತಿತ್ತು, ಆ ವರ್ಷದ ಜನವರಿಯ ಚುನಾವಣೆಯಲ್ಲಿ ಅರ್ಧ ಕೋಟಿ ಮತಗಳನ್ನು ಪಡೆದಿತ್ತು, ಪಾರ್ಲಿಮೆಂಟಿನಲ್ಲಿ ೧೨ ಸದಸ್ಯರನ್ನು ಹೊಂದಿತ್ತು. ಬಿಸ್ಮಾರ್ಕನು ಅನುಸರಿಸಿದ ನೀತಿಯು ನಮ್ಮ ದೇಶಕ್ಕೆ ಅಪರಿಚಿತವೇನಲ್ಲ. ಬೆಳೆಯುವ ಸೂಚನೆ ಕಂಡುಬಂದರೆ ದುಡಿಯುವ ವರ್ಗದ ಚಳುವಳಿಯನ್ನು ದಮನ ಮಾಡಲು ಪ್ರಜಾಪ್ರಭುತ್ವ ಮತ್ತು ಖಾಸಗಿ ಬಂಡವಾಳದ ಅನುಪಮ ಕೊಡುಗೆಗಳ ಹೆಸರಿನಲ್ಲಿ ಸೂಕ್ತ ಶಾಸನ ತರಬೇಕು, ದುಡಿಯುವ ವರ್ಗದ ಆಶೋತ್ತರಗಳನ್ನು ಹಿಂಡಿಹಾಕಬೇಕು! ಆಗ್ಗೆ ದೊರೆಯಾಗಿದ್ದ ವಿಲ್ಹೆಲ್ಮನ ಮೇಲೆ ಯಾರೋ ಹತ್ಯೆಯ ಸಂಚನ್ನು ಎರಡು ಬಾರಿ ಮಾಡಿ ಸೋತಿದ್ದರು. ಆ ಸಂಚಿನ ರೂವಾರಿಗಳು ದುಡಿಯುವ ವರ್ಗದ ನಾಯಕರೇ ಎಂದು ಬಿಸ್ಮಾರ್ಕ್ ಅಬ್ಬರಿಸಿದ, ಮತ್ತು ಚಳುವಳಿಗಳನ್ನು ಹತ್ತಿಕ್ಕಲು ಕಠಿಣ ಶಾಸನಗಳನ್ನು ಜಾರಿಗೊಳಿಸಿದ. ಇಂತಹ ಭಯೋತ್ಪಾದಕ ಕೃತ್ಯಗಳನ್ನು ಸಮಾಜವಾದಿ ಹೋರಾಟಗಾರರು ಎಸಗಲಾರರೆಂಬ ಸಾಮಾನ್ಯ ತಿಳುವಳಿಕೆಯ ವಿರುದ್ಧ ಬಿಸ್ಮಾರ್ಕ್ ಹುಯಿಲೆಬ್ಬಿಸಿದ. ಏನೋ ಆತಂಕ ಎರಗಿಬಂದಿದೆ ಎನ್ನಿಸುವಂತೆ ಕೂಡಲೆ ಪಾರ್ಲಿಮೆಂಟನ್ನು ರದ್ದುಗೊಳಿಸಿದ, ಮರುಚುನಾವಣೆಯನ್ನು ಘೋಷಿಸಿದ. ಅವನ ಎಣಿಕೆಯಂತೆ ಪ್ರತಿಗಾಮಿಗಳು ಹೇರಳವಾಗಿ ಆರಿಸಿಬಂದರು. ಅವರ ಸಹಾಯದಿಂದ ತನ್ನ ಪೊಲೀಸ್ ಕುತಂತ್ರವನ್ನು ಮುಂದುವರಿಸಿ "ಸಮಾಜವಾದ-ವಿರೋಧಿ ಶಾಸನ" ಎನ್ನುವ ಒಂದು ಶಾಸನವನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿ, ಅಂಗೀಕಾರ ಪಡೆದ. ಸಮಾಜವಾದಿ ಪ್ರಜಾಪ್ರಭುತ್ವ ಶಕ್ತಿಗಳಿಗೆ ಮತ್ತು ಅವರ ಆಕಾಂಕ್ಷೆಗಳಿಗೆ ಇದೊಂದು ಪ್ರಬಲವಾದ ಪೆಟ್ಟಾಯಿತು. ಮೂರು ವರ್ಷಗಳ ಕಾಲ ಈ ಶಾಸನ ಜಾರಿಯಲ್ಲಿರುವುದೆಂದು ತೀರ್ಮಾನಿಸಲಾಗಿತ್ತು. ಮೂರು ವರ್ಷಗಳಿಗೆ ಅದು ಮುಕ್ತಾಯವಾಗಲಿಲ್ಲ. ಬಿಸ್ಮಾರ್ಕ್ ಅದನ್ನು ವಿಸ್ತರಿಸುತ್ತಲೇ ಹೋದ, ಸೆಪ್ಟೆಂಬರ್ ೧೮೯೦ರವರೆಗೆ, ೧೨ ವರ್ಷಗಳ ಕಾಲ. ಬಿಸ್ಮಾರ್ಕನನ್ನು ಹೊಗಳುವ ನಮ್ಮ ರಾಜಕೀಯ ಪಂಡಿತರಿಗೆ ಈ ಅಂಶವನ್ನು ಹೇಳಬೇಕಾದಾಗ ನಾಲಿಗೆ ಸೇದುಹೋಗಿರುತ್ತದೆ! ಹಾಗೆ ಮಾಡದಿದ್ದರೆ ಅವನನ್ನಾಗಲಿ, ನಮ್ಮ 'ಮರಿ-ಬಿಸ್ಮಾರ್ಕ್' ಗಳನ್ನಾಗಲಿ ಹೇಗೆ ವೈಭವೀಕರಿಸಲು ಸಾಧ್ಯ! ಈ ಶಾಸನದಡಿ ದುಡಿಯುವ ವರ್ಗದ ಸಮಾಜವಾದಿ ಸಂಘಟನೆಗಳು ಮತ್ತು ಕಾರ್ಮಿಕ ಸಂಘಗಳು ಏನನ್ನೂ ಪ್ರಕಟಿಸುವಂತಿಗಲಿಲ್ಲ, ಸಭೆ ಮತ್ತು ಪ್ರಚಾರ ನಡೆಸುವಂತಿರಲಿಲ್ಲ, ಸಮಾಜವಾದದ ಸೊಲ್ಲೆತ್ತುವಂತಿರ

ಲಿಲ್ಲ. ಹತ್ತು ಜನ ಒಂದೆಡೆ ಸೇರಿ ಬಹಿರಂಗ ಸಭೆ ನಡೆಸಲು ಪರವಾನಗಿ ಪಡೆಯಬೇಕಿತ್ತು. ಸರ್ಕಾರವು ಯಾರ ಬಗೆಗಾದರೂ ಶಂಕೆ ಇಟ್ಟುಕೊಂಡಿದ್ದರೆ ಅವರನ್ನು ಕುಟುಂಬಸಮೇತ ಗಡೀಪಾರು ಮಾಡಬಹುದಿತ್ತು. ಇಂಥ ಉಗ್ರ ಶಾಸನ ಮಾಡಿದವನು ದುಡಿಯುವ ವರ್ಗದ ಮಿತ್ರನಾಗಲಾರ ಮತ್ತು ಪ್ರಜಾಪ್ರಭುತ್ವದ ಅನುಯಾಯಿಯಾಗಲಾರ. ನಮ್ಮ ಮರಿ-ಬಿಸ್ಮಾರ್ಕ್‌ಗಳಿಗೆ ನಾವಿದನ್ನು ಮನದಟ್ಟು ಮಾಡಿಕೊಡಬೇಕು.

ಈ ಸನ್ನಿವೇಶದಲ್ಲಿ ದುಡಿಯುವ ವರ್ಗದ ಪಕ್ಷ ಏನು ಮಾಡಬೇಕು? ತೆಪ್ಪಗೆ ನಿಷ್ಕ್ರಿಯವಾಗಿ ಕರಗಿಹೋಗಬೇಕೆ ಅಥವಾ ತನ್ನ ಧಾರಣಶಕ್ತಿ ಮತ್ತು ಸಂಘಟನಾ ಚಾತುರ್ಯವನ್ನು ಪ್ರದರ್ಶಿಸಬೇಕೆ? ಕಾರ್ಮಿಕ ನಾಯಕರಿಗೆ ಸರಿಯಾದ ಹಾದಿಯನ್ನು ತಿಳಿಯಲಾದೀತೆ? ಅಷ್ಟು ವರ್ಷಗಳ ಹೋರಾಟದ ಫಲವನ್ನು ಒಮ್ಮೆಲೇ ಕಳೆದುಕೊಂಡು ತಣ್ಣಗಾಗಬೇಕೆ? ಇಂತಹ ಪ್ರಶ್ನೆಗಳು ಯೂರೋಪಿನಾದ್ಯಂತ ಚರ್ಚೆಗೆ ಬಂದವು. ಇಷ್ಟು ದುರ್ಗಮವಾದ ಸಂಧಿಕಾಲದಲ್ಲಿ ಎದೆಗುಂದಬಾರದೆಂದು ಏಂಗೆಲ್ಸ್ ಜರ್ಮನಿಯ ನಾಯಕರಿಗೆ ಪತ್ರಮುಖೇನ ಹುರುಪು ನೀಡುತ್ತಾ ಅನೇಕ ಸಲಹೆಗಳನ್ನು ನೀಡಿದರು. ಎಷ್ಟೋ ನಾಯಕರಿಗೆ ಆರ್ಥಿಕ ಸಹಾಯ ಕೂಡ ಒದಗಿಸಿದರು, ಏಕೆಂದರೆ ಬಿಸ್ಮಾರ್ಕ್ ಅವರನ್ನೆಲ್ಲಾ ಬೀದಿಪಾಲು ಮಾಡಿದ್ದ. ಬಿಸ್ಮಾರ್ಕ್ 'ಕಬ್ಬಿಣದ ಮನುಷ್ಯ'ನಾಗಿರಲಿಲ್ಲ, ತುಕ್ಕುಹಿಡಿದ ಕಬ್ಬಿಣದ ಹೃದಯದವನಾಗಿದ್ದ. ೧೮೭೯ರಲ್ಲಿ (ಅಂದರೆ, ಬಿಸ್ಮಾರ್ಕನ ಶಾಸನ ಜಾರಿಯಾದ ತರುವಾಯದಲ್ಲೇ) ಏಂಗೆಲ್ಸ್ ಹೇಳಿದರು: "ಸಮಾಜವಾದಿ ಚಳುವಳಿಯ ಬಾಯನ್ನು ಯಾರೂ ಕಟ್ಟಲಾರರು. ಈ ಸಮಾಜವಾದ-ವಿರೋಧಿ ಶಾಸನವೇ ಜರ್ಮನಿಯ ದುಡಿಯುವ ಜನತೆಗೆ ಕ್ರಾಂತಿಕಾರಿ ಮಾರ್ಗದ ಬಗ್ಗೆ ಶಿಕ್ಷಣ ನೀಡುತ್ತದೆ." ಏಂಗೆಲ್ಸ್ ಸಲಹೆಯಂತೆ ಜರ್ಮನಿಯ ದುಡಿಯುವ ವರ್ಗದ ಪಕ್ಷ ಹೊಸ ಸಂಘಟನಾ ವಿಧಾನಗಳನ್ನು ಕಂಡುಕೊಂಡಿತು. ಪಕ್ಷದ ಸಾಮಾನ್ಯ ಕಾರ್ಯಕರ್ತರು ಅಸಾಮಾನ್ಯ ನಿಷ್ಠೆ ಪ್ರದರ್ಶಿಸಿದರು, ಅಪಾರ ತಂತ್ರಗಳನ್ನು ಕಂಡುಕೊಂಡರು. ಪಕ್ಷದ ಘಟಕಗಳನ್ನು ವಿಸರ್ಜಿಸಿದ್ದು ಸರ್ಕಾರ; ಅವುಗಳ ಜಾಗದಲ್ಲಿ ಪಕ್ಷವು ಭೂಗತ ಸಂಘಟನೆಗಳನ್ನು ರಚಿಸಿಕೊಂಡಿತು. ಕಾನೂನಿನನ್ವಯ ಮಾಡಬಹುದಾದ್ದನ್ನು ಮಾಡುತ್ತಾ ಪಕ್ಷದ ಆಂತರಿಕ ಸಂಪರ್ಕಗಳ ಜಾಲವನ್ನು ಬಿಗಿಗೊಳಿಸಿಕೊಂಡಿತು. ಇದಲ್ಲವೇ ಜಾಣತನ, ಎಂದು ಏಂಗೆಲ್ಸ್ ದುಡಿಯುವ ಜನತೆಯನ್ನು ಮೆಚ್ಚಿ ಲೇಖನ ಬರೆದರು.

ಇದೆಲ್ಲಾ ಒಂದು ದಿನ ಅಥವಾ ವರ್ಷದಲ್ಲಿ ನಡೆದದ್ದಲ್ಲ. ಮೊದಲಿಗೆ ಕಾರ್ಯಕರ್ತರು ದಿಙ್ಮೂಢರಾಗಿದ್ದರು. ಶಾಸನವಿನ್ನೂ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಇಡಲಾಗಿದ್ದಾಗ ಹ್ಯಾಂಬರ್ಗ್‌ನಲ್ಲಿದ್ದ ಪಕ್ಷದ ಕೇಂದ್ರ ಚುನಾವಣಾ ಸಮಿತಿಯು ತನ್ನನ್ನು ತಾನೇ ವಿಸರ್ಜಿಸಿಕೊಂಡಿದ್ದಿತು! ಆಗಸ್ಟ್ ಬೆಬೆಲ್ ಅದನ್ನು ಬಲವಾಗಿ ವಿರೋಧಿಸಿದ, ಆದರೆ ಹತಾಶರಾಗಿದ್ದ ನಾಯಕರು ದಿಕ್ಕುತೋಚದೆ ಶರಣಾಗತಿ ಗದ್ಯ ಉಚ್ಚರಿಸತೊಡಗಿದ್ದರು. ಹಾಗೆ ನೋಡಿದರೆ, ಪಕ್ಷದಲ್ಲಿದ್ದವರೆಲ್ಲಾ ಸೈದ್ಧಾಂತಿಕವಾಗಿ ಮೊನಚು ಪ್ರಜ್ಞೆಯನ್ನು

ಬೆಳೆಸಿಕೊಂಡಿದ್ದವರೇ ಆಗಿರಬೇಕೆಂದೇನೂ ಇರಲಿಲ್ಲ. ಎಷ್ಟೋ ಬಿಸ್ಮಾರ್ಕ್ ವಿರೋಧಿಗಳು ಬೇರಾವ ಪಕ್ಷವನ್ನೂ ಕಾಣದೆ ಈ ಪಕ್ಷದೊಳಕ್ಕೆ ತೂರಿಕೊಂಡಿದ್ದರು. ಈಗ ಆ ವಿರೋಧ ಬತ್ತಿಹೋಗಿತ್ತು. ಪಾರ್ಲಿಮೆಂಟಿನಲ್ಲಿದ್ದ ಪಕ್ಷದ ಸದಸ್ಯರು ಕೆಲವರು ಅತ್ತಿಂದಿತ್ತ ತೂಗಾಡುವ ಪ್ರವೃತ್ತಿ ತೋರಿಸಿದ್ದುಂಟು. ಅವರಿಗೆ ಮಾರ್ಗದರ್ಶನ ನೀಡುವ ಬದಲು ಪಕ್ಷವು ಅವರ ಅಶಿಸ್ತನ್ನು ಅಸಹಾಯಕತೆಯಿಂದ ನೋಡುತ್ತಾ ಕುಳಿತಿತು. ಅಂತಹ ಕೆಲವು ಸದಸ್ಯರು ಪಾರ್ಲಿಮೆಂಟಿನಲ್ಲಿ ಆಡಿದ್ದ ಮಾತುಗಳಿಂದ ಏಂಗೆಲ್ಸ್ ರೊಚ್ಚಿಗೆದ್ದರು. ಉದಾಹರಣೆಗೆ, ಮ್ಯಾಕ್ಸ್ ಕೇಸರ್ ಎಂಬೊಬ್ಬ ಸದಸ್ಯ ಬಿಸ್ಮಾರ್ಕನ ಒಂದು ಪ್ರಸ್ತಾವಕ್ಕೆ ಬೆಂಬಲ ನೀಡಿದ; ಅದು ಆಮದು ನೀತಿಗೆ ಸಂಬಂಧಿಸಿದ್ದು. ಇಂತಹ ಬೆಂಬಲದಿಂದ ಯೂರೋಪಿನ ಬೇರೆ ದೇಶಗಳಲ್ಲಿ ಜರ್ಮನಿಯ ದುಡಿಯುವ ವರ್ಗದ ಬಗ್ಗೆ ಎಂತಹ ಕೆಟ್ಟ ಅಭಿಪ್ರಾಯ ಮೂಡತ್ತದೆಯೆಂದು ಮೊದಲು ಅರ್ಥಮಾಡಿಕೊಳ್ಳಬೇಕೆಂದು ಏಂಗೆಲ್ಸ್ ಕರೆಯಿತ್ತರು. ಪಕ್ಷ ಎಷ್ಟು ಹತಾಶವಾಗಿತ್ತೆಂದರೆ ೧೮೭೯ರ ಮಾರ್ಚ್ ೧೭ರಂದು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ವಿಲ್ಹೆಲ್ಮ್ ಲೀಬ್‌ನೆಖ್ಟ್ ಹೇಳಿದ: "ನಮ್ಮ ಪಕ್ಷ ಸುಧಾರಣೆಗಳನ್ನು ಸ್ವಾಗತಿಸುತ್ತದೆ, ನಮಗೇನೂ ಹಿಂಸಾತ್ಮಕ ಕ್ರಾಂತಿಯಲ್ಲಿ ಲಾಲಸೆಯಿಲ್ಲ. ನಾವು ಸಮಾಜವಾದ-ವಿರೋಧಿ ಶಾಸನವನ್ನು ಉಲ್ಲಂಘಿಸುವವರಲ್ಲ." ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಏಂಗೆಲ್ಸ್ ಮಧ್ಯಪ್ರವೇಶ ಮಾಡಿ ದುಡಿಯುವ ವರ್ಗದ ಪರವಾಗಿ ರಾಜಕೀಯ ಪ್ರತಿಭೆಯನ್ನು ಮೆರೆದರೆಂಬುದು ಒಂದು ವಿಶೇಷ.

ಪರಿಸ್ಥಿತಿಯು ಎಷ್ಟು ಸುಧಾರಿಸಿತೆಂದರೆ ಪಕ್ಷದ ಕಾರ್ಯಕರ್ತರೆಲ್ಲಾ ಐದು ವರ್ಷಗಳ ನಂತರ ವಿಜಯೋತ್ಸಾಹದಿಂದ ದುಡಿಯುವ ವರ್ಗದ ಚಳುವಳಿಗೆ ಹೊಸ ಚೈತನ್ಯ ತುಂಬಿ ಕೊಟ್ಟರು. ೧೮೮೪ರ ಅಕ್ಟೋಬರ್‌ನಲ್ಲಿ ಬೆಬೆಲ್‌ಗೆ ಏಂಗೆಲ್ಸ್ ಪತ್ರ ಬರೆದು ಹೀಗೆಂದರು: "ಪಕ್ಷದ ವಿಜಯವನ್ನು ಹರ್ಷದಿಂದ ಸ್ವಾಗತಿಸುತ್ತಾ ಜರ್ಮನಿಯ ದುಡಿಯುವ ವರ್ಗಕ್ಕೆ ಅಭಿನಂದನೆ ಹೇಳುತ್ತೇನೆ. ಪಕ್ಷದ ಅಮೋಘ ವಿಜಯವು ಎಲ್ಲೆಲ್ಲೂ ನೂತನ ಛಾಯೆಯನ್ನು ಮೂಡಿಸಿದೆ - ಸೈಬೇರಿಯಾದಿಂದ ಕ್ಯಾಲಿಫೋರ್ನಿಯವರೆಗೆ ಮತ್ತು ಸಿಸಿಲಿಯಿಂದ ಸ್ವೀಡನ್ನಿನವರೆಗೆ." ಸಮಾಜವಾದ ವಿರೋಧಿ ಶಾಸನ ಜಾರಿಯಲ್ಲಿದ್ದಾಗಲೇ ವಿಸರ್ಜಿಸಲಾಗಿದ್ದ ಪಕ್ಷದ ಘಟಕಗಳನ್ನು ಪುನಶ್ಚೇತನಗೊಳಿಸಲಾಯಿತು, ಪಕ್ಷದ ಅಧಿವೇಶನವನ್ನು ದೇಶದ ಹೊರಗೆ ಜರುಗಿಸಲಾಯಿತು, ಜರ್ಮನಿಯಲ್ಲಿ ಮುಚ್ಚಲ್ಪಟ್ಟ ಪತ್ರಿಕೆಯನ್ನು ಸ್ವಿಟ್ಸರ್ಲೆಂಡ್‌ನ ಝೂರಿಕ್‌ನಿಂದ ಪ್ರಕಟಿಸಲು ಯೋಜಿಸಲಾಯಿತು. ರಾಜಕೀಯ ಹೋರಾಟಗಳು ಬೇಕಾದಷ್ಟು ನಡೆದವು. ಕಾರ್ಮಿಕರ ಚಳುವಳಿಯನ್ನು ಈ ರೀತಿ ಮಾರ್ಪಡಿಸಲಾಯಿತು: ಕಾರ್ಮಿಕ ಸಂಘಟನೆಯ ಜಾಗದಲ್ಲಿ ಸಹಕಾರಿ ಸಂಘಗಳು, ಪರಸ್ಪರ ಸಹಾಯ ಸಂಸ್ಥೆಗಳು ಹುಟ್ಟಿಕೊಂಡವು. ಅಂದರೆ ಸದಸ್ಯರು ಮೊದಲಿಗಿಂತ ಹೆಚ್ಚು ಸಕ್ರಿಯವಾಗಿ ಹೊಸರೀತಿಯ ಚಳುವಳಿಗಳಲ್ಲಿ ಭಾಗಿಗಳಾದರು. ಅದರಿಂದಾಗಿ, ಬಹಿಷ್ಕರಿಸಲ್ಪಟ್ಟಿದ್ದ ಕಾರ್ಮಿಕ ಸಂಘಟನೆಗಳು ಮುಕ್ತವಾಗಿ ಕೆಲಸಮಾಡುತ್ತಿದ್ದ ಸಂಘಟನೆಗಳಿಗಿಂತಲೂ ಹೆಚ್ಚು ಬಲಿಷ್ಠ

ವಾದವು. ಬಿಸ್ಮಾರ್ಕನ ಶಾಸನ ಕಾಗದದಲ್ಲಿ ಮಾತ್ರವೇ ಉಳಿದುಹೋಯಿತು. ಆ ಸಂದರ್ಭದಲ್ಲಿ ಏಂಗೆಲ್ಸ್ ಪುನರುಚ್ಚರಿಸಿದರು: "ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಯಾವಾಗಲೂ ಭಾಗವಹಿಸುತ್ತ ಮುಂದುವರಿಯುವುದು ನಮ್ಮ ಪ್ರಾಬಲ್ಯದ ಮಾಪನಕ್ಕೆ ಒಂದು ಸಾಧನ; ಆದರೆ ಅದಷ್ಟೇ ನಮ್ಮ ಹಾದಿಯಲ್ಲ. ಬೃಹತ್ ಸಂಖ್ಯೆಯ ಭಾಗವಹಿಸುವಿಕೆಯನ್ನು ದಿನನಿತ್ಯದ ರಾಜಕೀಯ ಚಳುವಳಿಗಳಲ್ಲಿ ಖಾತರಿಪಡಿಸಿಕೊಂಡರೆ ಅದು ಚುನಾವಣಾ ಸಮರವನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯುತ್ತದೆ." ಇದರರ್ಥವಿಷ್ಟೆ: ಈಚಿನ ದಶಕಗಳಲ್ಲಿ ನಮ್ಮ ದೇಶ ಹಲವು ಅನಿಷ್ಟಗಳನ್ನು ಅನುಭವಿಸಿದೆ: ತೆಹೆಲ್ಕಾ, ಪೆಟ್ರೋಲ್ ಬಂಕ್, ಭೂ ಕಬಳಿಕೆ, ಶವಪೆಟ್ಟಿಗೆಗಳ ವ್ಯವಹಾರ, ಸಾರ್ವಜನಿಕ ಉದ್ಯಮಗಳ ಬೇಕಾಬಿಟ್ಟಿ ಖಾಸಗೀಕರಣ ಇತ್ಯಾದಿ ಹಗರಣಗಳು ಅವುಗಳಲ್ಲಿ ಕೆಲವು ಮಾತ್ರ. ಅಂತಹ ಸಂದರ್ಭಗಳಲ್ಲಿ ಪಾರ್ಲಿಮೆಂಟಿನಲ್ಲಿ ಬೇಕಾದಷ್ಟು ಆರ್ಭಟ ನಡೆದಿದೆ, ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸಲಾಗಿದೆ. ಆದರೆ ದುಡಿಯುವ ವರ್ಗವು ಬೃಹತ್ತಾಗಿ ಬೀದಿಗಿಳಿದು ಪಾರ್ಲಿಮೆಂಟಿನ ವಾಗ್ಯುದ್ಧಗಳಿಗೆ ಜೀವ ತುಂಬಿಕೊಡಲಿಲ್ಲ. ಹಾಗೆ ಮಾಡುವುದು ಅತ್ಯವಶ್ಯಕವೆಂದು ಏಂಗೆಲ್ಸ್ ಎಚ್ಚರಿಸಿದರು, ಜರ್ಮನಿಯ ದುಡಿಯುವ ವರ್ಗ ಅದಕ್ಕೆ ಸ್ಪಂದಿಸಿತು. ಏಂಗೆಲ್ಸ್ ಹೇಳಿದ್ದಿದು: "ರಾಜಕೀಯ ಪ್ರಜ್ಞೆಯೆಂಬುದು ಆಗೊಮ್ಮೆ ಈಗೊಮ್ಮೆ ಪಾರ್ಲಿಮೆಂಟ್ ಚುನಾವಣೆಯಲ್ಲಿ ಮತ ಚಲಾಯಿಸುವುದಷ್ಟೇ ಅಲ್ಲ; ಪ್ರತಿ ಕ್ಷಣದಲ್ಲೂ ಆ ಪ್ರಜ್ಞೆಯನ್ನು ಕಸಿ ಮಾಡುತ್ತಿರಬೇಕು, ಹೆಚ್ಚಳ ಮಾಡುತ್ತಿರಬೇಕು. ಅದಕ್ಕಿರುವ ಹಾದಿ, ವಿಶ್ಲೇಷಣೆ ಮತ್ತು ಹೋರಾಟಗಳಲ್ಲಿ ಭಾಗವಹಿಸುವುದು." ಹತಾಶರಾಗಿದ್ದಂತೆ ಕಂಡ ಅದೇ ಲೀಬ್‌ನೆಖ್ಟ್, ಬೆಬೆಲ್, ಮುಂತಾದ ನಾಯಕರು ಏಂಗೆಲ್ಸರ ಮಾರ್ಗದರ್ಶನದಲ್ಲಿ ಗುಣಾತ್ಮಕ ಬದಲಾವಣೆಯನ್ನು ತಂದರು. ಸತತ ಹೋರಾಟಗಳಿಂದ ೧೮೮೪ರ ಅಕ್ಟೋಬರ್ ವೇಳೆಗೆ ಜರ್ಮನಿಯ ಸೋಷಿಯಲ್ - ಡೆಮಾಕ್ರಟರು ಮೂರು ವರ್ಷಗಳ ಹಿಂದೆ ಪಡೆದಿದ್ದ ಮತಗಳಿಗಿಂತಲೂ ಎರಡುವರೆ ಲಕ್ಷ ಹೆಚ್ಚು ಮತ ಗಳಿಸಿದರು. ಏಂಗೆಲ್ಸರ ಮಾರ್ಗದರ್ಶಕ ಸೂತ್ರ ಹೀಗಿತ್ತು: "ತೆಪ್ಪಗೆ ತಲೆಬಾಗಿ ಕೂರುವುದರಿಂದ ನಾವೇನನ್ನೂ ನಿರೀಕ್ಷಿಸಲಾಗದೆಂಬುದನ್ನು ಚುನಾವಣೆ ತೋರಿಸಿಕೊಟ್ಟಿದೆ. ನಮ್ಮ ವಿರೋಧಿಗೆ ಯಾವ ರಿಯಾಯಿತಿಯನ್ನೂ ತೋರಿಸಬಾರದು. ಬಲವಾಗಿ ಪ್ರತಿರೋಧ ಒಡ್ಡಿದ್ದು ನಮಗೆ ಗೌರವ ತಂದಿದೆ, ಬೆಂಬಲ ಹೆಚ್ಚಿಸಿದೆ." ರಾಜಕೀಯ ಹೋರಾಟವು ಅಮೂರ್ತವಾದ ಮುಸುಕಿನ ಗುದ್ದಾಟವಲ್ಲ; ಅದು ನೇರವಾಗಿ ಮೂಗಿಗೆ ಗುದ್ದುವ ಕ್ರಿಯೆ.

ಹೀಗೆ ಬೆಳೆದ ಸೋಷಿಯಲ್ - ಡೆಮಾಕ್ರಟರ ಪ್ರಾತಿನಿಧ್ಯವನ್ನು ಬಿಸ್ಮಾರ್ಕ್ ಮಾನ್ಯ ಮಾಡಲು ಸಿದ್ಧನಿರಲಿಲ್ಲ. ೧೮೮೪ರ ಕೊನೆಯ ವೇಳೆಗೆ ಇನ್ನೊಂದು ಬೆಳೆವಣಿಗೆಯನ್ನು ದುಡಿಯುವ ವರ್ಗದ ಮುಂದಿಟ್ಟು ಆ ವರ್ಗವನ್ನು ಒಡೆಯಲು ಉಪಕ್ರಮಿಸಿದ. ಅದೂ ಒಂದು ಪಾಠ ಕಲಿಸುವ ಪ್ರಸಂಗವೇ ಆಗಿದೆ. ಏಂಗೆಲ್ಸ್ ಸಲಹೆಯಂತೆ ಬೆಬೆಲ್ ನೇತೃತ್ವದಲ್ಲಿ ದುಡಿಯುವ ವರ್ಗದ ಪ್ರತಿನಿಧಿಗಳು ಪಾರ್ಲಿಮೆಂಟಿನಲ್ಲಿ ರೈತ-ಕಾರ್ಮಿಕರ ಪರವಾಗಿ ಹಲವು ವಿಧೇಯಕಗಳನ್ನು ಮಂಡಿಸಿದ್ದರು. ಉದಾಹರಣೆಗೆ, ದಿನದ ಕೂಲಿಯೆಂದರೆ ಗರಿಷ್ಠ ೧೦

ಗಂಟೆ; ಕಾರ್ಖಾನೆಯಲ್ಲಿ ಕನಿಷ್ಠ ಸೌಲಭ್ಯಗಳು; ಕಾರ್ಖಾನೆಯಲ್ಲಿ ಕೆಲಸ ಮಾಡುವಾಗ ಅಪಘಾತ ಉಂಟಾದರೆ ಅದಕ್ಕೆ ಆಡಳಿತವು ಜವಾಬ್ದಾರಿ ಹೊರಬೇಕು; ಇತ್ಯಾದಿ. ಇವೆಲ್ಲಾ ದುಡಿಯುವ ವರ್ಗಕ್ಕೆ ರೆಕ್ಕೆ ಮೂಡಿಸುತ್ತಿತ್ತು. ಆದ್ದರಿಂದ ಬಿಸ್ಮಾರ್ಕ್ ತನ್ನ ಮಾರ್ಮಿಕ ತಂತ್ರವನ್ನು ಬಳಸಿ ಬಲಿಯುತ್ತಿದ್ದ ರೆಕ್ಕೆಗಳನ್ನು ಕತ್ತರಿಸಲು ಹವಣಿಸಿದ. ರಾಜಕೀಯದಲ್ಲಿ ತೊಡಗುವ ದುಡಿಯುವ ವರ್ಗವು ಈ ಪ್ರಸಂಗವನ್ನು ಚೆನ್ನಾಗಿ ಮನನ ಮಾಡಿಕೊಳ್ಳಬೇಕು; ಏಕೆಂದರೆ, ಇಂತಹ ತಂತ್ರಗಳು ಬೇರೆಬೇರೆ ರೀತಿಗಳಲ್ಲಿ ಸದಾ ನಮ್ಮ ಮಧ್ಯೆ ಬಳಸಲಾಗುತ್ತವೆ.

ಬಿಸ್ಮಾರ್ಕನ ಕಾಲದಲ್ಲಿ ವಸಾಹತುಶಾಹಿಯು ಪ್ರಬಲವಾಗಿತ್ತು. ಅದರಿಂದಾಗಿ ಹಲವು ರಾಷ್ಟ್ರಗಳು ಯೂರೋಪಿನ ಕೆಲವು ದೇಶಗಳ ಅಧೀನದಲ್ಲಿದ್ದವು. ಜರ್ಮನಿಯೂ ಕೆಲವು ವಸಾಹತುಗಳನ್ನು ಹೊಂದಿತ್ತು. ಈ ಹಿನ್ನೆಲೆಯಲ್ಲಿ ಬಿಸ್ಮಾರ್ಕ್ ಒಂದು ಶಾಸನವನ್ನು ಮಂಡಿಸಿದ; ಪೂರ್ವ ಏಷ್ಯಾ, ಆಫ್ರಿಕಾ ಮತ್ತು ಆಸ್ಟ್ರೇಲಿಯಾ ದೇಶಗಳಿಗೆ ಸರಕುಗಳನ್ನು ಕೊಂಡೊಯ್ಯುವ ಖಾಸಗಿ ಹಡಗು ಕಂಪನಿಗಳಿಗೆ ದೇಶದ ಬೊಕ್ಕಸದಿಂದ ಭಾರಿ ಮೊತ್ತದ ಸಹಾಯಧನ ನೀಡಬೇಕೆನ್ನುವುದು ಅದರ ಸಾರಾಂಶ. ಇದಕ್ಕೂ ದುಡಿಯುವ ವರ್ಗದ ಸಂಘಟನೆಯ ಶಕ್ತಿಯನ್ನು ಮುರಿಯುವುದಕ್ಕೂ ಸಂಬಂಧವನ್ನು ಕಾಣದವರು ಪಾರ್ಲಿಮೆಂಟಿನಲ್ಲಿದ್ದರು; ಸೋಷಿಯಲ್-ಡೆಮಾಕ್ರಟರಲ್ಲೂ ಅಂತಹ ಸದಸ್ಯರಿದ್ದರು. ಶಾಸನದ ಉದ್ದೇಶವನ್ನು ಬಿಸ್ಮಾರ್ಕ್ ಹೀಗೆ ವಿವರಿಸಿದ್ದ: ಕೂಲಿಯ ರೂಪದ ಹಣವು ದುಡಿಯುವವರಿಗೆ ಹೆಚ್ಚಿನ ಮೊತ್ತದಲ್ಲಿ ಲಭಿಸುತ್ತದೆ, ಏಕೆಂದರೆ ರಫ್ತಿಗೆ ಉತ್ತೇಜನ ನೀಡುವುದರಿಂದ ಉತ್ಪಾದನೆಯ ಹೆಚ್ಚಳವಾಗುತ್ತದೆ ಮತ್ತು ಅದಕ್ಕೆ ಹೆಚ್ಚಿನ ಸಂಖ್ಯೆಯ ಕೆಲಸಗಾರರು ಬೇಕಾಗುತ್ತಾರೆ. (ಉದಾರೀಕರಣ ಮತ್ತು ಜಾಗತೀಕರಣದ ಸಮರ್ಥಕರು ಇಂಥವೇ ವಾದಗಳನ್ನು ಈಗ ನಮ್ಮ ದೇಶದಲ್ಲಿ ಮುಂದಿಡುತ್ತಿರುತ್ತಾರೆಂಬುದನ್ನು ಗಮನಿಸಬಹುದು). ಅಂದರೆ, ಇದು ದುಡಿಯುವವರ ಪರವಾದ ಶಾಸನವೆಂದು ಅವನು ಪ್ರಚಾರ ಮಾಡಿದ. ಅದನ್ನು ವಿರೋಧಿಸುವವರು ಕೆಲಸಗಾರರ ಹಿತವನ್ನು ಗಾಳಿಗೆ ತೂರುತ್ತಾರೆಂದು ಅವನ ಸೂಚನೆಯಾಗಿತ್ತು. ಆದರೂ ಬೆಬೆಲ್ ಮತ್ತು ಲೀಬ್‌ನೆಖ್ಟ್ ಅದನ್ನು ಬಲವಾಗಿ ವಿರೋಧಿಸಿದರು, ಶಾಸನವು ವಸಾಹತುಶಾಹಿ ವರ್ಧನೆಯ ಪ್ರಯತ್ನವೆಂದು ಬಿಸ್ಮಾರ್ಕನನ್ನು ಕಟುವಾಗಿ ಟೀಕಿಸಿದರು. ವಿಶ್ವದಾದ್ಯಂತ ವ್ಯಾಪಾರದ ಸಂಪರ್ಕ, ಹಡಗುಗಳ ನಿರ್ಮಾಣದಲ್ಲಿ ತೊಡಗಿದ ಕೆಲಸಗಾರರ ಉದ್ಯೋಗ, ಮುಂತಾದ ಸಬೂಬುಗಳನ್ನು ಮುಂದಿಟ್ಟು 'ಸುಧಾರಣಾ ಪಟುಗಳು' ಶಾಸನವನ್ನು ಬೆಂಬಲಿಸಿದರು. ಅವರಲ್ಲಿ ದುಡಿಯುವ ವರ್ಗದ ಪ್ರತಿನಿಧಿಗಳೂ ಕೆಲವರಿದ್ದರು.

ಏಂಗೆಲ್ಸರು ಈ ರೀತಿ ಬೆಂಬಲ ನೀಡಿದವರನ್ನು ಹೇಗೆ ತಪ್ಪು ದಾರಿಯಿಂದ ಹಿಂದಕ್ಕೆ ಸೆಳೆಯಬೇಕೆಂಬುದರ ಚರ್ಚೆ ಆರಂಭಿಸಿದರು. ರಾಜಕೀಯ ಪ್ರಜ್ಞೆಯು ಐಕ್ಯಪ್ರಜ್ಞೆಯಾಗಿ ರೂಪುಗೊಳ್ಳುವ ಬದಲು ಅದು ಹರಿದು ಹಂಚಿಹೋಗುತ್ತದೆ, ಅದರಿಂದ ಸಂಘಟಿತ ಹೋರಾಟಕ್ಕೆ ಪೆಟ್ಟು ಬೀಳುತ್ತದೆ ಎಂದು ವಿವರಿಸುತ್ತಾ ದುಡಿಯುವ ವರ್ಗದ

ಅಂತರರಾಷ್ಟ್ರೀಯ ಜವಾಬ್ದಾರಿಯ ಪ್ರಜ್ಞೆಯತ್ತಲೂ ಬೊಟ್ಟುಮಾಡಿ ತೋರಿಸಿದರು. ಪೂರ್ವಾಪರ ಚಿಂತನೆಯಿಂದ ಒಮ್ಮುಖದ ತೀರ್ಮಾನ ಮತ್ತು ಕಾರ್ಯಕ್ರಮ ದುಡಿಯುವ ವರ್ಗದ ಪ್ರಮುಖ ಆಯುಧವೆಂದು ವಿಶ್ಲೇಷಿಸಿ ತಿಳಿಸಿದ್ದು ಏಂಗೆಲ್ಸರ ರಾಜಕೀಯ ನಿರ್ದೇಶನಾ ವಿಧಾನಕ್ಕೆ ಒಂದು ನಿದರ್ಶನವಾಗಿದೆ. ದುಡಿಯುವ ವರ್ಗವು ರಾಜಕೀಯದಿಂದ ದೂರ ಉಳಿಯಬೇಕೆಂದು ಉಪದೇಶಿಸುವವರ ಹುನ್ನಾರ ಸ್ಪಷ್ಟವಾಗಿದೆ; ಅವರು ರಾಜಕೀಯ ಪ್ರವೇಶಿಸಿದರೆ ಇವರ ನಿರ್ಗಮನ ಸನ್ನಿಹಿತವಾಗುತ್ತದೆಂಬ ಲೆಕ್ಕಾಚಾರ ಇದರಲ್ಲಡಗಿದೆ.

ಆಂಟೋನಿಯೋ ಗ್ರಾಂಶಿ ಎಂಬ ಇಟಲಿಯ ಚಿಂತಕ ಪ್ರತಿಪಾದಿಸಿದ್ದ ಒಂದು ಅಂಶವನ್ನು ಇಲ್ಲಿ ಸ್ಮರಿಸುವುದು ಉಚಿತವೆನಿಸುತ್ತದೆ. ತತ್ತ್ವಶಾಸ್ತ್ರವೆಂಬುದು ಎಂದೂ ಸಾಮಾನ್ಯೀಕರಣಕ್ಕೆ ನಿಲುಕುವಂಥದಲ್ಲವೆಂಬುದು ಆತನ ಅಭಿಪ್ರಾಯ. ವಿಶ್ವದ ವಿವಿಧ ವಿಷಯಗಳ ಬಗ್ಗೆ ಹತ್ತಾರು ಕಲ್ಪನೆಗಳುಂಟು; ಅವುಗಳಲ್ಲಿ ಯಾವುದೋ ಒಂದನ್ನು ನಾವು ಆಯ್ಕೆ ಮಾಡಿಕೊಳ್ಳು ತ್ತೇವೆ. ಈ ಆಯ್ಕೆಗೆ ಆಧಾರವೇನು? ಅದು ಕೇವಲ ಬೌದ್ಧಿಕ ಆಯ್ಕೆಯಲ್ಲ. ಆಚರಣೆಯ ಮೂಸೆಯಲ್ಲಿಟ್ಟು ನೋಡಿದಾಗ ಮಾತ್ರವೇ ಆಯ್ಕೆಯ ಮೊಲಕಾರಣ ತಿಳಿಯುತ್ತದೆ. ಬದಲಾವಣೆಯ ತತ್ತ್ವವನ್ನು ಅಂಗೀಕರಿಸಿ, ಬದಲಾವಣೆಗೆ ಅಡಚಣೆಯುಂಟುಮಾಡುವ ಕಾರ್ಯವಿಧಾನವನ್ನು ಅನುಸರಿಸಿದರೆ ಆಯ್ಕೆಗೆ ಏನಾದರೂ ಅರ್ಥವುಂಟೆ? ಏಂಗೆಲ್ಸರು ರಾಜಕೀಯ ಚಿಂತನೆ ಮತ್ತು ಕ್ರಿಯೆಯನ್ನು ದುಡಿಯುವ ವರ್ಗದ ಆಯುಧವೆಂದು ನಿರೂಪಣೆ ಮಾಡುವಾಗ ಇದನ್ನೇ ಮನಸ್ಸಿನಲ್ಲಿಟ್ಟುಕೊಂಡಿದ್ದಾರೆ: ನಮ್ಮ ರಾಜಕೀಯ ಕ್ರಿಯೆಗೆ ತಾತ್ವಿಕ ಬುನಾದಿ ಯಾವುದು? ಅಮೂರ್ತವಾದ ಸುಖದ ಪ್ರಾಪ್ತಿಯು ನಮ್ಮ ಗುರಿಯೇ ಅಥವಾ ಮೂರ್ತ ವಿಶ್ವದ ಆಂತರಿಕ ಸಂಬಂಧಗಳನ್ನು ಬದಲಾಯಿಸಿ ಸಾಮೂಹಿಕ ಹಿತದತ್ತ ಸಾಗುವುದು ನಮ್ಮ ಗುರಿಯೆ? ಪೋಪ್ ಪಾಲ್ ಲ್ಯಾಟಿನ್ ಅಮೆರಿಕಾ ದೇಶಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿಯ ಜನಕ್ಕೆ ಉಪದೇಶಿಸಿದರು: "ಸಾಮ್ರಾಜ್ಯಶಾಹಿಯ ಬಗ್ಗೆ ಮಾತನಾಡುವುದು ನಿರರ್ಥಕ, ನೀವು ನಿಮ್ಮಲ್ಲಿರುವ ರೊಟ್ಟಿಯನ್ನು ಹಂಚಿಕೊಳ್ಳಲು ಕಲಿಯಿರಿ." ಅಂದರೆ, ನಿಮ್ಮನ್ನು ಲೂಟಿ ಮಾಡುವುದರ ಬಗ್ಗೆ ಪ್ರಜ್ಞೆ ಬೆಳೆಸಿಕೊಳ್ಳಬೇಡಿ, ಎಂದರ್ಥ. ಇಂದಿನ ನಮ್ಮ ಸಂದರ್ಭದಲ್ಲಿಯೂ ಒಂದು ಉಪದೇಶ ಸಾಧ್ಯ: "ದುಡಿಯುವ ಜನ ಆರ್ಥಿಕ ನೀತಿಗಳ ಬಗ್ಗೆ ಯೋಚನೆ ಮಾಡುವುದು ಬೇಡ, ಅವರು ಮಂದಿರ ನಿರ್ಮಾಣ ಮಾಡಿಕೊಂಡು ನಿಶ್ಚಿಂತೆಯಿಂದ ಇರುವುದೊಳ್ಳೆಯದು." ಇದು ನಿಶ್ಚಿಂತೆಯ ಸುಖ ನೀಡಲಾರದೆಂದಷ್ಟೇ ಹೇಳಬೇಕು; ಏಕೆಂದರೆ, ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಸುಪ್ತ ಚೈತನ್ಯವನ್ನು ಹೊರಹೊಮ್ಮುವಂತೆ ಮಾಡಲು ಕ್ರಿಯೆ ಅಗತ್ಯ; ಅದು ರಾಜಕೀಯ ಕ್ರಿಯೆಯೂ ಹೌದು. ಆದ್ದರಿಂದಲೇ ವರ್ಗಪ್ರಜ್ಞೆ ಆಧಾರವಾಗಿರುವ ಚಿಂತನೆ ಮತ್ತು ಕ್ರಿಯೆಯು ದುಡಿಯುವ ವರ್ಗದ ಮೂಲಸಾಮಗ್ರಿ.

ನಾವು ಹಿಂದೆಯೇ ಚರ್ಚಿಸಿರುವಂತೆ ರಾಜಕೀಯ ಆರ್ಥಿಕತೆಯು ಮಾರ್ಕ್ಸ್ ಮತ್ತು ಏಂಗೆಲ್ಸ್‌ರ ಚಿಂತನೆಯ ಒಂದು ಪ್ರಮುಖ ಅಂಗ. ಆಯಾ ಘಟ್ಟದ ಆರ್ಥಿಕ ಸನ್ನಿವೇಶವು

ಹೇಗೆ ರಾಜಕೀಯಕ್ಕೆ ಪ್ರೇರಣೆ ನೀಡುತ್ತದೆಂಬುದು ಇಲ್ಲಿಯ ತಾತ್ವಿಕ ಅಂಶ. ಅಂದರೆ, ಕೇವಲ ಆರ್ಥಿಕತೆಯು ನಮ್ಮೆಲ್ಲ ಆಯಾಮಗಳನ್ನೂ ನಿರ್ಧರಿಸುತ್ತದೆ ಅಥವಾ ನಿರ್ದೇಶಿಸುತ್ತದೆಯೆಂದು ಇದರರ್ಥವಲ್ಲ. ಅದನ್ನು ಜೊಸೆಫ್ ಬ್ಲಾಕ್‌ಗೆ ೧೮೯೦ರ ಸೆಪ್ಟೆಂಬರ್ ೨೧ರಂದು ಬರೆದ ಪತ್ರದಲ್ಲಿ ಏಂಗೆಲ್ಸ್ ಸ್ಪಷ್ಟಪಡಿಸಿದ್ದಾರೆ: "ಇತಿಹಾಸದ ಭೌತವಾದಿ ವಿವರಣೆಯ ಪ್ರಕಾರ ಇತಿಹಾಸದ ಗತಿಯನ್ನು ಅಂತಿಮವಾಗಿ ನಿರ್ಧರಿಸುವ ಅಂಶವೆಂದರೆ ಉತ್ಪಾದನೆ ಮತ್ತು ಜೀವದ ಮರುಉತ್ಪಾದನೆ (ಅಥವಾ ಸಂತಾನಾಭಿವೃದ್ಧಿ). ಮಾರ್ಕ್ಸ್ ಆಗಲಿ ನಾನಾಗಲಿ ಇದಕ್ಕಿಂತ ಹೆಚ್ಚಿನದೇನನ್ನೂ ಹೇಳಿಲ್ಲ. ಆದರೆ ಅದನ್ನು ಸ್ವಲ್ಪ ತಿರುಚಿ ಹೇಳುವ ಸಾಧ್ಯತೆ ಇದೆ. ಆರ್ಥಿಕ ಅಂಶವೊಂದೇ ನಿರ್ಧಾರಕ ಅಂಶವೆಂದು ಯಾರಾದರೂ ನಮ್ಮ ನಿರೂಪಣೆಯನ್ನು ತಿರುಚಿಹೇಳಿದರೆ ನಮ್ಮ ಮಾತನ್ನು ಅರ್ಥರಹಿತವನ್ನಾಗಿ ಮಾಡಿದಂತಾಗುತ್ತದೆ, ಅಮೂರ್ತವನ್ನಾಗಿಸಿದಂತಾಗುತ್ತದೆ. ಆರ್ಥಿಕ ಸನ್ನಿವೇಶವು ಆಧಾರ; ಆದರೆ ಜೀವನದ ಮೇಲ್ಪದರದ ಇತರ ಎಷ್ಟೋ ಅಂಶಗಳು ಕೆಲಸ ಮಾಡುತ್ತಿರುತ್ತವೆ. ಉದಾಹರಣೆಗೆ, ವರ್ಗ ಹೋರಾಟದ ರಾಜಕೀಯ ರೂಪಗಳು ಮತ್ತು ಫಲಿತಾಂಶಗಳು, ಹೋರಾಟದಲ್ಲಿ ವಿಜಯಿಯಾಗುವ ವರ್ಗವು ರೂಪಿಸುವ ಸಂವಿಧಾನ, ನ್ಯಾಯಾಂಗ ಪದ್ಧತಿ, ಇತ್ಯಾದಿ. ...ಆರ್ಥಿಕ ಅಂಶಕ್ಕೆ ಎಷ್ಟು ಒತ್ತು ಕೊಡಬೇಕೋ ಅದಕ್ಕಿಂತಲೂ ಹೆಚ್ಚು ಒತ್ತು ನೀಡುವ ನಮ್ಮ ಯುವ ಕಾರ್ಯಕರ್ತರಿದ್ದಾರೆ. ಅದಕ್ಕೆ ಮಾರ್ಕ್ಸ್ ಮತ್ತು ನಾನು ಭಾಗಶಃ ಕಾರಣರಾಗಿದ್ದೇವೆ. ನಮ್ಮ ವಿರೋಧಿಗಳು ಆರ್ಥಿಕ ಅಂಶವನ್ನು ಸಂಪೂರ್ಣವಾಗಿ ದೂರೀಕರಿಸಿ ವಿಶ್ಲೇಷಣೆಗಳನ್ನು ನೀಡುತ್ತಿದ್ದ ಸಂದರ್ಭದಲ್ಲಿ ಅವರ ನ್ಯೂನತೆಯನ್ನು ಎತ್ತಿತೋರಿಸಲು ನಾವು ಆರ್ಥಿಕ ಅಂಶಗಳಿಗೆ ವಿಶೇಷ ಒತ್ತು ನೀಡಿದೆವು. ಬೇರೆ ಅಂಶಗಳತ್ತ ಗಮನ ಹರಿಸಿ ಅವುಗಳ ಪಾತ್ರವನ್ನೂ ತಿಳಿಯಹೇಳಲು ನಮಗಾಗ ವ್ಯವಧಾನವೂ ಇರಲಿಲ್ಲ, ಅವಕಾಶವೂ ಇರಲಿಲ್ಲ. ಆದರೆ ಇತಿಹಾಸದ ಯಾವುದೇ ಹಂತವನ್ನು ವಿಶ್ಲೇಷಿಸುವಾಗಲೂ ಈ ಎಲ್ಲ ಅಂಶಗಳನ್ನೂ ಉಪೇಕ್ಷಿಸುವುದು ಪ್ರಾಯೋಗಿಕವಾಗಿ ಸರಿಯಲ್ಲ ಮತ್ತು ನಾವೆಂದೂ ಹಾಗೆ ಉಪೇಕ್ಷಿಸಿಲ್ಲ. ಕೆಲವರಿಗೆ ಇದೊಂದು ಅಭ್ಯಾಸ: ವಿಶ್ಲೇಷಣೆಯ ಮೂಲ ಸೂತ್ರವನ್ನು ತಿಳಿದಾಗ ಅದೊಂದಕ್ಕೆ ಒತ್ತುಕೊಟ್ಟು ಮಿಕ್ಕವನ್ನು ನಗಣ್ಯವೆಂಬಂತೆ ಉಪೇಕ್ಷಿಸುವುದು. ಆ ಮೂಲಸೂತ್ರವನ್ನು ಸಹ ತಪ್ಪಾಗಿ ಗ್ರಹಿಸಿರುವವರು ಇದ್ದಾರೆ. ಆದರೆ ಇದೆಲ್ಲಾ ಕ್ಷಮಾರ್ಹವಲ್ಲವೆಂಬುದು ನನ್ನ ಖಂಡಿತ ಅಭಿಪ್ರಾಯ."

ಇದನ್ನು ವ್ಯಾಖ್ಯಾನಿಸಲು ಯಾವ ಕ್ಷೇತ್ರವನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಬಹುದು. ಉದಾಹರಣೆಗೆ, ನಮ್ಮ ಶಿಕ್ಷಣ ವ್ಯವಸ್ಥೆಯು ಜನಪರವಾಗಿದ್ದು ಏಕೆ ಅಮೋಘ ಪರಿವರ್ತನೆಯನ್ನು ಕಂಡಿಲ್ಲ? ಎಲ್ಲರಿಗೂ ಶಿಕ್ಷಣ ಏಕೆ ದೊರೆಯುತ್ತಿಲ್ಲ? ಇದಕ್ಕೆ ಉತ್ತರವಾಗಿ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿನ ನ್ಯೂನತೆಗಳನ್ನು ಮತ್ತು ಅಸಮಾನತೆಗಳನ್ನು ಎತ್ತಿ ಆಡಬಹುದು. ಆದರೆ ಅದು ಭಾಗಶಃ ಮಾತ್ರ ಸರಿ. ಏಕೆಂದರೆ, ಆರ್ಥಿಕ ವ್ಯವಸ್ಥೆಯು ಶಿಕ್ಷಣ ಕ್ಷೇತ್ರಕ್ಕೆ ಬುನಾದಿಯಾಗುವಂತೆ ಸ್ವತಃ ಶಿಕ್ಷಣವು ಆರ್ಥಿಕತೆಯ ಮೇಲೆ ಪ್ರಭಾವ

ಬೀರುತ್ತದೆ. ಅಲ್ಲದೆ, ಆರ್ಥಿಕ ವ್ಯವಸ್ಥೆಯ ಜೊತೆಗೆ ಹಲವು ಪರಂಪರಾಗತ ಸಾಂಸ್ಕೃತಿಕ ವೈಪರೀತ್ಯಗಳು ಕೂಡ ನಮ್ಮ ಶಿಕ್ಷಣ ವ್ಯವಸ್ಥೆಯ ಸ್ವರೂಪ ಮತ್ತು ಉದ್ದೇಶಗಳನ್ನು ರೂಪಿಸುತ್ತವೆ. ಇವನ್ನೆಲ್ಲಾ ಕ್ರೋಢೀಕರಿಸಿ ವಿಶ್ಲೇಷಣೆ ಮಾಡಿದಾಗ ಮಾತ್ರವೇ ನಮಗೆ ಸತ್ಯದ ಅರಿವುಂಟಾಗಲು ಸಾಧ್ಯ. ಅದು ಮಾರ್ಕ್ಸ್‌ವಾದದ ಆಶಯ.

ಪ್ರಕೃತದ ವಿದ್ಯಮಾನಗಳಲ್ಲಿ ಎರಡನ್ನು ಉದಾಹರಣೆಗಳನ್ನಾಗಿ ಇಲ್ಲಿ ಹೆಸರಿಸಬಹುದು: ಮಂದಿರ ನಿರ್ಮಾಣದ ಹೆಸರಲ್ಲಿ ಕೋಮುವಾದಿ ದ್ವೇಷದ ವಾತಾವರಣದ ಸೃಷ್ಟಿ ಮತ್ತು ಮಾರಕಾಸ್ತ್ರಗಳನ್ನು ಹೊಂದಿದೆಯೆಂಬ ಕೃತ್ರಿಮ ಕಾರಣ ಕೊಟ್ಟು ಅಮೆರಿಕಾ ಇರಾಕಿನ ಮೇಲೆ ಯುದ್ಧ ಸಾರಿದ್ದು. ಎರಡಕ್ಕೂ ವಿಭಿನ್ನವಾದ ಹಿನ್ನೆಲೆಗಳಿವೆ, ಆದರೆ ಆರ್ಥಿಕ ಹಿನ್ನೆಲೆ ಪ್ರಮುಖ ಸ್ಥಾನವನ್ನು ಹೊಂದಿರುತ್ತದೆ. ನಿರ್ದಿಷ್ಟ ಆರ್ಥಿಕ ಸನ್ನಿವೇಶದಲ್ಲಿ ಇದ್ದಕ್ಕಿದ್ದಂತೆ ಮಂದಿರದ ನಿರ್ಮಾಣವು ಕಾರ್ಯಸೂಚಿಯ ಮೊದಲ ಆದ್ಯತೆಯಾಗಿಬಿಡುತ್ತದೆ. ಅಂತೆಯೇ, ಮಾರಕಾಸ್ತ್ರಗಳನ್ನು ಹೊಂದಿರುವುದು ಹೊಸ ವಿದ್ಯಮಾನವಾಗಿಲ್ಲದಿರುವಾಗ ತಕ್ಷಣಕ್ಕೆ ಅದು ಅತಿಮುಖ್ಯ ವಿಷಯದಂತೆ ಮುಂದಿಡಲಾಗುತ್ತದೆ. ಈ ವಿಷಯಗಳ ರಾಜಕೀಯ ಅಭಿವ್ಯಕ್ತಿಯಲ್ಲಿ ಆರ್ಥಿಕ ಅಂಶದ ಪಾತ್ರವೇ ಇಲ್ಲದಿರುವಂತೆ ಭಾಸವಾಗುತ್ತದೆ; ಆದರೆ ಪರದೆಯ ಹಿಂದಿನ ಅತ್ಯಂತ ಗಂಭೀರವಾದ ಪಾತ್ರಧಾರಿ ಅದೇ ಎಂಬುದು ಸೂಕ್ಷ್ಮವಾಗಿ ನೋಡಿದಾಗ ಸ್ಪಷ್ಟವಾಗುತ್ತದೆ. ಅದು ಮಾರ್ಕ್ಸ್‌ವಾದಿ ವಿಶ್ಲೇಷಣೆಯ ವೈಶಿಷ್ಟ್ಯ ಮತ್ತು ಅದಕ್ಕೆ ಬಸಳಸಲಾಗುವ ಸಾಧನವೆಂದರೆ ರಾಜಕೀಯ ಆರ್ಥಿಕತೆಯ ಆಮೂಲಾಗ್ರ ತಿಳುವಳಿಕೆ. ಕುಸಿಯುತ್ತಿರುವ ಆರ್ಥಿಕ ವ್ಯವಸ್ಥೆಯ ಹುಳುಕು ಮತ್ತು ಕೆಡುಕುಗಳನ್ನು ಮುಚ್ಚಿಡಲು ಬೇರೇನನ್ನೋ ಪ್ರಧಾನವೆಂಬಂತೆ ಚಿತ್ರಿಸುವುದು ಇಲ್ಲಿಯ ಮರ್ಮ; ಆದರೆ ಅದು ಅಭೇದ್ಯವಾದ ಮರ್ಮವಲ್ಲ. ಉತ್ಪಾದನೆಯ ಸ್ಥಗಿತತೆ, ನಿರುದ್ಯೋಗದ ಹೆಚ್ಚಳ, ಬಂಡವಾಳ ಹೂಡಿಕೆಗೆ ಅಡಚಣೆಯನ್ನು ಉಂಟುಮಾಡುವ ಮಾರುಕಟ್ಟೆಯ ಕುಸಿತ, ಶಿಕ್ಷಣದ ವೈಫಲ್ಯ ಮುಂತಾದ ಬಿಕ್ಕಟ್ಟುಗಳಿಂದಾಗಿ ಜನಸಾಮಾನ್ಯರು ರೋಸಿಹೋದಾಗ ಅವರ ಗಮನವನ್ನು ಇವುಗಳತ್ತ ಕೇಂದ್ರೀಕರಿಸುವ ಸಾಧ್ಯತೆಯನ್ನು ದೂರಮಾಡಲು, ಸಮರ್ಥವಾದ ಆದರೆ ತರ್ಕಬದ್ಧವಲ್ಲದ ಪರ್ಯಾಯಗಳನ್ನು ಮುಂದಿಡಬೇಕು. ಅವು ಭಾವನಾತ್ಮಕ ಸೆಳೆತಗಳಾಗಿದ್ದರೆ ಇನ್ನೂ ಉತ್ತಮ ಮತ್ತು ಸುಲಭ. ಆಗ ದೇಶದ ಸರ್ವತೋಮುಖ ಅಭಿವೃದ್ಧಿಗೆ ಮಂದಿರದ ನಿರ್ಮಾಣವೇ ಮೂಲಸಾಮಗ್ರಿ ಎಂಬ ಭ್ರಮೆಯನ್ನು ಬಿತ್ತುವ ಸಂಭ್ರಮ ಕಂಡುಬರುತ್ತದೆ. ನಿರುದ್ಯೋಗಿಗಳಿಗೆ ಉದ್ಯೋಗದ ಅವಕಾಶ ಕಲ್ಪಿಸಿಕೊಡುವ ಬದಲು ನಿರುದ್ಯೋಗದ ವೇಳೆಯಲ್ಲಿ ಯಾವುದರ ಕಡೆಗೆ ಮನಸ್ಸು ಕೊಡಬೇಕೆಂಬುದನ್ನು ಹೇಳಿಕೊಡುವುದು ಸುಲಭ ಮತ್ತು ಬಂಡವಳಿಗರ ವರ್ಗಕ್ಕೆ ಇದು ಹಿತಕರವಾದ ಪರಿಣಾಮ. ಆದ್ದರಿಂದ ಆರ್ಥಿಕ ಒತ್ತಾಯವನ್ನು ಹಿಂದಕ್ಕೆ ಸರಿಸಿ ಸಾಂಸ್ಕೃತಿಕ ಲೋಕದ ಭಾವನೆಗಳಿಗೆ ಪುಷ್ಟಿ ನೀಡುವುದು ಒಂದು ಯೋಜಿತ ಕ್ರಮವಾಗುತ್ತದೆ. ಇದನ್ನು ಸರಿಯಾಗಿ ಗ್ರಹಿಸದಿದ್ದರೆ ಈ ಮಾರಣಾಂತಿಕ ಪರಿಣಾಮವನ್ನು ನಿಗ್ರಹಿಸಲು ಗಾಳಿಯನ್ನು ಗುದ್ದುವ ವ್ಯರ್ಥ ಪ್ರಯತ್ನಕ್ಕೆ

ನಾವು ಅಂಟಿಕೊಳ್ಳುತ್ತೇವೆ. ಇಲ್ಲಿ ಆರ್ಥಿಕ ಮತ್ತು ಸಾಂಸ್ಕೃತಿಕ ಆಯಾಮಗಳೆರಡೂ ಕಾರ್ಯ ಪ್ರವೃತ್ತವಾಗಿವೆ; ಆದ್ದರಿಂದ ಎರಡನ್ನೂ ಏಕಕಾಲದಲ್ಲಿ ಎದುರಿಸುವ ಕ್ರಿಯೆ ಅಗತ್ಯ ವಾಗುತ್ತದೆ. ರಾಜಕೀಯ ಆರ್ಥಿಕತೆಯ ಮಹತ್ವವಿರುವುದು ಯಾವುದೇ ಸಂಗತಿಯ ಮೂಲಕ್ಕೆ ಹೋಗಿ ವಿಶ್ಲೇಷಿಸಿಕೊಳ್ಳುವ ಪರಿಕರಗಳನ್ನು ಅದು ಒದಗಿಸಿಕೊಡುತ್ತದೆ ಎಂಬುದರಲ್ಲಿ.

ಭಾರತದಲ್ಲಿ ಆಸ್ತಿವಂತರು ಇಡೀ ಜನಸಂಖ್ಯೆಯ ಶೇಕಡ ೨೦ರಷ್ಟಿರಬಹುದೆಂದು ಅಂದಾಜು ಮಾಡಲಾಗಿದೆ. ಭಾರತದ ಆಂತರಿಕ ಉತ್ಪಾದನೆಯ ಸುಮಾರು ಶೇಕಡ ೫೦ರಷ್ಟು ಇವರಿಗೆ ಸೇರುತ್ತದೆ. ಶೇಕಡ ೩೩ಕ್ಕಿಂತಲೂ ಹೆಚ್ಚು ಜನ ಅಧಿಕೃತ ಅಂಕಿ-ಸಂಖ್ಯೆಯಂತೆ ಬಡತನದ ರೇಖೆಯ ಕೆಳಗಿದ್ದಾರೆ. ಕೆಳಗಿನ ಸ್ತರದ ಶೇಕಡ ೪೦ರಷ್ಟು ಜನಸಂಖ್ಯೆಯ ಒಟ್ಟು ಸಂಪತ್ತು ರಾಷ್ಟ್ರೀಯ ಸಂಪತ್ತಿನ ಶೇಕಡ ೧೬ರಷ್ಟು ಮಾತ್ರ. ದೇಶದ ಅನಕ್ಷರಸ್ಥರು ಈಗಲೂ ಜನಸಂಖ್ಯೆಯ ಅರ್ಧದಷ್ಟಿದ್ದಾರೆ; ಅದರಲ್ಲಿ ಮಹಿಳೆಯರ ಪಾಲು ಅರ್ಧಕ್ಕಿಂತಲೂ ಹೆಚ್ಚು. ಭೂ ಸುಧಾರಣೆಯ ಬಗ್ಗೆ ಹೆಮ್ಮೆಯಿಂದ ಬೇಕಾದಷ್ಟು ಹೇಳಿಕೊಂಡರೂ ನಿಜವಾಗಿ ಭೂಮಿಯ ವಿತರಣೆಯಾಗಿರುವುದು ಕಡಿಮೆ. ದೊಡ್ಡ ರಾಜ್ಯಗಳಾದ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶಗಳಲ್ಲಿ ಇದು ಕನಿಷ್ಠ ಮಟ್ಟದಲ್ಲಿದೆ. ತಾವೇ ಕೃಷಿ ಮಾಡುತ್ತಿರುವುದಾಗಿ ದಾಖಲೆಗಳಲ್ಲಿ ಬರೆಸಿ ದೊಡ್ಡ ಭೂಮಾಲಿಕರು ಜಮೀನನ್ನು ಯಾರಿಗೂ ಬಿಟ್ಟುಕೊಟ್ಟಿಲ್ಲ. ದೇಶದಲ್ಲಿ ಕೃಷಿಗಾಗಿ ತೊಡಗಿಸಿರುವ ಒಟ್ಟು ಮೊತ್ತವು ಪ್ರಮಾಣಾತ್ಮಕ ವಾಗಿ ಕಡಿಮೆ ಮಟ್ಟದ್ದಾಗಿದೆ. ಉದ್ಯಮ, ಸಾರಿಗೆ ಮತ್ತು ವಿದ್ಯುಚ್ಛಕ್ತಿ ಕ್ಷೇತ್ರಗಳಷ್ಟು ಕೂಡ ಕೃಷಿ ವೃದ್ಧಿಹೊಂದಿಲ್ಲ. ದೇಶದಲ್ಲಿ ಹಸಿರು ಕ್ರಾಂತಿಯ ಫಲಾನುಭವಿಗಳು ಕೂಡ ಕೃಷಿಕ್ಷೇತ್ರದ ಶ್ರೀಮಂತ ಜನರೇ ಆಗಿದ್ದರು.

ವಿದೇಶಿ ವಿನಿಯಮದ ಬಿಕ್ಕಟ್ಟಿನಿಂದ ಉಂಟಾದ ಪರಿಸ್ಥಿತಿಯು ೧೯೯೦ರ ದಶಕದಲ್ಲಿ ಆರ್ಥಿಕ ಸ್ವಾವಲಂಬನೆಯ ಉದ್ದೇಶವನ್ನು ಕೈಬಿಡುವ ಹಾದಿಗೆ ದೇಶವನ್ನು ತಳ್ಳಿತು. ಉದಾರೀಕರಣದ ಪಿಡುಗು ಆರಂಭವಾದ್ದು ಆಗ. ಅಂತರರಾಷ್ಟ್ರೀಯ ಹಣಕಾಸು ನಿಧಿಯಿಂದ ಸುಮಾರು ೨೧೨೦ ಕೋಟಿ ರೂಪಾಯಿಗಳಿಗೆ ಸಮನಾದ ವಿದ್ದೇಶಿ ವಿನಿಮಯವನ್ನು ಸಾಲವಾಗಿ ಪಡೆದು 'ಹೊಸ ಆರ್ಥಿಕ ನೀತಿ'ಯತ್ತ ದಾಪುಗಾಲು ಹಾಕಿ ರೂಪಾಯಿಯನ್ನು ಅಪಮೌಲ್ಯ ಗೊಳಿಸಿದ್ದಾಯಿತು. ಅನೇಕ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಮುಟ್ಟುಗೋಲು ಹಾಕಿ ಹಿಂದುಳಿದ ಜನರ ದುರ್ಭರ ಜೀವನವನ್ನು ಇನ್ನಷ್ಟು ಕಠಿಣಗೊಳಿಸಲಾಯಿತು. ಉದ್ಯೋಗಾವಕಾಶಗಳು ಸಹ ಕಡಿಮೆಯಾದವು. ಮಾಹಿತಿ ತಂತ್ರಜ್ಞಾನದ ಬೆಂಬತ್ತಿ ಸಾಂಪ್ರದಾಯಿಕ ಉದ್ಯಮಗಳನ್ನು ಮುಚ್ಚಿದ್ದು, ಅನಿವಾರ್ಯವಾಗಿ ಆಮದಿನ ಭರಾಟೆಯನ್ನು ಹೆಚ್ಚಿಸಿತು. ದೇಶದ ಸಾಮಾಜಿಕ ಅಶಾಂತಿಗೆ ಇದು ಹಿನ್ನೆಲೆಯಾಯಿತು. ಆ ಅಶಾಂತಿಯು ಪ್ರಕಟಗೊಂಡಿದ್ದು ಮತಧಾರ್ಮಿಕ ಘರ್ಷಣೆಗಳ ರೂಪದಲ್ಲಿ. ಮಸೀದಿ-ಮಂದಿರದ ಪ್ರಶ್ನೆಯು ಪ್ರಮುಖ ರಾಜಕೀಯ ವಿಷಯದಂತೆ ಮುಂದೆ ಬಂದಿದ್ದು ಹೊಸ ಆರ್ಥಿಕ ನೀತಿಯ ಸನ್ನಿವೇಶದಲ್ಲಿ ಎಂಬುದನ್ನು ಮರೆಯಬಾರದು. ವಿದೇಶಿ ಬಂಡವಾಳದ ನುಗ್ಗುವಿಕೆ

ಮತ್ತು ಸ್ಥಳೀಯ ಉದ್ಯಮಗಳ ಹಿಂಜರಿತ ಏಕಕಾಲಕ್ಕೆ ಸಂಭವಿಸಿತು. ಪ್ರಗತಿ ಅವಿಚ್ಛಿನ್ನವಾಗಿ ಮುನ್ನಡೆಯುತ್ತಿದೆಯೆಂದು ಹೇಳಿಕೊಳ್ಳುತ್ತಿದ್ದ ದಶಕದಲ್ಲೇ ಸಹಸ್ರಾರು ಮಂದಿ ಬೀದಿಪಾಲಾದರು. ರಾಜ್ಯಪ್ರಭುತ್ವದ ನೀತಿಗಳನ್ನು ಗಮನಿಸಿ ಅವನ್ನು ಆಮೂಲಾಗ್ರವಾಗಿ ಹಿಮ್ಮೆಟ್ಟಿಸುವ ಬದಲು ಭಾವೋದ್ರೇಕಕ್ಕೆ ಬಲಿಯಾಗಿ ಧಾರ್ಮಿಕ ವಿದ್ವೇಷವನ್ನು ಬೆಳೆಸುವುದರತ್ತ ದೇಶದ ದೃಷ್ಟಿ ಹರಿಯಿತು. ಆವರೆಗೆ ಅಷ್ಟು ದಟ್ಟವಾಗಿ ಮೂಡಿರದಿದ್ದ ಪ್ರತ್ಯೇಕತೆಯ ಭಾವನೆಗಳನ್ನು ಕೆರಳಿಸಿ ಸಮಾಜವನ್ನು ವಿಭಜಿಸುವ ಪ್ರಯತ್ನಗಳು ಹೆಚ್ಚಿದವು. ಅದೆಲ್ಲದರ ಪರಿಣಾಮ ಇಂದು ನಮ್ಮನ್ನು ಸುಡುತ್ತಿದೆ.

ಸಮಸ್ಯೆಯು ರಾಜಕೀಯ ಆರ್ಥಿಕತೆಯ ಮಡಿಲಲ್ಲಿ ಹುಟ್ಟಿರುವುದರಿಂದ ಅದಕ್ಕೆ ಪರಿಹಾರವನ್ನೂ ಆ ನಿಟ್ಟಿನಲ್ಲೇ ಪಡೆದುಕೊಳ್ಳಬೇಕು. ಅಂದರೆ, ನೈಜವಾದ ಅಭಿವೃದ್ಧಿಯ ಹಾದಿಯನ್ನು ನಾವು ತುಳಿಯಬೇಕು. ಹಾಗೆ ಮಾಡದೆ, ಭಾವನೆಗಳ ಸ್ತರದಲ್ಲೇ ಪರಿಹಾರವನ್ನು ಕಂಡುಕೊಳ್ಳುತ್ತೇವೆಂದು ಮುನ್ನುಗ್ಗಿದರೆ ಮತಧಾರ್ಮಿಕ ಸಂಬಂಧಗಳು ಇನ್ನೂ ಜಟಿಲಗೊಳ್ಳುತ್ತವೆ, ಪರಸ್ಪರ ವೈಷಮ್ಯ ಇನ್ನೂ ಹೆಚ್ಚುತ್ತದೆ. ಖಾಸಗೀಕರಣ ಮತ್ತು ಜಾಗತೀಕರಣದ ಅಮಲಿನಲ್ಲಿ ದೇಶದ ಆರ್ಥಿಕ ಸ್ವಾವಲಂಬನೆಯ ಆಕಾಂಕ್ಷೆಯನ್ನು ಚಿವುಟಿಹಾಕಲಾಗಿದೆ. ಅದರಿಂದಾಗಿ ಪರಾಧೀನತೆ ಹೆಚ್ಚುತ್ತಿದೆ. ಇದರ ಹೊಡೆತಕ್ಕೆ ಸಿಕ್ಕಿದವರಿಗೆ ಅಭಿವೃದ್ಧಿಯಿಂದ ಸಾಂತ್ವನ ದೊರಕಿಸಿಕೊಡುವ ಬದಲು ನಾವಿನ್ನೂ ಮತಧರ್ಮದ ಸುಳಿಯಲ್ಲೇ ಸಿಕ್ಕಿಹಾಕಿಕೊಂಡು ಮುಳುಗುತ್ತಿದ್ದೇವೆ. ತ್ರಿಶೂಲ, ಮತಾಂತರ, ಅಯೋಧ್ಯೆಯ ಉತ್ಖನನ, ಮದ್ರಸಾಗಳ ಪುನಶ್ಚೇತನ, ಮೆಕ್ಕಾ ಅಥವಾ ಕೈಲಾಸ ಯಾತ್ರೆ, ಮುಂತಾದ ವಿಷಯಗಳಿಗೆ ಆದ್ಯತೆ ಬಂದಿರುವುದು ಇದರಿಂದ. ಇದಕ್ಕೆಲ್ಲಾ ಸಮರ್ಪಕ ಉತ್ತರ ನೀಡಬಲ್ಲ ಏಕೈಕ ವರ್ಗವೆಂದರೆ ದುಡಿಯುವ ವರ್ಗ; ಏಕೆಂದರೆ, ಆ ವರ್ಗವು ಸಮಸ್ಯೆಗಳನ್ನು ರಾಜಕೀಯ ಆರ್ಥಿಕತೆಯ ಹಿನ್ನೆಲೆಯಲ್ಲಿ ಗ್ರಹಿಸುತ್ತದೆ ಮತ್ತು ಅದೇ ನೆಲೆಯಲ್ಲಿ ಉತ್ತರಗಳನ್ನು ಕಂಡುಕೊಳ್ಳುತ್ತದೆ. ಮತಧಾರ್ಮಿಕ ಸಾಮರಸ್ಯವು ಕೇವಲ ಭಾವನಾತ್ಮಕ ಸಂಬಂಧವಾಗಿರದೆ ಅಭಿವೃದ್ಧಿಯ ಮೂಸೆಯಲ್ಲಿ ವಿಕಸಿಸುವ ಗಾಢ ಭೌತಿಕ-ಬೌದ್ಧಿಕ ಆಯಕಟ್ಟಿನ ಫಲವಾಗಿರುತ್ತದೆ ಎಂಬುದನ್ನು ದುಡಿಯುವ ವರ್ಗವು ಪ್ರಾಯೋಗಿಕವಾಗಿ ಅನುಭವಕ್ಕೆ ತಂದುಕೊಳ್ಳುತ್ತದೆ. ಪ್ರಜ್ಞೆ ಮತ್ತು ಹೋರಾಟಗಳು ಅದಕ್ಕೆ ಸಾಧನ.

ರಾಜಕೀಯ ಆರ್ಥಿಕತೆಯ ಗ್ರಹಿಕೆಯಿಂದ ವಿಶ್ಲೇಷಣೆಯು ಪ್ರಬುದ್ಧವಾಗುತ್ತದೆಂಬುದನ್ನು ತಿಳಿಯಲು ೨೦೦೩ರ ಇರಾಕಿನ ವಿದ್ಯಮಾನಗಳೂ ಸಹಾಯ ಮಾಡುತ್ತವೆ. ತೋರಿಕೆಗೆ ಅದು ಮಾರಕಾಸ್ತ್ರಗಳನ್ನು ಕುರಿತಾದ ಸಮಸ್ಯೆಯೆಂದು ಅಮೆರಿಕಾ ಪ್ರಚಾರ ಮಾಡುತ್ತದೆ. ಇರಾಕಿನಲ್ಲಿ ಪ್ರಜಾಪ್ರಭುತ್ವ ಸ್ಥಾಪಿಸಲು ದುರಾಕ್ರಮಣವು ಸಮರ್ಥನೀಯವೆಂಬಂತೆ ಅಮೆರಿಕಾ ಬೊಬ್ಬೆಯಿಡುತ್ತದೆ. ಇರಾಕಿನಲ್ಲಿ ಶಿಯಾ-ಸುನ್ನಿ ಸಂಘರ್ಷಗಳು ಪ್ರಕ್ಷುಬ್ಧತೆಗೆ ಕಾರಣವಾಗಿದೆಯೆಂದು ಹೇಳುತ್ತಾ ಇರಾಕಿನ ಜನರನ್ನು ಕರಾಳ ವಿಭಜನೆಗೆ ತುತ್ತಾಗಿಸುವುದು ಅಮೆರಿಕಾದ ಒಂದು ತಂತ್ರ. ಸಹಸ್ರಗಟ್ಟಲೆ ಇರಾಕಿ ಜನರನ್ನು ಕೊಂದು, ನಗರಗಳನ್ನು ಧ್ವಂಸ ಮಾಡಿ,

ಪ್ರಾಚೀನ ನಾಗರಿಕತೆಯ ಪುರಾವೆಗಳಿಗೆ ಬೆಂಕಿಯಿಟ್ಟು ಅಟ್ಟಹಾಸದಿಂದ ಮೆರೆಯುವ ಅಮೆರಿಕಾದ ಕುಸಂಸ್ಕೃತಿಗೆ ಮೂಲಪ್ರೇರಣೆ ಇರುವುದು ಇರಾಕಿನ ಸಂಪತ್ತಿನಲ್ಲಿ. ವಿಶ್ವದ ಒಟ್ಟು ತೈಲದ ಶೇಕಡ ೧೧ರಷ್ಟು ನಿಕ್ಷೇಪ ಇರಾಕಿನಲ್ಲಿದೆ, ಅದನ್ನು ಲಪಟಾಯಿಸಲು ಅಮೆರಿಕಾದ ಮಿಲಿಟರಿ ಶಕ್ತಿಯ ಪ್ರಯೋಗವಾಗಿದೆ. ವಾಸ್ತವವಾಗಿ ಈ ಇಡೀ ದುಷ್ಪ್ರಸಂಗದ ರಾಜಕೀಯ ಆರ್ಥಿಕತೆ ಸುಲಭವಾಗಿ ತಿಳಿಯುವಂಥದು. ಅದರ ಸರಳ ಪ್ರತಿಪಾದನೆ ಬಹುಶಃ ಹೀಗಿರುತ್ತದೆ:

ವಿಶ್ವದಲ್ಲಿ ಸರಕುಗಳ ಮಾರಾಟಕ್ಕೆ ಮಾರುಕಟ್ಟೆಗಳ ಅನ್ವೇಷಣೆ ಕಳೆದ ಮೂರು-ನಾಲ್ಕು ಶತಮಾನಗಳಲ್ಲಿ ಸತತವಾಗಿ ನಡೆಯುತ್ತಾ ಬಂದಿದೆ. ಮಾರಾಟವಾಗದೆ ಉಳಿಯುವ ಸರಕುಗಳ ಪ್ರಮಾಣವೂ ಹೆಚ್ಚಿದೆ. ಉದಾಹರಣೆಗೆ, ಉತ್ಪಾದನೆಯಾಗಿದ್ದು ಮಾರಾಟವಾಗದೆ ಉಳಿದುಬಿಡುವ ಕಾರುಗಳ ಸಂಖ್ಯೆ ಎರಡು ಕೋಟಿ ಆಗಿಬಿಡಲು ಸಾಧ್ಯ. ಈ ಹಿನ್ನೆಲೆಯಲ್ಲಿ ಅಮೆರಿಕಾ ೨೦೦೨ರ ಕೊನೆಯವೇಳೆಗೆ ತನ್ನ ಉತ್ಪಾದಕ ಶಕ್ತಿಯ ಶೇಕಡ ೨೬.೫ರಷ್ಟನ್ನು ಸ್ಥಗಿತಗೊಳಿಸಿತ್ತು. ಇದು ಕೇವಲ ಕಾರು ಉದ್ಯಮಕ್ಕೆ ಸಂಬಂಧಿಸಿದಂತೆ ಅಲ್ಲ, ಅದು ಇಡೀ ಉದ್ಯಮದ ಸ್ಥಗಿತಗೊಂಡ ಚಿತ್ರ. ಸಂಪತ್ತಿನ ಸೃಷ್ಟಿ, ಮಾರುಕಟ್ಟೆಯ ಚಟುವಟಿಕೆ, ದುಡಿಯುವವರ ಉದ್ಯೋಗ, ಎಲ್ಲದಕ್ಕೂ ಇದರಿಂದ ಪೆಟ್ಟು ಬಿದ್ದಿತ್ತು. ಇದು ಮಾರುಕಟ್ಟೆಯ ಆರ್ಥಿಕತೆಯನ್ನು ಅವಲಂಬಿಸುವ ಎಲ್ಲ ದೇಶಗಳ ಅನುಭವಕ್ಕೂ ಯಾವಾಗಲಾದರೂ ಬರಲೇಬೇಕಾದ ಸಂಗತಿ. ಉತ್ಪಾದನೆಯ ಹೆಚ್ಚಳದಿಂದ ಉತ್ಪಾದನೆಯ ಸ್ಥಗಿತತೆ ಅನಿವಾರ್ಯ. ಆದಾಯವೇನಾದರೂ ಎಲ್ಲ ಕೈಗಳಿಗೂ ಲಭಿಸಿದರೆ ಇಂತಹ ಸನ್ನಿವೇಶವನ್ನು ಹೋಗಲಾಡಿಸಿಕೊಳ್ಳಬಹುದು; ಏಕೆಂದರೆ ಆಗ ಸರಕುಗಳಿಗೆ ಬೇಡಿಕೆ ಏರುತ್ತಿರುತ್ತದೆ. ಆದರೆ ಖಾಸಗಿ ಬಂಡವಾಳದ ನೀತಿಯು ಹೀಗೆ ಆದಾಯವು ಎಲ್ಲ ಕೈಗಳಿಗೂ ಲಭಿಸಬೇಕೆಂಬ ಆಶಯಕ್ಕೆ ವಿರೋಧವಾದುದು. ಸ್ಥಗಿತತೆಯಿಂದ ಸಹಜವಾಗಿಯೇ ಉದ್ಯಮಗಳ ಲಾಭ ಕಡಿಮೆಯಾಗುತ್ತದೆ, ಬಂಡವಾಳದ ಹೂಡಿಕೆಗೆ ಅಡ್ಡಿಯುಂಟಾಗುತ್ತದೆ. ಇದು ಒಂದು ಅಮೆರಿಕಾದ ಕತೆಯಲ್ಲ; ಅದು ಯೂರೋಪ್ ಮತ್ತು ಜಪಾನ್‌ಗಳ ಕತೆ ಕೂಡ. ೧೯೯೦ರಿಂದಲೇ ಜಪಾನಿನಲ್ಲಿ ಹಿಂಜರಿತ ತಲೆದೋರಿತ್ತು. ಬೇರೆ ಕಡೆಗಳಿಗೂ ಅದು ಹಬ್ಬಿದ್ದರಿಂದ ಅಭಿವೃದ್ಧ ದೇಶಗಳಲ್ಲಿ ಸುಮಾರು ಎರಡು ಕೋಟಿ ಶ್ರಮಿಕರು ನಿರುದ್ಯೋಗಿಗಳಾದರು. ಇದು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಒ.) ಪ್ರಕಟಿಸಿರುವ ಲೆಕ್ಕಾಚಾರ.

ಇದಕ್ಕೂ ಅಮೆರಿಕಾ ಪಶ್ಚಿಮ ಏಷ್ಯಾದಲ್ಲಿ ಯುದ್ಧ ಹೂಡಿ ಇರಾಕನ್ನು ಆಕ್ರಮಿಸಿಕೊಳ್ಳು ವುದಕ್ಕೂ ನೇರ ಸಂಬಂಧವಿದೆ. ಉತ್ಪಾದನೆಯ ಹಿಂಜರಿತವನ್ನು ಎದುರಿಸಲು ಅಮೆರಿಕಾ ಕೈಗೊಳ್ಳುವ ಕ್ರಮವೆಂದರೆ ಡಾಲರುಗಳನ್ನು ಅತ್ಯಧಿಕ ಪ್ರಮಾಣದಲ್ಲಿ ಹೊರಬಿಡುವುದು, ಸುಲಭ ಸಾಲಸೌಲಭ್ಯ ಕಲ್ಪಿಸುವುದು. ಎಲ್ಲರ ಜೇಬಿಗೂ ಒಂದಷ್ಟು ಡಾಲರುಗಳನ್ನು ತುಂಬಿದರೆ ಸರಕುಗಳಿಗೆ ಬೇಡಿಕೆ ಮುಂದುವರಿಯುತ್ತದೆ, ಉತ್ಪಾದನೆಯೂ

ಕುದುರಿಕೊಳ್ಳುತ್ತದೆಯೆಂಬ ನಿರೀಕ್ಷೆ ಇರುತ್ತದೆ. ಅಮೆರಿಕಾಕ್ಕೆ ಇದನ್ನು ಮಾಡಲು ಸಾಧ್ಯ: ಏಕೆಂದರೆ, ಡಾಲರ್ ಅಂತರರಾಷ್ಟ್ರೀಯ ಹಣಕಾಸು ಮಾರುಕಟ್ಟೆಯ ಸುಭದ್ರ ಪ್ರತಿನಿಧಿ; ಎಲ್ಲ ದೇಶಗಳವರೂ ತಮ್ಮ ಉಳಿತಾಯವನ್ನು ಡಾಲರ್ ರೂಪದಲ್ಲಿ ಇಡುತ್ತಾರೆ. ಅಂತರ ರಾಷ್ಟ್ರೀಯ ವ್ಯಾಪಾರ ವಹಿವಾಟಿನಲ್ಲಿ ಅಮೆರಿಕಾ ಕುಸಿತವನ್ನು ಕಂಡರೂ ಬೇರೆಯವರ ಡಾಲರ್ ಉಳಿತಾಯದಿಂದ ಅಮೆರಿಕಾ ಅದನ್ನು ಸರಿದೂಗಿಸುತ್ತದೆ. ಪ್ರಸಕ್ತ ೨೦೦೨ರಲ್ಲಿ ಕುಸಿತದ ಪ್ರಮಾಣವು ೫೦೦೦ ಕೋಟಿ ಡಾಲರುಗಳಷ್ಟಿತ್ತು, ಅಂದರೆ ಎರಡುಲಕ್ಷ ಐವತ್ತು ಸಾವಿರ ಕೋಟಿ ರೂಪಾಯಿಗಳು. ಡಾಲರುಗಳನ್ನು ಅಚ್ಚುಹಾಕಿ ಈ ಹೊರೆಯನ್ನು ಅಮೆರಿಕಾ ಬೇರೆಯವರ ತಲೆಗಳ ಮೇಲೆ ಹಾಕಿತು. ಮೂಲತಃ ಅಮೆರಿಕಾದ ಡಾಲರಿನ ಮೌಲ್ಯವು ವಿಶ್ವದ ತೈಲದ ಮೇಲೆ ತಾನು ಹೊಂದಿರುವ ಹತೋಟಿಯನ್ನು ಅವಲಂಬಿಸಿದೆ; ಅಂದರೆ, ತೈಲ ಮಾರಿದ ದೇಶಗಳವರು ತಮ್ಮ ಆದಾಯವನ್ನು ಡಾಲರ್ ರೂಪದಲ್ಲಿ ಇರಿಸಿಕೊಂಡಿರುವ ವರೆಗೆ ಅಮೆರಿಕಾಕ್ಕೆ ಪ್ರಾಬಲ್ಯ ಇರುತ್ತದೆ. ಅವರೇನಾದರೂ ಡಾಲರನ್ನು ತೊಟ್ಟಿಗೆ ಹಾಕಿ ಬೇರಾವುದಾದರೂ ರೂಪದಲ್ಲಿ ಶೇಖರಣೆಗೆ ತೊಡಗಿದರೆ ಅಮೆರಿಕಾಕ್ಕೆ ಕುತ್ತು ಬಂತು ಎಂದರ್ಥ. ಅವರು ಹಾಗೆ ಮಾಡದಿರಬೇಕಾದರೆ ಡಾಲರಿನ ಬಡ್ಡಿದರವನ್ನು ಏರಿಸಿಡಬೇಕು. ಆದರೆ ತನ್ನ ಸಾಲದ ಹೊರೆ ಅಗಾಧವಾಗಿರುವಾಗ ಅಮೆರಿಕಾ ಹಾಗೆ ಮಾಡಲಾರದು. ಹೇಗಾದರೂ ಮಾಡಿ ಡಾಲರಿನ ರೂಪದಲ್ಲಿರುವ ಆಸ್ತಿಯನ್ನು ಪರಿವರ್ತಿಸಿಕೊಳ್ಳದಂತೆ ಎಲ್ಲರನ್ನೂ ಓಲೈಸುವುದು ಅಮೆರಿಕಾಕ್ಕೆ ಅತ್ಯವಶ್ಯಕ.

ಪ್ರಸಕ್ತ ಸನ್ನಿವೇಶದಲ್ಲಿ ಡಾಲರಿನ ಸ್ಥಾನಕ್ಕೆ ಯೂರೋ ಒಂದು ಸವಾಲಾಗಿದೆ. ಯೂರೋಪಿನ ಆರ್ಥಿಕತೆ ಅಮೆರಿಕಾದ ಆರ್ಥಿಕತೆಯನ್ನು ಸರಿಗಟ್ಟುವಂಥದು. ಆದ್ದರಿಂದ ಯಾರೇ ಆದರೂ ಡಾಲರಿನ ಬದಲಾಗಿ ಯೂರೋ ಹೊಂದಲು ಸಿದ್ಧರಾಗಬಹುದು. ಅಷ್ಟೊಂದು ಅಮೂರ್ತವಾದ ಡಾಲರಿನ ಮೌಲ್ಯದ ಬದಲು ಗಟ್ಟಿಯಾದ ಯೂರೋ ಯಾರನ್ನೇ ಆಗಲಿ ಆಕರ್ಷಿಸಬಹುದು. ಅಮೆರಿಕಾದ ಮೂಗಿಗೆ ಗುದ್ದಬೇಕೆಂಬ ದೃಷ್ಟಿಯಿಂದಲೂ ಇಂತಹ ಬದಲಾವಣೆಯನ್ನು ತರಬಹುದು. ನವಂಬರ್ ೨೦೦೦ದಲ್ಲಿ ಇರಾಕ್ ಮಾಡಿದ್ದು ಇದನ್ನೇ. ತನಗೆ ಡಾಲರ್ ಮೂಲಕ ಪಾವತಿ ಬೇಡ, ಯೂರೋ ರೂಪದಲ್ಲಿ ಬೇಕು, ಎಂದಿತು ಇರಾಕ್. ಇರಾನ್ ಸಹ ಇಂಥದೇ ಬಯಕೆಯನ್ನು ಪ್ರಕಟಿಸಿದೆ. ವೆನಿಝೂಲಾ ಮತ್ತು ರಷ್ಯಾ ಆ ದಿಕ್ಕಿನಲ್ಲಿ ಹೋಗಲು ಇಚ್ಛಿಸುವ ದಿನ ದೂರವಿಲ್ಲ. ಅಂದರೆ, ಡಾಲರಿಗೆ ಅವಸಾನ ಕಾಲ ಪ್ರಾಪ್ತವಾಗುತ್ತಿದೆ, ಎಂದರ್ಥ. ಡಾಲರಿಗೆ ಬೇಡಿಕೆ ಮಾಯವಾದರೆ ಅಮೆರಿಕಾದ ಆರ್ಥಿಕ ವಿನಾಶದ ಕಾಲ ಸನ್ನಿಹಿತವಾಗುತ್ತದೆ, "ಅಮೆರಿಕಾ ಮಾದರಿಯ ಜೀವನ" ಎಂಬುದು ಕನಸಿನ ಮಾತಾಗುತ್ತದೆ. ಅದನ್ನು ತಡೆಗಟ್ಟಬೇಕಾದರೆ ಇರಾಕಿನ ಆಕ್ರಮಣ ಅಗತ್ಯ! ಆಮೇಲೆ ರಣಹದ್ದಿನ ಕಣ್ಣುಗಳು ಇರಾನ್, ಸಿರಿಯಾ, ವೆನಿಝೂಲಾ, ರಷ್ಯಾ ಮುಂತಾದ ದೇಶಗಳ ಮೇಲೂ ಬೀಳಬಹುದು. ಒಟ್ಟಿನಲ್ಲಿ ಡಾಲರಿನ ರಕ್ಷಣೆಯಾಗಬೇಕು; ಅದಕ್ಕೆ ವಿಶ್ವದ ತೈಲಸಂಪತ್ತಿನ ಮೇಲೆ ಯಜಮಾನಿಕೆ ಸ್ಥಾಪಿಸಿ ಕೊಳ್ಳಬೇಕು.

ರಾಜಕೀಯ ಆರ್ಥಿಕತೆಯ ಈ ಸೂಕ್ಷ್ಮತೆಯನ್ನು ನೇರವಾಗಿ ಹೇಳಿದರೆ ಯಾವ ದೇಶವೇ ಆಗಲಿ ಅಮೆರಿಕಾದ ಮುಖಕ್ಕೆ ಮಂಗಳಾರತಿ ಮಾಡುತ್ತದೆಂಬ ವಿಷಯ ಸ್ಪಷ್ಟವಿರುವುದರಿಂದ ಅದಕ್ಕೆ ಮೆರುಗು ಕಟ್ಟಿ ಮಾರಕಾಸ್ತ್ರ, ಪ್ರಜಾಪ್ರಭುತ್ವ, ಸದ್ದಾಂ ಹುಸೇನನ ಅಯೋಗ್ಯತನ, ಇತ್ಯಾದಿಗಳನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕು. ಅಮೆರಿಕಾ-ಬ್ರಿಟನ್ ಮಾಡುವುದು ಅದನ್ನೇ. ಆದರೆ ಏಂಗೆಲ್ಸರು ತೋರಿಸಿಕೊಟ್ಟಿರುವ ರಾಜಕೀಯ ಆರ್ಥಿಕತೆಯನ್ನಾಧರಿಸಿದ ವಿಶ್ಲೇಷಣಾ ಪದ್ಧತಿಯನ್ನು ತಿಳಿದಿರುವವರಿಗೆ ಸದ್ದಾಂನ ಅಯೋಗ್ಯತನಕ್ಕಿಂತಲೂ ಬುಷ್-ಬ್ಲೇರರ ಅಯೋಗ್ಯತನ ಹೆಚ್ಚು ಸಾಂದ್ರವಾಗಿ ತೋರುತ್ತದೆ. ದುಡಿಯುವ ವರ್ಗದ ಆಯುಧವಾಗಿ ರಾಜಕೀಯ ಆರ್ಥಿಕತೆಯು ಮಹತ್ವವನ್ನು ಪಡೆಯುವುದು ಸ್ಪಷ್ಟವಿದೆ. ಅದಕ್ಕೆ ಏಂಗೆಲ್ಸರ ಕೊಡುಗೆ ಅಪಾರ.

❑❑

೧೧

ಕುಟುಂಬ, ಖಾಸಗಿ ಆಸ್ತಿ ಮತ್ತು ಪ್ರಭುತ್ವಗಳ ಉಗಮ

ಲ್ಯೂಯಿಸ್ ಹೆನ್ರಿ ಮೋರ್ಗನ್ (೧೮೧೮-೧೮೮೧) ಎಲ್ಲ ಮಾನವಶಾಸ್ತ್ರಜ್ಞರಿಗೂ ಪರಿಚಿತ. ಸಮಾಜ ವಿಜ್ಞಾನಿಗಳು ಅವನ ಹೆಸರನ್ನು ಕೇಳಿರುತ್ತಾರೆ. ಆದರೆ ಅವರ ಎಷ್ಟೋ ಪುಸ್ತಕಗಳಲ್ಲಿ ಮೋರ್ಗನ್ ಎಲ್ಲೋ ಒಂದು ಅಡಿಟಿಪ್ಪಣಿಯಲ್ಲಿ ಸೇರಿ ಹೋಗಿರುತ್ತಾನೆ. ಇದಕ್ಕೆ ಕಾರಣ ಅವನ ಅಭಿಪ್ರಾಯಗಳೇ ಹೊರತು ಅವನ ಸಂಶೋಧನೆಗಳ ಮೌಲಿಕತೆಯ ಬಗೆಗಿನ ಸಂಶಯಗಳಲ್ಲ. ೧೮೭೭ರಲ್ಲಿ ಅವನ "ಪ್ರಾಚೀನ ಸಮಾಜ" ಎಂಬ ಉತ್ಕೃಷ್ಟ ಗ್ರಂಥ ಪ್ರಕಟವಾಯಿತು. ಜೀವಶಾಸ್ತ್ರದಲ್ಲಿ ಡಾರ್ವಿನ್ ಎಷ್ಟು ಪ್ರಮುಖನೋ ಪ್ರಾಚೀನ ಸಮಾಜಗಳ ಅಧ್ಯಯನದಲ್ಲಿ ಮೋರ್ಗನ್ ಅಷ್ಟೇ ಪ್ರಮುಖನೆಂದು ಮಾರ್ಕ್ಸ್ ಹೇಳಿದ್ದುದನ್ನು ಏಂಗೆಲ್ಸ್ ತಮ್ಮ ಒಂದು ಪತ್ರದಲ್ಲಿ ನೆನೆದಿದ್ದಾರೆ. ೧೮೮೪ರ ಫೆಬ್ರವರಿ ೧೬ರಂದು ಕಾರ್ಲ್ ಕೌಟ್ಸ್ಕಿಗೆ ಬರೆದ ಪತ್ರದಲ್ಲಿ ಏಂಗೆಲ್ಸ್ ಹೇಳುತ್ತಾರೆ: "ತನ್ನ ವಿಷಯದ ಪರಿಧಿಯಲ್ಲಿ ಸಾಧ್ಯವಾಗುವಷ್ಟು ಮಟ್ಟಿಗೆ ಮೋರ್ಗನ್ ಸ್ವತಂತ್ರವಾಗಿ ಇತಿಹಾಸದ ಭೌತವಾದಿ ಪರಿಕಲ್ಪನೆಯನ್ನು ಕಂಡುಹಿಡಿದಿ

ದ್ದಾನೆ. ವರ್ತಮಾನದ ಸಮಾಜವನ್ನು ಕುರಿತಂತೆ ನೇರವಾಗಿ ಕೆಲವು ಸಾಮ್ಯವಾದಿ ಪ್ರಮೇಯಗಳನ್ನು ಆತ ಪ್ರತಿಪಾದಿಸಿದ್ದಾನೆ." ಟೈಲರ್, ಲುಬಾಕ್, ಮುಂತಾದವರ ತಥಾಕಥಿತ ಶ್ರೇಷ್ಠ ಸಿದ್ಧಾಂತಗಳನ್ನು ಸಂಪೂರ್ಣವಾಗಿ ತೊಡೆದುಹಾಕುವ ಕೃತಿ ಇದೆಂದು ಹೇಳುತ್ತಾ ತಮಗಿನ್ನೂ ಆ ಗ್ರಂಥ ಓದಲು ಸಿಗದಿರುವುದಕ್ಕೆ ಏಂಗೆಲ್ಸ್ ವ್ಯಸನ ವ್ಯಕ್ತಪಡಿಸಿದ್ದಾರೆ. ಖಾಸಗಿ ಆಸ್ತಿ ಮತ್ತು ವರ್ಗ ಸಮಾಜಗಳ ಬಗ್ಗೆ ಮೋರ್ಗನ್ ನಿಖರವಾಗಿ ಬರೆದದ್ದು ಬಂಡವಾಳಶಾಹಿಯ ಸಮರ್ಥಕರಂತೆ ಕೆಲಸ ಮಾಡುವ ವಿದ್ವಾಂಸರಿಗೆ ರುಚಿಸುವುದಿಲ್ಲ ವಾದ್ದರಿಂದ ಅವನ ಸಂಶೋಧನೆಯು ನಗಣ್ಯವೆಂಬ ರೀತಿಯಲ್ಲಿ ಇವರೆಲ್ಲಾ ಅವನನ್ನು ಮುಚ್ಚಿಹಾಕಲು ಯತ್ನಿಸುತ್ತಾರೆ. ಮೋರ್ಗನ್ ಪ್ರತಿಪಾದನೆಗೆ ಅನೇಕ ಪ್ರಾಚೀನ ಬುಡಕಟ್ಟು ಸಮಾಜಗಳ ಆಳವಾದ ಅಧ್ಯಯನದ ಆಯಾಮವಿದೆ ಮತ್ತು ನೇರ ಅನುಭವದ ಗ್ರಹಿಕೆ ಇದೆ: "ನಾಗರಿಕತೆಯು ಉದ್ಭವವಾದ ಕಾಲದಿಂದ ಆಸ್ತಿಯೆಂಬುದು ಅಸಾಧ್ಯ ಪ್ರಾಬಲ್ಯದ ಹೆಗ್ಗುರುತಾಗಿದೆ. ಅದರ ಸ್ವರೂಪಗಳು ಅನೇಕ; ಅದರ ಪ್ರಯೋಜನಗಳು ಸದಾ ವಿಸ್ತಾರವಾಗುತ್ತಿರುತ್ತವೆ; ಅದರ ಮಾಲಿಕರು ಅದನ್ನು ರೂಢಿಸಿಕೊಳ್ಳುವುದರಲ್ಲಿ ಅಪಾರ ತಿಳುವಳಿಕೆಯನ್ನು ಪ್ರಕಟಿಸುತ್ತಾರೆ. ತಾನೇ ಸೃಷ್ಟಿ ಮಾಡಿದ ಈ ಆಸ್ತಿಯನ್ನು ಕಂಡು ಮಾನವನ ಮನಸ್ಸು ವಿಸ್ಮಯದಿಂದ ತುಂಬಿಹೋಗುತ್ತದೆ. ಏನೇ ಆದರೂ ಮುಂದೊಂದು ಕಾಲ ಬರುತ್ತದೆ; ಆಗ ಮಾನವನ ತಿಳುವಳಿಕೆಯು ಈ ಆಸ್ತಿಯೆಂಬುದರ ಮೇಲೆ ಹಿಡಿತ ಸಾಧಿಸಿಕೊಳ್ಳುತ್ತದೆ. ಪ್ರಭುತ್ವವು ಆಸ್ತಿಯನ್ನು ರಕ್ಷಿಸುತ್ತಿದೆ; ಆದರೆ ಮುಂದೊಮ್ಮೆ ಪ್ರಭುತ್ವ ಮತ್ತು ಆಸ್ತಿಯ ಸಂಬಂಧ ಹೇಗಿರಬೇಕೆಂಬುದನ್ನು ಮಾನವ ಕರಗತಮಾಡಿಕೊಳ್ಳುತ್ತಾನೆ. ಆಗ ಆಸ್ತಿವಂತರ ಜವಾಬ್ದಾರಿಗಳು ಹಾಗೂ ಅವರ ಹಕ್ಕುಗಳ ಎಲ್ಲೆ ಏನೆಂಬುದನ್ನು ಮಾನವ ಅರಿಯುತ್ತಾನೆ. ವೈಯ್ಯಕ್ತಿಕ ಆಸಕ್ತಿಗಳಿಗಿಂತಲೂ ಸಮಾಜದ ಹಿತಕ್ಕೆ ಪ್ರಾಮುಖ್ಯತೆ ಇದೆ; ಅವೆರಡರ ನಡುವೆ ಸುಸಂಗತವಾದ ಸಂಬಂಧ ಏರ್ಪಡಬೇಕಾದ್ದು ಅವಶ್ಯಕ ಹಾಗೂ ನ್ಯಾಯಯುತ. ಮಾನವಜನಾಂಗದ ಅಂತಿಮ ಆಕಾಂಕ್ಷೆಯು ಸುಮ್ಮನೆ ಆಸ್ತಿಯಲ್ಲಿ ಲೀನವಾಗಿ ಹೋಗುವುದಲ್ಲ. ಎಲ್ಲಿಯವರೆಗೆ ಪ್ರಗತಿಯು ಜೀವನದ ನಿಯಮವೋ ಅಲ್ಲಿಯವರೆಗೆ ಇದು ನಿಜ; ಹಿಂದೆಯೂ ಅಷ್ಟೆ, ಈಗಲೂ ಅಷ್ಟೆ. ಮಾನವನ ಒಟ್ಟು ಇರುವಿಕೆಯ ಸಂದರ್ಭದಲ್ಲಿ ನಾಗರಿಕತೆಯು ಉಗಮವಾದ ನಂತರದ ಕಾಲವು ಅವನ ಭೂತಕಾಲದ ಒಟ್ಟು ಸಮಯದಲ್ಲಿ ಕೇವಲ ಅಲ್ಪಭಾಗದ್ದು; ಇನ್ನೂ ಬರಬೇಕಾದ ಕಾಲದ ದೃಷ್ಟಿಯಿಂದಲೂ ಇದು ಅಲ್ಪಭಾಗವೇ. ಆಸ್ತಿಯೇ ಅತಿಮುಖ್ಯವಾದ ಗುರಿ ಮತ್ತು ಸಾಧನೆ ಎಂದೇನಾದರೂ ಹೊರಟರೆ ಸಮಾಜವನ್ನು ವಿಸರ್ಜಿಸಬೇಕಾದ ಸನ್ನಿವೇಶ ಬಂದೀತು; ಏಕೆಂದರೆ, ಆ ರೀತಿಯ ಆಕಾಂಕ್ಷೆಯು ಸ್ವಯಂ-ವಿನಾಶದ ಬೀಜವನ್ನು ಹೊತ್ತಿರುತ್ತದೆ. ಪ್ರಭುತ್ವದಲ್ಲಿ ಪ್ರಜಾಪ್ರಭುತ್ವ ಮಾದರಿ, ಸಮಾಜದಲ್ಲಿ ಸೋದರತ್ವ, ಹಕ್ಕು ಮತ್ತು ಸವಲತ್ತುಗಳಲ್ಲಿ ಸಮಾನತೆ, ಹಾಗೂ ಸಾರ್ವತ್ರಿಕ ಶಿಕ್ಷಣ, ಇವು ಸಮಾಜದ ಮುಂದಿನ ಸ್ತರದ ಮೇಲೆ ಗಾಢವಾದ ಛಾಯೆಯನ್ನು ಮೂಡಿಸುತ್ತವೆ. ಅನುಭವ, ವಿವೇಕ ಮತ್ತು

ಜ್ಞಾನ, ಇವು ಕ್ರಮೇಣ ನಮ್ಮನ್ನು ಅತ್ತ ಕೊಂಡೊಯ್ಯುತ್ತವೆ. ಪ್ರಾಚೀನ ಬುಡಕಟ್ಟು ಸಮಾಜಗಳಲ್ಲಿ ತೋರಿಬಂದಿದ್ದ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳು ಮತ್ತೊಮ್ಮೆ ಮರುಕಳಿಸುತ್ತವೆ, ಆದರೆ ಇನ್ನೂ ಉತ್ತಮ ಸ್ವರೂಪದಲ್ಲಿ."

ಇಂದಿನ ಸಾಮಾಜಿಕ ರಚನೆಯೇ ಶ್ರೇಷ್ಠ ಮತ್ತು ಅಂತಿಮ, ಇಂದಿನ ಆಕಾಂಕ್ಷೆಗಳೇ ಸ್ಥಿರವಾದವು, ಇಂದಿನ ಆಸ್ತಿ ಪರಿಕಲ್ಪನೆಯೇ ಕಟ್ಟಕಡೆಯ ಮಾತು, ಎಂಬಿತ್ಯಾದಿಯಾಗಿ ಭ್ರಮಿಸುವವರಿಗೆ ಸಹಜವಾಗಿಯೇ ಮೋರ್ಗನ್ ಮಾತುಗಳು ಅಪಥ್ಯ. ಇಂದಿನ ಆಂತರಿಕ ಮತ್ತು ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಖಾಸಗಿ ಸಂಪತ್ತಿಗೆ ಆದ್ಯತೆ ಇರುವುದು ಎಲ್ಲರಿಗೂ ತಿಳಿದ ವಿಷಯ. ಆ ಸಂಪತ್ತಿನ ಅನುಭವಿಗಳಿಗೆ ಈ ವ್ಯವಸ್ಥೆ ಚಿರಂತನವಾದುದೆಂಬ ಭಾವ ಆಕರ್ಷಣೀಯವಾದ್ದು. ವಾಸ್ತವಿಕವಾಗಿ ವ್ಯವಸ್ಥೆಯು ಕ್ಷಣಿಕವೆಂದು ವಿವರಿಸಿದ ಮೋರ್ಗನ್ ಆ ಕಾರಣದಿಂದಲೇ ಇಂದಿನ ಆಳುವ ವರ್ಗದ ಪಂಡಿತರಿಗೆ ಹಿಡಿಸುವುದಿಲ್ಲ. ಆದರೆ ಮಾರ್ಕ್ಸ್ ಮತ್ತು ಏಂಗೆಲ್ಸರಿಗೆ ಮೋರ್ಗನ್‌ನ ಸಂಶೋಧನೆ ಮತ್ತು ಸಿದ್ಧಾಂತವು ಉಜ್ವಲ ಬೆಳಕಿನಂತೆ ಕಂಡಿತು; ಏಕೆಂದರೆ, ಇತಿಹಾಸದಲ್ಲಿ ಸಮಾಜವು ಬೆಳೆದುಬಂದಿರುವುದನ್ನು ಭೌತವಾದಿ ಪ್ರಕ್ರಿಯೆಯ ಭಾಗವನ್ನಾಗಿ ಗ್ರಹಿಸಿ ಅವರು ಯಾವ ತೀರ್ಮಾನಗಳಿಗೆ ಬಂದಿದ್ದರೋ ಅವೇ ತೀರ್ಮಾನಗಳನ್ನು ಮೋರ್ಗನ್ ಬುಡಕಟ್ಟುಗಳ ಅಧ್ಯಯನದಿಂದ ಸಾದರಪಡಿಸಿದ್ದ. ಸತ್ಯವು ಒಬ್ಬೊಬ್ಬರಿಗೆ ಒಂದೊಂದಾಗಿ ಕಂಡರೆ ದಾರ್ಶನಿಕರು ವಿಚಲಿತರಾಗದಿರಬಹುದು; ಆದರೆ ಸಮಾಜ ವಿಜ್ಞಾನಿ ಹಾಗೆ ನಿರಾಸಕ್ತಿಯ ಭಾವ ತಳೆಯಲಾರ. ಮೋರ್ಗನ್ ಒಂದು ಕಡೆ, ಮಾರ್ಕ್ಸ್ - ಏಂಗೆಲ್ಸ್ ಇನ್ನೊಂದು ಕಡೆ; ಇಬ್ಬರೂ ತಮ್ಮದೇ ವಿಧಾನಗಳಿಂದ ಸಮಾಜದ ವಿಕಾಸವನ್ನು ಒಂದೇ ರೀತಿಯಾಗಿ ಅರ್ಥೈಸಿಕೊಂಡಿದ್ದರು. ಮೋರ್ಗನ್ ಬಗ್ಗೆ ಏಂಗೆಲ್ಸ್‌ಗೆ ಅತ್ಯುತ್ಸಾಹ ಮೂಡಿದ್ದು ಈ ಕಾರಣದಿಂದ. ಅಂತೆಯೇ ಮೋರ್ಗನ್ನನ ಗ್ರಂಥ ದೊರೆತನಂತರ ೧೮೮೪ರ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬೇರೆಲ್ಲ ಕೆಲಸಗಳನ್ನೂ ಬದಿಗೊತ್ತಿ ಏಂಗೆಲ್ಸ್ ತಮ್ಮ ಮೌಲಿಕ ಕೃತಿಯಾದ "ಕುಟುಂಬ, ಖಾಸಗಿ ಆಸ್ತಿ ಮತ್ತು ಪ್ರಭುತ್ವಗಳ ಉಗಮ" ಎಂಬ ಕೃತಿಯನ್ನು ರಚಿಸಿದರು. ಅದೇ ವರ್ಷದ ಅಕ್ಟೋಬರ್‌ನಲ್ಲಿ ಝೂರಿಕ್‌ನಿಂದ ಅದು ಪ್ರಕಟವಾಯಿತು. ಮಾನವ ಜನಾಂಗದ ಪ್ರಾಗೈತಿಹಾಸಿಕ ಕಾಲದ ಜೀವನವಿಧಾನವನ್ನು ತೆರೆದಿಡುವ ಈ ಗ್ರಂಥವು ಗ್ರೀಸ್, ಐರ್ಲೆಂಡ್ ಮತ್ತು ಜರ್ಮನಿಯ ಪ್ರಾಚೀನ ಸಮಾಜಗಳ ಪರಿಚಯ ಮಾಡಿಕೊಡುತ್ತದೆ. ಆರಂಭಿಕ ಹಂತದ ಸಾಮ್ಯತೆಯ ಸಮಾಜ, ಗುಲಾಮಿ ಪದ್ಧತಿಯ ಸಮಾಜ ಹಾಗೂ ಊಳಿಗಮಾನ್ಯ ಪದ್ಧತಿಯ ಸಮಾಜ, ಇವುಗಳ ನಿರ್ದಿಷ್ಟ ಸ್ವರೂಪವನ್ನು ಚರ್ಚಿಸುತ್ತಾ ಕುಟುಂಬದ ಉಗಮವನ್ನು ಏಂಗೆಲ್ಸ್ ಗುರುತಿಸುತ್ತಾರೆ. ಕ್ರಮೇಣ ಬೆಳೆದುಬಂದ ಸಾಮಾಜಿಕ-ಆರ್ಥಿಕ ಸಂರಚನೆಗಳು ಸಮಾಜವನ್ನು ಒಂದು ಹಂತದಿಂದ ಇನ್ನೊಂದಕ್ಕೆ ಕೊಂಡೊಯ್ಯುತ್ತಿದ್ದಂತೆ ಕುಟುಂಬ, ಖಾಸಗಿ ಆಸ್ತಿಯನ್ನು ಆಧರಿಸಿದ ವರ್ಗ ಸಮಾಜ ಮತ್ತು ಪ್ರಭುತ್ವ ಹುಟ್ಟಿಕೊಳ್ಳುತ್ತವೆ. ಋಗ್ವೇದದ ಆರಂಭಿಕ ದೆಸೆಯಲ್ಲಿದ್ದಂತೆ ಬುಡಕಟ್ಟು ಸಮಾಜವು

ಸಾಮುದಾಯಿಕ ಜೀವನದ ಪ್ರಾತಿನಿಧಿಕ ಸಂಸ್ಥೆ. ನಮ್ಮಲ್ಲಿ ಅವುಗಳನ್ನು 'ಗಣ' ಎಂದು ಕರೆಯಲಾಗಿತ್ತು. ಈ ಗಣಗಳನ್ನು ನಿಯಂತ್ರಿಸುವ 'ಸಮಿತಿ' ಅಥವಾ 'ವಿದಥ'ದಲ್ಲಿ ಗಣದ ಆಯ್ದ ನೇತಾರರಿರುತ್ತಿದ್ದರು. ಎಲ್ಲ ಪ್ರಾಚೀನ ಸಮಾಜಗಳಲ್ಲೂ ಇದೇ ಪದ್ಧತಿ ಇರುತ್ತಿತ್ತು. ಸಮಿತಿಯ ಸಭೆಗಳು ಜರುಗುವಾಗ ಗಣದ ಎಲ್ಲರೂ ಉಪಸ್ಥಿತರಿದ್ದು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಬಹುದಿತ್ತು; ತೀರ್ಮಾನ ಕೈಗೊಳ್ಳುವ ಜವಾಬ್ದಾರಿ ಮಾತ್ರ ಸಮಿತಿಯದೇ ಆಗಿರುತ್ತಿತ್ತು. ಇಂದಿನ ನ್ಯೂಯಾರ್ಕಿನ ಆಸುಪಾಸಿನಲ್ಲಿ ಹಿಂದೆ ಇರೋಕ್ವ ಬುಡಕಟ್ಟಿನ ಜನ ವಾಸಿಸುತ್ತಿದ್ದರು. ಅವರ ನಿಯಮದಂತೆ ಗಣದ ತೀರ್ಮಾನಗಳೆಲ್ಲಾ ಸರ್ವಾನುಮತದ ತೀರ್ಮಾನಗಳೇ ಆಗಿರಬೇಕಾಗಿತ್ತು. ಇತರ ಬುಡಕಟ್ಟುಗಳೊಡನೆ ಸಂಬಂಧಗಳನ್ನು ಗಣದ ಸಮಿತಿಯು ನಿರ್ಧರಿಸುತ್ತಿತ್ತು. ಸಂಘರ್ಷವೇರ್ಪಟ್ಟಾಗ ಒಂದು ನೃತ್ಯವನ್ನು ಆಯೋಜಿಸಲಾಗುತ್ತಿತ್ತು ಮತ್ತು ಅದರಲ್ಲಿ ಭಾಗವಹಿಸಿದವರೆಲ್ಲಾ ಗಣದ ಪರವಾಗಿ ಯೋಧರಾಗುತ್ತಿದ್ದರು. ಅದು ವರ್ಗರಹಿತ ಸಮಾಜವಾದ್ದರಿಂದ ಪ್ರಭುತ್ವವು ಇಡೀ ಸಮಾಜದ ಅಧೀನವಾಗಿದ್ದಿತು. ಬುಡಕಟ್ಟುಗಳ ವಿಘಟನೆಗೆ ಉತ್ಪಾದನಾ ತಂತ್ರಗಳ ಬೆಳವಣಿಗೆಗಳು ಒಂದು ಕಾರಣ. ಶ್ರಮದ ವಿಭಜನೆ ಆರಂಭವಾಗುವುದು ಈ ಹಂತದಲ್ಲಿ. ಶ್ರೇಣೀಕೃತ ಸಮಾಜವು ಇದರ ಪರಿಣಾಮ. ಅಂದರೆ, ಉತ್ಪಾದನಾ ವಿಧಾನವು ಬದಲಾದಂತೆ ಉತ್ಪಾದಿತ ಸಾಮಗ್ರಿಯಲ್ಲಿ ಮಿಗುತಾಯ ಕಂಡುಬರುತ್ತದೆ. ಎಲ್ಲಿಯವರೆಗೆ ಎಲ್ಲರ ದುಡಿಮೆಯೂ ಬುಡಕಟ್ಟಿನ ಜೀವನಕ್ಕೆ ಅನಿವಾರ್ಯವೋ ಅಲ್ಲಿಯತನಕ ವರ್ಗಗಳ ಕಲ್ಪನೆ ಮೂಡಿಬರುವುದಿಲ್ಲ. ಉತ್ಪಾದನೆಯ ಸಲಕರಣೆಗಳು ವೃದ್ಧಿಯಾದಂತೆ ದುಡಿಮೆಯ ಭಾಗವಹಿಸುವಿಕೆಯಲ್ಲಿ ಅಂತರವೇರ್ಪಡುತ್ತದೆ, ಮಿಗುತಾಯವನ್ನು ತಮ್ಮದಾಗಿಸಿಕೊಳ್ಳುವ ಒಂದು ಹೊಸ ವರ್ಗ ಹುಟ್ಟಿಕೊಳ್ಳುತ್ತದೆ, ಆ ವರ್ಗದ ಅಧಿಕಾರ ಅಸ್ತಿತ್ವಕ್ಕೆ ಬರುತ್ತದೆ ಮತ್ತು ಆ ವರ್ಗದ ರಕ್ಷಣೆಗೆ ಪ್ರಭುತ್ವವೆಂಬ ಸಾಧನವೂ ರಚನೆಗೊಳ್ಳುತ್ತದೆ. ಸಮೂಹದ ಸಂಪತ್ತು ಖಾಸಗಿಯ ಆಸ್ತಿಯಾಗಿ ಪರಿವರ್ತನೆಗೊಳ್ಳುವ ಹಿನ್ನೆಲೆಯಿಲ್ಲದೆ ಪ್ರಭುತ್ವದ ಕಲ್ಪನೆ ಸರ್ವಥಾ ಅಸಾಧ್ಯ. ಸಾಮಾಜಿಕ ವಿಕಾಸದ ಮುಂದಿನ ಹಂತದಲ್ಲಿ ಒಮ್ಮೆ ಮತ್ತೆ ಆಸ್ತಿಯ ಸ್ವರೂಪದಲ್ಲಿ ಮೂಲಭೂತ ಬದಲಾವಣೆಯುಂಟಾಗಿ ಅದು ಇಡೀ ಸಮಾಜದ ಸ್ವತ್ತಾದಾಗ ಪ್ರಭುತ್ವದ ಪಾತ್ರವೂ ಬದಲಾಗುವುದು ಅನಿವಾರ್ಯ.

ಮಾನವನ ಇತಿಹಾಸದಲ್ಲಿ ಮೊದಲಿಗೆ ಕುಟುಂಬ ಮತ್ತು ವಿವಾಹ ಪದ್ಧತಿಗಳು ವರ್ಗ ಸಮಾಜದ ಪದ್ಧತಿಗಳಂತೆ ಇರಲಿಲ್ಲ. ಗುಂಪು ವಿವಾಹ ಆಗ್ಗೆ ಪ್ರಚಲಿತವಾಗಿತ್ತು; ಆಮೇಲೆ ವೈಯಕ್ತಿಕ ವಿವಾಹವು ಚಾಲ್ತಿಗೆ ಬಂತು. ಇದು ಸದಾಕಾಲಕ್ಕೂ ಜೊತೆಯಾಗಿರಬೇಕೆಂಬ ನಿರ್ಬಂಧದ ವಿವಾಹವಾಗಿರುತ್ತಿರಲಿಲ್ಲ. ಅಂತಹ ವಿಧಿಯೊಂದನ್ನು ಜಾರಿಗೆ ತಂದು ಒಂದು ಗಂಡಿಗೆ ಒಬ್ಬ ಹೆಣ್ಣು ಎಂಬ ಸಂಪ್ರದಾಯವನ್ನು ಸ್ಥಿರೀಕರಿಸಲು ಹಲವು ಶತಮಾನಗಳೇ ಸಂದವು. ಕುಟುಂಬದ ಉಗಮ ಹಾಗೂ ವಿಕಾಸದ ಬಗ್ಗೆ ಅಧಿಕಾರಯುತವಾಗಿ ಬರೆಯಲು ಏಂಗೆಲ್ಸ್‌ಗೆ ಸಾಧ್ಯವಾದದ್ದು ಮೋರ್ಗನ್ ಅಧ್ಯಯನದೊಟ್ಟಿಗೆ ಬೇರೆ ಹಲವಾರು ವಿದ್ವಾಂಸರ

ಕೃತಿಗಳನ್ನು ಅಭ್ಯಾಸ ಮಾಡಿದ್ದರಿಂದ. ಹೋಮರನ ಕಾವ್ಯಗಳು ಹಾಗೂ ವ್ಯಾಪಕ ಜಾನಪದ ಪರಂಪರೆಗಳ ಅಧ್ಯಯನವನ್ನು ಸಹ ಏಂಗೆಲ್ಸ್ ಮಾಡಿದ್ದರು. ಮಾತೃಪ್ರಧಾನ ವ್ಯವಸ್ಥೆಯಿಂದ ಪಿತೃಪ್ರಧಾನ ವ್ಯವಸ್ಥೆಯತ್ತ ಸಮಾಜವು ಕ್ರಮಿಸಲು ವಿವಾಹ ಪದ್ಧತಿಯ ಬದಲಾವಣೆಯೂ ಸಹಕರಿಸಿದೆಯೆಂಬುದನ್ನು ಏಂಗೆಲ್ಸ್ ಸವಿವರವಾಗಿ ಪ್ರತಿಪಾದಿಸಿದ್ದಾರೆ. ಗುಂಪು ವಿವಾಹದಿಂದ ವ್ಯಕ್ತಿ ವಿವಾಹದ ಬೆಳವಣಿಗೆ ಉಂಟಾದಾಗ ಮಹಿಳೆಯ ಪಾತ್ರದಲ್ಲಿ ಗಮನಾರ್ಹವಾದ ವ್ಯತ್ಯಾಸ ಕಂಡುಬರುತ್ತದೆ. ಅತ್ಯಂತ ಪ್ರಾಚೀನ ಕುಟುಂಬದ ಸಂದರ್ಭದಲ್ಲಿ ಆರ್ಥಿಕ ಬುನಾದಿಯು ಸಾಮೂಹಿಕ ಹಿಡುವಳಿಯ ಸ್ವರೂಪದ್ದಾಗಿತ್ತು. ಮಹಿಳೆಯರು ಒಂದೇ ಸಂತತಿಯವರಾಗಿದ್ದು ಪುರುಷರು ವಿಭಿನ್ನ ಸಂತತಿಯವರಾಗಿರುತ್ತಿದ್ದರು. ಉತ್ಪಾದನಾ ಸಲಕರಣೆಗಳು ಹಾಗೂ ವಿಧಾನಗಳು ವಿಕಾಸಗೊಳ್ಳುತ್ತಿದ್ದಂತೆ ಮಹಿಳೆಯ ಅಧಿಕಾರ ಹಾಗೂ ಕೌಟುಂಬಿಕ ರಚನೆಯಲ್ಲೂ ವ್ಯತ್ಯಾಸಗಳು ಉಂಟಾದವು. ಗಂಡಸಿನ ಸಂತಾನಕ್ಕೆ ಮಹತ್ವ ಬಂದಿದ್ದೂ ಇದೇ ಸನ್ನಿವೇಶದಲ್ಲಿ. ಖಾಸಗಿ ಆಸ್ತಿಯ ಉಗಮದಿಂದ ವರ್ಗಭೇದವು ಹುಟ್ಟಿಕೊಂಡಂತೆ ವೈಯ್ಯಕ್ತಿಕ ವಿವಾಹ ಪದ್ಧತಿಯ ಹಿನ್ನೆಲೆಯಲ್ಲಿ ಕುಟುಂಬದೊಳಗೆ ಕೂಡ ಮೇಲು-ಕೀಳೆಂಬ ಕಲ್ಪನೆ ಮನೆಮಾಡಿಕೊಂಡಿತು. ಸಾಮಾಜಿಕ ಸಂದರ್ಭದಲ್ಲಿ ದುಡಿಯುವ ವರ್ಗದ ವಿಮೋಚನೆಯ ಅವಶ್ಯಕತೆ ಇರುವಂತೆಯೇ ಕೌಟುಂಬಿಕ ಸಂದರ್ಭದಲ್ಲಿ ಮಹಿಳೆಯ ವಿಮೋಚನೆ ಅಗತ್ಯವಾಗುವಂತಹ ಪರಿಸ್ಥಿತಿಯನ್ನು ಹಾಡಿಹೊಗಳುವುದೇ ಒಂದು ವಿಪರ್ಯಾಸವೆಂದು ಏಂಗೆಲ್ಸ್ ಕಟುವಾಗಿ ಟೀಕಿಸಿದ್ದಾರೆ. ಆಸ್ತಿಯೇ ಆಧಾರವಾಗಿರುವ ಬಂಡವಳಿಗರ ಕುಟುಂಬದ ವ್ಯವಸ್ಥೆ ಮತ್ತು ರೀತಿನೀತಿಗಳು ಆಡಂಬರ ಹಾಗೂ ಕೃತಕತೆಗೆ ಸಂಕೇತಗಳಾಗಿದ್ದರೆ ದುಡಿಯುವ ಜನರ ಕುಟುಂಬಗಳಲ್ಲಿ ಪರಸ್ಪರ ನಂಬಿಕೆ ಮತ್ತು ಪ್ರೀತಿ ಮೂಲ ಲಕ್ಷಣವಾಗಿ ಕಾಣಿಸಿಕೊಳ್ಳುತ್ತವೆಂದು ಏಂಗೆಲ್ಸ್ ಭಾವಿಸಿದ್ದಾರೆ. ಅಸಮಾನತೆಯ ಒಗ್ಗೂಡುವಿಕೆ ಮತ್ತು ಸಮಾನರ ಜೊತೆಯಾಗುವಿಕೆಗಳಿಗೆ ಇವು ಉದಾಹರಣೆಗಳು. ಸದಾ ವಿಕಾಸಶೀಲವಾದ ಸಂಸ್ಥೆಗಳ ಪೈಕಿ ಕುಟುಂಬವೂ ಸೇರಿದೆ. ಆದ್ದರಿಂದ ಕೌಟುಂಬಿಕ ಸಹಬಾಳ್ವೆಯಲ್ಲೂ ಸಮಾನತೆಯ ಛಾಯೆ ಪಸರಿಸುವುದು ಅನಿವಾರ್ಯವೆಂದು ಏಂಗೆಲ್ಸ್ ವಿಶ್ಲೇಷಿಸಿದ್ದಾರೆ.

ಪ್ರಭುತ್ವದ ವಿಕಾಸದ ಬಗ್ಗೆ ಏಂಗೆಲ್ಸರ ಕೊನೆಯ ಕೆಲವು ಮಾತುಗಳನ್ನು ಉದ್ಧರಿಸಿ ಈ ಪ್ರಕರಣವನ್ನು ಮುಕ್ತಾಯ ಮಾಡಬಹುದು: ''ಪ್ರಭುತ್ವವೆಂಬುದು ಅನಾದಿ ಕಾಲದಿಂದಲೂ ಅಸ್ತಿತ್ವವನ್ನು ಹೊಂದಿರಲಿಲ್ಲವೆಂಬುದು ಸ್ಪಷ್ಟವಿದೆ. ಅನೇಕ ಸಮಾಜಗಳು ಅದಿಲ್ಲದೆಯೇ ವ್ಯವಹರಿಸಿದುವು; ಪ್ರಭುತ್ವವೆಂದರೇನೆಂಬ ಕಲ್ಪನೆಯೇ ಆ ಸಮಾಜಗಳಿಗೆ ಇರಲಿಲ್ಲ. ಆದ್ದರಿಂದ ಆಗ್ಗೆ ಪ್ರಭುತ್ವದ ಅಧಿಕಾರವೂ ಇರಲಿಲ್ಲ. ಆರ್ಥಿಕ ಬೆಳವಣಿಗೆಯ ಒಂದು ಹಂತದಲ್ಲಿ ಸಮಾಜವು ಅನಿವಾರ್ಯವಾಗಿ ವರ್ಗ ವಿಭಜನೆಯನ್ನು ಅನುಭವಿಸ ಬೇಕಾಯಿತು; ಈ ವಿಭಜನೆಯಿಂದಾಗಿ ಪ್ರಭುತ್ವದ ಸಂರಚನೆಯೂ ಉಂಟಾಯಿತು. ನಾವೀಗ ಶೀಘ್ರವಾಗಿ ಬೇರೊಂದು ರೀತಿಯ ಉತ್ಪಾದನಾ ಬೆಳವಣಿಗೆಯ ಹಂತವನ್ನು ಪ್ರವೇಶಿಸ

ಲಿದ್ದೇವೆ; ಆ ಹಂತದಲ್ಲಿ ವರ್ಗಗಳ ಅಸ್ತಿತ್ವವು ಅವಶ್ಯಕತೆಯಾಗಿ ಉಳಿಯುವುದಿಲ್ಲ. ಬದಲಾಗಿ, ಅಂತಹ ವರ್ಗ ವಿಭಜನೆಯು ಉತ್ಪಾದನೆಯನ್ನು ಕುಂಠಿತಗೊಳಿಸುವ ಸಾಧ್ಯತೆ ಬಂದೊದಗುತ್ತದೆ. ಆದ್ದರಿಂದ ಹಿಂದಿನ ಹಂತದಲ್ಲಿ ಹೇಗೆ ಅದು ಹುಟ್ಟಿಕೊಂಡಿತೋ ಅಷ್ಟೇ ಅನಿವಾರ್ಯವಾಗಿ ಈಗ ಅದು ಕುಸಿದುಬೀಳುತ್ತದೆ. ಉತ್ಪಾದಕರ ಸ್ವತಂತ್ರ ಮತ್ತು ಸಮಾನ ಸಹಭಾಗಿತ್ವದ ಆಧಾರದ ಮೇಲೆ ಸಮಾಜವು ಇಡೀ ಉತ್ಪಾದನಾ ವಿಧಾನವನ್ನು ಹೊಸದಾಗಿ ಪುನಸ್ಸಂರಚನೆ ಮಾಡಿಕೊಳ್ಳುತ್ತದೆ. ಆಗ ಪ್ರಭುತ್ವವೆಂಬ ಇಡೀ ಯಂತ್ರವು ಎಲ್ಲಿ ಯೋಗ್ಯವೋ ಅಲ್ಲಿಗೆ ನೂಕಲ್ಪಡುತ್ತದೆ. ಆ ಜಾಗವೆಂದರೆ ಪ್ರಾಚೀನ ವಸ್ತುಗಳ ಸಂಗ್ರಹಾಲಯ; ಅಲ್ಲಿ ನೂಲುವ ಗಾಲಿ ಮತ್ತು ಕಂಚಿನ ಕೊಡಲಿಗಳೊಟ್ಟಿಗೆ ಪುರಾತನ ಆವಿಷ್ಕಾರಗಳ ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿರಿಸಲ್ಪಡುತ್ತದೆ."

❑❑

೧೨

ಕೆಲವು ಸಂಕೀರ್ಣಾಂಶಗಳು

ಪ್ರಾಚೀನ ಭಾರತದ ಮಹತ್ತರ ಕೊಡುಗೆಗಳು ಹಲವಿವೆ: ವೈಜ್ಞಾನಿಕ ಪರಂಪರೆಗೆ ಬುನಾದಿಯನ್ನು ಕಲ್ಪಿಸಿದ್ದು, ದ್ವಂದ್ವಮಾನ ಪ್ರಕ್ರಿಯೆಯನ್ನು ಗುರುತಿಸಿ ಬೌದ್ಧ ದರ್ಶನವು ಪ್ರತೀತ್ಯ ಸಮುತ್ಪಾದಕ್ಕೆ ಒತ್ತುಕೊಟ್ಟದ್ದು, ದುಃಖಕ್ಕೆ ಆದಿ ಇರುವುದರಿಂದ ಅದು ಅಂತ್ಯಗೊಳ್ಳುವುದು ಖಚಿತವೆಂಬ ಬೌದ್ಧ ಪ್ರತಿಪಾದನೆ, ಶ್ರೇಣೀಕೃತ ಸಮಾಜದ ತತ್ತ್ವವನ್ನು ಆಮೂಲಾಗ್ರವಾಗಿ ನಿರಾಕರಿಸಿದ ಲೋಕಾಯತ ದರ್ಶನ, ಭೌತದ್ರವ್ಯದ ಪ್ರಾಮುಖ್ಯವನ್ನು ಸಾರಿದ ಸಾಂಖ್ಯ ವೈಶೇಷಿಕ ತತ್ತ್ವಗಳು, ಇತ್ಯಾದಿ. ಇವುಗಳನ್ನು ಎತ್ತಿಹಿಡಿದು, ಆಧುನಿಕ ಯುಗದ ಜ್ಞಾನ ಪರಿಧಿಯಲ್ಲಿ ಅವನ್ನು ಹಿಗ್ಗಿಸುವುದು ನಮ್ಮ ಕರ್ತವ್ಯವಾಗಬೇಕು. ಅದರಲ್ಲಿ ಆಸಕ್ತಿ ತೋರದ ಕೆಲವರು ಬೇರೆ ರೀತಿಯಲ್ಲಿ ಪ್ರಾಚೀನ ಭಾರತದ ಹಿರಿಮೆಯನ್ನು ಹೊಗಳಲು, ವೈಭವೀಕರಿಸಲು, ತಮ್ಮೆಲ್ಲ ಬೌದ್ಧಿಕ ಶ್ರಮವನ್ನು ವ್ಯಯಿಸುತ್ತಾರೆ. ಉದಾಹರಣೆಗೆ, ಈಶಾವಾಸ್ಯ ಉಪನಿಷತ್ತಿನ ವಾಕ್ಯವನ್ನು ಉದ್ಧರಿಸಿ "ಇಲ್ಲಿರುವ ಎಲ್ಲವೂ ಈಶನದು, ಆದ್ದರಿಂದ ಬೇರೆಯವರಿಂದ ಏನನ್ನೂ ಅಪಹರಿಸಬಾರದು" ಎಂಬ ಶಾಶ್ವತ ಮೌಲ್ಯ ನಮ್ಮದು ಎಂದು ಹೆಮ್ಮೆಪಡುವವರು ಇದ್ದಾರೆ. "ಸರ್ವೇ ಜನಾಃ ಸುಖಿನೋ

ಭವಂತು" ಎಂದವರು ನಾವು, "ಮಾ ಕಶ್ಚಿದ್ದುಃಖ ಭಾಗ್ಭವೇತ್" ಎಂಬ ಆಶಯ ನಮ್ಮದು, ಎಂದು ಉಲಿಯುವವರು ನಮ್ಮಲ್ಲಿದ್ದಾರೆ. ಧರ್ಮಕ್ಕೆ ಗ್ಲಾನಿಯುಂಟಾದಾಗ ಸಾಧುಗಳನ್ನು ರಕ್ಷಿಸಲು ಹಾಗೂ ದುಷ್ಕೃತ್ಯವೆಸಗುವವರನ್ನು ನಾಶಗೊಳಿಸಲು ಸ್ವತಃ ಪರಮಾತ್ಮನೇ ಅವತಾರವೆತ್ತಿ ಬರುತ್ತಾನೆಂದು ಘೋಷಿಸುತ್ತಾ ಅವನ ಬರುವಿಕೆಯನ್ನು ತ್ವರೆಗೊಳಿಸಲು ಗ್ಲಾನಿಯನ್ನು ಹೆಚ್ಚಿಸುವುದರಲ್ಲಿ ನಿರತರಾದ ಧರ್ಮಧುರಂಧರರೂ ನಮ್ಮಲ್ಲಿದ್ದಾರೆ. ಅದೇನೇ ಇರಲಿ, ಸಾಮುದಾಯಿಕ ಜೀವನವನ್ನು ಹಸನುಗೊಳಿಸಬೇಕೆಂಬ ಉನ್ನತ ಆದರ್ಶ ನಮ್ಮಲ್ಲಿ ಪದೇಪದೇ ಜನರ ಮನಸ್ಸನ್ನು ಸೆಳೆದಿದೆಯೆಂಬುದು ವಿವಾದದ ವಿಷಯವಲ್ಲ.

ಆಶಯವನ್ನು ವ್ಯಕ್ತಪಡಿಸುವುದು ಬೇರೆ, ಅದು ಪ್ರಾಯೋಗಿಕವಾಗಿ ಈಡೇರುವುದು ಬೇರೆ. ಯಾವುದೇ ಆಶಯವು ಈಡೇರಲು ವ್ಯವಸ್ಥಿತ ಪ್ರಯತ್ನ ಬೇಕಾಗುತ್ತದೆ, ಆಶಯವು ಅನುಭವವಾಗಿ ಮಾರ್ಪಾಟು ಹೊಂದಲು ಸೂಕ್ತವಾದ ವಾತಾವರಣ ಮತ್ತು ಭೌತಿಕ ವ್ಯವಸ್ಥೆ ಬೇಕಾಗುತ್ತದೆ. ಅಂತಹ ವ್ಯವಸ್ಥೆಯ ರಚನೆಯನ್ನು ಮಾಡದೆ ಎಷ್ಟೇ ಸದಾಶಯಗಳನ್ನು ಪ್ರಕಟಿಸಿದರೂ ಪರಿಸ್ಥಿತಿಯು ಬದಲಾಗುವುದಿಲ್ಲ. ಬದಲಾವಣೆಗೆ ಪ್ರಜ್ಞಾಪೂರ್ವಕ ಮಧ್ಯಪ್ರವೇಶ ಬೇಕು. ಅಂದರೆ ಸದಾಶಯಗಳು ವ್ಯರ್ಥವೆಂದು ಇದರರ್ಥವಲ್ಲ. ಆಶಯಗಳಿಲ್ಲದೆ ಕ್ರಿಯೆಗೆ ಪ್ರೇರಣೆಯಾದರೂ ಎಲ್ಲಿಯದು! ಆದರೆ ನಮ್ಮ ಕ್ರಿಯೆಗಳೆಲ್ಲಾ ಆಶಯದಲ್ಲೇ ಮುಕ್ತಾಯವಾದರೆ ಯಾವ ಪುರುಷಾರ್ಥದ ಸಾಧನೆಯಾದೀತು!

"ಕಾಲ್ಪನಿಕ ಮತ್ತು ವೈಜ್ಞಾನಿಕ ಸಮಾಜವಾದ" ಎಂಬ ತಮ್ಮ ಕಿರುಹೊತ್ತಿಗೆಯಲ್ಲಿ ಏಂಗೆಲ್ಸ್ ಇದನ್ನು ಚರ್ಚಿಸಿದ್ದಾರೆ. ೧೮೮೦ರಲ್ಲಿ ಮೊದಲಿಗೆ ಫ್ರೆಂಚ್ ಭಾಷೆಯಲ್ಲಿ ಪ್ರಕಟವಾದ ಈ ಕೃತಿಯು ೧೮೯೨ರಲ್ಲಿ ಇಂಗ್ಲಿಷಿನಲ್ಲಿ ಪ್ರಕಟವಾಯಿತು. ಮೂಲತಃ ಇದು ಬರ್ಲಿನ್ ವಿಶ್ವವಿದ್ಯಾಲಯದ ಡಾ. ಇ.ಡ್ಯೂರಿಂಗ್ ೧೮೭೬ರಲ್ಲಿ ಪ್ರಕಟಿಸಿದ್ದ ಒಂದು ಕೃತಿಗೆ ಉತ್ತರರೂಪದಲ್ಲಿ ಬಂದಿದ್ದು. ಸಮಾಜವಾದವೆಂದರೇನೆಂಬುದನ್ನು ಡ್ಯೂರಿಂಗ್ ತನ್ನದೇ ಶೈಲಿಯಲ್ಲಿ ವ್ಯಾಖ್ಯಾನಿಸಿದ್ದ. ಅದರ ಲೋಪದೋಷಗಳನ್ನು ಬಹಿರಂಗಗೊಳಿಸಿ, ಪರ್ಯಾಯವಾಗಿ ನೈಜ ವೈಜ್ಞಾನಿಕ ಸಮಾಜವಾದದ ಸ್ಥೂಲ ಸ್ವರೂಪವನ್ನು ಚಿತ್ರಿಸುವುದು ಏಂಗೆಲ್ಸರ ಆಕಾಂಕ್ಷೆಯಾಗಿತ್ತು. ಥಾಮಸ್ ಮುನ್ಸರ್, ರೂಸೋ, ಬ್ಯಾಬೋಫ್, ಮುಂತಾದವರು ಒಂದರ್ಥದಲ್ಲಿ ಸಮಾನತೆಗಾಗಿ ದುಡಿದವರು, ಅದರಲ್ಲಿ ಶ್ರದ್ಧೆ ಇದ್ದವರು. ನಂತರದ ಸೇಯಿಂಟ್ ಸಿಮೋನ್, ಫೂರ್ಯೆ ಮತ್ತು ಓವೆನ್ ಕಾಲ್ಪನಿಕ ಸಮಾಜವಾದದ ಅಗ್ರೇಸರರಾಗಿದ್ದವರು. ಕೆಲವು ತೇಪೆದಾರಿ ಸುಧಾರಣೆಗಳಿಂದ ಬಂಡವಾಳದ ಭಂಡ ಬಾಳನ್ನು ಕೊನೆಗಾಣಿಸಲು ಸಾಧ್ಯವೆಂದು ಸರ್ವಥಾ ನಂಬಿದ್ದವರು ಅವರು. ರಾಬರ್ಟ್ ಓವೆನ್ ಅಂತೂ ೧೮೦೦ರ ಮೊದಲ ದಿನದಂದು ಹೊಸ ಲನಾರ್ಕ್‌ನತ್ತ ಹೆಜ್ಜೆ ಹಾಕಿದ ಧೀಮಂತ. ಸ್ಕಾಟ್ಲೆಂಡಿನ ಒಂದು ಚಿಕ್ಕ ಪಟ್ಟಣ ಲನಾರ್ಕ್. ಹತ್ತಿ ಗಿರಣಿಯೊಂದು ಅಲ್ಲಿತ್ತು. ಆ ಊರನ್ನು ಕೇಂದ್ರವನ್ನಾಗಿ ಮಾಡಿಕೊಂಡು ಸುಖೀರಾಜ್ಯ ಸ್ಥಾಪನೆಗೆ ಮಾರ್ಗದರ್ಶನ ಮಾಡುವುದು ಓವೆನ್ನನ ಉದ್ದೇಶವಾಗಿತ್ತು. ಸೇಯಿಂಟ್ ಸಿಮೋನ್ ಫ್ರಾನ್ಸಿನ ಕ್ರಾಂತಿಯನ್ನು ಕಂಡಿದ್ದವನು.

ಅವನ ಪ್ರಕಾರ ಕ್ರಾಂತಿಯಲ್ಲಿ ಕೆಲಸಗಾರರು ಸೋಮಾರಿಗಳನ್ನು ಸೋಲಿಸಿದ್ದರು. ಕೆಲಸಗಾರರ ಪೈಕಿ ಉದ್ಯಮಿಗಳು, ವ್ಯಾಪಾರಿಗಳು ಹಾಗೂ ದುಡಿಯುವ ಜನರಿದ್ದರು; ಸೋಮಾರಿಗಳೆಂದರೆ ಭೋಗ ಜೀವನ ನಡೆಸುತ್ತಿದ್ದ ಶ್ರೀಮಂತರು ಮತ್ತು ಚರ್ಚಿನ ಬೋಧಕರು. ಸಿಮೋನ್‌ಗೆ ನಿರಾಸೆ ಕಾದಿತ್ತು; ಏಕೆಂದರೆ, ಕ್ರಾಂತಿಯ ನಂತರ ದುಡಿಯುವವರನ್ನು ಹೊರತುಪಡಿಸಿ ಸವಲತ್ತುಗಳನ್ನು ಹೊಂದಿದ್ದ ಉಚ್ಚವರ್ಗದವರು ಅಧಿಕಾರಕ್ಕೆ ಬಂದರು. ಎಲ್ಲರೂ ದುಡಿಯಬೇಕೆಂಬ ಷರತ್ತು ಸಿಮೋನ್‌ಗೆ ಪ್ರಿಯವಾಗಿತ್ತು. ಆದರೆ ಅದು ಅನುಷ್ಠಾನಕ್ಕೆ ಬರುವಂತಿರಲಿಲ್ಲ. ಫೂರ್ಯೆ ಅತ್ಯಂತ ಹರಿತವಾದ ವಿಡಂಬನೆಗಳಿಗೆ ಹೆಸರಾದವನು. ಕ್ರಾಂತಿಯ ನಂತರದಲ್ಲಿ ವ್ಯಾಪಾರಸ್ಥರ ಕೂಟವು ಫ್ರಾನ್ಸಿಗೆ ಅಪಚಾರವೆಸಗಿದ್ದಿತೆಂದು ಫೂರ್ಯೆ ರೋಷಗೊಂಡಿದ್ದ. ಅವನ ಒಂದು ಮಹತ್ವದ ಸೂತ್ರ ಹೀಗಿದ್ದಿತು: ಯಾವುದೇ ಸಮಾಜದಲ್ಲಿ ವಿಮೋಚನೆ ಯಾವ ಮಟ್ಟದಲ್ಲಿ ಕೈಗೂಡಿದೆಯೆಂಬುದು ಆ ಸಮಾಜದ ಮಹಿಳೆಯರ ವಿಮೋಚನೆಯಿಂದ ಅಳೆಯಲಾಗುತ್ತದೆ.

ಇವರೆಲ್ಲರ ಸದಾಶಯಗಳನ್ನು ಮುಕ್ತವಾಗಿ ಮೆಚ್ಚಿಕೊಳ್ಳುತ್ತಲೇ ಏಂಗೆಲ್ಸ್ ಅವರ ಅಪರಿಪೂರ್ಣ ಚಿಂತನೆ ಮತ್ತು ಕ್ರಿಯೆಗಳತ್ತ ಗಮನ ಹರಿಸುತ್ತಾರೆ. ಉತ್ಪಾದನಾ ಸಂಬಂಧಗಳ ಬಗ್ಗೆ ನಿಖರವಾದ ನಿಲುವನ್ನು ತಾಳದೆ, ಸಾಮುದಾಯಿಕ ಹೋರಾಟಗಳನ್ನು ರೂಪಿಸದೆ, ಆಶಯಗಳನ್ನು ಈಡೇರಿಸಿಕೊಳ್ಳುವ ತವಕ ಹೊಂದಿರುವವರು ನಿರಾಶರಾಗುವುದು ಅನಿವಾರ್ಯವೆಂದು ಏಂಗೆಲ್ಸ್ ವಿಶ್ಲೇಷಿಸಿದ್ದಾರೆ. ಕಾಲ್ಪನಿಕ ಮತ್ತು ವೈಜ್ಞಾನಿಕ ಸಮಾಜವಾದಗಳ ನಡುವಣ ಅತಿಮುಖ್ಯವಾದ ಅಂಶ ಇದೇ ಆಗಿದೆ. ಮಾನವನ ನಿಜವಾದ ಇತಿಹಾಸ ಆರಂಭವಾಗುವುದೇ ವೈಜ್ಞಾನಿಕ ಸಮಾಜವಾದದ ಆವಿಷ್ಕಾರದ ನಂತರ; ಈವರೆಗಿನ ಅವನ ಇತಿಹಾಸವೇನಿದ್ದರೂ ಪ್ರಾಗಿತಿಹಾಸ, ಎನ್ನುತ್ತಾರೆ ಏಂಗೆಲ್ಸ್.

* * * *

೧೮೮೮ರ ಆಗಸ್ಟ್‌ನಲ್ಲಿ ಏಂಗೆಲ್ಸ್ ಅಮೆರಿಕಾಕ್ಕೆ ತೆರಳಿ ಒಂದು ತಿಂಗಳಿಗೂ ಹೆಚ್ಚು ಕಾಲ ಅಲ್ಲಿದ್ದರು. ಮಾರ್ಕ್ಸ್‌ರ ಮಗಳು ಎಲಿಯನಾರ್ ಮತ್ತು ಆಕೆಯ ಗಂಡ ಎಡ್ವರ್ಡ್ ಆವ್ಲಿಂಗ್ ಅಲ್ಲದೆ ಏಂಗೆಲ್ಸರ ಸ್ನೇಹಿತ ಕಾರ್ಲ್ ಶೋರ್ಲೆಮೆರ್ ಆಗ ಅವರೊಡನಿದ್ದರು. ಪತ್ನಿ ಮೇರಿ ಬರ್ನ್ಸ್ ತೀರಿಕೊಂಡು ಬಹುಕಾಲವಾಗಿತ್ತು. ಆಕೆಯ ಸೋದರ ಸಂಬಂಧಿ ವಿಲಿ ಬರ್ನ್ಸ್‌ನನ್ನು ನೋಡಲು ಬಾಸ್ಟನ್‌ಗೆ ಹೋದಾಗ ಆತ ಕಾರ್ಮಿಕ ಚಳುವಳಿಯಲ್ಲಿ ನಿರತನಾಗಿದ್ದುದು ತಿಳಿಯಿತು. ೧೮೯೦ರಲ್ಲಿ ಏಂಗೆಲ್ಸ್ ಬಹಳ ಬಳಲಿದ್ದು, ದಿನಗಟ್ಟಲೆ ನಿದ್ದೆ ಬಾರದೆ ಸೋತುಹೋಗಿದ್ದರು. ನಾರ್ವೆಯ ಕಡಲತೀರದಲ್ಲಿ ಸಂಚರಿಸಿದರೆ ಒಳ್ಳೆಯದಾಗಬಹುದೆಂಬ ಸೂಚನೆಯ ಮೇರೆಗೆ ಮೂರು ವಾರಗಳ ಕಾಲ ಅಲ್ಲಿ ವಿಹಾರಕ್ಕೆ ಹೋಗಿಬಂದರು. ಕಡಲತೀರದ ಫೋಕ್‌ಸ್ಟನ್ ಎಂಬಲ್ಲಿ ಒಂದು ತಿಂಗಳು ವಿಶ್ರಮಿಸಿಕೊಂಡು ಲಂಡನ್ನಿಗೆ ಹಿಂದಿರುಗಿದಾಗ ಹೆಲೆನ್ ಡೇಮುತ್ ಗತಿಸಿದಳು. ಸುಮಾರು ಐವತ್ತು ವರ್ಷಗಳ ಸ್ನೇಹ ಅಲ್ಲಿಗೆ ಕಡಿದುಬಿದ್ದಂತಾಗಿತ್ತು. ೧೮೫೦ರ ದಶಕದಲ್ಲಿ ಇನ್ನೂ ಚಿಕ್ಕವಳಿದ್ದಾಗ ಆಕೆ

ಮಾರ್ಕ್ಸ್ ಕುಟುಂಬವನ್ನು ಸೇರಿ ಮಾರ್ಕ್ಸ್ ಗತಿಸಿದ ನಂತರ ಏಂಗೆಲ್ಸ್ ಜೊತೆ ವಾಸವಿದ್ದಳು. ಆಕೆ ಮೃತಳಾದಾಗ ಸೋರ್ಗ್‌ಗೆ ಏಂಗೆಲ್ಸ್ ಬರೆದರು: "ಏಳು ವರ್ಷ ಈ ಮನೆಯಲ್ಲಿ ನಾವು ಜೊತೆಯಲ್ಲಿದ್ದೆವು. ೧೮೪೮ರ ಮುಂಚಿನ ಪೀಳಿಗೆಯವರಲ್ಲಿ ಉಳಿದಿದ್ದುದು ನಾವಿಬ್ಬರು. ಈಗ ನಾನು ಒಂಟಿಯಾದೆ. ಮುಂದೇನು ಕಾದಿದೆಯೋ ನಾನರಿಯೆ." ಕಾರ್ಲ್ ಕೌಟ್ಸ್ಕಿಯ ಪತ್ನಿಯಾಗಿದ್ದ ಲೂಯಿಸ್ ಒಂಟಿಯಾಗಿದ್ದ ಏಂಗೆಲ್ಸ್ ಜೊತೆ ಇರಲು ಅವರ ಮನೆಗೆ ಬಂದಾಗ ಏಂಗೆಲ್ಸ್‌ಗೆ ಎಪ್ಪತ್ತು ವರ್ಷ. ಆ ಸಂದರ್ಭಕ್ಕೆ ಹಲವಾರು ದೇಶಗಳಿಂದ ಸ್ನೇಹಿತರು ಏಂಗೆಲ್ಸ್‌ಗೆ ಶುಭಾಶಯಗಳನ್ನು ಕೋರಿ ಸಂದೇಶ ಕಳಿಸಿದ್ದರು. ಬೆಬೆಲ್ ಮತ್ತು ಲೀಬ್‌ನೆಖ್ಟ್ ಖುದ್ದಾಗಿ ಲಂಡನ್ನಿಗೆ ಬಂದಿಳಿದರು. ಇದೆಲ್ಲಾ ಏಂಗೆಲ್ಸ್‌ಗೆ ಅತೀವ ಮುಜುಗರದ ವಿಷಯ. "ಇದೆಲ್ಲಾ ಏನು ಅವಾಂತರ! ಬೇಗ ಮುಗಿದರೆ ಸಾಕೆನಿಸಿದೆ. ಈ ಅನಗತ್ಯವಾದ ಸಂಭ್ರಮ ನನಗೆ ರುಚಿಸದು" ಎಂದು ೧೮೯೦ರ ನವಂಬರ್ ೨೬ರಂದು ಸೋರ್ಗ್‌ಗೆ ಪತ್ರ ಬರೆದರು. ಎರಡು ದಿನದ ನಂತರ ಅವರ ಎಪ್ಪತ್ತನೆಯ ಹುಟ್ಟುಹಬ್ಬ. ಮಾರನೆಯ ವರ್ಷದ ಹುಟ್ಟುಹಬ್ಬದಂದು ಏಂಗೆಲ್ಸ್ ಹೇಳಿದರು: " ವ್ಯಕ್ತಿಗಳ ಸಂಬಂಧದಲ್ಲಿ, ಅವರಿಗೆ ಕಾಣಿಕೆಯಾಗಿ ಹೀಗೆ ಸಾರ್ವಜನಿಕವಾಗಿ ಪ್ರದರ್ಶನಗಳನ್ನೇರ್ಪಡಿಸುವುದನ್ನು ನಾನು ಮತ್ತು ಮಾರ್ಕ್ಸ್ ಎಂದೂ ಅನುಮೋದಿಸಲಿಲ್ಲ. ಅಂತಹ ಸಮಾರಂಭಗಳ ಮಹತ್ತರ ಲಾಭವೇನೋ ನಮಗೆ ತಿಳಿಯದು. ನಮ್ಮ ಜೀವಿತ ಕಾಲದಲ್ಲಿ ನಮಗಾಗಿ ಇಂತಹ ಪ್ರದರ್ಶನಗಳನ್ನು ನಾವು ಯಾವಾಗಲೂ ವಿರೋಧಿಸಿದ್ದೇವೆ."

ಬಿಸ್ಮಾರ್ಕನ "ಸಮಾಜವಾದ-ವಿರೋಧಿ ಕಾನೂನು" ಜಾರಿಯಲ್ಲಿದ್ದಾಗಲೇ ೧೮೯೦ರ ಫೆಬ್ರವರಿಯ ಚುನಾವಣೆಯಲ್ಲಿ ಜರ್ಮನಿಯ ಸೋಷಿಯಲ್-ಡೆಮೊಕ್ರಾಟ್ ಪಕ್ಷವು ಹತ್ತುಲಕ್ಷಕ್ಕೂ ಮಿಗಿಲಾಗಿ ಮತಗಳನ್ನು ಪಡೆದು ಪಾರ್ಲಿಮೆಂಟಿನಲ್ಲಿ ೩೫ ಸ್ಥಾನಗಳನ್ನು ಗೆದ್ದಿತ್ತು. ಗ್ರಾಮಾಂತರ ಪ್ರದೇಶಗಳ ರೈತರು ಪಕ್ಷಕ್ಕೆ ಬೆಂಬಲ ನೀಡಿದ್ದುದು ಒಂದು ವಿಶೇಷ. "ಉಕ್ಕಿನ ಮನುಷ್ಯ" ಬಿಸ್ಮಾರ್ಕ್ ಮಾರ್ಚ್ ೨೦ರಂದು ರಾಜಿನಾಮೆ ನೀಡಿ ಹೊರಹೋಗಿದ್ದ. ಅವನ ಕುಪ್ರಸಿದ್ಧ ಕಾನೂನನ್ನು ಅಕ್ಟೋಬರ್ ೧ರಂದು ಹಿಂದೆಗೆದುಕೊಳ್ಳಲಾಗಿತ್ತು. ೧೮೭೬ರ ನಂತರ ಏಂಗೆಲ್ಸ್ ಜರ್ಮನಿಗೆ ಹೋಗಿರಲಿಲ್ಲ. ಆ ಅನಿಷ್ಟ ಕಾನೂನು ಜಾರಿಯಲ್ಲಿರುವವರೆಗೆ ತಾನು ಜರ್ಮನಿಗೆ ಬರುವುದಿಲ್ಲವೆಂದು ಬೆಬೆಲ್ ಮುಂತಾದ ಸ್ನೇಹಿತರಿಗೆ ಏಂಗೆಲ್ಸ್ ವಿನಂತಿಸಿಕೊಂಡಿದ್ದರು. ಹದಿನೇಳು ವರ್ಷಗಳ ನಂತರ ಈಗ ೧೮೯೩ರ ಆಗಸ್ಟ್‌ನಲ್ಲಿ ಜರ್ಮನಿಗೆ ಭೇಟಿ ಸಾಧ್ಯವಾಯಿತು. ಲೂಯಿಸ್ ಕೌಟ್ಸ್ಕಿ, ಬೆಬೆಲ್ ಮತ್ತು ಆತನ ಪತ್ನಿ ಇಡೀ ಪ್ರವಾಸದಲ್ಲಿ ಜೊತೆಗಿದ್ದರು. ಫ್ರಾನ್ಸ್, ಸ್ವಿಟ್ಸರ್ಲೆಂಡ್ ಮತ್ತು ಜರ್ಮನಿಗಳಲ್ಲಿ ಇವರಿಗೆ ಭವ್ಯ ಸ್ವಾಗತ ಕಾದಿತ್ತು. ಝೂರಿಕ್‌ನಲ್ಲಿ ಆಗ್ಗೆ ಅಂತರರಾಷ್ಟ್ರೀಯ ಅಧಿವೇಶನವೊಂದು ನೆರೆದಿತ್ತು. ಇಪ್ಪತ್ತಕ್ಕೂ ಹೆಚ್ಚು ದೇಶಗಳಿಂದ ಸುಮಾರು ನಾಲ್ಕುನೂರು ಪ್ರತಿನಿಧಿಗಳು ಅಲ್ಲಿ ಸೇರಿದ್ದರು. ಮುಕ್ತಾಯದ ಸಮಾವೇಶದಲ್ಲಿ ಮಾತನಾಡುವ ಗೌರವ ಏಂಗೆಲ್ಸರದಾಗಿತ್ತು. ಫ್ರೆಂಚ್, ಇಂಗ್ಲಿಷ್ ಮತ್ತು ಜರ್ಮನ್ ಭಾಷೆಗಳಲ್ಲಿ ಮಾತನಾಡಿ

ಕಡೆಗೆ ಏಂಗೆಲ್ಸ್ ಹೇಳಿದರು: "ಅನಿರೀಕ್ಷಿತವಾಗಿ ನನಗೆ ದೊರೆತಿರುವ ಈ ಅದ್ದೂರಿ ಸ್ವಾಗತಕ್ಕಾಗಿ ನಿಮಗೆಲ್ಲಾ ಅತ್ಯಂತ ನಮ್ರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನ ವ್ಯಕ್ತಿತ್ವ ದಿಂದಾಗಿಯೇ ನನಗೆ ಈ ಸ್ವಾಗತ ದೊರೆತಿದೆಯೆಂದು ನಾನು ಭಾವಿಸುವುದಿಲ್ಲ. ಅಗೋ, ಅಲ್ಲಿ ಒಂದು ಚಿತ್ರಪಟ ತೂಗಿಹಾಕಿದ್ದೀರಲ್ಲ, ಆ ಮಹಾನ್ ವ್ಯಕ್ತಿಯ ಜೊತೆ ನಾನು ಕೆಲಸ ಮಾಡಿರುವುದಕ್ಕಾಗಿ ನನಗೆ ಭವ್ಯ ಸನ್ಮಾನವೆಂದು ನಾನು ಭಾವಿಸುತ್ತೇನೆ. ...ಮಾರ್ಕ್ಸ್ ಸತ್ತುಹೋಗಿದ್ದಾನೆ, ಆದರೆ ಅವನು ಇಂದು ಬದುಕಿದ್ದಿದ್ದರೆ ತನ್ನ ಕೊಡುಗೆಯನ್ನು ತೃಪ್ತಿಯಿಂದ, ಹೆಮ್ಮೆಯಿಂದ ನೆನೆಯಬಹುದಿತ್ತು. ಯೂರೋಪ್ ಮತ್ತು ಅಮೆರಿಕಾಗಳಲ್ಲಿ ಅಷ್ಟು ಹೆಮ್ಮೆಪಡಬಲ್ಲವರು ಬೇರೆ ಇನ್ನಾರಿದ್ದಾರೆ!"

ಅಧಿವೇಶನದ ನಂತರ ಏಂಗೆಲ್ಸ್ ಸ್ವಿಟ್ಸರ್ಲೆಂಡಿನಲ್ಲಿ ಇನ್ನೂ ಎರಡು ವಾರ ತಂಗಿದ್ದರು. ಉಪಸ್ಥಿತರಿದ್ದ ನೂರಾರು ಪ್ರತಿನಿಧಿಗಳೊಡನೆ ಆಯಾ ದೇಶದ ಸನ್ನಿವೇಶವನ್ನು ಅತ್ಯಾಸಕ್ತಿಯಿಂದ ಚರ್ಚಿಸಿದರು. ರಷ್ಯದ ಪ್ಲೆಖನೋವ್ ಮತ್ತು ವೇರಾ ಝಾಸುಲಿಚ್, ಹೆಸರಾಂತ ಮಹಿಳಾ ನಾಯಕಿ ಕ್ಲಾರಾ ಜೆಟ್‌ಕಿನ್ ಮುಂತಾದವರ ಖುದ್ದು ಭೇಟಿ ಅವರಿಗೆ ಮುದವನ್ನಿತ್ತಿತು. ನಂತರ ಆಸ್ಟ್ರಿಯಾ ಮತ್ತು ಜರ್ಮನಿಗಳಿಗೆ ಭೇಟಿ ನೀಡಿ ಸೆಪ್ಟೆಂಬರ್ ೨೯ಕ್ಕೆ ವಾಪಸ್ಸು ಲಂಡನ್ ಸೇರಿಕೊಂಡರು. ನಂತರದ ಅವರ ಒಂದು ಪ್ರಮುಖ ಕಿರುಕೃತಿಯೆಂದರೆ "ಮೂಲ ಕ್ರೈಸ್ತಧರ್ಮದ ಚರಿತ್ರೆ." ಧರ್ಮದ ಸಾಮಾಜಿಕ ನೆಲೆಗಳನ್ನು ಪ್ರಬುದ್ಧವಾಗಿ ಚರ್ಚಿಸುವ ಈ ಕೃತಿ ಯಾವುದೇ ಧರ್ಮದ ಇತಿಹಾಸದ ಅಧ್ಯಯನಕ್ಕೆ ಮೌಲಿಕ ಆಕರವಾಗಬಲ್ಲದು. ೧೮೩೫ರಷ್ಟು ಹಿಂದೆಯೇ ಡೇವಿಡ್ ಸ್ಟ್ರಾಸ್ ಎಂಬಾತ "ಜೀಸಸ್‌ನ ಜೀವನ" ಎಂಬ ಗ್ರಂಥವನ್ನು ಪ್ರಕಟಿಸಿದ್ದ. ಅದನ್ನೋದಿದಾಗಲೇ ಏಂಗೆಲ್ಸ್‌ಗೆ ಧರ್ಮದ ಇತಿಹಾಸದ ಬಗ್ಗೆ ಆಸಕ್ತಿ ಮೂಡಿತ್ತು. ಕ್ರೈಸ್ತಧರ್ಮದಲ್ಲಿ ಹೆಣೆಯಲಾಗಿರುವ ಮಿಥಕಗಳು, ಪವಾಡಗಳು, ಮುಂತಾದವೆಲ್ಲಾ ನಿಜಜೀವನದ ವೃತ್ತಾಂತಗಳನ್ನು ಬೇರೊಂದು ರೀತಿಯಲ್ಲಿ ಪ್ರತಿಫಲಿಸಿವೆಯೆಂಬ ಏಂಗೆಲ್ಸರ ಪ್ರತಿಪಾದನೆಗೆ ಸೋದಾಹರಣ ವ್ಯಾಖ್ಯಾನದ ಶಾಸ್ತ್ರೀಯ ಶಿಸ್ತು ಗರಿ ಮೂಡಿಸಿದೆ. ಜೊತೆಗೆ ಮಾರ್ಕ್ಸ್ ಬರೆದಿದ್ದ "ಬಂಡವಾಳ" ಎಂಬ ಗ್ರಂಥದ ಹಸ್ತಪ್ರತಿಗಳನ್ನು ಪರಿಷ್ಕರಿಸಿ ಪ್ರಕಟಿಸುವ ಹೊಣೆಯನ್ನೂ ಏಂಗೆಲ್ಸ್ ಹೊರಬೇಕಾಯಿತು. ಏಕೆಂದರೆ, ಮಾರ್ಕ್ಸ್ ಬದುಕಿದ್ದಾಗ ಆ ಗ್ರಂಥದ ಮೊದಲ ಸಂಪುಟ ಮಾತ್ರ ಹೊರಬಿದ್ದಿತ್ತು. ಮುಂದಿನ ಎರಡು ಸಂಪುಟಗಳಲ್ಲದೆ ಇನ್ನೂ ಹಲವು ಮಾರ್ಕ್ಸ್‌ರ ಗ್ರಂಥಗಳನ್ನು ಏಂಗೆಲ್ಸ್ ಹೊರತಂದರು.

ಏಂಗೆಲ್ಸ್ ಅಂತಹವರಿಗೆ ಜೀವನದಲ್ಲಿ ಹುಮ್ಮಸ್ಸು ಮತ್ತು ಆನಂದ ಮುಖ್ಯವಾಗಿ ಮಾನವಜನಾಂಗದ ಒಳಿತು ಮತ್ತು ಅಭಿವೃದ್ಧಿಗಾಗಿ ಶ್ರಮಿಸುವುದರಲ್ಲೇ ಲಭ್ಯ. ಇಂಗ್ಲೆಂಡಿನ ಭೂಗರ್ಭಶಾಸ್ತ್ರಜ್ಞ ಜಾರ್ಜ್ ವಿಲಿಯಂ ಲ್ಯಾಂಪ್‌ಲೂಗೆ ೧೮೯೩ರ ಏಪ್ರಿಲ್ ೧೧ರಂದು ಬರೆದ ಪತ್ರದಲ್ಲಿ ಏಂಗೆಲ್ಸ್ ಹೇಳಿದರು: "ಪ್ರಕೃತಿ ಅದೆಷ್ಟು ಮಹತ್ತಾದ್ದು! ಇತಿಹಾಸದ ಗತಿಯನ್ನು ವಿಶ್ಲೇಷಿಸಿಕೊಳ್ಳುವುದಲ್ಲದೆ ನಾನು ಯಾವಾಗಲೂ ಪ್ರಕೃತಿಯ ಮಡಿಲಿಗೆ

ಹಿಂದಿರುಗುತ್ತಲೇ ಬಂದಿದ್ದೇನೆ. ಪ್ರಕೃತಿಗಿಂತಲೂ ಇತಿಹಾಸ ದೊಡ್ಡದೆಂದು ನನಗೆ ಕಂಡಿರುವುದುಂಟು. ಪ್ರಜ್ಞಾವಂತ ಜೀವವನ್ನು ಆವಿಷ್ಕರಿಸಲು ಪ್ರಕೃತಿಗೆ ಲಕ್ಷಗಟ್ಟಲೆ ವರ್ಷಗಳು ಬೇಕಾದವು. ಈ ಪ್ರಜ್ಞಾವಂತ ಜೀವಿಗಳಿಗೆ ಇನ್ನೂ ಸಾವಿರಾರು ವರ್ಷಗಳೇ ಬೇಕಾದಾವೇನೋ, ಪ್ರಜ್ಞಾಪೂರ್ವಕವಾಗಿ ಸಾಮುದಾಯಿಕವಾಗಿ ಕ್ರಿಯೆಯಲ್ಲಿ ತೊಡಗಲು! ವೈಯ್ಯಕ್ತಿಕ ಕ್ರಿಯೆಯ ಬಗೆಗಿನ ಪ್ರಜ್ಞೆಯಷ್ಟೇ ಅಲ್ಲ, ಸಾಮುದಾಯಿಕ ಕ್ರಿಯೆಯ ಪ್ರಜ್ಞೆಯೂ ಅವಶ್ಯಕ. ಒಂದಾಗಿ ಮತ್ತು ಸಮಾನ ಉದ್ದೇಶಕ್ಕಾಗಿ, ಮೊದಲೇ ಯೋಜಿಸಿದ ರೀತಿಯಲ್ಲಿ, ಕ್ರಿಯೆಯಲ್ಲಿ ತೊಡಗುವುದು ಅಸಾಧಾರಣವಾದ ಸಂಗತಿ. ಈಗ ತಾನೆ ನಾವು ಆ ದಿಕ್ಕಿನಲ್ಲಿ ಹೆಜ್ಜೆ ಹಾಕಲು ಉಪಕ್ರಮಿಸಿದ್ದೇವೆ."

ಏಂಗೆಲ್ಸರ ಆಶಯಗಳು ಸೋತುಹೋದುವೇ ಎಂಬುದಕ್ಕೆ ಉತ್ತರ ಇಲ್ಲಿದೆ. ನಮ್ಮ ಸಂಸ್ಕೃತ ನಾಟಕಕಾರ ಭವಭೂತಿ ಹೇಳಿದಂತೆ "ಕಾಲೋ ಹ್ಯಯಂ ನಿರವಧಿಃ ವಿಪುಲಾ ಚ ಪೃಥ್ವೀ." ಇಂದೇ ಎಲ್ಲದರ ಪೂರೈಕೆಯೂ ಆಗಿಬಿಡಬೇಕೆಂದರೆ ಶತಮಾನಗಳ ಸಂಸ್ಕಾರ ಅಷ್ಟು ಸುಲಭದಲ್ಲಿ ಕಳೆದುಹೋಗಬಲ್ಲುದೆ? ಪುಡಿಗಾಸಿನ ಲಾಭಕ್ಕಾಗಿ ಹೋರಾಟ ಮಾಡುತ್ತಿದ್ದಂತೆಯೇ ಮೂಲಭೂತ ಬದಲಾವಣೆಗಳು ತಾವೇತಾವಾಗಿ ಸಿದ್ಧಿಸುತ್ತವೆಂಬ ಭ್ರಾಂತಿ ಸಲ್ಲದು. ದುಡಿಯುವ ವರ್ಗದ ರಾಜಕೀಯ ಅಧಿಕಾರವು ಸ್ಥಿರವಾಗದೆ ಮಾನವ ಜನಾಂಗದ ಮುಕ್ತಿ ಮತ್ತು ಅಭಿವೃದ್ಧಿ ಮರೀಚಿಕೆಯಾಗಿಯೇ ಉಳಿಯುತ್ತವೆ. ಈ ವರ್ಗವು ಸಶಸ್ತ್ರ ಹೋರಾಟಗಳಲ್ಲಿ ವಿಜಯಿಯಾಗುವ ಮುನ್ನ ತನ್ನ ಮುಂಬರುವ ವಿಜಯವನ್ನು ಸಾಲುಸಾಲಾಗಿ ಗಳಿಸುವ ಬೌದ್ಧಿಕ ವಿಜಯಗಳ ಮೂಲಕ ಸಾರಬೇಕಾಗುತ್ತದೆ. ಅಂದರೆ, ಮಾನವನ ಪ್ರಜ್ಞಾವಲಯದಲ್ಲಿ ಅನೂಚಾನವಾಗಿ ಬಂದಿರುವ ಕೆಲವು ಭಾವನೆಗಳು ಹೆಪ್ಪುಗಟ್ಟಿ ಕುಳಿತಿದ್ದರೆ ಅಂಥವನು ಬದಲಾವಣೆಯ ಹರಿಕಾರನಾಗಲಾರ. ಹರಿತವಾದ ತರ್ಕಮತಿಯನ್ನು ಬಳಸಿ, ಬೆಳೆಸಿ, ಈ ಹೆಪ್ಪುಗಟ್ಟಿದ ಪ್ರಜ್ಞೆಯನ್ನು ಮುಕ್ತವಾಗಿ ಹರಿಯಬಿಡಬೇಕು; ಆಗಲೇ ಅವನು ಬದಲಾವಣೆಯ ಸಾಧನವಾಗಬಲ್ಲ. ಒಂದು ಉದಾಹರಣೆಯಾಗಿ ಸ್ತ್ರೀ-ಪುರುಷ ಸಮಾನತೆಯ ಪ್ರಶ್ನೆಯನ್ನು ನೋಡಬಹುದು. ಈ ವಿಷಯದಲ್ಲಿ ಸಾಂಪ್ರದಾಯಿಕವಾಗಿ ಕೆಲವು ಜಡ್ಡುಗಟ್ಟಿದ ಭಾವನೆಗಳಿವೆ. ಅದರಂತೆ, ಸದಾಕಾಲಕ್ಕೂ ಪುರುಷನು ಮಹಿಳೆಗಿಂತಲೂ ದೊಡ್ಡ ಸ್ಥಾನದಲ್ಲಿರಬೇಕು. ಸಮಾನತೆಯ ಆಕಾಂಕ್ಷೆಯೇ ಅಪ್ರಸ್ತುತವೆಂಬಷ್ಟು ಮಟ್ಟಿಗೆ ಈ ಅನಿಸಿಕೆ ಬೇರೂರಿದೆ. ಗರ್ಟ್ರೂಡ್ ಗ್ವಿಲೋಮ್-ಶಾಕ್ ಎಂಬಾಕೆ "ಸಮಾನ ದುಡಿಮೆಗೆ ಸಮಾನ ವೇತನ" ಎಂಬ ನಿಯಮವನ್ನು ಫ್ರಾನ್ಸಿನ ದುಡಿಯುವ ವರ್ಗದ ಪ್ರಣಾಲಿಕೆಯಲ್ಲಿ ಸೇರಿಸಿರುವುದರ ಬಗ್ಗೆ ೧೮೮೫ರ ಜುಲೈನಲ್ಲಿ ಏಂಗೆಲ್ಸ್‌ಗೆ ಪತ್ರವೊಂದನ್ನು ಬರೆದಿದ್ದಳು. ಅದಕ್ಕೆ ಉತ್ತರವಾಗಿ ಏಂಗೆಲ್ಸ್ ಬರೆದದ್ದು ಭಾಗಶಃ ಹೀಗಿದೆ: "ಜರ್ಮನಿಯಲ್ಲಿ ಈ ಹಕ್ಕೊತ್ತಾಯವು ಪ್ರಬಲವಾಗಿರುವಷ್ಟು ಫ್ರಾನ್ಸಿನಲ್ಲಿಲ್ಲ. ಇದಕ್ಕೆ ಕಾರಣ, ಫ್ರಾನ್ಸಿನಲ್ಲಿ ಮತ್ತು ವಿಶೇಷವಾಗಿ ಪ್ಯಾರಿಸ್ಸಿನಲ್ಲಿ, ಕಾರ್ಖಾನೆಗಳಲ್ಲಿ ದುಡಿಯುವ ಮಹಿಳೆಯರು ಸಾಮಾನ್ಯವಾಗಿ ಅಪ್ರಧಾನ ಕೆಲಸಗಳಿಗೆ

ತೊಡಗಿಸಲ್ಪಡುತ್ತಾರೆ. ಸಮಾನ ದುಡಿಮೆಗೆ ಸಮಾನ ವೇತನವನ್ನು ಎಲ್ಲ ಸಮಾಜವಾದಿಗಳೂ ಒಪ್ಪಿ ಆಗ್ರಹಿಸುತ್ತಾರೆ ಮತ್ತು ಅದು ಎರಡು ಲಿಂಗಗಳಿಗೂ ಅನ್ವಯವಾಗುವ ಮಾತು. ಎಲ್ಲಿಯವರಿಗೆ ಕೂಲಿಯೆಂಬುದು ರದ್ದಾಗುವುದಿಲ್ಲವೋ ಅಲ್ಲಿಯವರೆಗೆ ಈ ಒತ್ತಾಯವಿದ್ದೇ ಇರುತ್ತದೆ. ಮಹಿಳೆಯ ಶರೀರಶಾಸ್ತ್ರ ಸಂಬಂಧಿತ ಕ್ರಿಯೆಗಳಿಂದಾಗಿ, ದುಡಿಯುವ ಮಹಿಳೆಗೆ ಬಂಡವಾಳಶಾಹಿ ಶೋಷಣೆಯ ವಿರುದ್ಧ ವಿಶಿಷ್ಟವಾದ ರಕ್ಷಣೆ ನೀಡಬೇಕಾದ್ದು ಸಹಜವೆಂದು ನನ್ನ ಅನಿಸಿಕೆ. ಇಂಗ್ಲೆಂಡಿನ ಮಹಿಳೆಯರು ಎರಡು ಲಿಂಗದವರೂ ಸಮಾನರೆಂಬುದನ್ನು ಔಪಚಾರಿಕ ಹಕ್ಕನ್ನಾಗಿ ಪಡೆಯುವ ಉತ್ಸಾಹದಲ್ಲಿ ಪುರುಷರಂತೆ ತಾವೂ ಪೂರ್ತಿಯಾಗಿ ಬಂಡವಳಿಗರಿಂದ ಶೋಷಣೆಗೆ ಗುರಿಯಾಗಿದ್ದಾರೆ. ನೇರವಾಗಿಯೋ ಅಲ್ಲವೋ, ಅಂತೂ ಇಂಗ್ಲೆಂಡಿನ ಮಹಿಳೆಯರ ಆಗ್ರಹವು ಶೋಷಣೆಯ ದೃಷ್ಟಿಯಿಂದ ಅವರನ್ನು ಪುರುಷರ ಸಮಾನರನ್ನಾಗಿಸಿದೆ. ಭವಿಷ್ಯದ ಪೀಳಿಗೆಗಳ ಆರೋಗ್ಯದ ದೃಷ್ಟಿಯಿಂದ ನೋಡುವಾಗ ಎರಡೂ ಲಿಂಗಗಳ ನಡುವೆ ಔಪಚಾರಿಕ ಸಮಾನತೆಯು ಸರ್ವಥಾ ಒಂದೇ ತೆರನಾಗಿರಬೇಕೆಂಬುದನ್ನು ನಾನು ಒಪ್ಪುವುದಿಲ್ಲ; ಅದೂ ಈಗಿನ ಸಂದರ್ಭದಲ್ಲಿ: ಬಂಡವಾಳಶಾಹಿ ಉತ್ಪಾದನಾ ಮಾದರಿಯು ಕೊನೆಯುಸಿರು ಎಳೆಯುತ್ತಿರುವಾಗ! ನನ್ನ ಖಂಡಿತವಾದ ಅಭಿಪ್ರಾಯ ಇದು: ಮಹಿಳೆ ಮತ್ತು ಪುರುಷರ ನಡುವಣ ನೈಜವಾದ ಸಮಾನತೆಯು ಯಥಾರ್ಥವಾಗಿ ಅಸ್ತಿತ್ವಕ್ಕೆ ಬರಬೇಕಾದರೆ ಎರಡು ಪೂರ್ವಾಕಾಂಕ್ಷೆಗಳು ನೆರವೇರಬೇಕು; ಒಂದು, ಎರಡೂ ಲಿಂಗದವರ ಶೋಷಣೆ ಮಾಡುವ ಬಂಡವಾಳಶಾಹಿ ಅಳಿಯಬೇಕು, ಮತ್ತು ಎರಡು, ಖಾಸಗಿ ಮನೆಗೆಲಸವು ಸಾರ್ವಜನಿಕ ಉದ್ಯಮವಾಗಿ ಪರಿವರ್ತಿತವಾಗಬೇಕು."

ಮಹಿಳಾ ಸ್ವಾತಂತ್ರ್ಯ ಮತ್ತು ಹಕ್ಕುಗಳ ಬಗ್ಗೆ ನಾವು ಅದೆಷ್ಟೋ ವಿಶ್ಲೇಷಣೆಗಳನ್ನು ಕಾಣುತ್ತಿರುತ್ತೇವೆ. ಎಲ್ಲದರಲ್ಲೂ ಸಮಾನತೆಯ ಆಶಯವಿರುತ್ತದೆ. ಅದರ ಪೂರೈಕೆಯ ಮಾರ್ಗದ ಬಗ್ಗೆ ಮಾತ್ರ ವಿಭಿನ್ನ ಅಭಿಪ್ರಾಯಗಳು ಬರುತ್ತವೆ. ಯಾವುದೇ ಮಾರ್ಗವನ್ನು ಪುರಸ್ಕರಿಸಿದರೂ ಏಂಗೆಲ್ಸ್ ಉಲ್ಲೇಖಿಸಿರುವ ಎರಡು ಅಗತ್ಯಗಳನ್ನು ಪೂರೈಸದೆ ಉದ್ದೇಶವನ್ನು ಈಡೇರಿಸಿಕೊಳ್ಳುವುದು ದುಷ್ಕರ. ಮನೆಯ ಹೊರಗೆ ವಿಮೋಚನೆ ಮತ್ತು ಮನೆಯೊಳಗೆ ಬಂಧನ ಎಂಬ ದ್ವಂದ್ವದ ಪರಿಹಾರವೂ ಆಗಬೇಕು. ಮನೆಗೆಲಸಕ್ಕೆ ವೇತನವಿಲ್ಲ; ಅದರ ಮೌಲ್ಯದ ಲೆಕ್ಕಾಚಾರ ಮಾಡಲಾಗುವುದಿಲ್ಲ. ಆದರೆ ಆ ಕೆಲಸದ ಜವಾಬ್ದಾರಿ ಹೆಚ್ಚಾಗಿ ಮಹಿಳೆಯ ಮೇಲೆ. ಖಾಸಗಿ ಬಂಡವಾಳದಿಂದ ಹೊರಗೆ ಶೋಷಣೆ, ಖಾಸಗಿ ಮನೆಗೆಲಸದಿಂದ ಒಳಗೆ ಬಂಧನ. ಇವೆರಡರಿಂದಲೂ ವಿಮೋಚನೆ ಸಾಧ್ಯವಾಗುವುದು ಅವುಗಳ ಸಾರ್ವಜನಿಕೀಕರಣದಿಂದ. ಅದಷ್ಟರಿಂದಲೇ ಎಲ್ಲವೂ ಸಿದ್ಧಿಸುವುದಿಲ್ಲ, ನಿಜ; ಆದರೆ, ಅದಿಲ್ಲದೆ ಬೇರಾವುದೂ ಪ್ರಭಾವಶಾಲಿ ಆಗಲಾರದು. ಈ ನಿಟ್ಟಿನಲ್ಲಿ ಸ್ಪಷ್ಟವಾದ ಪ್ರಜ್ಞೆಯು ಪುರುಷ ಮತ್ತು ಮಹಿಳೆಯರಿಬ್ಬರಲ್ಲೂ ಅಂಕುರಿಸಬೇಕಾದ್ದು ಅವಶ್ಯಕ. ಅಂತಹ ಪ್ರಜ್ಞೆ ಗಾಢವಾಗಿ ಬೇರೂರದಿದ್ದಲ್ಲಿ ಹೋರಾಟದ ಹಾದಿಯ ಬಗೆಗೆ ಸ್ಪಷ್ಟತೆ ಬರುವುದಿಲ್ಲ

ವೆಂಬುದು ಏಂಗೆಲ್ಸರ ಎಚ್ಚರಿಕೆ ಮಾತು. ಪ್ರಜ್ಞಾವಲಯದ ವಿಸ್ತರಣೆ ಹಾಗೂ ಶುದ್ಧಿಗೆ ಬೌದ್ಧಿಕ ಹೋರಾಟದ ಪ್ರಾಮುಖ್ಯತೆಯನ್ನು ನಾವೆಂದೂ ಅಲ್ಲಗಳೆಯುವಂತಿಲ್ಲ. ಅದು ಕೇವಲ ಬೌದ್ಧಿಕವಾಗಿ ಉಳಿದರೆ ಅದರ ಪ್ರಭಾವ ಗಮನಾರ್ಹವಾಗುವುದಿಲ್ಲ; ಹಾಗಾಗುವುದು ನೂತನ ಪ್ರಜ್ಞೆಯು ಕ್ರಿಯೆಗೆ ಪ್ರೇರಕಶಕ್ತಿಯಾಗಿ ಕೆಲಸ ಮಾಡಿದಾಗ.

ಏಂಗೆಲ್ಸರ ಸಾಹಿತ್ಯಾಸಕ್ತಿ ಅಪ್ರತಿಮವಾದುದು. ಬಹುಶಃ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಮತ್ತು ತತ್ತ್ವಶಾಸ್ತ್ರಗಳ ಚರ್ಚೆಗಳಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳ ಸಾಂದ್ರ ಪ್ರತಿಫಲನವು ಏಂಗೆಲ್ಸರ ಕೃತಿಗಳಲ್ಲಿ ವ್ಯಾಪಕವಾಗಿರುವಷ್ಟು ಬೇರಾವ ಕೃತಿಗಳಲ್ಲೂ ಇರಲಾರದು. ಏಂಗೆಲ್ಸರ ಸ್ನೇಹಿತ ಫರ್ಡಿನೆಂಡ್ ಲಸಾಲ್ ಬರೆದಿದ್ದ ನಾಟಕ "ಫ್ರಾಂತ್ಸ್ ಫಾನ್ ಸಿಕಿಂಗೆನ್" ಬಗ್ಗೆ ಏಂಗೆಲ್ಸ್ ನೀಡಿರುವ ದೀರ್ಘ ವಿಮರ್ಶೆ ಯಾವುದೇ ಸಾಹಿತ್ಯ ಮೀಮಾಂಸೆಯಲ್ಲಿ ಆದ್ಯತೆಯ ಆಕರವಾಗಬಲ್ಲ ಬರಹವಾಗಿದೆ. ಒಂದು ರೀತಿ ನೋಡಿದರೆ ಲಸಾಲ್ ಮತ್ತು ಏಂಗೆಲ್ಸ್ ರಾಜಕೀಯವಾಗಿ ಒಂದೇ ಬಣದವರು ಆದರೆ ಇನ್ನೊಂದರ್ಥದಲ್ಲಿ ಅವರು ಪರಸ್ಪರ ತೀವ್ರ ವಿರೋಧಿಗಳು. ಆದರೆ ಲಸಾಲ್ ಬರೆದ ನಾಟಕದ ವಿಮರ್ಶೆಯಲ್ಲಿ ಇದರ ಕಲ್ಪನೆಯೇ ಬರಲಾರದಷ್ಟು ವಸ್ತುನಿಷ್ಠ ವಿಮರ್ಶೆ ನೀಡಬಲ್ಲ ವ್ಯಕ್ತಿತ್ವ ಏಂಗೆಲ್ಸರದು. ನಾಟಕವು ಮಧ್ಯಕಾಲೀನ ಜರ್ಮನಿಯ ರೈತಾಪಿಗಳ ಹೋರಾಟಕ್ಕೆ ಸಂಬಂಧಿಸಿದ್ದು. ನಾಟಕದಲ್ಲಿ ಮಹಾನ್ ನಾಯಕರು ಕಂಗೊಳಿಸುತ್ತಾರೆ, ಆದರೆ ಸಾಮಾನ್ಯ ರೈತ ಸಮುದಾಯವೇ ಇಲ್ಲದ ನಾಟಕ ಇದಾಗಿದೆಯೆಂದು ಏಂಗೆಲ್ಸ್ ಆ ನಾಟಕವನ್ನು ಟೀಕಿಸಿದರು. ಜನರೇ ಇಲ್ಲದ ಅಥವಾ ಜನರ ಆಗುಹೋಗುಗಳನ್ನೇ ವಿಶದೀಕರಿಸದ ಸಾಹಿತ್ಯವನ್ನು ಹೇಗೆ ಮಾಪನ ಮಾಡಬಹುದೆಂಬುದಕ್ಕೆ ಸಿಕಿಂಗೆನ್ ನಾಟಕದ ವಿಮರ್ಶೆ ಒಂದು ಮಾದರಿಯಾಗಿ ನಿಲ್ಲುತ್ತದೆ. ನಾವು ಹಿಂದೆಯೇ ಪರಿಚಯ ಮಾಡಿಕೊಂಡಿರುವ "ಆ್ಯಂಟಿ-ಡ್ಯೂರಿಂಗ್" ಎಂಬ ಒಂದು ಗ್ರಂಥದಲ್ಲಿ ಬರುವ ಸಾಹಿತ್ಯಕ ಉಲ್ಲೇಖಗಳನ್ನು ನೋಡಿದರೆ ಸಾಕು, ಏಂಗೆಲ್ಸರ ಅಪಾರ ಸಾಹಿತ್ಯಾಸಕ್ತಿ ಮತ್ತು ಅತಿವ್ಯಾಪಕ ಸಾಹಿತ್ಯಾಧ್ಯಯನ ಎಷ್ಟು ಮೌಲಿಕವಾದುದೆಂಬುದು ತಿಳಿಯುತ್ತದೆ. ಅಲ್ಲಿಯ ಕೆಲವು ಉಲ್ಲೇಖಗಳು ಇವು: ಬೈಬಲ್, ಬರ್ನಿಯೆ (ಭಾರತದ ಪ್ರವಾಸ ಮಾಡಿದ್ದ ಫ್ರಾನ್ಸಿನ ಸಾಹಿತಿ), ವೇದ (ಮೂಲದಲ್ಲಿ ಅಲ್ಲ, ಕೇವಲ ಬೇರೆಯವರು ಉದ್ಧರಿಸಿದ್ದ ಕೆಲವು ಭಾಗಗಳು), ರೋಕೋ (ಜರ್ಮನಿಯವನು), ಹೆಗೆಲ್, ಟೆರೆನ್ಸ್ (ರೋಮಿನ ನಾಟಕಕಾರ), ಎಕಾರ್ಟ್ (ಜರ್ಮನಿಯ ಜಾನಪದ ಸಾಹಿತ್ಯದ ಪಾತ್ರ), ಮೋಲಿಯೇರ್, ಗಯಟೇ, ಹೊರೇಷಿಯಸ್, ಸೆರ್ವಾಂಟಿಸ್, ಇತ್ಯಾದಿ. ಪ್ರತಿಭೆಯ ದಿಗ್ಗಜ ಏಂಗೆಲ್ಸ್ ಎಂದರೆ ಅತಿಶಯೋಕ್ತಿಯಾಗಲಾರದು.

೧೮೯೫ರ ಮಾರ್ಚ್‌ನಲ್ಲಿ ಏಂಗೆಲ್ಸ್ ತೀರಾ ಅಸ್ವಸ್ಥರಾದರು. ಅದು ಈಸೋಫೇಗಸ್‌ನ ಕ್ಯಾನ್ಸರ್ ಎಂದು ಡಾ. ಫ್ರೇಬರ್ಗರ್ ತಿಳಿಸಿದ್ದರು. ಅನೇಕ ಸ್ನೇಹಿತರೊಡನೆ ಬೆರೆಯುತ್ತಾ ತಮ್ಮ ಬೇನೆಯನ್ನು ಸಹಿಸಲು ಏಂಗೆಲ್ಸ್ ಯತ್ನಿಸಿದರು. ಮಾರ್ಕ್ಸ್‌ರ ಇಬ್ಬರು ಮಕ್ಕಳು ಲಾರಾ ಮತ್ತು ಎಲಿಯನಾರ್ ಸದಾ ಅವರೊಂದಿಗಿರುತ್ತಿದ್ದರು. ವಿಕ್ಟರ್ ಆ್ಯಡ್ಲರ್ ಎಂಬ

ಸ್ನೇಹಿತನೂ ಯಾವಾಗಲೂ ಅವರ ಜೊತೆ ಇರುತ್ತಿದ್ದ. ೧೮೯೫ರ ಆಗಸ್ಟ್ ೫ರಂದು ಏಂಗೆಲ್ಸ್ ಅಸು ನೀಗಿದರು. ತನ್ನೆಲ್ಲ ಹಸ್ತಲಿಖಿತ ಗ್ರಂಥದ ಕರಡುಗಳನ್ನೂ ಪತ್ರಗಳನ್ನೂ ಆಗಸ್ಟ್ ಬೆಬೆಲ್ ಮತ್ತು ಎಡ್ವರ್ಡ್ ಬರ್ನ್‌ಸ್ಟೈನ್‌ಗೆ ತಲುಪಿಸಬೇಕೆಂದು ಮೊದಲೇ ಲಾರಾಗೆ ತಿಳಿಸಿದ್ದ ಏಂಗೆಲ್ಸ್ ತಮ್ಮ ಬೇರೆಲ್ಲ ಆಸ್ತಿಯನ್ನೂ ಲಾರಾ, ಎಲಿಯನಾರ್ (ಇಬ್ಬರೂ ಮಾರ್ಕ್ಸ್‌ರ ಮಕ್ಕಳು) ಹಾಗೂ ಲೂಯಿಸ್ (ಕಾರ್ಲ್ ಕೌಟ್‌ಸ್ಕಿಯ ಪತ್ನಿ) ಮತ್ತು ಜೆನ್ನಿ (ಮಾರ್ಕ್ಸ್‌ರ ಮಗಳು)ಯ ಮಕ್ಕಳಿಗೆ (ಜೆನ್ನಿ ಬಹುಹಿಂದೆಯೇ ತೀರಿಕೊಂಡಿದ್ದಳು) ಸೇರಬೇಕೆಂದು ಉಯಿಲು ಬರೆದಿಟ್ಟಿದ್ದರು.

ರಷ್ಯದ ಒಬ್ಬ ಯುವ ಸೋಷಿಯಲ್ - ಡೆಮೊಕ್ರಾಟ್ ಆಗಿದ್ದ ವ್ಲಾದಿಮೀರ್ ಇಲಿಚ್ ಉಲ್ಯಾನೋವ್ (ಆತನೇ ಮುಂದೆ ಲೆನಿನ್ ಎಂದು ಪ್ರಸಿದ್ಧನಾದ) ಏಂಗೆಲ್ಸ್‌ಗೆ ಗೌರವ ಸಲ್ಲಿಸುತ್ತಾ ಒಂದು ಲೇಖನ ಬರೆದ. ಅದರ ಪ್ರಾರಂಭದಲ್ಲಿ ರಷ್ಯದ ಕವಿ ನೆಕ್ರಸೋವ್‌ನ ಎರಡು ಸಾಲುಗಳನ್ನು ಉದ್ಧರಿಸಿದ್ದ:

ಎಂಥ ವೈಚಾರಿಕ ದೀವಿಗೆ ನಂದುಹೋಯಿತು,
ಎಂಥ ಅದ್ಭುತ ಹೃದಯದ ಸ್ಪಂದನ ಸ್ತಬ್ಧವಾಯಿತು!

೧೮೪೮ರ ಜೂನ್‌ನಲ್ಲಿ ಮಾರ್ಕ್ಸ್ ಮತ್ತು ಏಂಗೆಲ್ಸ್ "ನೌವಾ ರೈನಿಶ್ ಝ್ಯುಟುಂಗ್" ಪತ್ರಿಕೆಯನ್ನು ಪ್ರಾರಂಭಿಸಿದಾಗ ಹತ್ತಾರು ಕ್ಷೇತ್ರಗಳನ್ನು ಕುರಿತಂತೆ ಏಂಗೆಲ್ಸ್ ವಿದ್ವತ್ಪೂರ್ಣ ಲೇಖನಗಳನ್ನು ಬರೆಯುತ್ತಿದ್ದರು. ಆಗೊಮ್ಮೆ ಮಾರ್ಕ್ಸ್ ಉದ್ಗರಿಸಿದ್ದರಂತೆ: "ಈ ಏಂಗೆಲ್ಸ್ ನಿಜಕ್ಕೂ ಒಂದು ವಿಶ್ವಕೋಶ. ಹಗಲು ರಾತ್ರಿಯೆನ್ನದೆ ಆನಂದೋತ್ಸಾಹಗಳಿಂದ ಸದಾ ಕೆಲಸ ಮಾಡುತ್ತಲೇ ಇರುವ ಇವನ ದೈತ್ಯಪ್ರತಿಭೆ ಅಸಾಮಾನ್ಯವಾದುದು. ಬರೆಯುವುದು, ಆಳವಾದ ಚಿಂತನವನ್ನು ಬರವಣಿಗೆಯಲ್ಲಿ ಮೇಳೈಸುವುದು, ಇದರಲ್ಲಿ ಇವನ ಚುರುಕು ಅಳೆಯಲಸದಳ."

ಮಾರ್ಕ್ಸ್ ಮತ್ತು ಏಂಗೆಲ್ಸರ ಜೀವನ ಮತ್ತು ಕೃತಿಗಳನ್ನು ಕುರಿತ ತನ್ನ ಸಂಕ್ಷಿಪ್ತ ಗ್ರಂಥವನ್ನು ಮುಕ್ತಾಯ ಮಾಡುವಾಗ ಡೇವಿಡ್ ರಿಯಾಝನೋವ್ ಹೇಳಿರುವ ಮಾತುಗಳನ್ನು ಪ್ರಸ್ತುತ ಗ್ರಂಥದ ಕೊನೆಯ ಮಾತುಗಳನ್ನಾಗಿ ಉದ್ಧರಿಸಬಹುದೆನಿಸುತ್ತದೆ:

"ಈ ಇಬ್ಬರು ಸ್ನೇಹಿತರು ಒಂದು ಸ್ಮಾರಕವನ್ನು ಬಿಟ್ಟು ಹೋಗಿದ್ದಾರೆ. ಅದು ಯಾವುದೇ ಶಿಲಾಸ್ತಂಭಕ್ಕಿಂತಲೂ ಗಟ್ಟಿಯಾದದ್ದು ಮತ್ತು ಯಾವುದೇ ಚರಮವಾಕ್ಯಕ್ಕಿಂತಲೂ ಹೆಚ್ಚು ವೈಭವದಿಂದ ಕೂಡಿದ್ದು. ವೈಜ್ಞಾನಿಕ ಸಂಶೋಧನೆಯ ಪದ್ಧತಿಯೊಂದನ್ನು ಅವರು ನಮಗೆ ಬಳುವಳಿಯಾಗಿ ನೀಡಿದ್ದಾರೆ; ಕ್ರಾಂತಿಯ ನಿಯಮ, ತಂತ್ರ ಮತ್ತು ಯುಕ್ತಿಗಳ ತಿಳುವಳಿಕೆ ನೀಡಿದ್ದಾರೆ. ಅಕ್ಷಯವಾದ ಜ್ಞಾನಭಂಡಾರವೊಂದನ್ನು ಅವರು ನಮಗೆ ಬಿಟ್ಟುಹೋಗಿದ್ದಾರೆ; ನಮ್ಮ ಸುತ್ತಣ ವಾಸ್ತವಿಕತೆಯನ್ನು ವಿಶ್ಲೇಷಿಸಿಕೊಳ್ಳಲು ಮತ್ತು ಅರಿತುಕೊಳ್ಳಲು ಈಗಲೂ ಅದು ಅಗಾಧವಾದ ಸಾಧನವಾಗಿ ಉಳಿದಿದೆ."

❑❑

ಡಾ. ಜಿ. ರಾಮಕೃಷ್ಣ ಅವರು ನಮ್ಮ ನಡುವಿನ ಅಪೂರ್ವ ವೈಚಾರಿಕ ವಿದ್ವಾಂಸರು. ಪ್ರಾಚೀನ ಮತ್ತು ನವೀನ ಜ್ಞಾನಶಾಸ್ತ್ರ ಶಾಖೆಗಳನ್ನು ಅವರು ಬಲ್ಲವರು. ಅದು ತತ್ತ್ವಶಾಸ್ತ್ರದಿಂದ ಹಿಡಿದು ಈಚಿನ ಬಹುತೇಕ ಮಾನವಿಕ ವಿಜ್ಞಾನಗಳಲ್ಲಿ ಅವರು ಅತ್ಯಾಸಕ್ತರು ಮತ್ತು ಕುತೂಹಲಿಗಳು. ಅವರು ಪುಸ್ತಕ ಪ್ರಾಧಿಕಾರದ ವಿನಂತಿಯ ಮೇರೆಗೆ ಫ್ರೆಡರಿಕ್ ಏಂಗೆಲ್ಸ್ ಕುರಿತು ಪುಸ್ತಕವೊಂದನ್ನು ಬರೆದುಕೊಟ್ಟಿದ್ದಾರೆ. ಫ್ರೆಡರಿಕ್ ಏಂಗೆಲ್ಸ್ ಮಹಾಶಯನ ವಿಚಾರಗಳು ಜಾಗತಿಕ ಚಿಂತನದಲ್ಲಿ ಅಪೂರ್ವ ಸ್ಥಾನವನ್ನು ಪಡೆದಿವೆ. ಅವು ಇಂದಿಗೂ ಪ್ರಪಂಚದಾದ್ಯಂತ ಬೇರೆಬೇರೆ ವಾಗ್ವಾದಗಳಲ್ಲಿ ಸ್ಥಾನವನ್ನು ಪಡೆಯುತ್ತಿವೆ. ಜಗತ್ತಿನ ಕೊನೆಯ ಮನುಷ್ಯನ ಬಗೆಗೆ ಮಾತನಾಡಿದ ಏಂಗೆಲ್ಸ್ 'ಇಲ್ಲದವರ' ಜತೆಗೆ ನಿಂತವನು. ಈ ವಿಚಾರಗಳ ಬಗೆಗೆ ಮೂಲಭೂತವಾಗಿ ಆಲೋಚಿಸಿದವನು. ಏಂಗೆಲ್ಸ್ ಮಹಾಶಯನ ಜಾಗತಿಕ ಚಿಂತನೆಗಳು ಬಹು ಸರಳವಾಗಿ ಈ ಪುಸ್ತಕದಲ್ಲಿ ನಿರೂಪಿತವಾಗಿವೆ. ನಮ್ಮ ನಾಡಿನ ಜನ ಈ ಕೃತಿಯನ್ನು ಓದಬೇಕೆಂದು ಆಶಿಸುತ್ತೇನೆ. ಇಂತಹ ಮಹಾನ್ ಚಿಂತಕನನ್ನು ಕುರಿತು ಪುಸ್ತಕವೊಂದನ್ನು ಪ್ರೊ. ಜಿ. ರಾಮಕೃಷ್ಣ ಅವರು ಮನನೀಯವಾಗಿ ಬರೆದುಕೊಟ್ಟಿದ್ದಾರೆ. ಫ್ರೆಡರಿಕ್ ಏಂಗೆಲ್ಸ್ ಮಹಾಶಯನ ಮುಖ್ಯ ಚಿಂತನೆಗಳನ್ನೂ ಅವನ ಕೃತಿಗಳನ್ನೂ ಎಲ್ಲರಿಗೂ ತಿಳಿಯುವಂತೆ ಮಾಡಿದ್ದಾರೆ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಬೆಲೆ ರೂ. 40-00
ISBN 81-7713-143-5

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು ೫೬೦ ೦೧೮